ಗುರುವಾರ, ಮೇ 8, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 127 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಟೆಸ್ಟ್ ಕ್ರಿಕೆಟ್‌ಗೆ ರೋಹಿತ್ ವಿದಾಯ

38	67	4301	12	18
ವಯಸ್ಸು	ಪಂದ್ಯ	ರನ್	ಶತಕ	ಅರ್ಧಶತಕ

‘ಹಿಟ್‌ಮ್ಯಾನ್’ ಖ್ಯಾತಿಯ ರೋಹಿತ್ ಗುರುನಾಥ್ ಶರ್ಮಾ ಅವರು ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಘೋಷಿಸಿದ್ದಾರೆ. ಹೋದ ವರ್ಷ ಅವರು ಭಾರತ ತಂಡವು ಟಿ20 ವಿಶ್ವಕಪ್ ಜಯಿಸಿದಾಗ ಚುಟುಕು ಕ್ರಿಕೆಟ್‌ನಿಂದ ನಿವೃತ್ತಿ ಪಡೆದಿದ್ದರು. ಸದ್ಯ ಅವರು ಏಕದಿನ ಕ್ರಿಕೆಟ್ ತಂಡದ ನಾಯಕರಾಗಿ ಉಳಿದಿದ್ದಾರೆ.

212 ಶ್ರೇಷ್ಠ

ಆಳ-ಅಗಲ
ಕಾರ್ಖಾನೆ ಕೆಲಸ: ನಿಯಮ ತಿದ್ದುಪಡಿಗೆ ವಿರೋಧ

ಸೈರನ್ ಎಚ್ಚರಿಕೆ, ರಕ್ಷಣೆ ಕ್ರಮದ ಪ್ರಾತ್ಯಕ್ಷಿಕೆ 6

ಪಾಕ್ ಷೇರುಪೇಟೆ ಪತನ 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,746 ▲	24,414 ▲	₹1.01 ಲಕ್ಷ (ಬೆಂಗಳೂರು) ▼	₹1.02 ಲಕ್ಷ (ಬೆಂಗಳೂರು) ▲	84.77 ▼

OPERATION SINDOOR

ಉಗ್ರರ ನೆಲೆ ಸಿಂಧೂರಕ್ಕೆ ತರಗೆಲೆ

ಒಂಬತ್ತು ನೆಲೆಗಳ ಮೇಲೆ ಗುರಿ • 25 ನಿಮಿಷದ ಕಾರ್ಯಾಚರಣೆ • 70ರಿಂದ 100 ಉಗ್ರರ ಹತ್ಯೆ • ಜಾಗತಿಕ ಉಗ್ರ ಮಸೂದ್ ಅಜರ್‌ನ ಕುಟುಂಬ ಸದಸ್ಯರು – ಆಪ್ತರ ನಿರ್ನಾಮ • ಗಡಿಯಿಂದ 100 ಕಿ.ಮೀ. ಒಳಗೆ ಪಾಕಿಸ್ತಾನದಲ್ಲಿ ದಾಳಿ

24
ಕ್ಷಿಪಣಿಗಳಿಂದ ದಾಳಿ
ಜೈಷ್-ಎ-ಮೊಹಮ್ಮದ್, ಲಷ್ಕರ್-ಎ-ತಯಬಾ ಸೇರಿದಂತೆ ಉಗ್ರರ ತರಬೇತಿ ನೆಲೆಗಳು ಧ್ವಂಸ

ಬೆಳಗಿನ ಜಾವ
1.05ರಿಂದ 1.30
ಸೇನೆ ಮತ್ತು ವಾಯುಪಡೆಯಿಂದ ಜಂಟಿ ಕಾರ್ಯಾಚರಣೆ ನಡೆದ ಸಮಯ

ಬಳಸಿದ ಆಯುಧಗಳು
ಸ್ಕಾಲ್ಪ್ ಕ್ಷಿಪಣಿ, ಹ್ಯಾಮರ್ ಸ್ಮಾರ್ಟ್ ಶಸ್ತ್ರಾಸ್ತ್ರ ವ್ಯವಸ್ಥೆ ಮತ್ತು ಗುರಿ ನಿರ್ದೇಶಿತ ಬಾಂಬ್ ಕಿಟ್‌ಗಳು

ಪ್ರಜಾವಾಣಿ ವಾರ್ತೆ

ನವದೆಹಲಿ: ಪಹಲ್ಗಾಮ್ ಭೀಕರ ಹತ್ಯಾಕಾಂಡ ನಡೆದ ಎರಡು ವಾರಗಳಲ್ಲೇ ಭಾರತೀಯ ಸಶಸ್ತ್ರ ಪಡೆಗಳು ಪಾಕಿಸ್ತಾನ ಹಾಗೂ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಬುಧವಾರ ಮುಂಜಾನೆ ‘ಆಪರೇಷನ್ ಸಿಂಧೂರ’ ಕಾರ್ಯಾಚರಣೆ ನಡೆಸಿ ಭಯೋತ್ಪಾದಕರ ಒಂಬತ್ತು ನೆಲೆಗಳನ್ನು 25 ನಿಮಿಷಗಳಲ್ಲೇ ಧ್ವಂಸಗೊಳಿಸಿವೆ. ಕಾಶ್ಮೀರದಲ್ಲಿ ವಿಹಾರಕ್ಕೆ ಬಂದಿದ್ದ ನಾರಿಯರ ಸಿಂಧೂರ (ಕುಂಕುಮ) ಅಳಿಸಿದ್ದ ಉಗ್ರರ ವಿರುದ್ಧ ಭಾರತ ಕೈಗೊಂಡ ಪ್ರತೀಕಾರ ಇದಾಗಿದೆ.

ಎರಡೂವರೆ ದಶಕಗಳಿಂದ ಭಾರತಕ್ಕೆ ತಲೆನೋವಾಗಿರುವ ಜಾಗತಿಕ ಉಗ್ರ ಮಸೂದ್ ಅಜರ್‌ನ ಕುಟುಂಬದ 10 ಸದಸ್ಯರು ಹಾಗೂ ನಾಲ್ವರು ಆಪ್ತರನ್ನು ಹತ್ಯೆಗೈಯುವ ಮೂಲಕ ದಾಳಿಯು ಯೋಜಿತ ಫಲಿತಾಂಶವನ್ನು ಪಡೆದಿದೆ. 14 ಮಂದಿ ಸತ್ತಿರುವುದನ್ನು ಮಸೂದ್ ಅಜರ್ ಕೂಡ ಖಚಿತಪಡಿಸಿದ್ದಾಗಿ ವರದಿಯಾಗಿದೆ. ಕ್ಷಿಪ್ರ ದಾಳಿಯಲ್ಲಿ 70ರಿಂದ 100 ಭಯೋತ್ಪಾದಕರನ್ನು ಕೊಂದು ಹಾಕಲಾಗಿದೆ.

ಪಾಕಿಸ್ತಾನ ಹಾಗೂ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ದಶಕಗಳಿಂದ ನೆಲೆಯೂರಿ ಭಾರತದಲ್ಲಿ ಹಲವು ದುಷ್ಕೃತ್ಯಗಳನ್ನು ನಡೆಸಿದ್ದ ಜೈಷ್-ಎ-ಮೊಹಮ್ಮದ್, ಲಷ್ಕರ್-ಎ-ತಯಬಾ ಸೇರಿದಂತೆ ಪ್ರಮುಖ ಉಗ್ರರ ತಾಣಗಳ ಮೇಲೆ ಭಾರತೀಯ ಸೇನೆಯು ಭಾರಿ ತಂತ್ರಗಾರಿಕೆಯೊಂದಿಗೆ ನಿಖರ ಪ್ರಹಾರ ನಡೆಸಿದೆ. ಪಾಕಿಸ್ತಾನದ ನಾಲ್ಕು ಹಾಗೂ ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಐದು ನೆಲೆಗಳನ್ನು ಗುರಿಯಾಗಿಸಿಕೊಂಡು ಸಶಸ್ತ್ರ ಪಡೆಗಳು ಬೆಳಗಿನ ಜಾವ 1.05ರಿಂದ 1.30ರ ವರೆಗೆ ಕ್ಷಿಪ್ರ ಕಾರ್ಯಾಚರಣೆ ನಡೆಸಿವೆ.

‘ದಾಳಿಗಳಲ್ಲಿ ಕನಿಷ್ಠ 26 ಜನರು ಮೃತಪಟ್ಟಿದ್ದಾರೆ ಮತ್ತು 46 ಜನರು ಗಾಯಗೊಂಡಿದ್ದಾರೆ’ ಎಂದು ಪಾಕಿಸ್ತಾನ ಸೇನೆ ಹೇಳಿದೆ. ‘ಸೇನಾ ನೆಲೆಯನ್ನು ಗುರಿಯಾಗಿಸಿಕೊಂಡಿಲ್ಲ ಮತ್ತು ನಾಗರಿಕರಿಗೆ ಹಾನಿಯಾದ ವರದಿಗಳಿಲ್ಲ’ ಎಂದು ಭಾರತೀಯ ಸೇನೆ ಸ್ಪಷ್ಟಪಡಿಸಿದೆ.

12ನೇ ಪುಟ ನೋಡಿ



ಭಾರತದ ಪಡೆಗಳು ನಡೆಸಿದ ದಾಳಿಯಲ್ಲಿ ಪಾಕಿಸ್ತಾನದ ಲಾಹೋರ್‌ನಿಂದ 30 ಕಿ.ಮೀ ದೂರದಲ್ಲಿರುವ ಮುರೀದ್ಕೆಯಲ್ಲಿನ ಸರ್ಕಾರಿ ಆರೋಗ್ಯ ಮತ್ತು ಶೈಕ್ಷಣಿಕ ಸಂಕೀರ್ಣವೊಂದು ನಾಶವಾಗಿದ್ದು, ಕಟ್ಟಡದ ಅವಶೇಷಗಳ ನಡುವೆ ಸ್ಥಳೀಯರು —ಎಎಫ್‌ಪಿ ಚಿತ್ರ

ಪಾಕ್ ಗುಂಡಿನ ದಾಳಿ: ಕಾಶ್ಮೀರದಲ್ಲಿ 15 ಸಾವು

ಪೂಂಛ್ (ಪಿಟಿಐ): ಜಮ್ಮು–ಕಾಶ್ಮೀರದ ಪೂಂಛ್ ಜಿಲ್ಲೆಯ ಗಡಿ ಭಾಗಗಳಲ್ಲಿ ಪಾಕಿಸ್ತಾನದ ಸೇನಾ ಪಡೆಯು ಬುಧವಾರ ತೀವ್ರ ಗುಂಡಿನದಾಳಿ ನಡೆಸಿದೆ. ಘಟನೆಯಲ್ಲಿ 15 ನಾಗರಿಕರು ಮೃತಪಟ್ಟಿದ್ದು, 57 ಮಂದಿ ಗಾಯಗೊಂಡಿದ್ದಾರೆ. ಮೃತರ ಪೈಕಿ 4 ಮಕ್ಕಳು, ಇಬ್ಬರು ಮಹಿಳೆಯರೂ ಇದ್ದಾರೆ.

ಬುಧವಾರ ನಸುಕಿನಲ್ಲಿ ‘ಆಪರೇಷನ್ ಸಿಂಧೂರ’ ಕಾರ್ಯಾಚರಣೆ ಮೂಲಕ ಪಾಕಿಸ್ತಾನ ಹಾಗೂ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿದ್ದ (ಪಿಒಕೆ) ಭಯೋತ್ಪಾದಕ ನೆಲೆಗಳನ್ನು ಭಾರತೀಯ ಪಡೆಗಳು ಧ್ವಂಸಗೊಳಿಸಿದ್ದವು. ಇದರ ಬೆನ್ನಲ್ಲೇ ಜಮ್ಮು–ಕಾಶ್ಮೀರ ಗಡಿ ಜಿಲ್ಲೆಗಳಲ್ಲಿ ಪಾಕ್‌ನಿಂದ ಗುಂಡಿನ ದಾಳಿ ಶುರುವಾಗಿದೆ.

ಪೂಂಛ್ ಮಾತ್ರವಲ್ಲದೆ ರಾಜೌರಿ ಜಿಲ್ಲೆ ಹಾಗೂ ಕುಪ್ವಾಡ ಜಿಲ್ಲೆಯ ಉರಿ, ಕರ್ನಾಹ್, ತಂಗಧರ್ ಸೆಕ್ಟರ್‌ಗಳಲ್ಲಿಯೂ ತೀವ್ರ ಗುಂಡಿನ ದಾಳಿ ನಡೆದಿದೆ. ಫಿರಂಗಿಗಳನ್ನು ಬಳಸಿಯೂ ದಾಳಿ ನಡೆಸಲಾಗಿದ್ದು, ಗಡಿ ಭಾಗದಲ್ಲಿರುವ ಗ್ರಾಮಗಳಲ್ಲಿ ಹಲವಾರು ಮನೆಗಳು ಹಾನಿಗೊಂಡಿವೆ.ಪೂಂಛ್‌ನಲ್ಲಿರುವ ಅರಣ್ಯ ಇಲಾಖೆ ಹಾಗೂ ವಿಶ್ವಸಂಸ್ಥೆ ಕೇಂದ್ರ ಕಟ್ಟಡಗಳಿಗೆ ಹಾನಿಯಾಗಿದೆ.

12ನೇ ಪುಟ ನೋಡಿ

ವಿವರ ನೀಡುವಾಗ ವಿಭಿನ್ನ ಹೆಜ್ಜೆ

ವಿಕ್ರಂ ಮಿಸ್ರಿ — ಸೋಫಿಯಾ ಖುರೇಷಿ — ವ್ಯೋಮಿಕಾ ಸಿಂಗ್

ನವದೆಹಲಿ: ‘ಆಪರೇಷನ್ ಸಿಂಧೂರ’ ಕಾರ್ಯಾಚರಣೆಯ ವಿವರಗಳನ್ನು ಮಾಧ್ಯಮಗಳಿಗೆ ತಿಳಿಸಲು ಕೇಂದ್ರ ಸರ್ಕಾರ ಆಯ್ಕೆ ಮಾಡಿಕೊಂಡಿದ್ದು ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ, ಭಾರತೀಯ ಸೇನೆಯ ಕರ್ನಲ್ ಸೋಫಿಯಾ ಖುರೇಷಿ ಮತ್ತು ಭಾರತೀಯ ವಾಯುಪಡೆಯ ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಅವರನ್ನು.

ಮಹತ್ವದ ಮಿಲಿಟರಿ ಕಾರ್ಯಾಚರಣೆಯ ಬಗ್ಗೆ ಜಗತ್ತಿಗೆ ಮಾಹಿತಿ ನೀಡುವ ಹೊಣೆಯನ್ನು ಸರ್ಕಾರ ಈ ಮೂವರಿಗೆ ವಹಿಸಿದ್ದು ಒಂದು ಅಸಾಂಪ್ರದಾಯಿಕ ನಡೆ. ಈ ಹೊಣೆಯನ್ನು ಇವರಿಗೆ ವಹಿಸಿದ್ದರ ಹಿಂದೆಯೂ ಒಂದು ಸಂದೇಶ ರವಾನಿಸುವ ಉದ್ದೇಶ ಇದ್ದಂತಿದೆ.

ಪತ್ರಿಕಾಗೋಷ್ಠಿಯಲ್ಲಿ ಮೊದಲು ವಿವರ ನೀಡಿದವರು ಮಿಸ್ರಿ. ಅವರು ಶ್ರೀನಗರದಲ್ಲಿ ಕಾಶ್ಮೀರಿ ಪಂಡಿತ ಕುಟುಂಬದಲ್ಲಿ ಜನಿಸಿದರು. ಅವರು 1989ರಲ್ಲಿ ಭಾರತೀಯ ವಿದೇಶಾಂಗ ಸೇವೆಗೆ ಸೇರಿದವರು. ಕಾಶ್ಮೀರದಲ್ಲಿ ದಶಕಗಳಿಂದ ನಡೆಯುತ್ತಿರುವ ಭಯೋತ್ಪಾದಕ ಕೃತ್ಯಗಳಿಂದ ತೀವ್ರ ನೋವು ಉಂಡವರಲ್ಲಿ ಅಲ್ಲಿನ ಪಂಡಿತ ಸಮುದಾಯದವರೂ ಪ್ರಮುಖವಾಗಿ ಸೇರಿದ್ದಾರೆ.

ಪಹಲ್ಗಾಮ್ ದಾಳಿಯಲ್ಲಿ ಉಗ್ರರು ಪತಿ, ತಂದೆ, ಪುತ್ರರನ್ನು ಕೊಂದು; ಬದುಕುಳಿದ ಪತ್ನಿ, ಮಗಳು, ತಾಯಂದಿರು ತೀವ್ರ ಆಘಾತಕ್ಕೆ ಒಳಗಾಗುವಂತೆ ಮಾಡಿದ್ದರು. ಅಂತಹ ಹೇಯ ಕೃತ್ಯಕ್ಕೆ ಪ್ರತೀಕಾರವಾಗಿ ನಡೆದ ದಾಳಿಯ ಕುರಿತ ಮಾಹಿತಿಯನ್ನು ಸಶಸ್ತ್ರ ಪಡೆಗಳ ಮಹಿಳಾ ಅಧಿಕಾರಿಗಳ ಮೂಲಕ ಜಗತ್ತಿಗೆ ನೀಡಲಾಯಿತು.

ಕರ್ನಲ್ ಸೋಫಿಯಾ ಅವರು ಯೋಧರ ತ್ಯಾಗ, ಬಲಿದಾನ ಕುರಿತ ಕಥೆಗಳನ್ನು ಚಿಕ್ಕ ವಯಸ್ಸಿನಿಂದಲೇ ಕೇಳುತ್ತ ಬೆಳೆದವರು. ಅವರ ಅಜ್ಜ ಯೋಧರಾಗಿ ಕರ್ತವ್ಯ ನಿರ್ವಹಿಸಿದ್ದರು. ಸೋಫಿಯಾ ಅಥವಾ ಅವರ ಸಹೋದರಿ ಸೇನೆಯನ್ನು ಸೇರಬೇಕು ಎಂಬುದು ಅವರ ಅಮ್ಮನ ಆಸೆ. ‘ದೇಶವನ್ನು ರಕ್ಷಿಸುವುದು ನಮ್ಮ ಜವಾಬ್ದಾರಿ ಎಂದು ನನ್ನ ತಾತ ಹೇಳುತ್ತಿದ್ದರು’ ಎಂದು ಸೋಫಿಯಾ ಹಿಂದೊಮ್ಮೆ ನೆನಪಿಸಿಕೊಂಡಿದ್ದರು.

12ನೇ ಪುಟ ನೋಡಿ

ಚಿನಕುರುಳಿ
ಪ್ರಕಾಶ್ ಶೆಟ್ಟಿ

155 ವರ್ಷಗಳು

ಸಿ. ಕೃಷ್ಣಯ್ಯ ಚೆಟ್ಟಿ™
ಗ್ರೂಪ್ ಆಫ್ ಜ್ಯುವೆಲರ್ಸ್
ರವರಿಂದ

ವೈಭವಶಾಲಿ
ಮದುವೆ ಪ್ಯಾಕೇಜ್!

1869ರಿಂದ ಅಧಿಕೃತವಾಗಿ – ನಂಬಿಕೆಯ ಪರಂಪರೆ.

ಕೇವಲ ₹15 ಲಕ್ಷದಲ್ಲಿ*
ಕನಿಷ್ಠ ₹7 ಲಕ್ಷ ಮೌಲ್ಯದ ಆಭರಣಗಳನ್ನು ಖರೀದಿಸಿ + ₹8 ಲಕ್ಷ ಮೌಲ್ಯದ ಅದ್ವಿತೀಯ ಮದುವೆ, ಬೆಂಗಳೂರು ಅರಮನೆ ಮೈದಾನದಲ್ಲಿ.

ವಿವರಗಳಿಗಾಗಿ QR ಕೋಡ್ ಅನ್ನು ಸ್ಕ್ಯಾನ್ ಮಾಡಿ
weddingsbyckcjewellers.com

ಹಾಗು!
ಆಕರ್ಷಕ ಕೊಡುಗೆಗಳು
ದಿ ಗ್ರ್ಯಾಂಡ್ 1869 ರಿಯಾಯಿತಿ ಜೊತೆಗೆ ಉಳಿತಾಯ ಮಾರಾಟ
ಮೇ 18, 2025, ಭಾನುವಾರವರೆಗೆ
ಈ ವಿಶೇಷ ಅವಧಿಯಲ್ಲಿ ನೀವು ಮಾಡಿದ ಖರೀದಿಯ ಒಂದು ಭಾಗವನ್ನು ನಾವು ನಮ್ಮ ಸಿಗ್ನೇಚರ್ ದರ ರಕ್ಷಣೆ ಯೋಜನೆಯಲ್ಲಿ ಹೂಡಿಕೆ ಮಾಡುತ್ತೇವೆ. 11 ತಿಂಗಳ ಪಕ್ವತೆಯ ಕೊನೆಯಲ್ಲಿ, ನೀವು ವಾರ್ಷಿಕ 12% ಹೆಚ್ಚುವರಿ ಲಾಭವನ್ನು ಪಡೆಯಬಹುದು.

ಜೊತೆಗೆ 16 ವಿಶಿಷ್ಟ ಸೇವೆಗಳ ಸಮೂಹ**
ಸ್ಥಳ ಅರಮನೆ ಮೈದಾನ • ಆಭರಣಗಳು • ಸಾಗಿಸು ಬಂಡಿ ಸೇವೆ • ಹೂವಿನ ಅಲಂಕಾರ • ಮದುವೆ ಸಹಾಯಕ • ಮದುವೆ ಅಲಂಕಾರ • ಅದ್ದೂರಿ ಅಡುಗೆ • ಮಾಕ್ಟೇಲ್ ಬಾರ್ • 90+ ಸಸ್ಯಾಹಾರಿ ಭಕ್ಷ್ಯಗಳು • ಬೆಳಕು • ಸಂಗೀತ • ಪಾರ್ಕಿಂಗ್ • ವಿವಾಹ ವೇದಿಕೆ • ಛಾಯಾಗ್ರಹಣ • ವೀಡಿಯೋಗ್ರಫಿ • 250 ಅತಿಥಿಗಳು

ಬೆಂಗಳೂರಿನಾದ್ಯಂತ ಬೃಹತ್ ಷೋರೂಮ್‌ಗಳು ಮತ್ತು ಬೊಟಿಕ್‌ಗಳು: ಕಮರ್ಷಿಯಲ್ ಸ್ಟ್ರೀಟ್ • ಮೇನ್ ಗಾರ್ಡ್ ಕ್ರಾಸ್ ರಸ್ತೆ (ಕೆಂಪು ಬಣ್ಣದ ಮುಂಭಾಗ) • ಜಯನಗರ • ಮಲ್ಲೇಶ್ವರಂ
ಹೆಚ್ಚಿನ ಮಾಹಿತಿಗಾಗಿ ನಮ್ಮ ಮೀಸಲಿಟ್ಟ ಸಂಬಂಧಿತ ವ್ಯವಸ್ಥಾಪಕರಿಗೆ ಕರೆ ಮಾಡಿ: +91 95131 31869 | Tel: 080-4000 1869 / 4100 1869 | www.ckcjewellers.com | www.crash.club

*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಗುರುತುಗಳು, ಲೋಗೋಗಳು, ಹೆಸರುಗಳು ಮತ್ತು ನೋಂದಾಯಿತ ಟ್ರೇಡ್‌ಮಾರ್ಕ್‌ಗಳ ಅನಧಿಕೃತ ಬಳಕೆಯನ್ನು ನಿಷೇಧಿಸಲಾಗಿದೆ.
ಸಿಕೆಸಿ ಸಮೂಹ ಕಂಪನಿಗಳು: C. Krishniah Chetty & Sons™ • C. Krishniah Chetty Jewellers® • C. Krishniah Chetty & Sons • The 1869 Guild, C. Krishniah Chetty & Sons Manufacturers • C. Krishniah Chetty Charitable Trust • C. Krishniah Chetty Foundation

*ಎಚ್ಚರಿಕೆ ಸೂಚನೆ – ಸಾರ್ವಜನಿಕ ಹಿತಾಸಕ್ತಿಯಲ್ಲಿ: * ಪ್ರಸ್ತುತ ನಮ್ಮ ಕಂಪನಿಯ ನಿರ್ದೇಶಕರು ಆಗಿರುವ ಶ್ರೀ ಸಿ. ಗಣೇಶ್ ನಾರಾಯಣ್ ಮತ್ತು ಅವರ ಪತ್ನಿಯೊಂದಿಗೆ ನಡೆಸುತ್ತಿರುವ ದೀಪಾಲಿ ಕಂ. ಪ್ರೈ. ಲಿ., ಎಂಬ ಕಂಪನಿಯ ಹೆಸರನ್ನು ಮೋಸತನದಿಂದ ನಮ್ಮ ಹೆಸರಿನಂತೆಯೇ ಬದಲಾಯಿಸಿ ನಮಗೆ ಸಂಬಂಧವಿಲ್ಲದ ಒಂದು ವ್ಯಾಪಾರ ಸಂಸ್ಥೆಯನ್ನು ಆರಂಭ ಮಾಡಿರುತ್ತಾರೆ. ಈ ನೂತನ ಅನಧಿಕೃತ ಮಳಿಗೆಯು ಟಚ್‌ಸ್ಟೋನ್ (ನಮ್ಮ ಪ್ರಮುಖ ಶೋರೂಮ್‌ನ ಪಕ್ಕ) ಎಡಭಾಗದಲ್ಲಿ ತೆರೆಯಲಾಗಿದೆ. ಈ ಸಂಸ್ಥೆಯು, ನ್ಯಾಯಾಲಯದ ಆದೇಶಗಳ ಉಲ್ಲಂಘನೆಯ ಅಡಿಯಲ್ಲಿ ನಿರ್ಬಂಧಗಳಿಗೆ ಒಳಪಟ್ಟಿರುತ್ತದೆ. ಆದ್ದರಿಂದ, ನಮ್ಮ ಎಲ್ಲಾ ಗ್ರಾಹಕರಿಗೆ/ಸಾರ್ವಜನಿಕರಿಗೆ ತಿಳಿಸುವ ಎಚ್ಚರಿಕೆ ಸೂಚನೆ ಏನೆಂದರೆ, ದಯವಿಟ್ಟು ಮತ್ತೊಂದು ಅಧಿಕೃತ ಸಿ. ಕೃಷ್ಣಯ್ಯ ಚೆಟ್ಟಿ ಶೋರೂಮ್ ಇದೆಯೆಂಬ ತಪ್ಪು ಕಲ್ಪನೆಗೆ ಒಳಗಾಗದಿರಿ. ವಾಸ್ತವವಾಗಿ ಅದು ಸಿಕೆಸಿ ಹೆಸರು ಅಥವಾ ಸಿಕೆಸಿ ಗ್ರೂಪ್ ಲೋಗೋ ಬಳಸಿಕೊಳ್ಳಲು ಅಧಿಕೃತ ಸಂಸ್ಥೆಯಲ್ಲ. ವಿಷಯಗಳು ನ್ಯಾಯಾಲಯಗಳಲ್ಲಿ ತೀವ್ರ ಆದ್ಯತೆಯ ಮೇರೆಗಿನ ವಿಚಾರಣೆಗೆ ಬಾಕಿ ಇರುತ್ತವೆ. ಗಮನಿಸಿ: *ಒಂದು ವೇಳೆ, ಕಾನೂನಿನ ಪ್ರಕಾರ ಅವರ ವ್ಯವಹಾರ ಸ್ಥಗಿತವಾದಲ್ಲಿ, ಅವರಿಂದ ಮಾರಾಟ ಮಾಡಲಾಗಿರುವ ಉತ್ಪನ್ನಗಳನ್ನು (ಅವರ ಸಂಘರ್ಷಮಯ ವ್ಯಾಪಾರ ಆರಂಭವಾದ ದಿನಾಂಕ 15.03.2023 ರಿಂದ), ನಮ್ಮ ಸಿಕೆಸಿ ನಿಯಮಗಳ ಅಡಿಯಲ್ಲಿ ಮರು–ಖರೀದಿಗೆ/ವಿನಿಮಯ ಯೋಜನೆಯಲ್ಲಿ ಪರಿಗಣಿಸಲಾಗುವುದಿಲ್ಲ. ಇದಲ್ಲದೆ, ಅನಧಿಕೃತ ವ್ಯವಹಾರದೊಂದಿಗೆ ವ್ಯವಹರಿಸುವಾಗ ನೀವು ಆರ್ಥಿಕ ನಷ್ಟವನ್ನು ಅನುಭವಿಸಬಹುದು.*

OM SHREE GURUBASAVALINGAYA NAMAHA

HIREMATH SAMSTHAN VIDYAPEETH TRUST(R), BHALKI

SHRI CHANNABASAVESHWAR GURUKUL RESIDENTIAL PU SCIENCE COLLEGE

KARDYAL -585 413 - TQ. BHALKI - DIST. BIDAR - KARNATAKA

JEE MAINS RESULT - 2025

TOPPERS ARE NOT BORN, THEY ARE MADE @ SRI CHANNABASAVESHWAR GURUKUL



ABHISHEK	99.78ile
SUMEET	99.54ile
SHIVAKUMAR	99.42ile
GANESH	99.41ile
PRADYUMKUMAR	99.28ile
ABHISHEK	99.25ile
ASMITA	99.23ile
GUNDAPPA	99.23ile
SHASHANK	99.21ile
SANKALP	99.18ile
SUJAL	99.09ile

Result Abstract In Percentile

More Than 99 Percentile	11
More Than 98 Percentile	24
More Than 97 Percentile	36
More Than 96 Percentile	48
More Than 95 Percentile	61
Eligible for JEE Advanced	300

KAVYANJALI	98.75ile
AKSHITA	98.63ile
ANAND	98.59ile
KARTHIK	98.47ile
SUMITREDDY	98.45ile
HARSH	98.31ile
VEDANT	98.28ile
MEGHANA	98.21ile
TANISHA	98.10ile
CHANNABASAVA	98.09ile
SHRAVI	98.08ile
VIVEKREDDY	98.05ile
SHRUSHTI	98.00ile
VIVEK	97.94ile
YASH	97.91ile
KRISHNA	97.71ile
PRATHVI	97.67ile
SHARAN	97.67ile
CHETAN	97.50ile
ATIT	97.48ile
KARTHIK	97.36ile
HARSH	97.32ile
ADITYA	97.12ile
SOHAM	97.05ile
AVINASH	97.00ile
ANIRUDH	96.97ile
OMKAR	96.83ile
VISHNU	96.55ile
ANKITA	96.49ile
NAGSHETTY	96.41ile
NINGAYYA	96.30ile
PRAJWAL	96.21ile
CHANNABASAVA	96.14ile
VINAYKUMAR	96.14ile
DNYANENDRA	96.01ile
SHASHIKANTH	96.01ile
SHRUSHTI	96.00ile
HARIPRASAD	95.86ile
SUDHANSHU	95.76ile
ANUSHKA	95.72ile
ALOK	95.43ile
PRATHVIRAJ	95.40ile
BHUMIKA	95.00ile
DIKSHA	95.00ile
GANESH	95.00ile
GANESH	95.00ile
Md. TALAHA	95.00ile
PREM	95.00ile
SHRIPAD	95.00ile
VAISHNAVI	95.00ile

ADMISSIONS ARE OPEN

NEET (REPEATERS) LONG TERM BATCH - 2025-26

Contact: 8892992222, 8147740402, 7353304503 - Website: www.cbgurukul.in

ಒಳಚರಂಡಿಯೂ ಅವ್ಯವಸ್ಥೆ: ಹೊರಮಾವು ಸಮೀಪದ ಬಂಜಾರ ಬಡಾವಣೆ ನಿವಾಸಿಗಳ ಅಳಲು

ಹಣ ಪಾವತಿಸಿದರೂ ಬಾರದ 'ಕಾವೇರಿ'

• ಗಾಣಧಾಳು ಶ್ರೀಕಂಠ

ಮುಖ್ಯಾಂಶಗಳು
- ಕಾವೇರಿ ನೀರು ಪೂರೈಕೆ ಅಸಮರ್ಪಕ
- ಒಳಚರಂಡಿಯದ್ದು ದೊಡ್ಡ ಸಮಸ್ಯೆ
- ದೂರು ನೀಡಿದ್ದೇವೆ, ಶಾಶ್ವತ ಪರಿಹಾರ ಸಿಕ್ಕಿಲ್ಲ

ಬೆಂಗಳೂರು: ನಗರದ 110 ಹಳ್ಳಿಗಳ ವ್ಯಾಪ್ತಿಗೆ ಸೇರುವ ಹೊರಮಾವು ಕಲ್ಕೆರೆ ಬಳಿಯ ಬಂಜಾರ ಬಡಾವಣೆಯಲ್ಲಿ ಹಣ ಪಾವತಿಸಿದರೂ ಕೆಲವರಿಗೆ ಕಾವೇರಿ ನೀರು ಬರುತ್ತಿಲ್ಲ. ಬಡಾವಣೆಯಲ್ಲಿ ಒಳಚರಂಡಿ ವ್ಯವಸ್ಥೆಯೂ ಅಧ್ವಾನವಾಗಿದೆ ಎಂದು ಅಲ್ಲಿನ ನಿವಾಸಿಗಳು ದೂರುತ್ತಿದ್ದಾರೆ.

ಬೆಂಗಳೂರು ಪೂರ್ವ ತಾಲ್ಲೂಕು ವ್ಯಾಪ್ತಿಯ ಬಂಜಾರ ಬಡಾವಣೆಯಲ್ಲಿ (ಹಿಂಪಕ್ಕ ದೇವಾಲಯದ ಸಮೀಪ) ಕಾವೇರಿ ನೀರು ಪೂರೈಕೆಗೆ ಕೊಳವೆ ಮಾರ್ಗ ಅಳವಡಿಸಿದ್ದಾರೆ. ಈ ಭಾಗದಲ್ಲಿ ಜಲಮಂಡಳಿಯವರು ಕಾವೇರಿ ನೀರಿನ ಸಂಪರ್ಕ ಅಭಿಯಾನ ನಡೆಸಿದ ನಂತರ ನಿವಾಸಿಗಳು ಠೇವಣಿ ಪಾವತಿಸಿ ನೀರಿನ ಸಂಪರ್ಕ ಪಡೆದಿದ್ದಾರೆ. ಆದರೆ, ಅವರೆಲ್ಲರ ಹಲವು ಮನೆಗಳಿಗೆ ಸಮರ್ಪಕವಾಗಿ ನೀರು ಪೂರೈಕೆಯಾಗುತ್ತಿಲ್ಲ. ಎಂದಿನಂತೆ, ಟ್ಯಾಂಕರ್ ನೀರು ತರಿಸಿಕೊಳ್ಳುವುದು ತಪ್ಪಿಲ್ಲ ಎಂದು ಸ್ಥಳೀಯರು ಹೇಳುತ್ತಾರೆ.

'ಈ ಬಡಾವಣೆಯಲ್ಲಿ ನೀರು ಪೂರೈಕೆ ಸಮಸ್ಯೆ ಮಾತ್ರ ಇಲ್ಲ. ಒಳಚರಂಡಿ ವ್ಯವಸ್ಥೆಯದ್ದು ದೊಡ್ಡ ಸಮಸ್ಯೆಯಾಗಿದೆ. ಈ ಸಮಸ್ಯೆಯಿಂದ ನಾವು ರೋಸಿ ಹೋಗಿದ್ದೇವೆ' ಎಂದು ನಿವಾಸಿಗಳು ಹೇಳುತ್ತಾರೆ.

ಈ ಬಡಾವಣೆ ಹಿಂದೆ ಕಂದಾಯ ಬಡಾವಣೆ ಆಗಿದ್ದಾಗ ಎಲ್ಲರೂ ತಮ್ಮ ಮನೆಗಳ ಎದುರು ಶೌಚಗುಂಡಿ ಮಾಡಿಸಿಕೊಂಡಿದ್ದರು. ಆಗ ನಾಲ್ಕೈದು ವರ್ಷಗಳಿಗೊಮ್ಮೆ ಈ ಗುಂಡಿಗಳು ತುಂಬುತ್ತಿದ್ದವು. ಇತ್ತೀಚೆಗೆ ಒಳಚರಂಡಿ ಕಾಮಗಾರಿ ಕೈಗೊಂಡಾಗ, ಈ ಗುಂಡಿಗಳಿಗೆ ಹಾನಿಯಾಗಿದೆ. ಈಗ ಒಳಚರಂಡಿಯೂ ಸರಿ ಇಲ್ಲ, ಹಾನಿಯಾದ ಗುಂಡಿಗಳೂ ಬೇಗ ಬೇಗ ತುಂಬುತ್ತಿವೆ. ವಿಲೇವಾರಿ ಮಾಡಲು ಸಾವಿರಾರು ರೂಪಾಯಿ ಖರ್ಚು ಮಾಡುವಂತಾಗಿದೆ ಎಂದು ನಿವಾಸಿಗಳು 'ಪ್ರಜಾವಾಣಿ' ಜೊತೆ ಅಳಲು ತೋಡಿಕೊಂಡರು.

'ಲಕ್ಷ ಹಣ ಪಾವತಿಸಿ ಕಾವೇರಿ ನೀರಿನ ಸಂಪರ್ಕ ಪಡೆದಿದ್ದೇವೆ. ಆದರೆ, ನೀರೇ ಬರುತ್ತಿಲ್ಲ. ಒಳಚರಂಡಿ ವ್ಯವಸ್ಥೆಯೂ ಸರಿ ಇಲ್ಲದೇ, ಮನೆಯ ಶೌಚ ಗುಂಡಿಯನ್ನು ಖಾಲಿ ಮಾಡಿಸಲು ಈಗಲೂ ಸಾವಿರಾರು ರೂಪಾಯಿ ಖರ್ಚು ಮಾಡುತ್ತಿದ್ದೇವೆ' ಎಂದು ಬೇಸರ ವ್ಯಕ್ತಪಡಿಸಿದರು ನಿವಾಸಿ ಇಂದಿರಾ.

'ಕಾವೇರಿ ನೀರು ಮತ್ತು ಒಳಚರಂಡಿ ಸಮಸ್ಯೆಗೆ ಸಂಬಂಧಿಸಿದಂತೆ ಇಲ್ಲಿನ ನಿವಾಸಿಗಳು ಜಲಮಂಡಳಿಯ ಎಲ್ಲ ಹಂತದ ಅಧಿಕಾರಿಗಳಿಗೆ ದೂರು ನೀಡಿದ್ದೇವೆ. ದೂರು ಕೊಟ್ಟಾಗ ಬಂದು ನೋಡಿ ಹೋಗುತ್ತಾರೆ. ಶಾಶ್ವತ ಪರಿಹಾರ ನೀಡಿಲ್ಲ. ಸಮಸ್ಯೆ ಮಾತ್ರ ನಿರಂತರವಾಗಿ ಮುಂದುವರಿದಿದೆ' ಎಂದು ಸ್ಥಳೀಯರಾದ ಶ್ರೀನಿವಾಸ್, ಮನೋಹರನ್ ದೂರುತ್ತಾರೆ.

ಕಾವೇರಿ ನೀರು ಸಂಪರ್ಕ ಪಡೆಯಲು ಪ್ರೊರೇಟಾ ಶುಲ್ಕ, ಮೀಟರ್‌ಗೆ ಶುಲ್ಕ, ಪ್ಲಂಬರ್, ಕಂಟ್ರಾಕ್ಟರ್ ಕಮಿಷನ್ ಹೀಗೆ ಪ್ರತಿ ಮನೆಯವರು ಸಾವಿರಾರು ರೂಪಾಯಿ ಹಣ ಖರ್ಚು ಮಾಡಿದ್ದಾರೆ. ಆದರೆ, ಕಾವೇರಿ ನೀರು ಬಾರದೇ ಟ್ಯಾಂಕರ್ ನೀರು ತರಿಸಲು ಹಣ ತೆತ್ತುವುದು ತಪ್ಪಿಲ್ಲ. ಒಳಚರಂಡಿ ವ್ಯವಸ್ಥೆ ಸರಿ ಇಲ್ಲದೇ ಶೌಚ ಗುಂಡಿಗಳನ್ನು ಸ್ವಚ್ಛಗೊಳಿಸಲು ಸಾವಿರಾರು ರೂಪಾಯಿ ಹಣ ವ್ಯಯಿಸುವುದು ನಿಂತಿಲ್ಲ. ಇದು ನಿತ್ಯದ ಹೋರಾಟವಾಗಿದೆ ಎಂದು ನಿವಾಸಿಗಳು ಬೇಸರ ವ್ಯಕ್ತಪಡಿಸುತ್ತಾರೆ.

ಕಲ್ಕೆರೆ ರಸ್ತೆಯಲ್ಲಿ ಕೊಳವೆ ಒಡೆದು ನೀರು ಪೋಲಾಗುತ್ತಿರುವ ದೃಶ್ಯ

'ನೀರು ಪೂರೈಕೆಯಾಗುತ್ತಿದೆ'

ಬಂಜಾರ ಬಡಾವಣೆಗೆ ಕಾವೇರಿ ನೀರಿನ ಪೂರೈಕೆ ಆರಂಭವಾಗಿದೆ. ಒಂದೆರಡು ಕಡೆಗಳಲ್ಲಿ ಕೊಳವೆಗಳ ಸಂಪರ್ಕ ತಪ್ಪಿರಬಹುದು. ಅಂಥದ್ದನ್ನು ಜಲಮಂಡಳಿ ಗಮನಕ್ಕೆ ತಂದರೆ ಒಂದೆರಡು ದಿನಗಳಲ್ಲಿ ಸರಿಪಡಿಸಲಾಗುತ್ತದೆ. ಸದ್ಯ ಈ ಬಡಾವಣೆಯಲ್ಲಿ ಒಳಚರಂಡಿ ಕಾಮಗಾರಿ ಪೂರ್ಣಗೊಂಡಿಲ್ಲ. ತ್ಯಾಜ್ಯ ನೀರು ಸಂಸ್ಕರಣ ಘಟಕ (ಎಸ್‌ಟಿಪಿ) ನಿರ್ಮಾಣವಾಗಬೇಕಿದೆ. ಹಂತ ಹಂತವಾಗಿ ಸರಿಪಡಿಸಲಾಗುತ್ತದೆ.

ಜಲಮಂಡಳಿ ಅಧಿಕಾರಿಗಳು, ಬೆಂಗಳೂರು ಪೂರ್ವ ವಲಯ

ಕೊಳವೆ ಒಡೆದು ನೀರುಪೋಲು

ಕೆ.ಆರ್.ಪುರ: ಹೊರಮಾವು ವಾರ್ಡ್ ವ್ಯಾಪ್ತಿಯ ಬಂಜಾರ ಬಡಾವಣೆ ಪಕ್ಕದ ಕಲ್ಕೆರೆಯ ಮುಖ್ಯರಸ್ತೆಯಲ್ಲಿ ಕಾವೇರಿ 5ನೇ ಹಂತದ ಯೋಜನೆಯಡಿ ಅಳವಡಿಸಿರುವ ಕೊಳವೆಗಳು ಸಮರ್ಪಕವಾಗಿ ಜೋಡಣೆಯಾಗಿಲ್ಲ. ಈ ಕೊಳವೆಗಳಲ್ಲಿ ಪರೀಕ್ಷಾರ್ಥವಾಗಿ ನೀರು ಹರಿಸಿದಾಗ ಅಲ್ಲಲ್ಲೇ ಸೋರಿಕೆಯಾಗುತ್ತದೆ. ಇದರಿಂದ ನೀರು ಪೋಲಾಗುತ್ತಿದೆ ಎಂದು ಸ್ಥಳೀಯರು ದೂರುತ್ತಾರೆ.

'ಮುಖ್ಯರಸ್ತೆಯಲ್ಲಿ ಗುಂಡಿ ತೆರೆದು ಪೈಪ್ ಅಳವಡಿಸಲಾಗಿದೆ. ಭಾರವಾದ ವಾಹನಗಳ ಸಂಚರಿಸಿದಾಗ ಪೈಪ್ ಒಡೆದು ನೀರು ರಸ್ತೆಗೆ ಹರಿಯುತ್ತದೆ. ನೀರು ಪೋಲಾಗುವ ಕುರಿತು ಅಧಿಕಾರಿಗಳಿಗೆ ತಿಳಿಸಿದ್ದೇವೆ. ಯಾವುದೇ ಪ್ರಯೋಜನವಾಗಿಲ್ಲ. ನಾವು ರಸ್ತೆಯಲ್ಲಿ ಹರಿಯುವ ನೀರನ್ನೇ ನಿತ್ಯ ಕೊಳವೆಗಳಿಗೆ ಬಳಸುತ್ತಿದ್ದೇವೆ' ಎಂದು ಕಲ್ಕೆರೆಯ ಕನಕದಾಸ ಬೀದಿಯ ನರೇಶ್ ಹೇಳಿದರು.

'ಎರಡು ತಿಂಗಳಲ್ಲಿ ಹತ್ತಕ್ಕಿಂತ ಹೆಚ್ಚಿನ ಬಾರಿ ಪೈಪ್ ಒಡೆದಿದೆ. ಇದು ಮುಖ್ಯ ಕೊಳವೆಯಾಗಿರುವುದರಿಂದ ದೊಡ್ಡ ಪ್ರಮಾಣದಲ್ಲಿ ನೀರು ಸೋರಿಕೆಯಾಗುತ್ತದೆ. ಸರಿಯಾದ ರೀತಿಯಲ್ಲಿ ಕೊಳವೆ ಅಳವಡಿಸದಿರುವುದು ಹೀಗೆ ಆಗಲು ಮುಖ್ಯ ಕಾರಣ. ನಿತ್ಯ ಸಾವಿರಾರು ಲೀಟರ್ ನೀರು ರಸ್ತೆ ಮೂಲಕ ಚರಂಡಿ ಸೇರುತ್ತಿದೆ. ಹೀಗಾಗಿ ಮನೆಗಳಿಗೆ ಹರಿಯುವ ನೀರು ಕಡಿಮೆಯಾಗಿದೆ. ಕುಡಿಯುವ ನೀರಿನ ಯೋಜನೆ ಪೂರ್ಣಪ್ರಮಾಣದಲ್ಲಿ ಜನರಿಗೆ ಸಿಗುತ್ತಿಲ್ಲ' ಎಂದು ಇದೇ ಗ್ರಾಮದ ಹಳೇ ಪೋಸ್ಟ್‌ಮೆನ್ ರಸ್ತೆಯ ಕೃಷ್ಣಮೂರ್ತಿ ಹೇಳುತ್ತಾರೆ.



ವಿಶ್ವದ ಅತ್ಯಂತ ಪ್ರತಿಷ್ಠಿತ ಹಾಗೂ ಗ್ಲಾಮರಸ್ ಫ್ಯಾಷನ್ ಸಮಾರಂಭದಲ್ಲಿ ಶಾರುಖ್ ಖಾನ್ ಪಾಲ್ಗೊಂಡರು!

ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣ ಎನ್‌ಐಎ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂದುತ್ವವಾದಿ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣವನ್ನು ರಾಷ್ಟ್ರೀಯ ತನಿಖಾ ದಳಕ್ಕೆ (ಎನ್‌ಐಎ) ವಹಿಸಬೇಕು. ಹಿಂದುತ್ವವಾದಿ ಕಾರ್ಯಕರ್ತರಿಗೆ ರಕ್ಷಣೆ ಒದಗಿಸಬೇಕು' ಎಂದು ವಿಶ್ವ ಹಿಂದೂ ಪರಿಷತ್ ಕರ್ನಾಟಕ ದಕ್ಷಿಣ ಪ್ರಾಂತವು ಸರ್ಕಾರಕ್ಕೆ ಆಗ್ರಹಿಸಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರಾಂತ ಸಹ ಕಾರ್ಯದರ್ಶಿ ವಿ. ಸುರೇಶ್, 'ರಾಜ್ಯದಲ್ಲಿ ಹಿಂದೂ ವಿರೋಧಿ ಸರ್ಕಾರವಿದೆ. ನಿಷೇಧಿತ ಪಿಎಫ್‌ಐ ಸಂಘಟನೆಯ ಕಾರ್ಯಕರ್ತರು ಮೃತಪಟ್ಟರೆ ಗೃಹ ಸಚಿವರು ಸೇರಿ ಸರ್ಕಾರದ ಪ್ರತಿನಿಧಿಗಳು ಅವರ ಮನೆಗಳಿಗೆ ಭೇಟಿ ನೀಡುತ್ತಾರೆ. ಆದರೆ, ಹಿಂದುತ್ವವಾದಿ ಕಾರ್ಯಕರ್ತರ ಹತ್ಯೆಯಾದಾಗ ಅವರ ಮನೆಗೆ ಭೇಟಿ ನೀಡಿ, ಸಾಂತ್ವನ ಹೇಳುವ ಸೌಜನ್ಯ ತೋರುತ್ತಿಲ್ಲ. ಈ ಸರ್ಕಾರದಿಂದ ನ್ಯಾಯ ನಿರೀಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ಪ್ರಕರಣವನ್ನು ಎನ್‌ಐಎಗೆ ನೀಡಬೇಕು. ಇಲ್ಲವಾದಲ್ಲಿ ಈ ಬಗ್ಗೆ ಮುಂದಿನ ದಿನಗಳಲ್ಲಿ ಪ್ರತಿಭಟನೆ ನಡೆಸಲಾಗುವುದು' ಎಂದರು.

'ವ್ಯವಸ್ಥಿತ ಸಂಚು ರೂಪಿಸಿ ಸುಹಾಸ್ ಶೆಟ್ಟಿಯನ್ನು ಹತ್ಯೆ ಮಾಡಲಾಗಿದೆ. ಈ ಕೊಲೆ ಹಿಂದೆ ನಿಷೇಧಿತ ಉಗ್ರ ಸಂಘಟನೆ ಕೈವಾಡ ಇರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಾಣುತ್ತಿದೆ. ಈ ಹಿಂದೆ ಪಿಎಫ್‌ಐ ಕಾರ್ಯಕರ್ತರು ನಡೆಸಿರುವ ಹಿಂದುತ್ವವಾದಿ ಕಾರ್ಯಕರ್ತರ ಹತ್ಯೆಗೂ, ಸುಹಾಸ್ ಶೆಟ್ಟಿ ಹತ್ಯೆಗೂ ಬಹಳಷ್ಟು ಸಾಮ್ಯತೆ ಇದೆ. ಆದ್ದರಿಂದ ಈ ಪ್ರಕರಣವನ್ನು ಎನ್‌ಐಎಗೆ ವಹಿಸಬೇಕು' ಎಂದು ಒತ್ತಾಯಿಸಿದರು.

'4 ಯೋಜನೆಗಳಿಗೆ ನೆರವು ನೀಡಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು- ಕನಕಪುರ ನಡುವಣ ರಸ್ತೆ ಆರು ಪಥಕ್ಕೆ ಉನ್ನತೀಕರಣ, ನನೆಗುದಿಗೆ ಬಿದ್ದಿರುವ ಕಗ್ಗಲಿಪುರ ಟೋಲ್ ವರೆಗಿನ ರಸ್ತೆ ಕಾಮಗಾರಿ, ಉಪನಗರ ವರ್ತುಲ ರಸ್ತೆ ಯೋಜನೆಯಲ್ಲಿ ಭೂಮಿ ಕಳೆದುಕೊಂಡ ರೈತರಿಗೆ ಶೀಘ್ರ ಪರಿಹಾರ ಬಿಡುಗಡೆ, ಹೆಬ್ಬಾಳ ಜಂಕ್ಷನ್‌ನಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಪ್ರತ್ಯೇಕ ಮೇಲ್ಸೇತುವೆ ನಿರ್ಮಾಣ ಯೋಜನೆಗಳ ಅನುಷ್ಠಾನಕ್ಕೆ ಅಗತ್ಯ ನೆರವು ಹಾಗೂ ಸಹಕಾರ ನೀಡುವಂತೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಶಿವಕುಮಾರ್ ಅವರು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಅಭಿವೃದ್ಧಿ ಸಚಿವ ನಿತಿನ್ ಗಡ್ಕರಿ ಅವರನ್ನು ನವದೆಹಲಿಯಲ್ಲಿ ಬುಧವಾರ ಭೇಟಿ ಮಾಡಿ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ನೆರವು ನೀಡುವಂತೆ ಮನವಿ ಸಲ್ಲಿಸಿದರು.

ಹೆದ್ದಾರಿ 209ರ ಉನ್ನತೀಕರಣ: ಹಾಲಿ ನಾಲ್ಕು ಪಥ ಇರುವ ಹೆದ್ದಾರಿ 209 (ಬೆಂಗಳೂರು-ಕನಕಪುರ) ಅನ್ನು ಎರಡೂ ಬದಿಯಲ್ಲಿ ಸರ್ವೀಸ್ ರಸ್ತೆ ಜತೆಗೆ ಆರು ಪಥಗಳಿಗೆ ಉನ್ನತೀಕರಣಗೊಳಿಸಬೇಕು. ಹಾರೋಹಳ್ಳಿ ಕೈಗಾರಿಕಾ ಪ್ರದೇಶ ಸೇರಿದಂತೆ ಈ ಪ್ರದೇಶದ ಅಭಿವೃದ್ಧಿಯಿಂದ ಈ ಹೆದ್ದಾರಿಯಲ್ಲಿ ವಾಹನ ಸಂಚಾರ ಗಣನೀಯ ಏರಿಕೆ ಕಂಡಿದೆ. ಈ ಭಾಗದಲ್ಲಿ ಸಂಚಾರ ಸುಗಮಗೊಳಿಸಲು, ಸಂಚಾರಿ ಸುರಕ್ಷತೆ, ಕೈಗಾರಿಕಾ ಪ್ರದೇಶದ ವಾಹನಗಳ ಸುಗಮ ಸಂಚಾರಕ್ಕೆ ಈ ಯೋಜನೆ ಕೈಗೆತ್ತಿಕೊಳ್ಳಬೇಕು ಎಂದು ಮನವಿ ಮಾಡಲಾಗಿದೆ.

ಕಗ್ಗಲಿಪುರ ಟೋಲ್ ರಸ್ತೆ ಕಾಮಗಾರಿ ಪೂರ್ಣಕ್ಕೆ ಆಗ್ರಹ: ರಾಷ್ಟ್ರೀಯ ಹೆದ್ದಾರಿ 209ರಲ್ಲಿ ರವಿಶಂಕರ ಗುರೂಜಿ ಆಶ್ರಮದಿಂದ ಕಗ್ಗಲಿಪುರ ಟೋಲ್ ವರೆಗಿನ 7 ಕಿ.ಮೀ ಉದ್ದದ ರಸ್ತೆ ಕಾಮಗಾರಿ ಬಹುದಿನಗಳಿಂದ ನನೆಗುದಿಗೆ ಬಿದ್ದಿದೆ. ಈ ಯೋಜನೆಗೆ ಅಗತ್ಯ ಭೂಮಿಯನ್ನು ಸ್ವಾಧೀನಕ್ಕೆ ಪಡೆಯಲಾಗಿದ್ದು, ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಆಕ್ಷೇಪದಿಂದ ಈ ಯೋಜನೆ ಕಾಮಗಾರಿ ನಿಂತಿದೆ.

ಈ ಹೆದ್ದಾರಿಯಲ್ಲಿ ಈ ಭಾಗದಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿದೆ. ಹಾರೋಹಳ್ಳಿ ಕೈಗಾರಿಕಾ ಪ್ರದೇಶದಿಂದ ವಾಹನ ಸಂಚಾರ ಹೆಚ್ಚಾಗಿದ್ದು, ಈ ಭಾಗದಲ್ಲಿ ಸುಗಮ ಸಂಚಾರಕ್ಕೆ ಈ ಕಾಮಗಾರಿ ಪೂರ್ಣಗೊಳಿಸುವುದು ಅಗತ್ಯವಾಗಿದೆ. ಈ ಕಾಮಗಾರಿಗೆ ಎದುರಾಗಿರುವ ಅಡಚಣೆ ನಿವಾರಿಸಿ, ಆದಷ್ಟು ಬೇಗ ಯೋಜನೆ ಪೂರ್ಣಗೊಳಿಸಲು ಸಚಿವಾಲಯವು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಲಾಗಿದೆ.

ನಿತಿನ್ ಗಡ್ಕರಿ ಅವರಿಗೆ ಶಿವಕುಮಾರ್ ಹೂಗುಚ್ಛ ನೀಡಿದರು

ಹೆಬ್ಬಾಳದಿಂದ ವಿಮಾನ ನಿಲ್ದಾಣಕ್ಕೆ ಪ್ರತ್ಯೇಕ ಮೇಲ್ಸೇತುವೆ

ಹೆಬ್ಬಾಳ ಜಂಕ್ಷನ್‌ನಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಡುವಣ 35 ಕಿ.ಮೀ ಉದ್ದದ ಪ್ರದೇಶದಲ್ಲಿ ಅಪಾರ ಅಭಿವೃದ್ಧಿ ಆಗಿದ್ದು, ಅನೇಕ ಕೈಗಾರಿಕೆ ಹಾಗೂ ವಾಣಿಜ್ಯ ಸಂಕೀರ್ಣಗಳು ಸ್ಥಾಪನೆಯಾಗಿವೆ. ಹೀಗಾಗಿ ಈ ಭಾಗದಲ್ಲಿ ಸಂಚಾರ ದಟ್ಟಣೆ ತೀವ್ರವಾಗಿದೆ. ಈಗಿರುವ ಎಲಿವೆಟೆಡ್ ಕಾರಿಡಾರ್ ನಡುವೆ ಟ್ರಾಫಿಕ್ ಸಿಗ್ನಲ್, ಪಾದಚಾರಿಗಳ ರಸ್ತೆ ದಾಟುವಿಕೆಯಿಂದ ಇಲ್ಲಿನ ಪ್ರಯಾಣಕ್ಕೆ ಹೆಚ್ಚಿನ ಸಮಯ ತೆಗೆದುಕೊಳ್ಳುತ್ತದೆ. ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಹೆಬ್ಬಾಳ ಜಂಕ್ಷನ್‌ನಿಂದ ವಿಮಾನ ನಿಲ್ದಾಣಕ್ಕೆ ಪ್ರತ್ಯೇಕ ಮೇಲ್ಸೇತುವೆ ನಿರ್ಮಾಣ ಮಾಡಬೇಕು. ಇದರಿಂದ ವಿಮಾನ ನಿಲ್ದಾಣ ಪ್ರಯಾಣಿಕರು, ಸ್ಥಳೀಯ ವಾಹನಗಳು, ಕೈಗಾರಿಕಾ ವಲಯದ ದೊಡ್ಡ ವಾಹನಗಳ ಸಂಚಾರ ಸುಗಮವಾಗಲಿದೆ ಎಂದು ಮನವಿ ಮಾಡಲಾಗಿದೆ.

ಪರಿಹಾರ ನಿಧಿ ಬಿಡುಗಡೆ: ಉಪನಗರ ವರ್ತುಲ ರಸ್ತೆ ಯೋಜನೆಯು ದಾಬಸ್ ಪೇಟೆ, ಮಾಗಡಿ, ರಾಮನಗರ, ಹಾರೋಹಳ್ಳಿ ನಡುವೆ ಸಂಪರ್ಕ ವೃದ್ಧಿಸಲು ಹಾಗೂ ಮೂಲಸೌಕರ್ಯ ಒದಗಿಸಲು ಮಹತ್ವದ್ದಾಗಿದೆ. ಈ ಯೋಜನೆಗೆ ಭೂಮಿ ಕಳೆದುಕೊಂಡಿರುವ ರೈತರಿಗೆ ಶೀಘ್ರವೇ ಪರಿಹಾರ ಮೊತ್ತ ಬಿಡುಗಡೆ ಮಾಡಬೇಕು. ಈ ಯೋಜನೆ 2019ರಲ್ಲಿ ಆರಂಭವಾಯಿತಾದರೂ ಪರಿಹಾರ ಬಿಡುಗಡೆ ತಡವಾಗಿರುವ ಕಾರಣ ರೈತರು ಸಂಕಷ್ಟಕ್ಕೆ ಸಿಲುಕಿದ್ದು, ಯೋಜನೆ ಪ್ರಗತಿ ಕುಂಠಿತವಾಗಿದೆ ಎಂದು ಪತ್ರದಲ್ಲಿ ವಿವರಿಸಲಾಗಿದೆ.

1.ಜಯನಗರದ 2ನೇ ಬ್ಲಾಕ್‌ನಲ್ಲಿ ಪಟಾಲಮ್ಮ ಹೂವಿನ ಪಲ್ಲಕ್ಕಿ ರಥೋತ್ಸವ ವಿಜೃಂಭಣೆಯಿಂದ ಬುಧವಾರ ನೆರವೇರಿತು 2.ರಥೋತ್ಸವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು —ಚಿತ್ರ:ರಂಜು ಪಿ.

ಪಟಾಲಮ್ಮ ದೇವಿ ರಥೋತ್ಸವದ ಸಂಭ್ರಮ

ಜಯನಗರ: 3 ವರ್ಷಕ್ಕೊಮ್ಮೆ ನಡೆಯುವ ರಥೋತ್ಸವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರ 2ನೇ ಬ್ಲಾಕ್‌ನಲ್ಲಿ ಪಟಾಲಮ್ಮ ದೇವಿ ಮಹೋತ್ಸವ, ಹೂವಿನ ಪಲ್ಲಕ್ಕಿ ರಥೋತ್ಸವ ಬುಧವಾರ ವಿಜೃಂಭಣೆಯಿಂದ ನೆರವೇರಿತು.

ಕನಕಪಾಳ್ಯ, ಸಿದ್ದಾಪುರ, ಭೈರಸಂದ್ರ, ಯಡಿಯೂರು ಹಾಗೂ ನಾಗಸಂದ್ರ ಗ್ರಾಮಗಳ ಅಧಿದೇವತೆ ಪಟಾಲಮ್ಮ ದೇವಿ ಮಹೋತ್ಸವ ಪ್ರತಿ ಮೂರು ವರ್ಷಕ್ಕೊಮ್ಮೆ ನಡೆಯುತ್ತದೆ. ಐದು ಗ್ರಾಮಗಳ ಊರಹಬ್ಬದ ನಂತರ ದೇವಿ ಮಹೋತ್ಸವ ನಡೆಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಬೆಳಿಗ್ಗೆ ಜಯನಗರದಲ್ಲಿ ಪಟಾಲಮ್ಮ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ನಂತರ, ರಥೋತ್ಸವಕ್ಕೆ ಚಾಲನೆ ನೀಡಿದರು.

ಕನಕಪಾಳ್ಯ ಗ್ರಾಮದಲ್ಲಿ ಊರಹಬ್ಬದ ಅಂಗವಾಗಿ ಆಂಜನೇಯ ಸ್ವಾಮಿ, ಕನಕೇಶ್ವರಸ್ವಾಮಿ, ಯಲ್ಲಮ್ಮ ದೇವಿ, ಜೆರಸಲಮ್ಮ, ಕುನ್ನಾಲಘಟ್ಟಮ್ಮ, ನಾಡಮ್ಮ, ಮಿಟ್ಲಮರದ ಮುನೇಶ್ವರ, ಚಪಲಮ್ಮ, ಪ್ಲೇಗಮ್ಮ, ಗೋಣಿಮರದ ಮುನೇಶ್ವರ ಸ್ವಾಮಿಗೆ ಮೇ 5ರಿಂದ ಆರತಿ, ಪೂಜೆಯನ್ನು ಗ್ರಾಮಸ್ಥರು ನೆರವೇರಿಸಿದರು.

ಲಾಲ್‌ಬಾಗ್ ಸಿದ್ದಾಪುರ ಗ್ರಾಮದ ಕಲ್ಯಾಣಿ ಮಹಾಗಣಪತಿ, ಸೋಮೇಶ್ವರ ಸ್ವಾಮಿ, ರಾಮದೇವರು, ಗ್ರಾಮದೇವತೆ ಪೂಜಮ್ಮ, ಯಲ್ಲಮ್ಮ, ಪಿಳ್ಳೆಕಮ್ಮ ದೇವರ ಉತ್ಸವ ಆಚರಿಸಲಾಯಿತು.

ಭೈರಸಂದ್ರ ಗ್ರಾಮದಲ್ಲಿ ವಿನಾಯಕ, ಆಂಜನೇಯ, ಈಶ್ವರ ಸ್ವಾಮಿಗೆ ಅಭಿಷೇಕ, ಕಾಟುಮರಾಯ ದೇವರಿಗೆ ಬೆಲ್ಲದ ಆರತಿ ನಡೆಯಿತು. ಯಡಿಯೂರು ಗ್ರಾಮದಲ್ಲಿ ಆಂಜನೇಯ ಸ್ವಾಮಿ, ಬಸವಣ್ಣ ದೇವರು, ಮದ್ದೂರಮ್ಮ, ಪಿಳೇಕಮ್ಮ, ಚಪ್ಪಲಮ್ಮ, ಸಲ್ಲಾಪುರದಮ್ಮ, ಗಾಂಧಮ್ಮ ವಿಶೇಷ ಪೂಜೆಗಳು ನಡೆದವು. ನಾಗಸಂದ್ರ ಗ್ರಾಮದ ಆಂಜನೇಯ ಸ್ವಾಮಿ, ಉಪ್ಪಮ್ಮ ದೇವಿ, ಮುನೇಶ್ವರ ಸ್ವಾಮಿ, ಪ್ಲೇಗಮ್ಮ, ದಾಳಮ್ಮ, ಗಂಗಮ್ಮ, ಸಪಲಮ್ಮ, ಚಪ್ಪರದಮ್ಮ ದೇವರಿಗೆ ಆರತಿ, ಪೂಜೆಗಳನ್ನು ನೆರವೇರಿಸಿ ಮೇ 5ರಿಂದ ಊರಹಬ್ಬ ಆಚರಿಸಲಾಯಿತು.

ಈ ಐದು ಗ್ರಾಮಗಳ ಊರಹಬ್ಬದ ನಂತರ, ಅಧಿದೇವತೆ ಪಟಾಲಮ್ಮ ದೇವಿಯ ರಥೋತ್ಸವ ಬುಧವಾರ ನಡೆಯಿತು. ಪಟಾಲಮ್ಮ ದೇವಿಗೆ ಮುತ್ತೈದೆಯರು, ಬಾಲಕಿಯರು ಮೆರವಣಿಗೆಯಲ್ಲಿ ಆರತಿಗಳನ್ನು ತಂದು, ದೇವಸ್ಥಾನದ ಬೆಂಕಿ ಕೊಂಡವನ್ನು ಹಾಯ್ದರು ಎಂದು ಶ್ರೀ ಪಟಾಲಮ್ಮ ದೇವಸ್ಥಾನ ಟ್ರಸ್ಟ್‌ನ ಅಧ್ಯಕ್ಷ ಕೆ.ಎಂ. ನಾಗರಾಜ್ ಮಾಹಿತಿ ನೀಡಿದರು.

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ, ಪರಿಷತ್‌ನ ಮಾಜಿ ಸದಸ್ಯ ಪಿ.ಆರ್. ರಮೇಶ್ ಭಾಗವಹಿಸಿದ್ದರು.

ಜಾನಪದ ತಂಡಗಳ ಮೆರುಗು

ವೀರಗಾಸೆ, ಬೀಸು ಕಂಸಾಳೆ, ಪಟದ ಕುಣಿತ, ಸೋಮನ ಕುಣಿತ, ನಂದಿ ಧ್ವಜ, ಗೊರವರ ಕುಣಿತ, ನಗಾರಿ, ಜಗ್ಗಲಿಗೆ, ಕರಗ ಕೋಲಾಟ, ಕಂಗಿಲ್ ಕುಣಿತ, ಯಕ್ಷ ಗೊಂಬೆಯಾಟ, ಕೀಲು ಕುದುರೆ, ಮರಗಾಲು ಕುಣಿತ ಸೇರಿದಂತೆ ರಾಜ್ಯದ ನಾನಾ ಭಾಗಗಳ 35ಕ್ಕೂ ಹೆಚ್ಚು ಸಾಂಸ್ಕೃತಿಕ ಹಾಗೂ ಜಾನಪದ ತಂಡಗಳು ಪಲ್ಲಕ್ಕಿ ರಥೋತ್ಸವದಲ್ಲಿ ಭಾಗವಹಿಸಿದ್ದವು.

'ಮೊಟ್ಟೆ ರಾಜ ಬಂಧನ ಸೂಕ್ತ'

ಬೆಂಗಳೂರು: ರೌಡಿಶೀಟರ್ 'ರಾಜೇಶ್ ಅಲಿಯಾಸ್ ಮೊಟ್ಟೆ' ರಾಜನನ್ನು ಗೂಂಡಾ ಕಾಯ್ದೆಯಡಿ ಬಂಧಿಸಿರುವ ರಾಜ್ಯ ಪೊಲೀಸರ ಕ್ರಮವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ಈ ಸಂಬಂಧ ಬಂಧಿತ ಮೊಟ್ಟೆ ರಾಜನ ಪತ್ನಿ ಪ್ರಿಯದರ್ಶಿನಿ (25) ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್ ನೇತೃತ್ವದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದೆ.

ವಿಚಾರಣೆ ವೇಳೆ ರಾಜ್ಯ ಪ್ರಾಸಿಕ್ಯೂಟರ್ ಬಿ.ಎ. ಬೆಳ್ಳಿಯಪ್ಪ ಮತ್ತು ಪಿ.ತೇಜೇಶ್, 'ರಾಜೇಶ್ ಮೂರು ಕೊಲೆ ಯತ್ನ, ಹಲ್ಲೆ ಸೇರಿದಂತೆ ಒಟ್ಟು 12 ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದು, ಸದಾ ಮಾರಕಾಸ್ತ್ರಗಳೊಂದಿಗೆ ಸುತ್ತಾಡುತ್ತಿದ್ದ. ಇದು ಸಾರ್ವಜನಿಕ ಶಾಂತಿ ಮತ್ತು ಕಾನೂನು ಸುವ್ಯವಸ್ಥೆಗೆ ಅಪಾಯ ಉಂಟುಮಾಡುವಂತಹುದು ಎಂಬುದನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸ್ ಇಲಾಖೆ ಕ್ರಮಕ್ಕೆ ಮುಂದಾಗಿದೆ' ಎಂದರು.

'ಪೊಲೀಸರು ಸಾಕಷ್ಟು ಸಮಯಾವಕಾಶ ನೀಡಿದ್ದರೂ ರಾಜೇಶ್ ಅಪರಾಧ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುವುದನ್ನು ಕೈ ಬಿಟ್ಟಿರಲಿಲ್ಲ. ಹೀಗಾಗಿ, ಅನ್ಯ ಮಾರ್ಗವಿಲ್ಲದ ಈತನನ್ನು ಗೂಂಡಾ ಕಾಯ್ದೆಯಡಿ ಬಂಧಿಸಲಾಗಿದೆ' ಎಂದು ಪ್ರತಿಪಾದಿಸಿದ್ದರು.

ನಗರದಲ್ಲಿ ಇಂದು

ಮಾನಸಿಕ ಆರೋಗ್ಯ ರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ಡಾ.ಸಿ.ಆರ್. ಚಂದ್ರಶೇಖರ್, ಡಾ. ಭಗವಾನ್ ಬಿ.ಸಿ., ಡಾ. ರಜನಿ ಪಾರ್ಥಸಾರಥಿ, ಪ್ರೊ.ಎಚ್.ಎಸ್. ಅಶೋಕ್, ಸುರೇಶ್ ರಾಜು, ಆಯೋಜನೆ: ಪ್ರಜ್ಞಾ, ಯುವಕ ಸಂಘ, ಚಾಣಕ್ಯ ವಿಶ್ವವಿದ್ಯಾಲಯ, ಸ್ಥಳ: ಯುವಪಥ, ಜಯನಗರ, ಬೆಳಿಗ್ಗೆ 10

ಅಂಬೇಡ್ಕರ್ ಜನ್ಮದಿನದ ಅಂಗವಾಗಿ ಜನಕ್ರಾಂತಿ ಸಮಾವೇಶ: ಕೋಮುವಾದ ಧಿಕ್ಕರಿಸಿ–ಸಂವಿಧಾನ ರಕ್ಷಿಸಿ, ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ಮಿಲ್ಲರ್ಸ್ ರಸ್ತೆ, ವಸಂತನಗರ, ಬೆಳಿಗ್ಗೆ 11

ಅಂಬೇಡ್ಕರ್ ಜಯಂತಿ: ಉದ್ಘಾಟನೆ: ಹನುಮಂತ ಭಜಂತ್ರಿ, ಅಧ್ಯಕ್ಷತೆ: ಎಂ.ಎಸ್. ಜಗನ್ನಾಥ್, ಉಪಸ್ಥಿತಿ: ಎಂ. ಶ್ರೀನಿವಾಸ್, ಜಿ. ಮಾದೇಶ್, ಆಯೋಜನೆ: ಶ್ರೀ ನುಲಿಯ ಚಂದಯ್ಯ ರಾಜ್ಯ ಕೊರಮ–ಕೊರಚ ಜನಾಂಗದ ಡಾ.ಅಂಬೇಡ್ಕರ್ ಸಿದ್ಧಾಂತ ವೇದಿಕೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 2.30

ಆರ್.ಕೆ. ಪದ್ಮನಾಭ

'ಶ್ರೀರಾಮ ಜಯಂ' ಗೋಷ್ಠಿ ಗಾಯನ: ಡಾ.ವಿ. ಪರಮೇಶ್ವರ ಸ್ಮಾರಕ ದತ್ತಿ ಕರ್ನಾಟಕ ಸಂಗೀತ ಕಾರ್ಯಕ್ರಮ, ಗಾಯನ: ಆರ್.ಕೆ. ಪದ್ಮನಾಭ, ಪಿಟೀಲು: ಸಿ.ಎನ್. ಚಂದ್ರಶೇಖರ್, ಮೃದಂಗ: ಸಿ. ಚಲುವರಾಜ್, ಆಯೋಜನೆ ಹಾಗೂ ಸ್ಥಳ: ಇ.ಎಸ್.ವಿ. ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.30

ರಾಜ್ಯಮಟ್ಟದ ಗೀತಗಾಯನ, ವಚನ ವಾಚನ ಮತ್ತು ಕವಿಗೋಷ್ಠಿ: ಉದ್ಘಾಟನೆ: ಮಹೇಶ್ವರ ರಾವ್, ತುಷಾರ್ ಗಿರಿನಾಥ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ನಾಟಕ ಪ್ರದರ್ಶನ: 'ಕೈಲಾಸದ ಬಾಗಿಲಲ್ಲಿ ಆತ್ಮಗಳು', ಆಯೋಜನೆ: ಶ್ರೀ ರೇಣುಕಾಂಬ ಕಲಾಸಂಘ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

'ಜಾನಪದ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳು' ವಿಷಯದ ಬಗ್ಗೆ ಉಪನ್ಯಾಸ: ಎಸ್. ರಾಮಲಿಂಗೇಶ್ವರ (ಸಿಸಿರಾ), ಮುಖ್ಯ ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಹಾಗೂ ಸ್ಥಳ: ಕನ್ನಡ ಯುವಜನ ಸಂಘ, ಸಿದ್ದಯ್ಯ ರಸ್ತೆ, ಹೊಂಬೇಗೌಡ ನಗರ, ಸಂಜೆ 6.30

ಸ್ಯಾಕ್ಸೋಫೋನ್ ವಾದನ: ದಿವ್ಯಶ್ರೀ ರಂಗನಾಥನ್, ಪಿಟೀಲು: ಎಸ್. ಶಶಿಧರ್, ಮೃದಂಗ: ಕಾರ್ತೀಕ್ ಪ್ರಣವ್, ಆಯೋಜನೆ ಹಾಗೂ ಸ್ಥಳ: ಅಭಯ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, ವಜ್ರಕ್ಷೇತ್ರ, 7ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ತ್ಯಾಗರಾಜನಗರ 3ನೇ ಬ್ಲಾಕ್, ಸಂಜೆ 6.30

ಡಾಲಿ ಧನಂಜಯ್

ಬೃಹತ್ ಮಾವು ಮತ್ತು ಪುಸ್ತಕ ಮೇಳ: ಉದ್ಘಾಟನೆ: 'ಡಾಲಿ' ಧನಂಜಯ್, ಆಯೋಜನೆ ಹಾಗೂ ಸ್ಥಳ: ಗರುಡಾಮಾಲ್, ಮ್ಯಾಗ್ರತ್ ರಸ್ತೆ, ಮಧ್ಯಾಹ್ನ 2

ಭಕ್ತಿವಾಣಿ ಸಂಗೀತ ಶಾಲೆಯ ವಿದ್ಯಾರ್ಥಿಗಳಿಂದ ದಾಸವಾಣಿ: ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಸಂಜೆ 6.30

'ಭಾಗವತ ಸಪ್ತಮ ಸ್ಕಂದ' ಧಾರ್ಮಿಕ ಪ್ರವಚನ: ಸುಧೀಂದ್ರ ಆಚಾರ್, ಆಯೋಜನೆ ಮತ್ತು ಸ್ಥಳ: ವಿಜಯ ಮಧ್ವ ಸಂಘ, 2ನೇ ಮುಖ್ಯರಸ್ತೆ, ಗಂಗಾಧರ ಬಡಾವಣೆ, ವಿಜಯನಗರ, ಸಂಜೆ 6.30

ಹರಿದಾಸ ಮಂಜರಿ: ಗಾಯನ: ಎಸ್. ಶುಭಶ್ರೀ, ಪಿಟೀಲು: ಎಂ. ದೀಪಿಕಾ, ಮೃದಂಗ: ಜ್ಯೋತ್ಸ್ನಾ ಹೆಬ್ಬಾರ್, ಆಯೋಜನೆ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಬನಶಂಕರಿ 6ನೇ ಹಂತ, ಸಂಜೆ 7

ಧಾರ್ಮಿಕ ಪ್ರವಚನ: ವೆಂಕಟನರಸಿಂಹಾಚಾರ್, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 7

ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

'ಪಾರ್ಟಿ ಇನ್ ಪರ್ಸನ್'ಗಳಿಗೆ ಅಂಕುಶ

ಸ್ವಯಂ ವಾದ–ಒರೆಗೆ ಹಚ್ಚಿ: ಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನ್ಯಾಯಾಲಯದ ಮುಂದೆ ಖುದ್ದು ಹಾಜರಾಗಿ, ಸ್ವಯಂ ವಾದ ಮಂಡಿಸುವ (ಪಾರ್ಟಿ ಇನ್ ಪರ್ಸನ್) ಅರ್ಜಿದಾರರು ತಾವು ಸ್ವಯಂ ವಾದ ಮಾಡುತ್ತೇವೆ ಎಂಬುದನ್ನು ಪ್ರಮಾಣೀಕರಿಸುವ ಮುನ್ನ; ಕರಡು ಸಿದ್ಧಪಡಿಸಿ ವಾದ ಮಂಡಿಸುವ ಅವರ ಸಾಮರ್ಥ್ಯವನ್ನು ರಿಜಿಸ್ಟ್ರಿ ಕಚೇರಿಯು ಮೌಲ್ಯಮಾಪನಕ್ಕೆ ಒಳಪಡಿಸುವ ಅಗತ್ಯವಿದೆ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ರುದ್ರಪಟ್ಟಣದ ಸರ್ವೆ ನಂಬರ್ 27ರಲ್ಲಿರುವ 3–10 ಎಕರೆ ಪ್ರದೇಶದಲ್ಲಿನ ಮುಸ್ಲಿಮರ ಖಬರಸ್ತಾನದ ಜಮೀನಿನ ಯಥೋಚಿತ ಸರ್ವೆ ನಡೆಸಿ ಹದ್ದುಬಸ್ತ್ ಮತ್ತು ದುರಸ್ತಿ ಮಾಡಿ ರಕ್ಷಿಸಲು ನಿರ್ದೇಶಿಸಬೇಕು' ಎಂದು ಕೋರಿ ಆರ್.ಟಿ.ನಗರದ ಮೊಹಮ್ಮದ್ ಇಕ್ಬಾಲ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಈ ಪ್ರಕರಣದಲ್ಲಿ ಖುದ್ದು ಹಾಜರಾಗಿ ಸ್ವಯಂ ವಾದ ಮಂಡಿಸಿದ್ದರು.

ಹೈಕೋರ್ಟ್ ಸುದ್ದಿಗಳು

ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ, 'ಈ ಅರ್ಜಿಯು ದಾರಿತಪ್ಪಿಸುವ ಮನವಿಗಳಿಂದ ಕೂಡಿದೆ' ಎಂದು ಹೇಳಿ ವಜಾಗೊಳಿಸಿದೆ.

ಅಂತೆಯೇ, 'ಕರ್ನಾಟಕ ಹೈಕೋರ್ಟ್ ಪಾರ್ಟಿ ಇನ್ ಪರ್ಸನ್ ನಿಯಮಗಳು–2018ರ ಅಡಿಯಲ್ಲಿ, ನ್ಯಾಯಾಲಯದ ಮುಂದೆ ಖುದ್ದು ಹಾಜರಾಗಿ ಪ್ರಕರಣದಲ್ಲಿ ಸ್ವಯಂ ವಾದ ಮಂಡಿಸುವ ವ್ಯಕ್ತಿಯು ಸಮರ್ಥ ಪಕ್ಷಗಾರನಿದ್ದಾರೆ ಎಂಬುದನ್ನು ರಿಜಿಸ್ಟ್ರಿಯು ಪ್ರಮಾಣೀಕರಿಸಿ ಪ್ರಪತ್ರ (ಫಾರಂ) 16 ಅನ್ನು ನೀಡುವ ಮೊದಲು, ಅಂತಹ ವ್ಯಕ್ತಿಯು, ವಾದವನ್ನು ಕಾನೂನಿಗೆ ಅನುಗುಣವಾಗಿ ವಾದಿಸಬಲ್ಲರೇ ಹೇಗೆ ಎಂಬುದನ್ನು ಒರೆಗೆ ಹಚ್ಚಬೇಕು ಮತ್ತು ಕರಡು ರಚಿಸುವ ಅವರ ಸಾಮರ್ಥ್ಯವನ್ನು ಪರಿಶೀಲಿಸುವುದಕ್ಕೆ ಆದ್ಯತೆ ನೀಡುವುದು ಅಪೇಕ್ಷಣೀಯ' ಎಂದು ನ್ಯಾಯಪೀಠ ಹೇಳಿದೆ.

ಬಾಣಸಿಗನ ಕೊಲೆ: ಶಿಕ್ಷೆ ಎತ್ತಿಹಿಡಿದ ನ್ಯಾಯಾಲಯ

ಯಶವಂತಪುರದ ಕಾನ್‌ರ್ಯಾಡ್ ಹೋಟೆಲ್ ಬಾಣಸಿಗ ಜಗದೀಪ್ ಸಿಂಗ್ ಎಂಬವರನ್ನು ಬಿಯರ್ ಬಾಟಲಿಯಿಂದ ಹೊಡೆದು ಕೊಲೆ ಮಾಡಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ; ಮೂವರು ಆರೋಪಿಗಳಲ್ಲಿ ಒಬ್ಬ ಆರೋಪಿಗೆ ಜೀವಾವಧಿ ಮತ್ತು ಇನ್ನಿಬ್ಬರಿಗೆ 10 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿದ್ದ ಸೆಷನ್ಸ್ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

ಶಿಕ್ಷೆ ರದ್ದುಪಡಿಸುವಂತೆ ಕೋರಿ ಅಪರಾಧಿಗಳಾದ ಯಶವಂತಪುರ ನಿವಾಸಿಗಳಾದ ಗುರಯ್ಯ ಅಲಿಯಾಸ್ ಚಿಟ್ಟಬಾಬು (20), ಜಿ.ಪ್ರವೀಣ್ ಅಲಿಯಾಸ್ ಒಂಪೊಡೆ (19) ಮತ್ತು ಎಂ.ಕಿಶೋರ್ (20) ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಗಳನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಶ್ರೀನಿವಾಸ ಹರೀಶ್‌ಕುಮಾರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಘಟನೆಗೆ ಸಂಬಂಧಿಸಿದಂತೆ ಆರೋಪಿಗಳ ವಿರುದ್ಧ ವೈದ್ಯರು ಒದಗಿಸಿರುವ ಸಾಕ್ಷ್ಯಾಧಾರಗಳು ಮೃತನ ಕುತ್ತಿಗೆಯಲ್ಲಿ ಆಗಿದ್ದ ಗಾಯಗಳನ್ನು ದೃಢಪಡಿಸಿವೆ. ಹೀಗಾಗಿ, ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಿರುವ ಅಂಶಗಳು ಮತ್ತು ಸಾಕ್ಷ್ಯಗಳು ಆರೋಪಿಗಳು ಪ್ರಕರಣದಲ್ಲಿ ಪಾಲ್ಗೊಂಡಿದ್ದರು ಎಂಬ ಅಂಶವನ್ನು ಮನದಟ್ಟು ಮಾಡಿವೆ' ಎಂಬ ಕಾರಣದಿಂದ ಅರ್ಜಿ ವಜಾಗೊಳಿಸಿರುವ ನ್ಯಾಯಪೀಠ, ಸಿಸಿಎಚ್ 57ನೇ ಸೆಷನ್ಸ್ ನ್ಯಾಯಾಲಯ ವಿಧಿಸಿರುವ ಶಿಕ್ಷೆಯನ್ನು ಎತ್ತಿಹಿಡಿಯುತ್ತಿರುವುದಾಗಿ ತಿಳಿಸಿದೆ.

ಭೋವಿ ಜನಜಾಗೃತಿಗೆ ಮಾಹಿತಿ

ಗೌರವಾನ್ವಿತ ನ್ಯಾಯಮೂರ್ತಿ ಡಾ.ಹೆಚ್.ಎನ್.ನಾಗಮೋಹನದಾಸ್
ಏಕ ಸದಸ್ಯ ವಿಚಾರಣಾ ಆಯೋಗ
ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ–2025

ಶ್ರೀ ರವಿಕುಮಾರ್ | ಶ್ರೀ ಎಂ. ಚಂದ್ರಪ್ಪ | ಶ್ರೀ ಮಾನಪ್ಪ ವಜ್ಜಲ್ | ಶ್ರೀ ಎಸ್. ರಘು | ಶ್ರೀ ಎ.ಸಿ. ಶ್ರೀನಿವಾಸ್ | ಶ್ರೀ ಹೆಚ್.ವಿ. ವೆಂಕಟೇಶ್ | ಶ್ರೀ ಸುನೀಲ್ ವಲ್ಲೇಪೂರ್ | ಶ್ರೀ ಎಂ. ಮಲ್ಲೇಶ್‌ಬಾಬು | ಡಾ|| ಚೌಡಯ್ಯ | ಶ್ರೀ ಎಸ್.ಎಲ್. ಗಂಗಾಧರಪ್ಪ

ಕಾಲಂ ನಂ.	ವಿಷಯ ಸೂಚಿ	ಕೋಡ್ ಸಂಖ್ಯೆ	ಮಾಹಿತಿ
I	ಜಾತಿ/Caste	023.1	BHOVI (ಭೋವಿ)
		023.4	VADDAR (ವಡ್ಡರ/ಒಡ್ಡರ)
15.	ನಿಮ್ಮ ಕುಟುಂಬದ ಕುಲಕಸುಬು ಯಾವುದು?	63	ಕಲ್ಲು ಕುಟಿಗರು/ಕಲ್ಲು ಕೆತ್ತುವವರು
		29	ಬೀಸುವ ಕಲ್ಲು ತಯಾರಕರು/ದುರಸ್ತಿ ಮಾಡುವವರು
		59	ಶಿಲ್ಪಿ
		00	(ಇತರೆ) ಕೆರೆ, ಬಾವಿ, ನಾಲೆ, ಕುಡಿನೀರುಕಟ್ಟೆ, ರಿವಿಟ್ ಮೆಂಟ್ (ಮಣ್ಣು ಕೊಚ್ಚಿ ಹೋಗದಂತೆ ತಡೆಯುವುದು) ಆಯಪಾಯ, ಮಣ್ಣಿನ ಕೆಲಸ / ಗೃಹ – ಆಲಯ ದೇವಾಲಯ, ರಸ್ತೆ, ಚರಂಡಿ ಶೌಚಾಲಯ ನಿರ್ಮಾಣ
17.	ಅಸಂಘಟಿತ ಕ್ಷೇತ್ರದಲ್ಲಿಯ ದಿನಗೂಲಿ ಕೆಲಸಗಾರರು	2	ಕಟ್ಟಡ ನಿರ್ಮಾಣ
41.	ನಿಮ್ಮ ಕುಟುಂಬವು ಯಾವುದಾದರು ಸಾಮಾಜಿಕ ತಾರತಮ್ಯಕ್ಕೆ ಒಳಗಾಗಿದೆಯೇ?	00	(ಇತರೆ) ಮಾನಸಿಕ ಅಸ್ಪೃಶ್ಯತೆ ಬೈಗುಳ ಪದವಾಗಿ ಬಳಸುತ್ತಾರೆ

ಸೂಚನೆ:
ಚುನಾವಣೆ ಗಣತಿಯಲ್ಲ, ಭೋವಿ/ವಡ್ಡರ ಅಳಿವು- ಉಳಿವಿನ ಪ್ರಶ್ನೆ ಹಾಗಾಗಿ ಗಣತಿದಾರರಿಗೆ ತಪ್ಪದೇ ಮಾಹಿತಿ ನೀಡಿ. ಬೇರೆ-ಬೇರೆ ಕಡೆ ಇರುವವರನ್ನು ಭಾಗವಹಿಸುವಂತೆ ಬಂಧುಗಳು ಸಂಪರ್ಕಿಸಿ.
ಜಾತಿ ಕಾಲಂನಲ್ಲಿ ಭೋವಿ ಅಥವಾ ವಡ್ಡರ ಬರೆಯಿಸಿದಾಗ ಉಪಜಾತಿ (ಅನ್ವಯಿಸುವುದಿಲ್ಲ) ಬರೆಯುವುದು ಅಗತ್ಯವಿಲ್ಲ.

ಸಮೀಕ್ಷೆಯ ವಿಧಾನ ಮತ್ತು ವೇಳಾಪಟ್ಟಿ

ಹಂತ	ವಿವರ	ಅವಧಿ
Phase-1	ಗಣತಿದಾರರು ಮನೆ ಮನೆ ಭೇಟಿ ನೀಡಿ ಸಮೀಕ್ಷೆ ಕೈಗೊಳ್ಳುವುದು.	ದಿನಾಂಕ :05-05-2025 ರಿಂದ 17-05-2025
Phase-2	ಮತಗಟ್ಟೆ ಪ್ರದೇಶವಾರು 2 ಶಿಬಿರಗಳಲ್ಲಿ ಸಮೀಕ್ಷೆ ಕೈಗೊಳ್ಳುವುದು.	ದಿನಾಂಕ : 19-05-2025 ರಿಂದ 21-05-2025
Phase-3	ಸ್ವಯಂ ಘೋಷಣೆ (ಆನ್‌ಲೈನ್ ಮೂಲಕ).	ದಿನಾಂಕ : 19-05-2025 ರಿಂದ 23-05-2025

ಕರ್ನಾಟಕ ರಾಜ್ಯ ಭೋವಿ (ವಡ್ಡರ) ಸಂಘ
ಭೋವಿ ಪಾಳ್ಯ, ಮಹಾಲಕ್ಷ್ಮಿಪುರಂ, ಬೆಂಗಳೂರು

ಸ್ಪರ್ಧಾ ವಾಣಿ

ಡಿಸೆಂಬರ್ 23 ರಂದು ರಾಷ್ಟ್ರೀಯ ರೈತರ ದಿನವನ್ನು ಆಚರಿಸಲಾಗುತ್ತದೆ. ರೈತರ ದಿನವನ್ನು 'ಸಮೃದ್ಧ ರಾಷ್ಟ್ರಕ್ಕಾಗಿ ಅನ್ನದಾತರನ್ನು ಸಬಲೀಕರಣಗೊಳಿಸುವುದು' ಎಂಬ ಧ್ಯೇಯದಡಿ ಆಚರಿಸಲಾಯಿತು.

ರಾಷ್ಟ್ರೀಯ ವಿದ್ಯಮಾನ

ಶೇ 20ರಷ್ಟು ಜೈವಿಕ ಇಂಧನ ಬಳಕೆಯ ಗುರಿ

- ದೇಶದ ಒಟ್ಟು ಇಂಧನ ಬಳಕೆಯಲ್ಲಿ ಜೈವಿಕ ಇಂಧನದ ಬಳಕೆ ಪ್ರಮಾಣವನ್ನು ಈ ವರ್ಷದ ಅಕ್ಟೋಬರ್ ವೇಳೆಗೆ ಶೇ 20ರಷ್ಟಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್‌ದೀಪ್ ಸಿಂಗ್ ಪುರಿ ತಿಳಿಸಿದ್ದಾರೆ.
- ಇಂಗಾಲ ಹೊರಸೂಸುವಿಕೆ ಪ್ರಮಾಣವನ್ನು 2070ರ ಒಳಗೆ ಶೂನ್ಯಕ್ಕೆ ಇಳಿಸುವ ಗುರಿ ನಿಗದಿಪಡಿಸಲಾಗಿದೆ. ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಕಂಪನಿಗಳು 2040ರ ಒಳಗೆ ಈ ಗುರಿ ತಲುಪಲು ತಯಾರಿ ಮಾಡಿಕೊಂಡಿವೆ.
- ಭಾರತದಲ್ಲಿ ಇನ್ನೂ 20 ವರ್ಷಗಳಷ್ಟು ಬಳಸುವಷ್ಟು ಪಳೆಯುಳಿಕೆ ಇಂಧನ ಲಭ್ಯ ಇದೆ. ಭವಿಷ್ಯದ ದೃಷ್ಟಿಯಿಂದ ಸಾಂದ್ರೀಕೃತ ಜೈವಿಕ ಅನಿಲ (CBG) ಮತ್ತು ಸಾಂದ್ರೀಕೃತ ನೈಸರ್ಗಿಕ ಅನಿಲ (CNG), ಸೌರಶಕ್ತಿ ಉತ್ಪಾದನೆಗೆ ಉತ್ತೇಜನ ನೀಡಲಾಗುತ್ತಿದೆ.
- ಭಾರತದ ದೈನಂದಿನ ಕಚ್ಚಾತೈಲದ ಬಳಕೆ 50 ಲಕ್ಷ ಬ್ಯಾರೆಲ್‌ಗಳಿಂದ 57ಲಕ್ಷ ಬ್ಯಾರೆಲ್‌ಗೆ ಹೆಚ್ಚಿದೆ. ಶೀಘ್ರವೇ ಇದರ ಪ್ರಮಾಣ 70ಲಕ್ಷ ಬ್ಯಾರೆಲ್‌ಗಳಿಗೆ ಏರಿಕೆಯಾಗಲಿದೆ.
- ಗ್ರೀನ್ ಹೈಡ್ರೋಜನ್ ಕ್ಷೇತ್ರದಲ್ಲಿ ಭಾರತದ ಸಾಧನೆ ಚೇತೋಹಾರಿಯಾಗಿದೆ. ಸೌರಶಕ್ತಿ ಬಳಸಿ ಗ್ರೀನ್ ಹೈಡ್ರೋಜನ್ ಅನ್ನು ಮಿತ ದರದಲ್ಲಿ ಉತ್ಪಾದಿಸಲು ಯೋಜನೆ ರಚಿಸಲಾಗಿದೆ.
- ಕೇಂದ್ರ ಸರ್ಕಾರ ಉತ್ಪಾದನೆ ಆಧರಿತ ಉತ್ತೇಜನ (PLI) ಕಾರ್ಯಕ್ರಮದಡಿ ಎಲೆಕ್ಟ್ರೊಲೈಸರ್ ಉತ್ಪಾದನೆಗೆ ₹19,700 ಕೋಟಿ ನೆರವು ನೀಡಿದೆ ಎಂದು ಸಚಿವರು ಹೇಳಿದರು.

ಇಬ್ಬರು ರಾಜ್ಯಪಾಲರ ನೇಮಕ ಮೂವರು ರಾಜ್ಯಪಾಲರ ವರ್ಗ

- 1984ರ ಬ್ಯಾಚ್‌ನ ಐಎಎಸ್ ಅಧಿಕಾರಿ, ಕೇಂದ್ರದ ಮಾಜಿ ಗೃಹ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲಾ ಅವರನ್ನು ಮಣಿಪುರಕ್ಕೆ ಮತ್ತು ಕೇಂದ್ರದ ಮಾಜಿ ಸಚಿವ ವಿ.ಕೆ.ಸಿಂಗ್ ಅವರನ್ನು ಮಿಜೋರಾಂ ರಾಜ್ಯಪಾಲರನ್ನಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ನೇಮಕ ಮಾಡಿದ್ದಾರೆ.
- ಮಿಜೋರಾಂ ರಾಜ್ಯಪಾಲರಾಗಿದ್ದ ಡಾ.ಹರಿಬಾಬು ಕಂಬಂಪತಿ ಅವರನ್ನು ಒಡಿಶಾಕ್ಕೆ, ಬಿಹಾರದ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರನ್ನು ಕೇರಳಕ್ಕೆ, ಕೇರಳದ ರಾಜ್ಯಪಾಲರಾಗಿದ್ದ ಆರಿಫ್ ಮೊಹಮ್ಮದ್ ಖಾನ್ ಅವರನ್ನು ಬಿಹಾರದ ರಾಜ್ಯಪಾಲರಾಗಿ ವರ್ಗಾವಣೆ ಮಾಡಿದ್ದಾರೆ.
- ಇದೇ ವೇಳೆ ಒಡಿಶಾದ ರಾಜ್ಯಪಾಲ ರಘುವರ ದಾಸ್ ಅವರ ರಾಜೀನಾಮೆಯನ್ನು ರಾಷ್ಟ್ರಪತಿ ಅಂಗೀಕರಿಸಿದ್ದಾರೆ.

ಡಿ.23 ರಾಷ್ಟ್ರೀಯ ರೈತ ದಿನ

- ಡಿಸೆಂಬರ್ 23ರಂದು ರಾಷ್ಟ್ರೀಯ ರೈತರ ದಿನವನ್ನು ಆಚರಿಸಲಾಗುತ್ತದೆ. 2024ರ ರೈತರ ದಿನವನ್ನು 'ಸಮೃದ್ಧ ರಾಷ್ಟ್ರಕ್ಕಾಗಿ ಅನ್ನದಾತರನ್ನು ಸಬಲೀಕರಣಗೊಳಿಸುವುದು' ಎಂಬ ಧ್ಯೇಯದಡಿ ಆಚರಿಸಲಾಯಿತು.
- ಭಾರತದ ಆರ್ಥಿಕತೆಯಲ್ಲಿ ರೈತರು ಮೂಲ ಪಾತ್ರ ನಿರ್ವಹಿಸುತ್ತಾರೆ. ರೈತರು ದೇಶದ ಅಪಾರ ಪ್ರಮಾಣದ ಜನಸಂಖ್ಯೆಗೆ ಆಹಾರವನ್ನು ಒದಗಿಸುವುದಲ್ಲದೇ, ಗ್ರಾಮೀಣ ಉದ್ಯೋಗಗಳಿಗೂ ಕೊಡುಗೆ ನೀಡುತ್ತಾರೆ.
- ರೈತರು ಕೃಷಿ, ತೋಟಗಾರಿಕೆ ಜೊತೆಗೆ ಜಾನುವಾರು ಸಾಕಣೆ ಸೇರಿದಂತೆ ವಿವಿಧ ಮೂಲ ಉದ್ಯೋಗಗಳನ್ನು ಬೆಂಬಲಿಸುತ್ತಾರೆ. ಕೃಷಿ ಕ್ಷೇತ್ರವು ಭಾರತದ ಆರ್ಥಿಕತೆಯ ಬೆನ್ನೆಲುಬಾಗಿದ್ದು, ದೇಶದ GDP ಮತ್ತು ಜೀವನೋಪಾಯದ ಮೇಲೆ ಪ್ರಭಾವ ಬೀರುತ್ತದೆ.
- ರೈತ ಕಲ್ಯಾಣಕ್ಕಾಗಿ ಕೇಂದ್ರ ಸರ್ಕಾರ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ, ಪ್ರಧಾನ ಮಂತ್ರಿ ಫಸಲ್ ಬಿಮಾ, ಪ್ರಧಾನ ಮಂತ್ರಿ ಕಿಸಾನ್ ಮನ್‌ಧನ್ ಸೇರಿ ಹಲವು ಯೋಜನೆಗಳನ್ನು ಆರಂಭಿಸಿದೆ.
- ಈಚೆಗೆ ಆಹಾರ ಧಾನ್ಯ ಉತ್ಪಾದನೆಯಲ್ಲಿ ಭಾರತ ಗಮನಾರ್ಹ ಯಶಸ್ಸು ಸಾಧಿಸಿದೆ. ದೇಶ 2024 ರಲ್ಲಿ 332.2 ಮಿಲಿಯನ್ ಟನ್‌ಗಳ ಆಹಾರ ಧಾನ್ಯ ಉತ್ಪಾದನೆಯನ್ನು ದಾಖಲಿಸಿದೆ. 2023 ರಲ್ಲಿ ಈ ಪ್ರಮಾಣ 329.7 ಮಿಲಿಯನ್ ಟನ್‌ಗಳಷ್ಟಿತ್ತು.

- ಭಾರತದಲ್ಲಿ ಆಹಾರ ಭದ್ರತೆಯನ್ನು ಕಾಪಾಡಲು ರೈತರು ಅತ್ಯಗತ್ಯ. ಅವರ ಉತ್ಪಾದಕತೆ ಜನಸಂಖ್ಯೆಗೆ ಬೇಕಾದ ಆಹಾರದ ಲಭ್ಯತೆ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ.
- ಈ ನಿಟ್ಟಿನಲ್ಲಿ ಹಸಿವು ಮತ್ತು ಅಪೌಷ್ಟಿಕತೆಯನ್ನು ಎದುರಿಸಲು ಧಾನ್ಯಗಳು, ಹಣ್ಣುಗಳು ಮತ್ತು ತರಕಾರಿಗಳ ಸ್ಥಿರ ಪೂರೈಕೆಯನ್ನು ಖಚಿತಪಡಿಸಿಕೊಳ್ಳುವುದು ನಿರ್ಣಾಯಕವಾಗಿದೆ.
- ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ಉಳಿಸುವಲ್ಲಿಯೂ ರೈತರು ಪ್ರಮುಖ ಪಾತ್ರ ವಹಿಸುತ್ತಾರೆ. ಅವರು ಸ್ಥಳೀಯ ಬೆಳೆಗಳ ಕೃಷಿಯ ಮೂಲಕ ಜೀವವೈವಿಧ್ಯತೆಯನ್ನು ಕಾಪಾಡಿಕೊಳ್ಳುತ್ತಾರೆ.
- ಸುಸ್ಥಿರ ಕೃಷಿ ವಿಧಾನಗಳನ್ನು ಉತ್ತೇಜಿಸುವ ಮೂಲಕ, ರೈತರು ಪರಿಸರ ಸಂರಕ್ಷಣೆ, ಕೃಷಿಯ ದೀರ್ಘಾವಧಿಯ ಕಾರ್ಯಸಾಧ್ಯತೆಗೆ ಕೊಡುಗೆ ನೀಡುತ್ತಾರೆ.

'ಇಂದೋರ್' ಭಾರತದ ಮೊದಲ ಶೂನ್ಯ-ತ್ಯಾಜ್ಯ ವಿಮಾನ ನಿಲ್ದಾಣ

- 'ಇಂದೋರ್ ವಿಮಾನ ನಿಲ್ದಾಣ' ದೇಶದ ಮೊದಲ ಶೂನ್ಯ-ತ್ಯಾಜ್ಯ ವಿಮಾನ ನಿಲ್ದಾಣವಾಗಿ ಹೊರಹೊಮ್ಮಿದೆ.
- ಸಮಗ್ರ ತ್ಯಾಜ್ಯ ನಿರ್ವಹಣೆ, ವಿಮಾನ ನಿಲ್ದಾಣ ಮತ್ತು ಅದರ ವಿಮಾನಗಳಿಂದ ಉತ್ಪತ್ತಿಯಾಗುವ ತ್ಯಾಜ್ಯವನ್ನು ಮರುಬಳಕೆ ಮಾಡುವ ತಂತ್ರಜ್ಞಾನವನ್ನು ಆಧರಿಸಿ ಈ ಶ್ರೇಯವನ್ನು ನೀಡಲಾಗಿದೆ.
- ಇಂದೋರ್ ವಿಮಾನ ನಿಲ್ದಾಣದಲ್ಲಿ ಸಂಪೂರ್ಣ ತ್ಯಾಜ್ಯ ನಿರ್ವಹಣಾ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಈ ವ್ಯವಸ್ಥೆಯಲ್ಲಿ ವಿಮಾನಗಳು, ಅಂಗಡಿಗಳು, ಉದ್ಯಾನಗಳು ಮತ್ತು ಶೌಚಾಲಯಗಳಿಂದ ಹೊರಹೊಮ್ಮಿದ ತ್ಯಾಜ್ಯವನ್ನು ಮರುಬಳಕೆ ಮಾಡಲಾಗುತ್ತದೆ. ಆರ್ದ್ರ ತ್ಯಾಜ್ಯ ಗೊಬ್ಬರವಾಗಿ ರೂಪಾಂತರಗೊಳ್ಳುತ್ತದೆ.
- ಶೂನ್ಯ-ತ್ಯಾಜ್ಯ ಯೋಜನೆ '4R' ತತ್ವಕ್ಕೆ ಬದ್ಧವಾಗಿದೆ. '4R' ಎಂದರೆ Reduce, Reuse, Recycle and Restore (ಕಡಿಮೆ ಬಳಸಿ, ಮರುಬಳಸಿ, ಮರುಬಳಕೆ ಪ್ರಕ್ರಿಯೆಗೊಳಪಡಿಸಿ ಮತ್ತು ಮರುಸ್ಥಾಪಿಸಿ). ಈ ಚೌಕಟ್ಟು ತ್ಯಾಜ್ಯ ಉತ್ಪಾದನೆಯನ್ನು ಕಡಿಮೆ ಮಾಡಿ, ಪರಿಸರ ಸುಸ್ಥಿರತೆಯನ್ನು ಉತ್ತೇಜಿಸುವ ಗುರಿ ಹೊಂದಿದೆ.
- ತ್ಯಾಜ್ಯದ ಪರಿಣಾಮಕಾರಿ ನಿರ್ವಹಣೆಗೆ ವಿಮಾನ ನಿಲ್ದಾಣದಲ್ಲಿ, 3,000 ಚದರ ಅಡಿ ಮರುಬಳಕೆ ಘಟಕ ಸ್ಥಾಪಿಸಲಾಗಿದೆ.
- ಈ ವಿಮಾನ ನಿಲ್ದಾಣ ಈಗಾಗಲೇ ಭಾರತದಲ್ಲಿ ನಾಲ್ಕನೇ-ಅತ್ಯುತ್ತಮ ವಿಮಾನ ನಿಲ್ದಾಣ ಎಂಬ ಖ್ಯಾತಿ ಪಡೆದಿದೆ. ಇಲ್ಲಿನ ಪ್ರಯಾಣಿಕರ ಸೌಲಭ್ಯಗಳು ದೆಹಲಿ, ಹೈದರಾಬಾದ್‌ಗಿಂತ ಉತ್ಕೃಷ್ಟವಾಗಿವೆ.

ಏನಿದು 'ಉಡಾನ್ ಯಾತ್ರಿ ಕೆಫೆ'?

- ನಾಗರಿಕ ವಿಮಾನಯಾನ ಸಚಿವಾಲಯ ಕೋಲ್ಕತ್ತಾ ವಿಮಾನ ನಿಲ್ದಾಣದಲ್ಲಿ 'ಉಡಾನ್ ಯಾತ್ರಿ ಕೆಫೆ' ಅನ್ನು ಪ್ರಾರಂಭಿಸಿದೆ.
- ಇದು ವಿಮಾನ ಪ್ರಯಾಣಿಕರಿಗೆ ಕೈಗೆಟುಕುವ ದರದಲ್ಲಿ ಆಹಾರ ಮತ್ತು ಪಾನೀಯಗಳನ್ನು ಒದಗಿಸುವ ಉಪಕ್ರಮವಾಗಿದೆ.
- ಕೆಫೆಯಲ್ಲಿ ನೀರು, ಚಹಾ, ಕಾಫಿ, ವಿವಿಧ ಬಗೆಯ ಲಘು ತಿಂಡಿಗಳು, ಇತರ ಅಗತ್ಯ ವಸ್ತುಗಳು ಲಭ್ಯವಿರುತ್ತವೆ. ಈ ಪ್ರಾಯೋಗಿಕ ಯೋಜನೆ ಯಶಸ್ವಿಯಾದರೆ, ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ ಸಹಯೋಗದಲ್ಲಿ ದೇಶಾದ್ಯಂತ ವಿಸ್ತರಣೆಗೊಳ್ಳಲಿದೆ.
- 'ಉಡಾನ್ ಯಾತ್ರಿ ಕೆಫೆ' ಯೋಜನೆಯನ್ನು ವಿಶಾಲ ಶ್ರೇಣಿಯ ಪ್ರಯಾಣಿಕರನ್ನು ಆಕರ್ಷಿಸಲು ವಿನ್ಯಾಸ ಮಾಡಲಾಗಿದೆ.
- ಏರ್‌ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ (AAI): ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ (AAI) ನಾಗರಿಕ ವಿಮಾನಯಾನ ಮೂಲಸೌಕರ್ಯವನ್ನು ರಚಿಸುವ, ನವೀಕರಿಸುವ, ನಿರ್ವಹಿಸುವ ಜವಾಬ್ದಾರಿ ಹೊಂದಿದೆ. ಇದು ಭಾರತದಾದ್ಯಂತ ವಿಮಾನ ನಿಲ್ದಾಣಗಳ ಮೇಲ್ವಿಚಾರಣೆ ಮಾಡುತ್ತದೆ. ವಿಮಾನ ಪ್ರಯಾಣದಲ್ಲಿ ಸುರಕ್ಷತೆ ಮತ್ತು ದಕ್ಷತೆಯನ್ನು ಖಾತ್ರಿಪಡಿಸುತ್ತದೆ.

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. 1973ರ ಕೇಶವಾನಂದ ಭಾರತಿ ಪ್ರಕರಣದಲ್ಲಿ ಸಂವಿಧಾನದ ಮೂಲಭೂತ ರಚನೆಯನ್ನು ತಿದ್ದುಪಡಿ ಮಾಡಲು ಅವಕಾಶವಿಲ್ಲ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.

ಬಿ. 2007ರ ಐ.ಆರ್ ಕೊಯೆಲ್ಹೋ ಪ್ರಕರಣದಲ್ಲಿನ ಸುಪ್ರೀಂಕೋರ್ಟ್ ತೀರ್ಪಿನಂತೆ 368ನೇ ವಿಧಿಯು ಸಂವಿಧಾನದ ಮೂಲಭೂತ ರಚನೆಯ ಭಾಗವಾಗಿದೆ.

ಕೆಳಗಿನವುಗಳಲ್ಲಿ ಸರಿ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಡಿ

2. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಸಂವಿಧಾನ ತಿದ್ದುಪಡಿ ಮಸೂದೆ ಅಂಗೀಕಾರಕ್ಕೆ ಅಡ್ಡಿ ಉಂಟಾದರೆ ಸಂಸತ್ತಿನ ಉಭಯ ಸದನಗಳ ಜಂಟಿ ಅಧಿವೇಶನ ನಡೆಸಲು ಸಂವಿಧಾನದಲ್ಲಿ ಅವಕಾಶ ಒದಗಿಸಲಾಗಿದೆ.

ಬಿ. ರಾಜ್ಯ ಶಾಸಕಾಂಗಗಳು ತಮಗೆ ಸಲ್ಲಿಸಿದ ತಿದ್ದುಪಡಿ ಮಸೂದೆಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಕಾಲಮಿತಿಯನ್ನು ಸಂವಿಧಾನವು ಸೂಚಿಸುವುದಿಲ್ಲ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: ಬಿ

3. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಭಾರತೀಯ ಸಂವಿಧಾನದ 108ನೇ ವಿಧಿಯ ಪ್ರಕಾರ, ಸಂಸತ್ತಿನ ಜಂಟಿ ಅಧಿವೇಶನವನ್ನು ರಾಷ್ಟ್ರಪತಿಗಳು ಕರೆಯುತ್ತಾರೆ.

ಬಿ. ಸಂಸತ್ತಿನ ಜಂಟಿ ಅಧಿವೇಶನದ ಅಧ್ಯಕ್ಷತೆಯನ್ನು ಸ್ಪೀಕರ್, ಅವರ ಅನುಪಸ್ಥಿತಿಯಲ್ಲಿ, ಲೋಕಸಭೆಯ ಉಪ ಸ್ಪೀಕರ್ ಅಥವಾ ಅವರ ಅನುಪಸ್ಥಿತಿಯಲ್ಲಿ, ರಾಜ್ಯಸಭೆಯ ಉಪಾಧ್ಯಕ್ಷರು ವಹಿಸುತ್ತಾರೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಡಿ

4. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ರಾಜ್ಯದ ಅಭಿವೃದ್ಧಿಗಾಗಿ ತಮ್ಮ ಜೀವನಾವಧಿಯಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಇಬ್ಬರು ಹಿರಿಯ ವಿಜ್ಞಾನಿಗಳಿಗೆ ಅಥವಾ ಎಂಜಿನಿಯರ್‌ಗಳಿಗೆ ಸರ್‌ಎಂ. ವಿಶ್ವೇಶ್ವರಯ್ಯ ಹಿರಿಯ ವಿಜ್ಞಾನಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತದೆ.

ಬಿ. ಸರ್ ಎಂ. ವಿಶ್ವೇಶ್ವರಯ್ಯ ಹಿರಿಯ ವಿಜ್ಞಾನಿ ಪ್ರಶಸ್ತಿಯು ₹ 5,00,000 ನಗದು, ನೆನಪಿನ ಕಾಣಿಕೆ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಎ

5. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ವಿಜ್ಞಾನ ಶಿಕ್ಷಣ, ವಿಜ್ಞಾನದ ಇತಿಹಾಸ ಮತ್ತು ತತ್ವಜ್ಞಾನ, ವಿಜ್ಞಾನ ಮತ್ತು ಸಮಾಜ ಕ್ಷೇತ್ರಗಳಲ್ಲಿ ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಇಬ್ಬರು ಹಿರಿಯ ವಿಜ್ಞಾನಿಗಳಿಗೆ ಅಥವಾ ಎಂಜಿನಿಯರ್‌ಗಳಿಗೆ ಡಾ.ರಾಜಾ ರಾಮಣ್ಣ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತದೆ.

ಬಿ. ಡಾ. ರಾಜಾ ರಾಮಣ್ಣ ಪ್ರಶಸ್ತಿಯು ₹1,50,000 ನಗದು, ನೆನಪಿನ ಕಾಣಿಕೆ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: ಡಿ

6. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. 2023ನೇ ಸಾಲಿನ ಕರ್ನಾಟಕ ರಾಜ್ಯದ ಡಾ| ರಾಜಾ ರಾಮಣ್ಣ ಪ್ರಶಸ್ತಿಯನ್ನು ಡಾ. ಸಿವಿ ಯಲಮಗ್ಗಡ ಮತ್ತು ಪ್ರೊ. ರಾಮನಾಥನ್ ಶ್ರೀನಿವಾಸನ್ ಸೌಧಾಮಿನಿ ರವರಿಗೆ ನೀಡಿ ಗೌರವಿಸಲಾಗಿದೆ.

ಬಿ. 2023ನೇ ಸಾಲಿನ ಕರ್ನಾಟಕ ರಾಜ್ಯದ ಪ್ರತಿಷ್ಠಿತ ಸರ್. ಎಂ. ವಿಶ್ವೇಶ್ವರಯ್ಯ ಹಿರಿಯ ವಿಜ್ಞಾನಿ ರಾಜ್ಯ ಪ್ರಶಸ್ತಿಯನ್ನು ಡಾ.ಶುಭಾ. ವಿ ಮತ್ತು ಪ್ರೊ. ಮದನ್ ರಾವ್ ರವರಿಗೆ ನೀಡಿ ಗೌರವಿಸಲಾಗಿದೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: ಡಿ

7. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಸಂವಿಧಾನದ 46ನೇ ವಿಧಿಯು, ಇದು ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಸಮಾಜದ ಇತರ ದುರ್ಬಲ ವರ್ಗಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳ ರಕ್ಷಣೆ ಮತ್ತು ಪ್ರಚಾರವನ್ನು ಕುರಿತು ತಿಳಿಸುತ್ತದೆ.

ಬಿ. ಸಂವಿಧಾನದ 47ನೇ ವಿಧಿಯು, ಆರೋಗ್ಯಕ್ಕೆ ಹಾನಿಕರವಾದ ಮಾದಕ ಪಾನೀಯಗಳು ಮತ್ತು ಮಾದಕ ದ್ರವ್ಯಗಳ ಸೇವನೆಯನ್ನು ನಿಷೇಧಿಸುವುದನ್ನು ಕುರಿತು ತಿಳಿಸುತ್ತದೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಡಿ

8. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ.ಸಂವಿಧಾನದ 50ನೇ ವಿಧಿಯು, ಸ್ಮಾರಕ ಅಥವಾ ರಾಷ್ಟ್ರೀಯ ಪ್ರಾಮುಖ್ಯ ಸ್ಥಳವನ್ನು ವಿರೂಪಗೊಳಿಸುವಿಕೆಯನ್ನು ತಡೆಗಟ್ಟುವುದು, ಸ್ಮಾರಕಗಳು ಮತ್ತು ಐತಿಹಾಸಿಕ ಸ್ಥಳಗಳ ರಕ್ಷಣೆಯನ್ನು ಕುರಿತು ತಿಳಿಸುತ್ತದೆ.

ಬಿ. ಸಂವಿಧಾನದ 49ನೇ ವಿಧಿಯು, ರಾಜ್ಯದ ಸಾರ್ವಜನಿಕ ಸೇವೆಗಳಲ್ಲಿ ಕಾರ್ಯಾಂಗದಿಂದ ನ್ಯಾಯಾಂಗವನ್ನು ಪ್ರತ್ಯೇಕಿಸುವುದನ್ನು ತಿಳಿಸುತ್ತದೆ.

ಸರಿಯಾದ ಉತ್ತರವನ್ನು ಆರಿಸಿರಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: ಸಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ- ಇಂಗ್ಲಿಷ್

Unit-1 Prose : A Hero

34. Suppose you are the Swami of the story. Write a brief letter to your friend describing how you helped to catch a burglar in your house

Answer:

My Dear ………..

Hope you are doing fine and have received my last mail. I am eagerly waiting for your reply. Meanwhile something exciting happened with me and hence this mail.

My father and I had a difference of opinion on the news report as to whether courage or strength is important to fight a tiger. I said it is strength and my father said that it is courage. Then he challenged me to sleep alone in the office room without even a light and with the door closed to prove my courage. I had a nightmare, then in the dark I saw some creature approaching me. I held it tightly and bit it with such a force that it screamed with pain. Everyone at home rushed to see what happened. To my astonishment you know what, I had helped the police in catching one of the most notorious house-breakers of the district. The Next day, after I got up, I was showered with congratulations. The headmaster called me a true scout and police inspector invited me to join the police! I am happy that I have proved my courage.

Please reply soon to both the mails.

Thank you

Yours sincerely

…………..

35. Some words describing the characters of the story 'A Hero' are given in brackets: (Caring, protective, innocent, tricky, authoritative, disciplined, helpless, and nervous). Put them in appropriate columns

Swami's father	Mother	Granny	Swami

Answer:

Swami's father	Mother	Granny	Swami
Authoritative, Disciplined	Caring, Protective	Helpless	Innocent, Nervous, Tricky

Enrich your vocabulary

Task 1: Homophones: Homophones are the words that sound same but have different meanings and different spellings. Fill in the blanks with appropriate word.

1) We had …………many apples to carry. (too/two)
2) I …………a horse at Marina beach. (road/rode)
3) Did you have a ……......……for lunch? (pear/pair)
4) The books are over……..on the shelf. (their/there)

Answer: (1) too, (2) rode, (3) pear, (4) there

Task 2: Fill in the blanks with choosing the appropriate word and complete the story.

This is a 1___(Storey/Story) told by a 2_____(night/knight). Once he received a letter. When he 3____(red/read) it 4___(through/ threw), he could not believe his own eyes. 5___(Far/For), it was written 6_____(buy/by) none other than Queen of the land. She asked him to meet her 7____(at/yet) a secret place. The knight was in a fix. But he thought 8___(of/off) a plan to tide over this problem. He 9____(vent/went) to the meeting place, not alone, but along with his 10____(fair/fare) wife. Can you guess what happened then?

Ans:- 1. story, 2. knight, 3. read, 4. through, 5. for, 6. by, 7. at, 8. of, 9. went, 10. fair

Task 3: Scramble the letters to form words. See the meaning clues in brackets

1. atrtefl………………..(praise),
2. boudt………………..(suspect),
3. ragtedy………………(unhappy ending),
4. ragfenmt……………..(a piece),
5. raetl……………………(careful),
6. cacsriyt………………(short supply),
7. ymtsathpeic……………(not cruel)

Answer: 1. Flatter, 2. Doubt, 3. Tragedy, 4. Fragment, 5. Alert, 6. Scarcity, 7. Sympathetic

Dialogue writing:

Imagine that Swami receives advice by his father and granny how would Swami say that he accepts or refuses it? Write a dialogue using the expressions given below:

Accepting:

a) That's a very good idea. Thank you.
b) Of course! I didn't think of it that. Many thanks.
c) Thank you for suggesting it. I think I will.
d) I think I must do that
e) Yes, I will. It's very good of you to make the offer.
f) That's very kind of you. I will.

Answer:

Father: Swami, can you think of learning and going on trekking during this summer vacation?
Swami: That's a very good idea. Thank you.
Father: You can start with practicing at rock climbing club in town sports complex during weekends.
Swami: Of course! I didn't think of that. Many thanks.
Father: You may also learn map reading with the help of your school NCC officer.
Swami: Thank you for suggesting it. I think I will.
Father: You may also request him to teach you about using electronic map reading using GPS equipments.
Swami: I think I must do that.
Father: If you master the electronic map reading, I will buy you a GPS navigator.
Swami: Yes, I will. It's very good of you to make the offer.
Father: I will accompany you on your first trek. But for successful trekking, you need good physical strength. Can you start morning exercise and running with me from tomorrow?
Swami: That's very kind of you. I will

Imagine that Swami receives advice by his father and granny how would Swami say that he accepts or refuses it? Write a dialogue using the expressions given below: *(Contd)*

ದಿಕ್ಸೂಚಿ ನಿಮಗೆ ಇಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾದರಿಯ ಪ್ರಶ್ನೋತ್ತರಕ್ಕೆ ಇಲ್ಲಿ ಸ್ಕ್ಯಾನ್ ಮಾಡಿ

II PUC- BIOLOGY

REPRODUCTION

Reproduction in flowering plants

10. Draw a labelled diagram of the sectional view of a mature pollen grain of angiosperms. Explain the functions of any two of its parts.

Ans:-



Functions-

(i) Exine – Made of most resistant biological substance sporopollenin, it provides protection to pollen grain.
(ii) Intine - Made of cellulose and pectin, it later grows to form pollen tube.
(iii) Generative cell – It gives rise to two male gametes.
(iv) Vegetative or Tube cell – It stores food and later grows to form cytoplasmic contents of the pollen tube.

11. In the adjacent figure of a typical dicot embryo, label the parts (1), (2) and (3). State the function of each of the labelled part.



Ans:- (1) Plumule, (2) Cotyledons, (3) Radicle

Functions:-

Plumule – To form shoot system
Radicle - To form root system
Cotyledons (seed layers) – storage of food

12. Explain Anemophily.

Ans:- Anemophily is a mode of cross pollination performed through the agency of wind. It is more common of the two abiotic pollinations.

Air currents pick up pollen grains from the dehiscing anthers and carry the same to different places. Receptive stigmas pick up the pollen floating in the air.

13. Mention the characteristics of Anemophilous Flowers.

Ans:- Characteristics of Anemophilous Flowers are-
(i) Flowers are small and inconspicuous. They are often packed in inflorescence.
(ii) Non-essential floral parts are reduced or absent.
(iii) Flowers are usually colorless, nectarless and odourless.
(iv) Flowers are developed above the foliage, usually in hanging spikes or catkins.
(v) Male flowers are more abundant in case of unisexual flowers. In bisexual flowers stamens are more abundant.
(vi) Anthers are exerted and versatile.
(vii) Anthers burst forcefully and suddenly to throw the pollen grains in air as in case of urtica. It is called gunpowder mechanism.
(viii) Pollen grains are small, smooth, nonsticky and light. They may have air sacs or wings. Such pollens can float in air for long distances, upto 1300 km in pine.
(ix) Pollen grains are dry and unwettable. This protects the pollen from moisture present in the air.
(x) Stigmas are exserted, hairy, feathery or branched to capture the pollen grains. The cob of Maize has elongated stigmas and styles which sway in wind to trap pollen grains.
(xi) A very large number of pollen grains are produced, e.g., 500000 per flower in Cannabis, 25 million by a tassel of Maize and 135 million by Mercurialis.
(xii) Pistils commonly possess single ovules.

Eg:- Anemophily is common in grasses.
Other examples are Amaranthus, Cannabis, Chenopodium, Coconut, Date, Mulberry, Poplar, Willow, etc.

14. What is the significance of Anemophily?

Ans:- The Significance of Anemophily are -
(i) It is a highly wasteful phenomenon because it is non-directional.
(ii) Rate of successful pollination is low.
(iii) Air borne pollen of same plants cause hay fever and bronchial allergy.

15. Explain Hydrophily.

Ans:- Hydrophily is a mode of pollination brought about through the agency of water. It occurs in about 30 genera of mostly monocotyledonous aquatic plants, *e.g., Lemna, vallisneria, Ceratophylum, Zostera.*

Many aquatic plants use other modes of pollination (*e.g.,* Water Hyacinth, Water Lily) because water is not a good transport medium for pollen grains. They emerge out of water and are pollinated by wind or insects. Many workers believe that distribution of bryophytes and pteridophytes is limited because of the dependence of their sperms on water for transport.

16. Mention the characteristics of Hydrophilous Flowers.

Ans:- Some characteristics of Hydrophilous Flowers are -
(i) Flowers are small, inconspicuous and light.
(ii) Perianth is unwettable.
(iii) Flowers are without nectar and odour.
(iv) Light and unwettable pollen grains. They are generally surrounded by mucilaginous covering.
(v) Long, sticky and unwettable stigma.

17. Mention the two types of Hydrophily.

Ans:- Hydrophily is of two types – hypohydrophily and epihydrophily.

18. What is hypohydrophily?

Ans:- Hypohydrophily is a mode of pollination which takes place below the surface of water. *Eg: Ceratophyllum, Zostera* (Sea Grass).

19. How does pollination take place in Ceratophyllum?

Ans:- Ceratophyllum is submerged fresh water plant having both male and female flowers. Male flower has 30-45 stamens. On maturation anthers break, rise to the surface and release pollen grains. Pollen grains are small, rounded, thin walled and without exine. They slowly sink downwardly to effect pollination. Stigma is quite long and sticky. *(Contd…….)*

ಮಾನಸಿಕ ಅನಾರೋಗ್ಯ ಸಮಸ್ಯೆಗೆ ಪ್ರತಿದಿನ ಸರಾಸರಿ 3.5 ಸಾವಿರ ಮಂದಿ ಸಂಪರ್ಕ

‘ಟೆಲಿ ಮನಸ್’ಗೆ ನಿತ್ಯ ಸಹಸ್ರಾರು ಕರೆ

• ವರುಣ ಹೆಗಡೆ



ಮಾನಸಿಕ ಅನಾರೋಗ್ಯ ಸಮಸ್ಯೆಗಳ ನಿವಾರಣೆಗೆ ಟೆಲಿ ಮನಸ್ ಸಹಾಯವಾಣಿ ನೆರವಾಗುತ್ತಿದೆ. ಈ ಸೇವೆ ವಿಸ್ತರಿಸುವ ಪ್ರಸ್ತಾವವಿದೆ
ಪ್ರೊ.ಟಿ.ಕೆ. ಶ್ರೀಕಾಂತ್, ಐಐಐಟಿ-ಬಿ ಇ-ಆರೋಗ್ಯ ಸಂಶೋಧನಾ ವಿಭಾಗದ ಮುಖ್ಯಸ್ಥ

ಬೆಂಗಳೂರು: ಮಾನಸಿಕ ಅನಾರೋಗ್ಯ ಸಮಸ್ಯೆಗಳ ನಿವಾರಣೆಗೆ ಸರ್ಕಾರದಿಂದ ‘ಟೆಲಿ ಮನಸ್’ ಸಹಾಯವಾಣಿಗೆ ಕರೆ ಮಾಡುವವರ ಸಂಖ್ಯೆ ಗಣನೀಯವಾಗಿ ಏರಿಕೆಯಾಗುತ್ತಿದ್ದು, ಪ್ರತಿ ನಿತ್ಯ ಸರಾಸರಿ 3.5 ಸಾವಿರ ದೂರವಾಣಿ ಕರೆಗಳನ್ನು ಸ್ವೀಕರಿಸಲಾಗುತ್ತಿದೆ.

ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಈ ಸಹಾಯವಾಣಿಯನ್ನು ನಿರ್ವಹಣೆ ಮಾಡುತ್ತಿದ್ದು, ವಿವಿಧ ರೀತಿಯ ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ಉಚಿತ ಸಮಾಲೋಚನೆ ನಡೆಸಲಾಗುತ್ತಿದೆ. ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯು (ಐಐಐಟಿ-ಬಿ) ಈ ಸಹಾಯವಾಣಿಗೆ ತಾಂತ್ರಿಕ ನೆರವು ಒದಗಿಸುತ್ತಿದೆ. ಮಾನಸಿಕ ಸಮಸ್ಯೆ ಹಾಗೂ ಒತ್ತಡಕ್ಕೆ ಒಳಗಾದವರಿಗೆ ಉಚಿತ ಸಲಹೆ ಹಾಗೂ ಸಮಾಲೋಚನೆ ನಡೆಸಲು 2022ರ ಅಕ್ಟೋಬರ್‌ನಲ್ಲಿ ಪ್ರಾರಂಭಿಸಲಾದ ಈ ಸಹಾಯವಾಣಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಮೂರು ವರ್ಷಗಳು ಕಳೆಯುವ ಮುನ್ನವೇ 20 ಲಕ್ಷಕ್ಕೂ ಅಧಿಕ ದೂರವಾಣಿ ಕರೆ ಸ್ವೀಕರಿಸಲಾಗಿದೆ.

ವಾರದ ಎಲ್ಲ ದಿನಗಳಲ್ಲಿ 24 ಗಂಟೆಯೂ ದೂರವಾಣಿ ಕರೆಗಳನ್ನು 20 ಭಾಷೆಗಳಲ್ಲಿ ಸ್ವೀಕರಿಸಲಾಗುತ್ತಿದೆ. ವ್ಯಥೆಗೆ ಒಳಪಟ್ಟವರು, ಕೌಟುಂಬಿಕ ಸಮಸ್ಯೆ ಎದುರಿಸುತ್ತಿರುವವರು, ಶೈಕ್ಷಣಿಕ ಒತ್ತಡಕ್ಕೆ ಒಳಗಾದವರು, ಆತ್ಮಹತ್ಯೆಯ ಆಲೋಚನೆ ಮಾಡುತ್ತಿರುವವರು, ಮಾದಕ ವಸ್ತುಗಳ ಸೇವನೆಯ ವ್ಯಸನಕ್ಕೆ ಒಳಗಾದವರು, ಜ್ಞಾಪಕ ಶಕ್ತಿ ತೊಂದರೆ ಇರುವವರು, ಆರ್ಥಿಕ ಒತ್ತಡದಲ್ಲಿ ಇರುವವರು ಸೇರಿ ವಿವಿಧ ಮಾನಸಿಕ ಸಮಸ್ಯೆ ಎದುರಿಸುತ್ತಿರುವವರು ಸಹಾಯವಾಣಿಗೆ ಕರೆ ಮಾಡುತ್ತಿದ್ದಾರೆ. ಈಗಾಗಲೇ ಸ್ವೀಕರಿಸಲಾದ ದೂರವಾಣಿ ಕರೆಗಳಲ್ಲಿ ಹೆಚ್ಚಿನವರು 18ರಿಂದ 25 ವರ್ಷದೊಳಗಿನವರಾಗಿದ್ದು, ನಿದ್ದೆ, ಪರೀಕ್ಷೆ ಒತ್ತಡದಂತಹ ಸಮಸ್ಯೆಗಳ ಬಗ್ಗೆ ಸಂಪರ್ಕಿಸಿದ್ದಾರೆ.

ವಿಡಿಯೊ ಸಮಾಲೋಚನೆ ವಿಸ್ತರಣೆ: ಟೆಲಿ ಮನಸ್ ಅಡಿ ಕಳೆದ ವರ್ಷ ಪ್ರಾಯೋಗಿಕವಾಗಿ ಪ್ರಾರಂಭಿಸಲಾದ ವಿಡಿಯೊ ಸಮಾಲೋಚನೆ ಸೇವೆಗೂ ಉತ್ತಮ ಸ್ಪಂದನೆ ವ್ಯಕ್ತವಾದ್ದರಿಂದ ಇದನ್ನು ದೇಶದಾದ್ಯಂತ ವಿಸ್ತರಿಸಲು ನಿಮ್ಹಾನ್ಸ್ ಆಸಕ್ತಿ ತೋರಿದೆ. ಪ್ರತಿ ಕೇಂದ್ರದಲ್ಲಿ ಪಾಳಿಯೊಂದರಲ್ಲಿ ನಾಲ್ವರು ವೈದ್ಯರು ಹಾಗೂ ಎಂಟು ಸಮಾಲೋಚಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ದೂರವಾಣಿ ಕರೆ ಮಾಡಿದವರು ಗಂಭೀರ ಮಾನಸಿಕ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದಲ್ಲಿ ಅವರಿಗೆ ವಿಡಿಯೊ ಸಮಾಲೋಚನೆ ಮಾಡಲಾಗುತ್ತಿದೆ. ಸದ್ಯ ಕರ್ನಾಟಕ, ತಮಿಳುನಾಡು ಹಾಗೂ ಜಮ್ಮು-ಕಾಶ್ಮೀರದಲ್ಲಿ ಈ ಸೇವೆ ಪರಿಚಯಿಸಲಾಗಿದೆ.

‘ಇತ್ತೀಚೆಗೆ ಮಾನಸಿಕ ಅನಾರೋಗ್ಯ ಸಮಸ್ಯೆಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡುತ್ತಿದೆ. ಇದರಿಂದಾಗಿ ಸಹಾಯವಾಣಿಗೆ ಬರುವ ಕರೆಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಆಸ್ಪತ್ರೆಗಳ ಮೇಲಿನ ಹೊರೆ ಇಳಿಯುತ್ತಿದೆ. ಸಂಸ್ಥೆಯ ಬೆಂಗಳೂರು ಹಾಗೂ ಧಾರವಾಡದ ಕೇಂದ್ರದಲ್ಲಿ ಟೆಲಿ ಮನಸ್ ಘಟಕ ಕಾರ್ಯನಿರ್ವಹಿಸುತ್ತಿದೆ’ ಎಂದು ನಿಮ್ಹಾನ್ಸ್ ವೈದ್ಯರು ತಿಳಿಸಿದರು.

ಟೆಲಿ ಮನಸ್ ವಿವರ

14416 ಟೆಲಿ ಮನಸ್ ಸಹಾಯವಾಣಿ
21ಲಕ್ಷ ಈವರೆಗೆ ಸ್ವೀಕರಿಸಲಾದ ದೂರವಾಣಿ ಕರೆ
53 ಕಾರ್ಯಾಚರಣೆ ನಡೆಸುತ್ತಿರುವ ಕೇಂದ್ರಗಳು
20 ಟೆಲಿ ಮನಸ್ ಸೇವೆ ನೀಡುತ್ತಿರುವ ಭಾಷೆಗಳು

ಟೆಲಿ ಮನಸ್: 20 ಲಕ್ಷ ಕರೆಗಳ ಮೈಲಿಗಲ್ಲು

2022 ಅ.10	ಸಹಾಯವಾಣಿ ಲೋಕಾರ್ಪಣೆ
2023 ಏ.26	1 ಲಕ್ಷ ಕರೆಗಳ ಸ್ವೀಕಾರ
2023 ಡಿ.11	5 ಲಕ್ಷ ಕರೆಗಳ ಸ್ವೀಕಾರ
2024 ಮೇ 28	10 ಲಕ್ಷ ಕರೆಗಳ ಸ್ವೀಕಾರ
2024 ಅ.22	15 ಲಕ್ಷ ಕರೆಗಳ ಸ್ವೀಕಾರ
2025 ಮಾ.30	20 ಲಕ್ಷ ಕರೆಗಳ ಸ್ವೀಕಾರ

ಕೆ.ಆರ್.ಪುರ: 10ರಂದು ಬ್ರಹ್ಮರಥೋತ್ಸವ

ಕೆ.ಆರ್.ಪುರ: ಇತಿಹಾಸ ಪ್ರಸಿದ್ಧ ಶ್ರೀಕೋಟೆ ವೆಂಕಟರಮಣಸ್ವಾಮಿ ಬ್ರಹ್ಮರಥೋತ್ಸವವು ಕೆ.ಆರ್.ಪುರದಲ್ಲಿ ಶನಿವಾರ ನಡೆಯಲಿದೆ.

ಬ್ರಹ್ಮರಥೋತ್ಸವ ಹಿನ್ನೆಲೆಯಲ್ಲಿ ಮಂಗಳವಾರದಿಂದ ಸೋಮವಾರದವರೆಗೆ ಹನುಮೋತ್ಸವ, ಶೇಷವಾಹನೋತ್ಸವ, ಕಲ್ಯಾಣೋತ್ಸವ, ಗರುಡೋತ್ಸವ, ಗಜೇಂದ್ರ ಮೋಕ್ಷ, ಪಾರಾವಾರೋತ್ಸವ, ವಸಂತೋತ್ಸವ, ಶಯನೋತ್ಸವ, ವಿಶ್ವರೂಪ ದರ್ಶನ, ಹೂವಿನ ಪಲ್ಲಕ್ಕಿ ಕಾರ್ಯಕ್ರಮಗಳು ನಡೆಯಲಿವೆ.

ಪ್ರತಿದಿನ ದೇವರಿಗೆ ಅಭಿಷೇಕ, ಪೂಜೆ, ಹೋಮ ಹವನ, ಮಹಾಮಂಗಳಾರತಿ ಪ್ರಸಾದ ವಿನಿಯೋಗ ನಡೆಯಲಿದೆ. ಪ್ರತಿದಿನ ಸಂಜೆ, ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಸಾಮೂಹಿಕ ದೇವರನಾಮ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಶನಿವಾರ ರಾತ್ರಿ ಹತ್ತು ಗಂಟೆ ಕೆ.ಆರ್.ಪುರದ ಪ್ರಮುಖ ಬೀದಿಗಳಲ್ಲಿ 48 ದೇವರುಗಳ ಹೂವಿನ ಪಲ್ಲಕ್ಕಿ ಉತ್ಸವ ನಡೆಯಲಿದೆ ಎಂದು ದೇವಸ್ಥಾನದ ಅಧ್ಯಕ್ಷ ಎಲ್.ಮುನಿಸ್ವಾಮಿ, ಪ್ರಧಾನ ಅರ್ಚಕ ಮುರಳೀಸ್ವಾಮಿ ತಿಳಿಸಿದರು.

ಅವಿರೋಧ ಆಯ್ಕೆ

ಪ್ರಜಾವಾಣಿ ವಾರ್ತೆ

ಯಲಹಂಕ: ಅರಕೆರೆ ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷರಾಗಿ ಈ.ಪವನ್‌ಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಎಸ್.ಮಂಜುನಾಥ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕಾಗಿ ಬುಧವಾರ ಚುನಾವಣೆ ನಡೆಯಿತು. ಒಟ್ಟು 22 ಸದಸ್ಯ ಬಲ ಹೊಂದಿರುವ ಪಂಚಾಯಿತಿಯಲ್ಲಿ ಪವನ್‌ಕುಮಾರ್ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧ ಆಯ್ಕೆಯಾಯಿತು.

ಪವನ್‌ಕುಮಾರ್

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಆಂಜಿನಮ್ಮ ಚೌಡಯ್ಯ, ಮಾಜಿ ಅಧ್ಯಕ್ಷರಾದ ಕೆ.ಆರ್.ತಿಮ್ಮೇಗೌಡ, ಲಕ್ಷ್ಮೀನಾರಾಯಣಗೌಡ, ಬಿ.ಸಿ.ಶಶಿಕುಮಾರ್, ಭಾಗ್ಯಮ್ಮ ಈಶ್ವರಾಚಾರ್, ಮುನಿಲಕ್ಷ್ಮಮ್ಮ ಪರಶುರಾಮ್, ಮಾಜಿ ಉಪಾಧ್ಯಕ್ಷರಾದ ಕೆ.ಎಂ.ಅರಸೇಗೌಡ, ನೇತ್ರಾವತಿ ಅಂಬರೀಶ್ ಬಾಬು, ಶಿಲ್ಪಾ ರಾಜಣ್ಣ, ಮಂಜುಳ ಅವರು ಉಪಾಧ್ಯಕ್ಷರನ್ನು ಅಭಿನಂದಿಸಿದರು.

ಎಸ್‌ಎಸ್‌ಎಲ್‌ಸಿ ಸಾಧಕರು

ಮಂಜುನಾಥ ನಗರದ ರಸನಾ ಇಂಗ್ಲಿಷ್ ಹೈಸ್ಕೂಲ್

ನಿರೀಕ್ಷಾ ಎನ್. (ಶೇ 98)

ಕನ್ನೈ ಕುಮಾರ್ (ಶೇ 96)

ಅಕ್ಷಯ ಎಸ್. (ಶೇ 96)

ರಚನಾ ಎಂ.ಆರ್. (ಶೇ 95)

ನಿಶ್ಚಿತಾ ಎಚ್. **(ಶೇ 99.5)** ವಿವಿಎಸ್ ಸರ್ದಾರ್ ಪಟೇಲ್ ಪ್ರೌಢಶಾಲೆ, ರಾಜಾಜಿನಗರ

ವಿ. ಯಾಮಿನಿ **(ಶೇ 97.6)** ಪೂರ್ಣಪ್ರಜ್ಞಾ ಎಜುಕೇಷನಲ್ ಸೆಂಟರ್, ಇಂದಿರಾನಗರ

ನೈಋತ್ಯ ರೈಲ್ವೆ

ಇ-ಟೆಂಡರು ಸೂಚನೆ ಸಂ.: 10/2025, ದಿನಾಂಕ: 02.05.2025

ಭಾರತದ ರಾಷ್ಟ್ರಪತಿಯವರ ಪರವಾಗಿ, ಕೆಳಗೆ ಸಹಿಮಾಡಿದವರು ಕೇವಲ ಆರ್‌ಇಪಿಎಸ್ ಮೂಲಕ ಕೆಳಗಿನ ಸಾಮಗ್ರಿಗಳನ್ನು ಒದಗಿಸಲು ಇ-ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರು ಮುಕ್ತಾಯದ ಸಮಯ: 10.30 ಗಂಟೆ.

ಕ್ರಸಂ.	ಟೆಂಡರು ಸಂ.	ಸಂಕ್ಷಿಪ್ತವಾದ ವಿವರಗಳು	ಪರಿಮಾಣ	ಟೆಂಡರು ದಿನಾಂಕ
01	61241006ಬಿ	ಓವರ್‌ಹೆಡ್ ಡಬಲ್ ಆಕ್ಟಿಂಗ್ ಕನ್‌ಸೀಲ್ಡ್ ಡೋರ್ ಕ್ಲೋಜರ್ ಉಪಕರಣ	800 ಸಂ.	15.05.2025
02	30251780	ಸ್ಟೈನ್‌ಲೆಸ್ ಸ್ಟೀಲ್ ಡಸ್ಟ್ ಬಿನ್ ಅಸೆಂಬ್ಲಿಯ ಫಿಕ್ಸಿಂಗ್ ವ್ಯವಸ್ಥೆ	2768 ಸಂ.	19.05.2025
03	79251006	ಐಎಸ್ 15298/2016 ರಂತೆ ಕೈಗಾರಿಕೆ ಸುರಕ್ಷಾ ಪಾದರಕ್ಷೆ	15872 ಜೊತೆ	26.05.2025
04	33251018	ಎಲ್‌ಹೆಚ್‌ಬಿ ಫಿಕ್ಸೆಡ್ ಕಿಟಕಿಗಳಿಗೆ ಸೀಲ್ಡ್ ಗ್ಲಾಸ್ ಘಟಕ	2834 ಸಂ.	26.05.2025
05	33255001	ಸೀಟ್‌ಗಳು ಮತ್ತು ಬರ್ಥ್‌ಗಳ ಒಂದು ಕೋಚ್ ಸೆಟ್‌ನ ಪೂರೈಕೆ ಮತ್ತು ಅಳವಡಿಕೆ	107 ಸೆಟ್‌ಗಳು	16.06.2025
06	33255002	ಎಲ್‌ಹೆಚ್‌ಬಿ ಕೋಚ್‌ಗಳಿಗಾಗಿ ಒಂದು ಸಂಪೂರ್ಣ ಸೀಟ್‌ಗಳು ಮತ್ತು ಬರ್ಥ್‌ಗಳ ಪೂರೈಕೆ	37 ಸೆಟ್‌ಗಳು	23.06.2025

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/92/AAMO/PRB/SWR/2025-26 ಪ್ರಧಾನ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ಹುಬ್ಬಳ್ಳಿ

South Western Railway - SWR | SWRRLY | SWRRLY

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-562123
ದೂರವಾಣಿ ಸಂಖ್ಯೆ: 080-23718487
ಇ-ಮೇಲ್: itstaff_ulb_mnhalli@yahoo.com

ಸಂಖ್ಯೆ: ಮಾ.ನ.ಕಾ/ತಾ.ಶಾ/08/2025-26 ದಿನಾಂಕ: 06.05.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(Through GOK e-Procurement Portal www.kppp.karnataka.gov.in only)

ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಕಾಮಗಾರಿಗಳಿಗೆ ಅರ್ಹ ಸರಬರಾಜುದಾರರು/ಏಜೆನ್ಸಿದಾರರು/ಇತರೆ ಭಾಗವಹಿಸಬಹುದಾಗಿದೆ.

ಇಂಡೆಂಟ್ ಸಂಖ್ಯೆ: **INDENT4743, INDENT4742, INDENT4741, INDENT4740, INDENT4737, INDENT4746, INDENT4745, INDENT4744,** ಮಾಹಿತಿಯನ್ನು ಪಡೆಯಲು ಕೊನೆಯ ದಿನಾಂಕ: **19.05.2025 ಬೆಳಿಗ್ಗೆ 11.00 ಗಂಟೆಯವರೆಗೆ,** ಕಾಮಗಾರಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: **20.05.2025 ಬೆಳಿಗ್ಗೆ 12.00 ವರೆಗೆ,** ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **21.05.2025,** ಟೆಂಡರ್‌ನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **23.05.2025.** ಹೆಚ್ಚಿನ ಮಾಹಿತಿಗಾಗಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರಾ/522/2025-26

BANGALORE DEVELOPMENT AUTHORITY
T. Chowdaiah Road, Kumara Park West, Bengaluru - 560 020

NO: BDA/EE/DSKL/TEND/ LAKES/48/2025-26 DATED:07.05.2025

CORRIGENDUM-01 DTD: 07-05-2025

Sub:- Corrigendum to Short term Tender Notification No:- 01/2025-26 Dated: 22.04.2025
Ref:-1.This office Tender Notification No:BDA/EE/DSKL/TEND/WORK/16/2025-26, 22.04.2025
Following modifications are effected in the above Invitation for Bids:-

Name of Work	Description	Already Notified as	Modified as
Development of Ramagondanahalli lake	CALANDER OF EVENTS		
Development of Veerasagara lake			
Comprehensive development and restoration of Byalakere-1			
Comprehensive development and restoration of Byalakere-2	Availability of tender documents in e-Procurement Portal	24.04.2025 onwards	09.05.2025 onwards
Comprehensive development and restoration of Byalakere-3	Last date of Receipt of queries	08.05.2025 up to 13.00 hrs	12.05.2025 up to 13.00 hrs
Comprehensive development and restoration of Mediagrahara lake	Date of Pre bid meeting	28.04.2025 up to 17.00 hrs	13.05.2025 up to 17.00 hrs
Comprehensive development and restoration of Guniagrahara lake	Last date of submission of tenders	08.05.2025 up to 16.00 hrs	15.05.2025 up to 16.00 hrs
Comprehensive development and restoration of Gangigarahalli lake	Date of Opening technical bid	09.05.2025 up to 16.15 hrs	16.05.2025 up to 16.15 hrs
Comprehensive development and restoration of Kalathammanahalli lake	Date of opening of financial bid	will be intimated to qualified tenders	will be intimated to qualified tenders
Improvements to Chikkabanavara lake			

Other details remain unchanged. For any other details log on to website **https://kppp.karnataka.gov.in** or contact this office.

Sd/- Executive Engineer, DSKL Division, BDA, Bengaluru

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. 04 ಯುಬಿಎಲ್ 2025-26
ದಿನಾಂಕ : 30-04-2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ : ಹುಬ್ಬಳ್ಳಿ - ಒಂದು ವರ್ಷದ ಅವಧಿಗಾಗಿ 26ನೇ ಜನವರಿ, ಪಲ್ಸ್ ಪೋಲಿಯೋ ಕಾರ್ಯಕ್ರಮ, ಪ್ರಶಸ್ತಿ ಪ್ರದಾನ ಸಮಾರಂಭ, ಆರ್‌ಪಿಎಫ್ ರೈಸಿಂಗ್ ಡೇ, 15ನೇ ಆಗಸ್ಟ್ ಮತ್ತು ಇತರ ಹಲವಾರು ಸಂದರ್ಭಗಳಲ್ಲಿ ಶಾಮಿಯಾನ ವ್ಯವಸ್ಥೆ.	ರೂ. 8,27,959/-
2	ಹುಬ್ಬಳ್ಳಿ ವಿಭಾಗ : ಬದಲಿಸುವ ಕೊಠಡಿ ಮತ್ತು ಮಹಿಳಾ ಸ್ಟೇಷನ್ ಮಾಸ್ಟರ್ ಮತ್ತು ಪಾಯಿಂಟ್ಸ್-ವುಮೆನ್ ಗಾಗಿ ಪ್ರತ್ಯೇಕ ಶೌಚಾಲಯದ ಉದ್ದೇಶಿತ ನಿರ್ಮಾಣ (ಒಟ್ಟು 24 ನಿಲ್ದಾಣಗಳು)	ರೂ. 2,76,32,347/-
3	ಹುಬ್ಬಳ್ಳಿ ವಿಭಾಗ : ಗದಗ - ಹೊಟಗಿ ಸೆಕ್ಷನ್ : ಮುಗಳ್ಳಿ - ಜಡ್ರಾಮಕುಂಟಿ ನಿಲ್ದಾಣಗಳ ನಡುವೆ ಹಾಲಿ ಇರುವ ಸೇತುವೆ ಸಂ. 38, 39, 40, 42, 43, 44, 45, 46, 47, 48, 49, 50, 51, 52, 53, 55, 56, 57 ಗಳಿಗೆ ಸುಧಾರಣೆಗಳು.	ರೂ. 2,23,70,312/-
4	ಹುಬ್ಬಳ್ಳಿ ವಿಭಾಗ : **ಸಬ್‌ವರ್ಕ್-1 :** ಹುಬ್ಬಳ್ಳಿಯ ಆರ್‌ಓಸಿ ಹತ್ತಿರದ ರೈಲ್ವೆ ಕಾಲೋನಿಯಲ್ಲಿ ಕಾಂಪೌಂಡ್ ಗೋಡೆಗೆ ಸುಧಾರಣೆ. **ಸಬ್‌ವರ್ಕ್-2 :** ಹುಬ್ಬಳ್ಳಿಯ ರೈಲ್ವೆ ಆಸ್ಪತ್ರೆಯ ಹಿಂಭಾಗದ ಕಾಲೋನಿಗಾಗಿ ಕಾಂಪೌಂಡ್ ಗೋಡೆಗೆ ಸುಧಾರಣೆ. **ಸಬ್‌ವರ್ಕ್-3 :** ಹುಬ್ಬಳ್ಳಿಯಲ್ಲಿ ಮನರಂಜನಾ ಸಭಾಂಗಣದ ಉದ್ದೇಶಿತ ನಿರ್ಮಾಣ. **ಸಬ್‌ವರ್ಕ್-4 :** ಹುಬ್ಬಳ್ಳಿಯ ರೈಲ್ ನಗರ ಕಾಲೋನಿಯಲ್ಲಿ ಸಿಬ್ಬಂದಿ ವಸತಿಗೃಹಗಳಿಗೆ ಪರ್ಯಾಯ ನೀರು ಸರಬರಾಜು ಪೈಪ್‌ಲೈನ್‌ಗಳ ವ್ಯವಸ್ಥೆಯನ್ನು ಒದಗಿಸುವುದು. **ಸಬ್‌ವರ್ಕ್-5 :** ಹುಬ್ಬಳ್ಳಿ ರೈಲ್ವೆ ನಿಲ್ದಾಣದಲ್ಲಿ ಪ್ಲಾಟ್‌ಫಾರಂ 1 ಮತ್ತು 2ನೇ ಪ್ರವೇಶ ದ್ವಾರವನ್ನು ಸಂಪರ್ಕಿಸುವ ಪಾದಚಾರಿ ಮೇಲ್ಸೇತುವೆಗೆ ಅಲ್ಯುಮಿನಿಯಂ ಪೇಯಿಂಟ್ ಕಾಮಗಾರಿ. **ಸಬ್‌ವರ್ಕ್-6 :** ಹುಬ್ಬಳ್ಳಿಯ ಗಾಲ್ಫ್ ಲಿಂಕ್ ಆಫೀಸರ್ಸ್ ಕಾಲೋನಿಯಲ್ಲಿ ಹಟ್ ವ್ಯವಸ್ಥೆಯಲ್ಲಿ ಇರುವ ವಸತಿಗೃಹಗಳ ಹೊರಭಾಗದ ಬ್ರೈಟನಿಂಗ್ / ಪೇಯಿಂಟಿಂಗ್.	ರೂ. 2,12,74,019/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **30-05-2025 ರಂದು 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ ಹುಬ್ಬಳ್ಳಿ

ಪಿಯುಬಿ/86/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025-26

South Western Railway - SWR | SWRRLY | SWRRLY

ಜಿಲ್ಲಾ ಶಸ್ತ್ರ ಚಿಕಿತ್ಸಕರ ಕಾರ್ಯಾಲಯ, ಸಾರ್ವಜನಿಕ ಆಸ್ಪತ್ರೆ, ಕೆ.ಜಿ.ಎಫ್, ಕೋಲಾರ ಜಿಲ್ಲೆ

ದೂರವಾಣಿ ಸಂಖ್ಯೆ: 08153-200898, e-mail:dsghkgf@gmail.com

ಸಂಖ್ಯೆ: ಸಾ.ಆ.ಕೆ/ಇ-ಟೆಂಡರ್/ಹೊಗು/02/2025-26 ದಿನಾಂಕ: 02.05.2025

ಟೆಂಡರ್ ಪ್ರಕಟಣೆ

ವಿಷಯ: 2025-26 ನೇ ಸಾಲಿಗೆ ಸಾರ್ವಜನಿಕ ಆಸ್ಪತ್ರೆ, ಸಾಂಕ್ರಾಮಿಕ ರೋಗಗಳ ಆಸ್ಪತ್ರೆ ಹಾಗೂ ಮಹಿಳೆಯರು ಮತ್ತು ಮಕ್ಕಳ ಆಸ್ಪತ್ರೆ ಕೆ.ಜಿ.ಎಫ್. ಇಲ್ಲಿಗೆ ಶೇ.45% ರಂತೆ 42 ಜನ ಹೊರ ಗುತ್ತಿಗೆ ಗ್ರೂಪ್-ಡಿ ನೌಕರರ ಸೇವೆಗಳನ್ನು ಒದಗಿಸಲು ದ್ವಿ-ಲಕೋಟೆ ಪದ್ಧತಿಯಲ್ಲಿ **http://kppp.karnataka.gov.in** ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ ಕುರಿತು.

ಸಾರ್ವಜನಿಕ ಆಸ್ಪತ್ರೆ, ಸಾಂಕ್ರಾಮಿಕ ರೋಗಗಳ ಆಸ್ಪತ್ರೆ ಹಾಗೂ ಮಹಿಳೆಯರು ಮತ್ತು ಮಕ್ಕಳ ಆಸ್ಪತ್ರೆ ಕೆ.ಜಿ.ಎಫ್, ಕೋಲಾರ ಜಿಲ್ಲೆ ಇಲ್ಲಿನ ಮೂರು ಆಸ್ಪತ್ರೆಗಳ 2025-26ನೇ ಸಾಲಿಗಾಗಿ ಇ-ಟೆಂಡರ್ **(ಟೆಂಡರ್ ಅಂಗೀಕೃತಗೊಂಡ ದಿನಾಂಕ: 06.05.2025 ರಿಂದ ದಿನಾಂಕ: 21.05.2025 ರವರೆಗೆ)** 15 ದಿನಗಳ ಅವಧಿಗೆ ಹೊರಗುತ್ತಿಗೆ ಗ್ರೂಪ್.ಡಿ ಶೇ.45% ರಂತೆ 42 ಜನ ಸೇವೆ ಒದಗಿಸಲು ಕರ್ನಾಟಕ ಕಾರ್ಮಿಕ ಇಲಾಖೆಯಿಂದ ಅಂಗೀಕೃತಗೊಂಡ ಅರ್ಹಗುತ್ತಿಗೆದಾರರಿಂದ **http://kppp.karnataka.gov.in** ಕೆ.ಪಿ.ಪಿ.ಪಿ. ಪೋರ್ಟಲ್ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂನ್ನು **ದಿನಾಂಕ: 06.05.2025 ರಿಂದ ದಿನಾಂಕ: 21.05.2025 ರವರೆಗೆ ಅಪರಾಹ್ನ 04.30 ಗಂಟೆಯವರೆಗೆ** **http://kppp.karnataka.gov.in** ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ ಪಡೆಯಬಹುದು. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 21.05.2025 ರಂದು ಅಪರಾಹ್ನ 04.30 ಗಂಟೆಯವರೆಗೆ ಮಾತ್ರ.** ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/-
ಜಿಲ್ಲಾ ಶಸ್ತ್ರಚಿಕಿತ್ಸಕರು,
ಸಾರ್ವಜನಿಕ ಆಸ್ಪತ್ರೆ, ಕೆ.ಜಿ.ಎಫ್

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:47/ಕೆಎಸ್‌ಎಂಸಿಎ/2025-26

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (GBDA)
ಬಿ.ಎಂ.ಆರ್.ಡಿ.ಎ ಕಛೇರಿ ಆವರಣ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು - 560052.
ದೂರವಾಣಿ: 080-22263479 ಇ-ಮೇಲ್: gbbscpa@gmail.com

ಸಂಖ್ಯೆ: GBDA/CLU/01/2025-26 ದಿನಾಂಕ: 06-05-2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **‘ಕೃಷಿ’** ವಲಯದಿಂದ **‘ವಸತಿ’** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಜಮೀನಿಗೆ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಆಯುಕ್ತರು, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ (ಎ-ಗು)	ಅನುಮೋದಿತ ಮಹಾಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀಮತಿ ವೀಣಾ ಎಂ.ಜೆ. ಕೋಂ ನಂಜುಂಡಸ್ವಾಮಿ ಆರ್.ಜೆ., ಶ್ರೀ ನಂಜುಂಡಸ್ವಾಮಿ ಆರ್.ಜೆ. ಬಿನ್ ಜವರಾಯಿಗೌಡ, #31, ಸಿ.ಎನ್. ಬಡಾವಣೆ, ಬನಗಿರಿ ನಗರ, ಬಿ.ಎಸ್.ಕೆ. 3ನೇ ಹಂತ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು - 560085.	ಬೆಂಗಳೂರು ದಕ್ಷಿಣ ತಾಲ್ಲೂಕು	ಉತ್ತರಹಳ್ಳಿ -3	ಕೆ. ಚೂಡಹಳ್ಳಿ	144/2	0-37	ಕೃಷಿ	ವಸತಿ
					ಒಟ್ಟು	0-37		

ಷರಾ:- ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳ ಪರಿಸರದಲ್ಲಿ ವಸತಿ ಬಡಾವಣೆಗಳು ಬಂದಿದ್ದು / ಬರುತ್ತಿದ್ದು, ಜಮೀನುಗಳಲ್ಲಿ ಯೋಜಿತ ಬೆಳವಣಿಗೆಯ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಕಡಿಮೆ ವೆಚ್ಚದಲ್ಲಿ ನಿವೇಶನಗಳನ್ನು ನೀಡುವ ಉದ್ದೇಶವನ್ನು ಹೊಂದಿರುತ್ತೇವೆ ಆದ್ದರಿಂದ ಸಾರ್ವಜನಿಕ ಹಿತಾಸಕತಿ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **‘ಕೃಷಿ’** ವಲಯದಿಂದ **‘ವಸತಿ’** ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/-
ನಗರ ಯೋಜಕ ಸದಸ್ಯರು,
ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ವಾಸಾಸಂಇ/ವಾ.ಪ್ರ/535/ಅಡ್ವರ್ಟೋರ್/2025-26

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಮು.ಪ್ರ.ವ್ಯ(ತಾ)/ಉ.ಪ್ರ.ವ್ಯ(ಪ್ರೊ&ಎಪಿಸಿಸಿ)/ಕಾನಿಇಂ-ಪ್ರೊ/ಸ.ಕಾ.ನಿ.ಇಂ-1/2025-26/296-313 ದಿನಾಂಕ: 07.05.2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣಾ ಸಂಖ್ಯೆಗಳ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ** ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ಕ್ರ. ಸಂ.	ವಿಚಾರಣಾ ಸಂಖ್ಯೆ/ ಕಾಮಗಾರಿಯ ವಿವರ
1	ಕವಿಪ್ರನಿನಿ/2025-26/ ಎಸ್‌ಎಸ್/ವರ್ಕ್_ಇಂಡೆಂಟ್2227 **ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ,** **ಕಾಮಗಾರಿ-ಎ:** ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ **110/11ಕೆವಿ ಹುಣಸೆಘಟ್ಟ ಉಪಕೇಂದ್ರದಲ್ಲಿ** 2x10ಎಂವಿಎ, 110/33-11ಕೆವಿ ವಿದ್ಯುತ್ ಪರಿವರ್ತಕಗಳನ್ನು 2x20 ಎಂವಿಎ, 110/33-11ಕೆವಿ ವಿದ್ಯುತ್ ಪರಿವರ್ತಕಗಳನ್ನಾಗಿ ಬದಲಾಯಿಸುವ ಕಾಮಗಾರಿ. **ಕಾಮಗಾರಿ-ಬಿ:** ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನಲ್ಲಿರುವ **110/11ಕೆವಿ ಕರಡಿ ಉಪ ಕೇಂದ್ರದಲ್ಲಿ** ಹೆಚ್ಚುವರಿ 1x10ಎಂವಿಎ, 110/33-11ಕೆವಿ ವಿದ್ಯುತ್ ಪರಿವರ್ತಕ ಹಾಗೂ ಸಂಬಂಧಿತ 11ಕೆವಿ ಸ್ವಿಚ್‌ಗೇರ್‌ಗಳನ್ನು ಒದಗಿಸುವ ಕಾಮಗಾರಿ. **ಕಾಮಗಾರಿ-ಸಿ:** ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನಲ್ಲಿರುವ **110/11 ಕೆವಿ ಗುಂಗುರುಮಲೆ** ಉಪಕೇಂದ್ರದಲ್ಲಿ ಹೆಚ್ಚುವರಿ 1x10 ಎಂವಿಎ 110/33-11ಕೆವಿ ವಿದ್ಯುತ್ ಪರಿವರ್ತಕ ಹಾಗೂ ಸಂಬಂಧಿತ 11ಕೆವಿ ಸ್ವಿಚ್‌ಗೇರ್‌ಗಳನ್ನು ಒದಗಿಸುವ ಕಾಮಗಾರಿ. **ಭಾಗಶ: ಟರ್ನ್ ಕೀ ಆಧಾರದ ಮೇಲೆ** ಎಲ್ಲಾ ಉಪಕರಣಗಳು / ಸಾಮಗ್ರಿಗಳ ಸರಬರಾಜು (1x10 ಎಂವಿಎ 110/33-11ಕೆವಿ ವಿದ್ಯುತ್ ಪರಿವರ್ತಕಗಳು ಮತ್ತು 11ಕೆವಿ ಸ್ವಿಚ್‌ಗೇರ್ ಪೂರೈಕೆಯನ್ನು ಹೊರತುಪಡಿಸಿ) ಮತ್ತು ಎಲ್ಲಾ ಉಪಕರಣಗಳು/ಸಾಮಗ್ರಿಗಳ ಸ್ಥಾಪನೆ (ಕಳಚಿಹಾಕುವಿಕೆ ಮತ್ತು ಸಿವಿಲ್ ಕಾಮಗಾರಿಯನ್ನು ಒಳಗೊಂಡಂತೆ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು. ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್‌ಗಳು ಲಭ್ಯವಾಗುವ ದಿನಾಂಕ **08.05.2025 ರಂದು ಅಥವಾ ನಂತರ.** ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ ಹಾಗೂ ಸಮಯ **09.06.2025 15.00 ಗಂಟೆಯವರೆಗೆ.**
2	ಕವಿಪ್ರನಿನಿ/2025-26/ ಎಸ್‌ಎಸ್/ವರ್ಕ್_ಇಂಡೆಂಟ್2228 **ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ,** **ಕಾಮಗಾರಿ-ಎ:** ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿರುವ **110/11ಕೆವಿ ಕೆ.ಜಿ. ಟೆಂಪಲ್ ಉಪಕೇಂದ್ರದಲ್ಲಿ** 1x10ಎಂವಿಎ, 110/33-11ಕೆವಿ ವಿದ್ಯುತ್ ಪರಿವರ್ತಕವನ್ನು 1x20ಎಂವಿಎ, 110/33-11ಕೆವಿ ವಿದ್ಯುತ್ ಪರಿವರ್ತಕವನ್ನಾಗಿ ಬದಲಾಯಿಸುವ ಕಾಮಗಾರಿ. **ಕಾಮಗಾರಿ-ಬಿ:** ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನಲ್ಲಿರುವ **110/11ಕೆವಿ ಕೆರೆಗೋಡಿ ಉಪಕೇಂದ್ರದಲ್ಲಿ** ಹೆಚ್ಚುವರಿ 1x10ಎಂವಿಎ, 110/33-11ಕೆವಿ ವಿದ್ಯುತ್ ಪರಿವರ್ತಕ ಹಾಗೂ ಸಂಬಂಧಿತ 11ಕೆವಿ ಸ್ವಿಚ್‌ಗೇರ್‌ಗಳನ್ನು ಒದಗಿಸುವ ಕಾಮಗಾರಿ. **ಭಾಗಶ: ಟರ್ನ್ ಕೀ ಆಧಾರದ ಮೇಲೆ** ಎಲ್ಲಾ ಉಪಕರಣಗಳು/ಸಾಮಗ್ರಿಗಳ ಸರಬರಾಜು (1x10 ಎಂವಿಎ 110/33-11ಕೆವಿ ವಿದ್ಯುತ್ ಪರಿವರ್ತಕ ಮತ್ತು 11ಕೆವಿ ಸ್ವಿಚ್‌ಗೇರ್ ಪೂರೈಕೆಯನ್ನು ಹೊರತುಪಡಿಸಿ) ಮತ್ತು ಎಲ್ಲಾ ಉಪಕರಣಗಳು/ಸಾಮಗ್ರಿಗಳ ಸ್ಥಾಪನೆ (ಕಳಚಿಹಾಕುವಿಕೆ ಮತ್ತು ಸಿವಿಲ್ ಕಾಮಗಾರಿಯನ್ನು ಒಳಗೊಂಡಂತೆ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು. ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್‌ಗಳು ಲಭ್ಯವಾಗುವ ದಿನಾಂಕ **09.05.2025 ರಂದು ಅಥವಾ ನಂತರ.** ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ ಹಾಗೂ ಸಮಯ **09.06.2025 15.00 ಗಂಟೆಯವರೆಗೆ.**
3	ಕವಿಪ್ರನಿನಿ/2025-26/ ಎಸ್‌ಎಸ್/ವರ್ಕ್_ಇಂಡೆಂಟ್2229 **ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ,** **ಕಾಮಗಾರಿ-ಎ:** ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ **220/110/11ಕೆವಿ ನಿಟ್ಟೂರು ಉಪಕೇಂದ್ರದಲ್ಲಿ** 1x20ಎಂವಿಎ, 110/33-11ಕೆವಿ ವಿದ್ಯುತ್ ಪರಿವರ್ತಕವನ್ನು ಒದಗಿಸುವ ಕಾಮಗಾರಿ. **ಕಾಮಗಾರಿ-ಬಿ:** ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿರುವ **110/11ಕೆವಿ ಬಿದರೆ ಉಪಕೇಂದ್ರದಲ್ಲಿ** 2x10 ಎಂವಿಎ 110/33-11ಕೆವಿ ವಿದ್ಯುತ್ ಪರಿವರ್ತಕಗಳನ್ನು 2x20ಎಂವಿಎ, 110/33-11ಕೆವಿ ವಿದ್ಯುತ್ ಪರಿವರ್ತಕಗಳನ್ನಾಗಿ ಬದಲಾಯಿಸುವ ಕಾಮಗಾರಿ. **ಕಾಮಗಾರಿ-ಸಿ:** ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿರುವ **110/11ಕೆವಿ ಉಂಗ್ರಾ ಉಪಕೇಂದ್ರದಲ್ಲಿ** 1x10ಎಂವಿಎ, 110/33-11ಕೆವಿ ವಿದ್ಯುತ್ ಪರಿವರ್ತಕವನ್ನು 1x20 ಎಂವಿಎ, 110/33-11ಕೆವಿ ವಿದ್ಯುತ್ ಪರಿವರ್ತಕವನ್ನಾಗಿ ಬದಲಾಯಿಸುವ ಕಾಮಗಾರಿ. **ಭಾಗಶ: ಟರ್ನ್ ಕೀ ಆಧಾರದ ಮೇಲೆ** ಎಲ್ಲಾ ಉಪಕರಣಗಳು/ಸಾಮಗ್ರಿಗಳ ಸರಬರಾಜು (11ಕೆವಿ ಸ್ವಿಚ್‌ಗೇರ್ ಪೂರೈಕೆಯನ್ನು ಹೊರತುಪಡಿಸಿ) ಮತ್ತು ಎಲ್ಲಾ ಉಪಕರಣಗಳು/ಸಾಮಗ್ರಿಗಳ ಸ್ಥಾಪನೆ (ಕಳಚಿಹಾಕುವಿಕೆ ಮತ್ತು ಸಿವಿಲ್ ಕಾಮಗಾರಿಯನ್ನು ಒಳಗೊಂಡಂತೆ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು. ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್‌ಗಳು ಲಭ್ಯವಾಗುವ ದಿನಾಂಕ **12.05.2025 ರಂದು ಅಥವಾ ನಂತರ.** ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ ಹಾಗೂ ಸಮಯ **11.06.2025 15.00 ಗಂಟೆಯವರೆಗೆ.**

ಬಿಡ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ https://kptcl.karnataka.gov.in ನ ಹೈಪರ್‌ಲಿಂಕ್ **‘ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ’** ಅಥವಾ https://kppp.karnataka.gov.in ನಲ್ಲಿ ಲಾಗಿನ್ ಆಗಿ ಪಡೆಯಬಹುದು. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. ಇದಕ್ಕೆ ಸಂಬಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/- ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ನಿಗಮ ಕಛೇರಿ, ಕ.ವಿ.ಪ್ರ.ನಿ.ನಿ, 2ನೇ ಮಹಡಿ, ಕಾವೇರಿ ಭವನ, ಬೆಂಗಳೂರು-560009.

ಭಾರತ ಸರ್ಕಾರ
ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ
ಸೆಂಟರ್ ಫಾರ್ ಪ್ರೊಸೆಸ್ಸಿಂಗ್ ಆಕ್ಸಲರೇಟೆಡ್ ಕಾರ್ಪೊರೇಟ್ ಎಕ್ಸಿಟ್ (ಸಿ-ಪೇಸ್)
ಐಐಸಿಎ ಬಿಲ್ಡಿಂಗ್, 7ನೇ ಮಹಡಿ, ಪ್ಲಾಟ್ ಪಿ-6, 7, 8, ಸೆಕ್ಟರ್-5, ಐಎಂಟಿ ಮಾನೇಸರ್, ಗುರಗಾಂವ್, ಹರಿಯಾಣ-122050. Email: roc.cpace@mca.gov.in

ಫಾರಂ ನಂ. ಎಸ್‌ಟಿಕೆ-6

ಸಾರ್ವಜನಿಕ ಪ್ರಕಟಣೆ

[ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248ರ ಸಬ್ ಸೆಕ್ಷನ್ (2) ಮತ್ತು ಸಬ್ ಸೆಕ್ಷನ್ (4) ಮತ್ತು ಕಂಪನಿಗಳ (ಕಂಪನಿಗಳ ರಿಜಿಸ್ಟರ್‌ನಿಂದ ಕಂಪನಿಗಳ ಹೆಸರುಗಳನ್ನು ತೆಗೆದುಹಾಕುವ) ನಿಯಮಗಳು, 2016ರ ನಿಯಮ 7ರ ಪ್ರಕಾರ]

ಪಬ್ಲಿಕ್ ನೋಟಿಸ್ ನಂ. ಆರ್‌ಒಸಿ/ಸಿ-ಪೇಸ್/ಎಸ್‌ಟಿಕೆ-2/248(2)/2024-25/309 ದಿ:29.04.2025

ಉಲ್ಲೇಖ:

(1) ಕರ್ನಾಟಕ ರಾಜ್ಯದ ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248 ಅಡಿಯಲ್ಲಿ, ಕೆಳಕಂಡ (18) ಕಂಪನಿಗಳ ಹೆಸರುಗಳನ್ನು ಅಳಿಸಿ ಹಾಕುವ ಅಥವಾ ತೆಗೆದು ಹಾಕುವ ವಿಷಯದಲ್ಲಿ

ಕ್ರ. ಸಂ.	ವರ್ಕ್ ಐಟಂ	ಸಿಐಎನ್	ಕಂಪನಿ ಹೆಸರು
1	AB2973802	U52100KA2022PTC158713	ಅಜ್ಮಾಂಕೊ ಪ್ರೈವೇಟ್ ಲಿಮಿಟೆಡ್
2	AB3001874	U74999KA2018PTC110738	ಡಿವಿವಿಎನ್ ಫ್ಯೂಷನ್ ಫುಡ್ ಪ್ರೈವೇಟ್ ಲಿಮಿಟೆಡ್
3	AB3016171	U78300KA2023PTC175656	ವಿಎಸ್‌ಎಲ್‌ಎನ್ ಕಾರ್ಪೊರೇಟ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
4	AB3075035	U74999KA2018PTC114181	ಯುನೊಲ್ಯಾಬ್ ಕನ್ಸಲ್ಟಂಟ್ಸ್ ಪ್ರೈವೇಟ್ ಲಿಮಿಟೆಡ್
5	AB3083011	U62099KA2023PTC182385	ಪ್ಲಾನ್‌ಫಿಕ್ಸ್‌ಎಸ್ ಪ್ರೈವೇಟ್ ಲಿಮಿಟೆಡ್
6	AB3090595	U49224KA2023PTC177220	ಬೆಂಗಳೂರು ಟ್ರಾನ್ಸಿಟ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
7	AB3102749	U47912KA2024PTC195273	ಅರಸಿಕ್ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್
8	AB3106454	U74999KA2017FTC108830	ಪೊಲ್ಟೆರ್ರಾ ಇಂಡಿಯಾ ಪ್ರೈವೇಟ್ ಲಿಮಿಟೆಡ್
9	AB3113523	U67190KA2020PLN133977	ಸಕಾಲ್ ಧನ್ ನಿಧಿ ಲಿಮಿಟೆಡ್
10	AB3116336	U74999KA2022FTC168539	ಟಿಪಿಎಸ್ ಥಾಯರ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್
11	AB3123615	U74999KA2016PTC095977	ಹೊಮಿ ಕೊಂಬ್ ಪ್ರೈವೇಟ್ ಲಿಮಿಟೆಡ್
12	AB3131150	U22219KA1981PTC004552	ವುಲ್ಕನೈಸಿಂಗ್ ಫೈಬರ್ ಬೋರ್ಡ್ ಪ್ರೈವೇಟ್ ಲಿಮಿಟೆಡ್
13	AB3132380	U74999KA2022PTC161860	ವಾಸ್ಟ್‌ನೆಸ್ ಎಚ್‌ಆರ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
14	AB3132830	U25209KA2021PTC153663	ಫ್ಯುಸಾಮ್ಯಾಟಿಕ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
15	AB3135344	U74999KA2019PTC130302	ಡಿಒಡಿ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್
16	AB3152061	U15490KA2021PTC144787	ಕಟ್ಟಿಂಗ್ ಎಡ್ಜ್ ಫುಡ್ಸ್ ಪ್ರೈವೇಟ್ ಲಿಮಿಟೆಡ್
17	AB3185931	U62013KA2024PTC190159	ಎಲ್2ಎಂ ಫೋಟೊನಿಕ್ಸ್ ಪ್ರೈವೇಟ್ ಲಿಮಿಟೆಡ್
18	AB3215225	U55209KA2022PTC160199	ಆಂಧ್ರ ಚಿಮ್ನಿ ಪ್ರೈವೇಟ್ ಲಿಮಿಟೆಡ್
19	AB3221223	U46419KA2023PTC177149	ಆಕ್ಟೋಔಟ್‌ಫಿಟ್ಟರ್ಸ್ ಅಪರೆಲ್ಸ್ ಪ್ರೈವೇಟ್ ಲಿಮಿಟೆಡ್
20	AB3352401	U74999KA2016PTC093394	ಪ್ರೊವರ್ಬಿಯಂ ಆಪ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
21	AB3386190	U55209KA2022PTC167079	ಎಲ್‌ಎಸ್‌ಎಸ್‌ಆರ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್
22	AB3390350	U31906KA2017PTC100600	ಸಮ್ರುದ್ ಎನರ್ಜಿ ಪ್ರೈವೇಟ್ ಲಿಮಿಟೆಡ್
23	AB3401067	U74999KA2018PTC114691	ಟಿವಸ್ತ ಇನ್ಫೊಟೆಕ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
24	AB3405770	U79110KA2023PTC172958	ಟ್ರಾವೊಪೊ ಪ್ರೈವೇಟ್ ಲಿಮಿಟೆಡ್
25	AB3407961	U51900KA2010PTC054945	ಎಸ್‌ಬಿಜಿ ಡಿಸ್ಟ್ರಿಬ್ಯೂಟರ್ಸ್ ಪ್ರೈವೇಟ್ ಲಿಮಿಟೆಡ್
26	AB3417819	U52609KA2017PTC102759	ಐಸರ್ವ್‌ಎನ್‌ಸಪ್ಲಾಯ್ ಡಿಜಿಟಲ್ ಮಾರ್ಕೆಟ್ ಪ್ರೈವೇಟ್ ಲಿಮಿಟೆಡ್
27	AB3421476	U72900KA2019PTC127543	ಅರಿಶ್ನಾ ಡೇಟಾ ಕಮ್ಯುನಿಕೇಶನ್ ಪ್ರೈವೇಟ್ ಲಿಮಿಟೆಡ್
28	AB3448463	U72501KA2017PTC105382	ವೆಲ್ವೆಟ್ ರಾವೆನ್ ಪ್ರೈವೇಟ್ ಲಿಮಿಟೆಡ್
29	AB3454787	U74209KA2024PTC186785	ಜರ್ನಿ ಜಾಟ್ ಸ್ಟುಡಿಯೋಸ್ ಪ್ರೈವೇಟ್ ಲಿಮಿಟೆಡ್
30	AB3460444	U47912KA2024OPC192896	ಅಹಂಕಾರ್ ವೆಂಚರ್ಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
31	AB3461414	U28110KA2023PTC181204	ವರ್ಟಿಪೋರ್ಟ್ ನವೋಪ್ಸ್ ಪ್ರೈವೇಟ್ ಲಿಮಿಟೆಡ್
32	AB3465295	U72200KA2015PTC079908	ಬೆಟಾನ್‌ಇಂಡಿಯಾ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್
33	AB3474587	U24100KA2021PTC145290	ಮುಬಿನ್ ಫಾರ್ಮಾಸ್ಯೂಟಿಕಲ್ಸ್ ಪ್ರೈವೇಟ್ ಲಿಮಿಟೆಡ್
34	AB3501040	U74999KA2018PTC119612	ಅರಿಶ್ನಾ ಡಿಜಿಟಲ್ ಕಮ್ಯುನಿಕೇಶನ್ ಪ್ರೈವೇಟ್ ಲಿಮಿಟೆಡ್
35	AB3517888	U31909KA1994PTC015869	ಮೈಕ್ರಾನ್ ಇಲೆಕ್ಟ್ರಿಕಲ್ಸ್ ಪ್ರೈವೇಟ್ ಲಿಮಿಟೆಡ್
36	AB3525554	U72200KA2015PTC078938	ಎಮಿನೆಂಟ್‌ಮೈಂಡ್ಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
37	AB3543674	U70200KA2023PTC176054	ಪುಲಾಪಿಯಾ ಟ್ರೇಡಿಂಗ್ ಪ್ರೈವೇಟ್ ಲಿಮಿಟೆಡ್
38	AB3333209	U72900KA2017PTC104966	ಆರ್‌ಕೆ ಇನ್ಫೊಮೀಡಿಯಾ ಪ್ರೈವೇಟ್ ಲಿಮಿಟೆಡ್

(2) ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಇಲ್ಲಿ ಮೇಲೆ ಉಲ್ಲೇಖಿಸಲಾಗಿರುವ ಕಂಪನಿಗಳು ತಮ್ಮ ಸ್ಥಾಪನೆ ಆದಾಗಿನಿಂದ ಒಂದು ವರ್ಷದೊಳಗೆ ವ್ಯವಹಾರವನ್ನು ಆರಂಭಿಸಲು ವಿಫಲವಾಗಿರುವ ಹಿನ್ನಲೆಯಲ್ಲಿ ಅಥವಾ ಸದರಿ ಕಂಪನಿಗಳು ಹಿಂದಿನ ತಕ್ಷಣದ ಎರಡು ಹಣಕಾಸು ವರ್ಷಗಳ ಅವಧಿಯಲ್ಲಿ ಯಾವುದೇ ವ್ಯಾಪಾರ ಅಥವಾ ಚಟುವಟಿಕೆ ಮಾಡದಿರುವ ಹಿನ್ನಲೆಯಲ್ಲಿ ಮತ್ತು ಅಂತಹ ಅವಧಿಯಲ್ಲಿ ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 455ರ ಅಡಿಯಲ್ಲಿ ಡೊರ್ಮಂಟ್ ಕಂಪನಿ ಸ್ಟೇಟಸ್ ಪಡೆಯಲು ಯಾವುದೇ ಅರ್ಜಿ ಸಲ್ಲಿಸದೆ ಇರುವ ಹಿನ್ನಲೆಯಲ್ಲಿ ಅಥವಾ ಕಂಪನಿಗಳು ಡೊರ್ಮಂಟ್ ಕಂಪನಿ ಸ್ಟೇಟಸ್ ಪಡೆದುಕೊಂಡಿದ್ದು / ಮೆಮೊರಾಂಡಮ್‌ನ ಚಂದಾದಾರರು ಕಂಪನಿಯ ಸ್ಥಾಪನಾ ಸಮಯದಲ್ಲಿಯೇ ಪಾವತಿಸಲು ಒಪ್ಪಿಕೊಂಡಿದ್ದ ಚಂದಾದಾರಿಕೆಯನ್ನು ಪಾವತಿಸದೆ ಇರುವ ಹಿನ್ನಲೆಯಲ್ಲಿ ಮತ್ತು ಸ್ಥಾಪನೆಯಾದಾಗಿನಿಂದ ಯಾವುದೇ ವ್ಯವಹಾರ ಮಾಡುತ್ತಿಲ್ಲ ಅಥವಾ ಚಟುವಟಿಕೆ ನಡೆಸುತ್ತಿಲ್ಲ ಎಂಬುದನ್ನು ನೂರಾ ಎಂಬತ್ತು ದಿನಗಳೊಳಗೆ ಸೆಕ್ಷನ್ 10ಎ ಸಬ್ ಸೆಕ್ಷನ್ (1)ರ ಅಡಿಯಲ್ಲಿ ಡಿಕ್ಲರೇಶನ್ ಸಲ್ಲಿಕೆ ಮಾಡಿರದೆ ಇರುವುದು, ಸೆಕ್ಷನ್ 12ರ ಸಬ್ ಸೆಕ್ಷನ್ (9) ಅಡಿಯಲ್ಲಿ ಭೌತಿಕ ಪರಿಶೀಲನೆ ಕೈಗೊಂಡ ನಂತರ ಇದು ಬೆಳಕಿಗೆ ಬಂದಿರುವ ಹಿನ್ನಲೆಯಲ್ಲಿ ಮತ್ತು ಬಹುತೇಕರು ತಮ್ಮ ಕಂಪನಿಗಳ ನೋಂದಣಿಯನ್ನು ಮುಂದುವರಿಸಲು ಇಚ್ಛಿಸದಿರುವ ಹಿನ್ನಲೆಯಲ್ಲಿ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248(2)ರ ಅಡಿಯಲ್ಲಿ, ತಮ್ಮ ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಬೇಕು / ಅಳಿಸಿ ಹಾಕಬೇಕೆಂದು ಕೋರಿ ಅರ್ಜಿಗಳನ್ನು ಸಲ್ಲಿಸಿರುತ್ತವೆ.

(3) ಅಂತೆಯೇ, ಕಂಪನಿಗಳ ರಜಿಸ್ಟ್ರಾರ್ ಇವರು ಮೇಲ್ಕಂಡ ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಲು / ಅಳಿಸಿ ಹಾಕಲು ಉದ್ದೇಶಿಸಿರುತ್ತಾರೆ.

(4) ಹೀಗೆ, ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಲು/ಅಳಿಸಿ ಹಾಕಲು ಉದ್ದೇಶಿಸಲಾಗಿರುವ ಕ್ರಮಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ ಆಕ್ಷೇಪಣೆಗಳಿದ್ದಲ್ಲಿ, ಅಂತಹವರು ಈ ನೋಟಿಸ್ ಪ್ರಕಟಗೊಂಡ ದಿನಾಂಕದಿಂದ ಮೂವತ್ತು ದಿನಗಳೊಳಗೆ ಈ ಮೇಲೆ ತಿಳಿಸಲಾಗಿರುವ ಕಚೇರಿ ವಿಳಾಸಕ್ಕೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದು.

ಇರ್ಕಾನ್ ಟರ್ಕಿ
ಅಸಿಸ್ಟೆಂಟ್ ರಿಜಿಸ್ಟ್ರಾರ್
ಸೆಂಟರ್ ಫಾರ್ ಪ್ರೊಸೆಸ್ಸಿಂಗ್ ಆಕ್ಸಲರೇಟೆಡ್ ಕಾರ್ಪೊರೇಟ್ ಎಕ್ಸಿಟ್

CBC 07123/11/0154/2526

ಮುಡಾ: ಲೋಕಾಯುಕ್ತ ನಡೆಗೆ ಕೃಷ್ಣ ಆಕ್ಷೇಪ

ಬೆಂಗಳೂರು: 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಆರೋಪ ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ಸರ್ಕಾರಿ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಲು ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 17ಎ ಅಡಿ ರಾಜ್ಯ ಸರ್ಕಾರಕ್ಕೆ ಅನುಮತಿ ಕೋರಲಾಗಿದ್ದು, ಪ್ರಕರಣದ ವಿಚಾರಣೆಗೆ ಇನ್ನಷ್ಟು ಕಾಲಾವಕಾಶ ನೀಡಬೇಕು' ಎಂದು ಲೋಕಾಯುಕ್ತ ಪರ ವಕೀಲರು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಬುಧವಾರ ಮನವಿ ಮಾಡಿದರು.

ಈ ಸಂಬಂಧ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಲ್ಲಿಸಿರುವ ಖಾಸಗಿ ದೂರನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾ. ಸಂತೋಷ ಗಜಾನನ ಭಟ್ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಲೋಕಾಯುಕ್ತ ಪರ ವಕೀಲ ವೆಂಕಟೇಶ ಅರಬಟ್ಟಿ, 'ಕಳೆದ ವಿಚಾರಣೆ ವೇಳೆ ನ್ಯಾಯಾಲಯ ತನಿಖೆ ಮುಂದುವರಿಕೆಗೆ ಆದೇಶಿಸಿತ್ತು. ಅದರ ಭಾಗವಾಗಿ ಕೆಲ ಅಧಿಕಾರಿಗಳ ವಿರುದ್ಧ ತನಿಖೆಗೆ ಅನುಮತಿ ಕೋರಲಾಗಿದೆ. ಹೀಗಾಗಿ, ವಿಚಾರಣೆಗೆ ಇನ್ನಷ್ಟು ಕಾಲಾವಕಾಶ ನೀಡಬೇಕು' ಎಂದು ಕೋರಿದರು.

ಇದಕ್ಕೆ ಫಿರ್ಯಾದುದಾರ ಸ್ನೇಹಮಯಿ ಕೃಷ್ಣ, 'ತನಿಖಾಧಿಕಾರಿಗಳು ಉದ್ದೇಶ ಪೂರ್ವಕವಾಗಿ ತನಿಖೆಗೆ ವಿಳಂಬ ಧೋರಣೆ ಅನುಸರಿಸುತ್ತಿದ್ದಾರೆ. ತನಿಖಾ ಸಂಸ್ಥೆಯು ಅನಗತ್ಯವಾಗಿ ವಿಚಾರಣೆ ಮುಂದೂಡಿಕೆಗೆ ಕೋರುತ್ತಿದೆ. ಹೀಗಾಗಿ, ಯಾವುದೇ ಕಾರಣಕ್ಕೂ ಕಾಲಾವಕಾಶ ನೀಡಬಾರದು' ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಕೃಷ್ಣ ಅವರ ಆಕ್ಷೇಪಣೆಯನ್ನು ದೈನಂದಿನ ಆದೇಶದಲ್ಲಿ ದಾಖಲಿಸಿದ ನ್ಯಾಯಾಧೀಶರು, ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಿದರು. ಅಂದು ಪ್ರಕರಣಕ್ಕೆ ಸಂಬಂಧಿಸಿದ ವಸ್ತುಸ್ಥಿತಿ ವರದಿ ಸಲ್ಲಿಸುವಂತೆ ಲೋಕಾಯುಕ್ತಕ್ಕೆ ಆದೇಶಿಸಿದರು.

ವೈದ್ಯಕೀಯ ತಪಾಸಣಾ ತಂಡ ರಚನೆ

ಬೆಂಗಳೂರು: ಔಷಧ, ವೈದ್ಯಕೀಯ ಉಪಕರಣಗಳ ಖರೀದಿಗೆ ಕರ್ನಾಟಕ ರಾಜ್ಯ ಔಷಧ ಸರಬರಾಜು ನಿಗಮ ನಡೆಸುವ ಟೆಂಡರ್ ಪ್ರಕ್ರಿಯೆಯಲ್ಲಿ ಬಿಡ್ದುದಾರರ ಸಂಸ್ಥೆ, ಘಟಕಗಳ ತಪಾಸಣೆಗೆ ವೈದ್ಯರು ಹಾಗೂ ಅಧಿಕಾರಿಗಳನ್ನೊಳಗೊಂಡ ತಂಡ ರಚಿಸಲಾಗಿದೆ.

ಈ ಬಗ್ಗೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ. ಕೆಎಸ್ಎಂಎಸ್‌ಸಿಎಲ್ ಖರೀದಿಸಿ, ಪೂರೈಸುವ ಔಷಧ ಉಪಕರಣಗಳ ಗುಣಮಟ್ಟದ ಬಗ್ಗೆ, ಎನ್‌ಎಬಿಎಲ್ (ನ್ಯಾಷನಲ್ ಅಕ್ರಿಡಿಯೇಶನ್ ಬೋರ್ಡ್ ಫಾರ್ ಲ್ಯಾಬರೋಟರೀಸ್) ಪ್ರಯೋಗಾಲಯಗಳ ಉತ್ಪಾದನಾ ಘಟಕಗಳ ಮೌಲ್ಯಮಾಪನಕ್ಕೆ ಈ ತಂಡ ರಚಿಸಲಾಗಿದೆ ಎಂದು ತಿಳಿಸಲಾಗಿದೆ. ಉಪಕರಣದ ಗುಣಮಟ್ಟ, ಸುರಕ್ಷತೆ, ಕಾರ್ಯ ಪದ್ಧತಿಯ ತಪಾಸಣೆ, ದಾಖಲೆಗಳ ಪರಿಶೀಲನೆ ಹಾಗೂ ತಪಾಸಣಾ ವರದಿ ಸಿದ್ಧಪಡಿಸಿ ಸಲ್ಲಿಸುವ ಜವಾಬ್ದಾರಿಯನ್ನು ತಂಡ ಹೊಂದಿದೆ ಎಂದು ಆದೇಶದಲ್ಲಿ ಹೇಳಲಾಗಿದೆ.

EDUCATION SUCCESS ಕ್ಲಾಸಿಫೈಡ್ಸ್

Jnanadeepa Vidya Samsthe
JDVS ARROW KIDS PUBLIC SCHOOL
Regd. by Govt. of Karnataka
#2, 2nd Cross, Avalahalli, Girinagar, Bangalore-26 Ph: 080-26755056
THE SCHOOL MANAGEMENT AND STAFF CONGRATULATES THE TOPPERS OF SSLC EXAM 2025.
Congratulations!
AMULYA. S-97% SPANDANA.M-86% YASHASWINI-85% AJAY. A-82%
DHRUVA-79% NITHIN-75% MANIKANTA-71% HARSHA-69% RANJANA-63%
TANUSHRI-63% SAKSHAM-62% VIGYAN-54% AKSHATHA-53% YATHIN-51%

ಬ್ಲೂಮೂನ್ ಪಬ್ಲಿಕ್ ಸ್ಕೂಲ್
ಎನ್ ಆರ್ ಪಾಳ್ಯ, ಟೀಚರ್ಸ್ ಕಾಲೋನಿ, ದಾಸನಪುರ ಹೋಬಳಿ, ಬೆಂಗಳೂರು ಉತ್ತರ
SSLC TOPPERS 2025
ನೈನಿಕ ಎನ್ ವಾಜಂತ್ರಿ 98.88% | ಪೂಜ ಮನಗುಂಡಿ 98.24%
ದೀಶ ಎನ್.ಎಸ್. 98.24% | ಗಣೇಶ್ 97.44% | ರಕ್ಷಿತ ಜಿ.ಎಂ. 97.6% | ಸುಪ್ರಿಯ ಎಂ. 94.24% | ಏಕನಾಥ್ ಪರಶುರಾಂ ಬಿರಾದರ್ 92.96% | ಮೋನಿಷ ಎಂ.ವೈ 85.92% | ವನ್‌ಜಿತ್ ಗೌಡ 81.92%

ನ್ಯೂ ಸೇಂಟ್ ಮೇರಿಸ್ ಪಬ್ಲಿಕ್ ಹೈ ಸ್ಕೂಲ್
ಸುಂಕದಕಟ್ಟೆ ಶಾಖೆ ಬೆಂಗಳೂರು
SSLC TOPPERS 2025
ಲಿಖಿತ .ಎಸ್ 99% | ಕರಣ್ ಗೌಡ 98% | ರೋಶಿನಿ 96% | ದೀಕ್ಷ ಎನ್.ಬಿ. 96% | ಲಕ್ಷ್ಮಿ ದೇವಿ 96% | ಚಂದ್ರಮೋಹನ್ ಗೌಡ 94% | ಚಂದ್ರ ಕುಮಾರ್ 90%

ಅಂಜಲಿ ಕಾನ್ವೆಂಟ್ ಮತ್ತು ನೈಟಿಂಗೇಲ್ ಪ್ರೌಢಶಾಲೆ,
ಶ್ರೀನಿವಾಸನಗರ, ಸುಂಕದಕಟ್ಟೆ, ಬೆಂಗಳೂರು–91
SSLC TOPPERS 2025
ಮಂಜುನಾಥ್ ಸಿ ಬಗಸಿ 99% | ಲೋಹಿತ್ ಗೌಡ ಎಸ್.ಎಸ್ 96% | ಅಖಿತ ಎ 94%
ಅಮೃತ ಆರ್ 90% | ಚೇತನ್ ಗೌಡ ಆರ್ 88% | ನಿತಿನ್ ಯು 87% | ತೇಜಶ್ರೀ ಎಂ.ಆರ್. 87% | ಬಿಂದುಶ್ರೀ ಎಂ.ಆರ್. 86% | ವರ್ಷಿತ ಎನ್ 85% | ರೋಹಿಣಿ ಗೌಡ ಎಸ್ 85%

ನ್ಯೂ ಸೇಂಟ್ ಮೇರಿಸ್ ಪಬ್ಲಿಕ್ ಹೈ ಸ್ಕೂಲ್
ಕಾಮಾಕ್ಷಿಪಾಳ್ಯ ಬೆಂಗಳೂರು
SSLC TOPPERS 2025
ಚರಣ್ .ಎನ್ 99%
ಗಣೇಶ್ ಎಸ್.ಕೆ. 97% | ಸಂಗೀತ ವಿ. 97% | ಯಶ್ವಂತ್ .ಆರ್ 93.6% | ಪೂಜಿತ ಆರ್ 93.6% | ಕೀರ್ತನ ಎಂ. ಗೌಡ 91.3% | ಮೇಘಶ್ರೀ .ಸಿ 89.7% | ರಂಜಿತ್ ಗೌಡ .ಆರ್ 89.6%

FLORENCE HIGH SCHOOL
VIVIANI ROAD, BENGALURU-560005
STUDENTS WHO HAVE PERFORMED WELL IN THE S.S.L.C EXAMINATION 2024-25
FAIZA RAMSHA T 590/ 625 (94.40%) | ZUHAIB KHAN 590/ 625 (94.40%)
QURRAM PASHA 576/ 625 (92.16%) | ATHIRA AYMAN 546/ 625 (87.36%) | ARSHIYA AMBER N 543/ 625 (86.88%) | YOUSUF RABBANI 540/ 625 (86.40%) | ROHITH M 538/ 625 (86.08%) | SADHVIKA K 537/ 625 (85.92%)
UMME KULSUM 528/ 625 (84.48%) | RAYYAN SHARIEFF 523/ 625 (83.68%) | RHUMAISA AZMAA 520/ 625 (83.20%) | K FAIZAN SANAULLAH 519/ 625 (83.04%) | I VEDANTH 514/ 625 (82.24%) | SANIYA TABASSUM 514/ 625 (82.24%)
AMRIN KHANUM 510/ 625 (81.60%) | KUBRA KHANUM 498/ 625 (79.68%) | GHANIYA MUHAMMADI 495/ 625 (79.20%) | JATIN V 485/ 625 (77.60%) | V DHARSHAN 477/ 625 (76.32%) | SUHAIB SHARIEFF 476/ 625 (76.16%) | ABDUL MANNAN AHMED 475/ 625 (76.00%)
ADMISSIONS OPEN FROM NURSERY TO X STANDARD

THE BEST HIGH SCHOOL
HBR LAYOUT, BENGALURU-560043
STUDENTS WHO HAVE PERFORMED WELL IN THE S.S.L.C EXAMINATION 2024-25
SHRIYA P 612/ 625 (97.92%) | MOHAMMED AYAAN 594/ 625 (95.04%)
MOHAMMED ASHIQ HUSSAIN 566/ 625 (90.56%) | DEEPIKA 561/ 625 (89.76%) | ALWIN RAJU 560/ 625 (89.60%) | HUDA KAUNAIN Z 547/ 625 (87.52%) | MOHAMMED JAFAR SADIQ KHAN 547/ 625 (87.52%) | SYED FARHAN 546/ 625 (87.36%) | ALIYA SULTANA 543/ 625 (86.88%) | THIRTHANKAR L 543/ 625 (86.88%)
MOHAMMED UMAR FAROOQ 533/ 625 (85.28%) | MONISH M 533/ 625 (85.28%) | MOHAMMED AYAN HUSSAIN 512/ 625 (81.92%) | MOHAMMED RAYAN PASHA 498/ 625 (79.68%) | MOHAMMED ABU BAKKER 497/ 625 (79.52%) | AZWA KHULOOD 493/ 625 (78.88%) | KUBRA FATHIMA H 489/ 625 (78.24%) | SABHA M 488/ 625 (78.08%)
ARUMAH MANNA 486/ 625 (77.76%) | UMME KULSUM 486/ 625 (77.76%) | IHAAN IQBAL KHATTAL 484/ 625 (77.44%) | SADIYA FARHATH 483/ 625 (77.28%) | RAJU BISWAS 482/ 625 (77.12%) | VAMSI KRISHNARAJ R B 479/ 625 (76.64%) | R PUNEET 475/ 625 (76.00%) | CHAHATH IMRAAZ 470/ 625 (75.20%)
ADMISSIONS OPEN FROM NURSERY TO X STANDARD

FLORENCE HIGH SCHOOL
SUBBAYANAPALYA , BENGALURU-560033
STUDENTS WHO HAVE PERFORMED WELL IN THE S.S.L.C EXAMINATION 2024-25
SHARON M 604/ 625 (96.64%) | SWETHA S 589/ 625 (94.24%)
POOJA ANAND 581/ 625 (92.96%) | M NAVYA 576/ 625 (92.16%) | B RAKSHITHA 574/ 625 (91.84%) | PRABHAVATHI J 573/ 625 (91.68%) | D SHREE KAMALESH 566/ 625 (90.56%) | FATHIMA HARMAIN 554/ 625 (88.64%)
M J KANISHK 548/ 625 (87.68%) | S RASHEED AHMED 548/ 625 (87.68%) | SANUOOBIYA M 547/ 625 (87.52%) | RASHMITHA 541/ 625 (86.56%) | A NAFEESA BANU 538/ 625 (86.08%) | ARCHANA K 508/ 625 (81.28%)
JOYAL G 508/ 625 (81.28%) | INDELA RITHIK REDDY 501/ 625 (80.16%) | VENNAPUSA LALITH KUMAR 474/ 625 (75.84%) | MUVENDIRAN K 466/ 625 (74.56%) | SAYEDA HASEEBA 466/ 625 (74.56%) | RIYA SINGH G 461/ 625 (73. 76%) | M KAUSTUB RAJ 457/ 625 (73.12%)
ADMISSIONS OPEN FROM NURSERY TO X STANDARD

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Teachers/ Professors

TEACHERS REQUIRED- Loyola Primary and High School (English medium). We are hiring for the following positions: 1. PCM teacher with Computer education- 2 Posts 2. Physical Instructor- 1 Post (Female preferred, good communication skills) 3. English & Social Studies Teacher- 2 Post (Fluent in English knowledge) 4. Kannada & Social Studies Teacher- 1 Post (Fluent in Kannada and English and should be able to teach Hindi) Qualifications: B.A./ B.Sc + B.Ed with a Master's degree. Requirement: All candidates must have strong English communication skills. Passion for teaching and child development. Applications with resume and documents should reach the school by 17th May 2025. Email Id: loyolablr@gmail.com For any queries contact 9538730271

NEW MILLENNIUM SCHOOL
Horamavu Agara, Bangalore-560043.
[Affiliated to CISCE New Delhi]
Invites application for the following positions from suitably qualified and experienced full time Teachers.
History and Civics – Middle and Senior School
Physical Education Teacher
[Football & Basketball]
And Librarian
Send your CV to newmillenniumschool@gmail.com
Walk in interview between 8 am to 12.30 pm on a working day.
Contact: 86605 41421 / 7892839366
Visit: www.newmillenniumschool.com

REQUIRED EXPERIENCED Candidates to Handle Primary & High School Sections with DEd, BEd (English/ SS/ Science) Qualification: Any Degree with good fluency for Primary Section. Contact: Jnanavahini Vidya Samsthe (R) JVS #8 BEML Layout 8th Main Road Basaveswarnagar Bengaluru-79 Email: jvsschool@gmail.com 9343745526

General

REQUIRED ANY Graduate for Marketing & Diploma in Electricals for Technical Support. Age Limit :- 30- 35 Years, with 3 years experience in scientific field & Any Graduate for Office Assistant. Age limit :- 30 Years Contact:- The Industrial & Laboratory Equipment Co. BGL9448039931 or stores.bgl@ileco.in

WANTED ENGLISH & Kannada Typist for an Advocate office at Jayanagar. Whatsapp Resume to:- 9448359935.

Drivers

ಡ್ರೈವರರು ಬೇಕಾಗಿದ್ದಾರೆ
ಬೆಂಗಳೂರು ನಗರದೊಳಗೆ ಚಲಾಯಿಸಲು.
TATA 407 ಮತ್ತು TATA ACE ಕಮರ್ಷಿಯಲ್ ಗಾಡಿಗಳಿಗೆ
ಕೆಲಸದ ಸಮಯ: ಸೋಮ–ಶನಿವಾರ ಬೆಳಗ್ಗೆ 9 – 6.30 ತನಕ
ಸಂದರ್ಶನಕ್ಕೆ ಆಧಾರ್, ಡಿ.ಎಲ್ ಮತ್ತು ಫೋಟೋ ಸಮೇತ ಬನ್ನಿ:
ಪ್ಯಾನ್ ಆಫೀಸ್ ಸಿಸ್ಟಮ್ಸ್ ಪ್ರೈ.ಲಿ.
ನಂ. 5, ಒಂದನೇ "ಅ" ಕ್ರಾಸ್, ಬಿಸ್ಮಿಲ್ಲಾನಗರ್, ಬನ್ನೇರುಘಟ್ಟ ರಸ್ತೆ ಕ್ರಾಸ್, ಬೆಂಗಳೂರು–29.
Ph: 9341221125
ಬೆಂಗಳೂರಿನ ಹೊರಗೆ ವಾಸಿಸುವರು, ದಯವಿಟ್ಟು ಕರೆ ಮಾಡಬೇಡಿ

ADMISSION CORNER
ಕ್ಲಾಸಿಫೈಡ್ಸ್

VLS INTERNATIONAL SCHOOL
(Estd: 2007) AFFILIATED TO CISCE, KA 227 ICSE Syllabus
#7/1, 7th B Main, 3rd Stage, 4th Block, Sharada Colony, Basaveshwarnagar, Bengaluru-560079
Ph: 080-23481564

Admissions open
Play Home to Grade 10 for 2025-26
Rigorous curriculum aligned with standards including individual attention, Modern Amenities, Value based and Quality Education with Music, Art, drama, sports, Unique clubs and more.
100 % results for 13 consecutive years

EDUCATION CORNER

R.E.S. POLYTECHNIC
Estd: 1986 - Recognised by Govt. of Karnataka & AICTE
10th Pass / What Next ???
JOIN DIPLOMA IN: ♦ Computer Science ♦ IS ♦ Civil ♦ Mechanical ♦ Automobile ♦ Electrical ♦ Electronics ♦ Fashion Tech ♦ Commerce (CP)
After Diploma can join JOB / 2nd year Engg OR Any Degree through LATERAL ENTRY QUOTA
PUC Pass Join 2 yrs Diploma Engineering
PUC Fail Join 3 yrs Diploma Engineering
EVENING / WEEKEND CLASSES
Available for working Professionals to EE
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466
RES-25603

PERSONAL

Change of Name

CHANGE OF NAME
I, **MUHAMMAD USMAN HIDAYATHULLAH SHAREEF** residing at No.14, Galipura 3, Chamarajanagar, Chamarajanagar District-571313, have changed my name to **MOHAMMED USMAN SHAREEF,** vide affidavit dated 06-05-2025 before Notary C. Sharada, Bengaluru.

CHANGE OF NAME
I, **A Primila,** D/o JC 899, Sub Hony LT, Late R Anthony Doss, R/at JCOS Colony, 3rd Cross, Near Banaswadi Railway Station, Vivekananda Nagara, Bengaluru North, Bengaluru-560033, have changed my name from **A PRIMILA** to **A REGINA PREMILA** and my D.O.B is mentioned in the service records as 06-01-1958 **instead of 06-06-1959,** vide affidavit dated 02.05.2025, before notary Y.R. Chandrasekar, Bengaluru.

REAL ESTATE SELLING

Flat

Kanakapura Road

NEW FLATS Kanakapura Road near Forum Mall, Konanakunte Metro. Swimming Pool, Club house. 2 BHK/ 3 BHK. Good Construction. Anika Maverick Projects:- Sowmya:- 9342247637.

RENTAL PROPERTIES

Accommodation Available

Commercial

RENT PLUG-N-PLAY Ground Floor Office 40-Seater & 4th Floor Office 45-Seater With Lifts, Parking, DG-Power`Ups, Power-Backup on Kanakapura Road, Near JPNagar Metro Opp To Pillar-74 Suitable For IT/ITES/Office. Phone-9901453477

BUILDERS ESSENTIAL

Interior/Exterior

FURNITURE FOR sale. Good Condition teak wood elegant custom made Household furniture for sale. Genuine buyers contact 9663301222

TOURS & TRAVEL

Travel

VISIT BHUTAN, the most Wonderful Country with Expert Guide and Best Arrangements. GANESH SHENOY 8970126393

BUSINESS

Business to Business

Business

FOR BUSINESS Takeovers Solutions, Arranging Funds for Mega Projects in Bangalore. Contact: Dr. Swamy Naidu, MBA (U.S.A) Anika Project Consultants, Bangalore:- 9342247637.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD | ಪ್ರಜಾವಾಣಿ
Classifieds
More value, more impact
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
For more details contact:
+91 9731810277 | +91 9886213331
+91 9845114560 | +91 9900428036
080- 45557163/164
*Conditions apply

ಬೆಂಗಳೂರಿನಲ್ಲಿ ಬುಧವಾರ ನಡೆದ 'ಆಪರೇಷನ್ ಅಭ್ಯಾಸ' ವೇಳೆ ಮೊಳಗಿದ ಸೈರನ್‌ಗೆ ಕಿವಿ ಮುಚ್ಚಿಕೊಂಡ ಪುಟಾಣಿಗಳು

ಎಸ್‌ಎಂವಿಟಿ ರೈಲ್ವೆ ನಿಲ್ದಾಣದಲ್ಲಿ ಆರ್‌ಪಿಎಫ್, ಆರ್‌ಪಿಎಸ್‌ಎಫ್ ಹಾಗೂ ಜಿಆರ್‌ಪಿ ಸಿಬ್ಬಂದಿ ಭದ್ರತೆ ಪರಿಶೀಲನೆ ನಡೆಸಿದರು

ಯುದ್ಧದ ಸನ್ನಿವೇಶ: ಸ್ವರಕ್ಷಣೆ ತಾಲೀಮು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ರಕ್ಷಣಾ ಇಲಾಖೆ ಹಾಗೂ ಗೃಹ ಇಲಾಖೆಯ ನಿರ್ದೇಶನದ ಮೇರೆಗೆ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಆವರಣದಲ್ಲಿ ನಾಗರಿಕರಿಗೆ ತುರ್ತು ಪರಿಸ್ಥಿತಿ ಎದುರಿಸುವ ಜಾಗೃತಿ ಕವಾಯತು 'ಆಪರೇಷನ್ ಅಭ್ಯಾಸ' ಹಲಸೂರಿನಲ್ಲಿ ಬುಧವಾರ ಸಂಜೆ ನಡೆಯಿತು.

ರಕ್ಷಣಾ ಕಾರ್ಯಾಚರಣೆ ವೀಕ್ಷಿಸಿದ ಬಳಿಕ ಗೃಹ ಸಚಿವ ಪರಮೇಶ್ವರ ಅವರು ಮಾತನಾಡಿ, 'ದೇಶದ ರಕ್ಷಣೆಯ ಪರಿಸ್ಥಿತಿ ಯಾವ ರೀತಿ ಇದೆ ಎನ್ನುವುದು ಎಲ್ಲರಿಗೂ ತಿಳಿದಿದೆ. 1971ರಲ್ಲಿ ಇಂತಹದ್ದೇ ಸಂದರ್ಭ ಎದುರಾಗಿತ್ತು. ಆಗ ದೇಶದಲ್ಲಿ ಆಗಿರುವ ಘಟನೆಗಳನ್ನು ನೆನಪಿಸಿಕೊಳ್ಳಬಹುದು. ಅಂತಹದ್ದೇ ಸಂದರ್ಭ ನಮಗೆ ಈಗ ಬಂದಿದೆ. ಇತ್ತೀಚೆಗೆ ಕಾಶ್ಮೀರದಲ್ಲಿ ನಡೆದ ಘಟನೆ ಪ್ರತಿಯೊಬ್ಬ ಭಾರತೀಯನಿಗೆ ನೋವನ್ನು ಉಂಟು ಮಾಡಿದೆ. 26 ಜನರ ಮೇಲೆ ಏಕಾಏಕಿ ದಾಳಿ ನಡೆಸಿದರು. ಅಮಾಯಕ ಜನರು, ಮಕ್ಕಳ ಮೇಲೆ ಹತ್ಯೆ ಮಾಡಿರುವುದನ್ನು ಜ್ಞಾಪಿಸಿಕೊಂಡರೆ ನೋವಾಗುತ್ತದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಯುದ್ಧದ ಛಾಯೆ ಇಡೀ ಭಾರತದಲ್ಲಿ ಆವರಿಸಿದೆ. ಭಾರತ ಪಾಕಿಸ್ತಾನದ ಮೇಲೆ ಯುದ್ಧಕ್ಕೆ ಹೋಗಬಹುದು ಅಥವಾ ಪಾಕಿಸ್ತಾನ ಭಾರತದ ಮೇಲೆ ಯುದ್ಧಕ್ಕೆ ಬರಬಹುದು ಎಂಬ ಛಾಯೆ ಮೂಡಿದೆ. ಇದಕ್ಕೆ ನಾವೆಲ್ಲ ತಯಾರಿ ಮಾಡಿಕೊಳ್ಳಬೇಕಿದೆ' ಎಂದು ಹೇಳಿದರು.

'ಸಾರ್ವಜನಿಕರಿಗೆ ಅರಿವು ಮೂಡಿಸಬೇಕು ಎಂದು ಕೇಂದ್ರ ಸರ್ಕಾರ ಎಲ್ಲ ರಾಜ್ಯಗಳಿಗೆ ಸೂಚನೆ ನೀಡಿದೆ. ನಾಗರಿಕರನ್ನು ಯಾವ ರೀತಿ ರಕ್ಷಣೆ ಮಾಡಬೇಕು. ಸಾರ್ವಜನಿಕರ ಜವಾಬ್ದಾರಿಗಳೇನು, ತುರ್ತು ಸಂದರ್ಭದಲ್ಲಿ ಶಾಂತಿ ಪಾಲನೆ ಮಾಡುವುದು ಹೇಗೆ? ಗಾಯಾಳುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವುದರಿಂದ ಹಿಡಿದು, ಪರಿಸ್ಥಿತಿಯನ್ನು ಯಾವ ರೀತಿ ನಿಭಾಯಿಸಬೇಕು ಎಂಬುದನ್ನು 'ಆಪರೇಷನ್ ಅಭ್ಯಾಸ' ಮೂಲಕ ಅರಿವು ಮೂಡಿಸುವ ಅಗತ್ಯ ಇದೆ' ಎಂದರು.

ಸಂಸದ ಕೆ.ಸುಧಾಕರ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆಯ ಡಿಜಿಪಿ ಪ್ರಶಾಂತ್ ಕುಮಾರ್ ಠಾಕೂರ್, ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ, ಗೃಹ ಇಲಾಖೆಯ ಕಾರ್ಯದರ್ಶಿ ಎಸ್.ರವಿ ಹಾಜರಿದ್ದರು.

ಹೆಚ್ಚಿದ ಭದ್ರತೆ

ನಗರದ ಹಲವು ಪ್ರದೇಶದಲ್ಲಿ ಭದ್ರತೆ ಹೆಚ್ಚಿಸಲಾಗಿದೆ. ಮೆಜೆಸ್ಟಿಕ್, ಸಂಗೊಳ್ಳಿ ರಾಯಣ್ಣ, ಯಶವಂತಪುರ, ಕಂಟೋನ್ಮೆಂಟ್, ಕೆ.ಆರ್. ಪುರ ರೈಲ್ವೆ ನಿಲ್ದಾಣಗಳಲ್ಲಿ ಭದ್ರತೆಗೆ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಎಸ್‌ಎಂವಿಟಿಯಲ್ಲಿ ಕ್ಷಿಪ್ರ ಕಾರ್ಯಾಚರಣೆ ಪಡೆಯ ಸಿಬ್ಬಂದಿ ಬುಧವಾರ ಪರಿಶೀಲನೆ ನಡೆಸಿದರು.

ಯುದ್ಧದ ಸಂದರ್ಭದಲ್ಲಿ ಯಾವ ಊರಲ್ಲಿ ಏನಾಗುತ್ತದೆ ಎಂಬುದು ಗೊತ್ತಾಗುವುದಿಲ್ಲ. ಅಂತಹ ಸಂದರ್ಭ ಬರಬಾರದು

ಜಿ.ಪರಮೇಶ್ವರ, ಗೃಹ ಸಚಿವ

'ಆಪರೇಷನ್ ಅಭ್ಯಾಸ' ವೇಳೆ ರಕ್ಷಣಾ ಸಿಬ್ಬಂದಿ ಅಣಕು ಕಾರ್ಯಾಚರಣೆಯಲ್ಲಿ ಸೈರೆನ್ ಶಬ್ದ ಕೇಳಿ ಕಿವಿಮುಚ್ಚಿಕೊಂಡರು

ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್.ಜಿ.

'ಆಪರೇಷನ್ ಅಭ್ಯಾಸ' ವೇಳೆ ರಕ್ಷಣಾ ಸಿಬ್ಬಂದಿ ಅಣಕು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು

ಸೈರನ್

ಹಲಸೂರು ಕೆರೆಯಲ್ಲಿ ಅಣಕು ಕಾರ್ಯಾಚರಣೆ ನಡೆಯಿತು

ಹೂಡಿಕೆ: ₹1.92 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಹೂಡಿಕೆ ಹೆಸರಿನಲ್ಲಿ ನಗರದ ವ್ಯಕ್ತಿಯೊಬ್ಬರಿಗೆ ಒಟ್ಟು ₹1.92 ಕೋಟಿ ವಂಚನೆ ಮಾಡಿದ್ದು, ಈ ಬಗ್ಗೆ ಕೇಂದ್ರ ಸೈಬರ್ ಅಪರಾಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'2021ರಲ್ಲಿ ಅಪರಿಚಿತ ವ್ಯಕ್ತಿ ದೂರುದಾರರಿಗೆ ಕರೆ ಮಾಡಿ ಪರಿಚಯ ಮಾಡಿಕೊಂಡಿದ್ದರು. ಹಣ ಹೂಡಿಕೆ ಮಾಡಿ ಹೆಚ್ಚು ಲಾಭಗಳಿಸಬಹುದು ಎಂದು ಆಮಿಷವೊಡ್ಡಿದ್ದರು. ಇದನ್ನು ನಂಬಿದ ದೂರುದಾರ, ಆರೋಪಿಯು ಕಳಿಸಿದ ವಿವಿಧ ಬ್ಯಾಂಕ್ ಖಾತೆಗಳ ಮೂಲಕ ₹1.50 ಕೋಟಿ ಹೂಡಿಕೆ ಮಾಡಿದ್ದರು' ಎಂದು ಪೊಲೀಸರು ತಿಳಿಸಿದರು.

'2024ರಲ್ಲಿ ಅದೇ ವ್ಯಕ್ತಿ ದೂರು ದಾರರಿಗೆ ಕರೆ ಮಾಡಿ, 2021ರಲ್ಲಿ ನೀವು ಹೂಡಿಕೆ ಮಾಡಿದ್ದ ₹1.50 ಕೋಟಿಗೆ ₹5.89 ಕೋಟಿ ಲಾಭ ಬಂದಿದೆ. ಈ ಹಣ ನಿಮ್ಮ ಖಾತೆಗೆ ಜಮೆ ಮಾಡಲು ಐಟಿ ಸೇರಿದಂತೆ ವಿವಿಧ ಶುಲ್ಕಗಳನ್ನು ಪಾವತಿಸಲು ₹42.37 ಲಕ್ಷ ಪಾವತಿಸಬೇಕು ಎಂದಿದ್ದರು' ಎಂದು ಪೊಲೀಸರು ಹೇಳಿದರು.

'₹5.89 ಕೋಟಿ ಪಡೆದುಕೊಳ್ಳಲು ಆರೋಪಿ ಹೇಳಿದ ಬ್ಯಾಂಕ್ ಖಾತೆಗೆ ದೂರುದಾರರು ಹಂತ–ಹಂತವಾಗಿ ₹42.37 ಲಕ್ಷ ಪಾವತಿಸಿದ್ದಾರೆ. ಆದರೆ, ಯಾವುದೇ ರೀತಿ ಹಣ ಖಾತೆಗೆ ಜಮೆ ಆಗಿಲ್ಲ. ಆರೋಪಿಗಳನ್ನು ಸಂಪರ್ಕಕ್ಕೂ ಸಿಗಲಿಲ್ಲ. ಆದ್ದರಿಂದ ನನಗೆ ಮೋಸ ಮಾಡಿರುವ ಅಪರಿಚಿತ ಆರೋಪಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ದೂರುದಾರ ಪ್ರಕರಣ ದಾಖಲಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೆಲಸ ಕೊಡಿಸುವುದಾಗಿ ₹1.3 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯಲ್ಲಿ (ಇಸ್ರೊ) ಗ್ರಾಫಿಕ್ ಡಿಸೈನರ್ ಕೆಲಸ ಕೊಡಿಸುವುದಾಗಿ ನಂಬಿಸಿ ಯುವಕನೊಬ್ಬನಿಗೆ ₹1.3 ಕೋಟಿ ವಂಚನೆ ಮಾಡಲಾಗಿದೆ.

ಈ ಬಗ್ಗೆ ಅನ್ನಪೂರ್ಣೇಶ್ವರಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಂಚನೆಯ ಆರೋಪದ ಮೇಲೆ ಲಗ್ಗೆರೆಯ ಪಿ. ಪ್ರಭಾಕರ್ ಹಾಗೂ ಅವರ ಪತ್ನಿ ವಿನುತಾ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಲಾಗುತ್ತಿದೆ ಎಂದು ಅನ್ನಪೂರ್ಣೇಶ್ವರಿನಗರ ಠಾಣೆಯ ಪೊಲೀಸರು ತಿಳಿಸಿದರು.

'ಪ್ರಭಾಕರ್ ಹಾಗೂ ವಿನುತಾ ಅವರು 2024ರ ಅಗಸ್ಟ್‌ನಲ್ಲಿ ದೂರುದಾರರ ಮನೆಗೆ ತೆರಳಿ, ಇಸ್ರೊ ಸಂಸ್ಥೆಯಲ್ಲಿ ಗ್ರಾಫಿಕ್ ಡಿಸೈನರ್ ಕೆಲಸ ಕೊಡಿಸುವುದಾಗಿ ನಂಬಿಸಿದ್ದರು. ನಂತರ ದೂರುದಾರರಿಂದ ₹ 37 ಲಕ್ಷ ಪಡೆದು ನೇಮಕಾತಿ ಪತ್ರ ಬರಲಿದೆ ಎಂದು ತಿಳಿಸಿದ್ದರು. ಆದರೆ ಅಕ್ಟೋಬರ್ ತಿಂಗಳು ಕಳೆದರೂ ನೇಮಕಾತಿ ಪತ್ರ ಬಾರದ ಕಾರಣ, ದೂರದಾರರು ಆರೋಪಿಗಳನ್ನು ಕೇಳಿದರು. ಆಗ ಆರೋಪಿಗಳು ಇನ್ನೂ ₹23 ಲಕ್ಷ ನೀಡುವಂತೆ ಬೇಡಿಕೆ ಇಟ್ಟಿದ್ದರು' ಎಂದು ಪೊಲೀಸರು ಹೇಳಿದರು.

'₹23 ಲಕ್ಷ ನೀಡದಿದ್ದರೆ ನಿಮಗೆ ಕೆಲಸವೂ ಸಿಗುವುದಿಲ್ಲ, ನೀವು ಹಿಂದೆ ನೀಡಿದ್ದ ₹37 ಲಕ್ಷವೂ ಸಿಗುವುದಿಲ್ಲವೆಂದು ಆರೋಪಿಗಳು ಬ್ಲಾಕ್‌ಮೇಲ್ ಮಾಡಿದ್ದರು. ₹23 ಲಕ್ಷ ನೀಡಲು ಒಪ್ಪಿದ ದೂರುದಾರರನ್ನು ಆರೋಪಿಗಳು ಇಸ್ರೊ ಸಂಸ್ಥೆಗೆ ಕರೆದುಕೊಂಡು ಹೋಗಿದ್ದರು. ಇಸ್ರೊ ಸಂಸ್ಥೆಯಲ್ಲಿದ್ದ ಸುಪ್ರತೊ ಪಾಥೊ, ರೆಡ್ಡಪ್ಪ, ರಾಜೇಂದ್ರ, ಎ.ಕೆ. ರಾಜೇಂದ್ರ ಅವರಿಗೆ ₹23 ಲಕ್ಷ ನೀಡುವಂತೆ ತಿಳಿಸಿದ್ದರು. ಇದೇ ರೀತಿ ನನಗೆ ಇಲ್ಲಿಯವರೆಗೆ ಒಟ್ಟು ₹1.3 ಕೋಟಿ ಪಡೆದು ವಂಚನೆ ಮಾಡಿದ್ದಾರೆ' ಎಂದು ದೂರಿನಲ್ಲಿ ಉಲ್ಲೇಖಿಸಿರುವುದಾಗಿ ಪೊಲೀಸರು ತಿಳಿಸಿದರು.

'ಆರೋಪಿಗಳು ಇಸ್ರೊ ಸಂಸ್ಥೆಯ ನಕಲಿ ನೇಮಕಾತಿ ಪತ್ರ ಮತ್ತಿತರ ದಾಖಲೆಗಳನ್ನು ನೀಡಿದ್ದಾರೆ. ಆದರೆ, ನನಗೆ ಯಾವುದೇ ರೀತಿಯ ಕೆಲಸವನ್ನೂ ಕೊಡಿಸಿಲ್ಲ. ಆದ್ದರಿಂದ ಪ್ರಭಾಕರ್, ವಿನುತಾ ಹಾಗೂ ಇತರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ದೂರುದಾರರು ಪ್ರಕರಣ ದಾಖಲಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೊಬೈಲ್ ಜಗಳ ಕೊಲೆಯಲ್ಲಿ ಅಂತ್ಯ

ಬೆಂಗಳೂರು: ಕಳ್ಳತನ ಮಾಡಿದ್ದ ಮೊಬೈಲ್ ಹಿಂದಿರುಗಿಸುವ ವಿಚಾರಕ್ಕೆ ನಡೆದ ಜಗಳವು ಮೆಕ್ಯಾನಿಕ್ ಎಂಜಿನಿಯರ್‌ವೊಬ್ಬರ ಕೊಲೆಯಲ್ಲಿ ಅಂತ್ಯವಾಗಿದೆ.

ಬಿಹಾರ ಮೂಲದ ಅಬ್ದುಲ್ ಮಲೀಕ್ (52) ಮೃತಪಟ್ಟವರು.

ಈ ಬಗ್ಗೆ ಮಾಗಡಿ ರಸ್ತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿ ಮನೋಜ್‌ನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ರಾಜಾಜಿನಗರ ಕೈಗಾರಿಕಾ ಪ್ರದೇಶದಲ್ಲಿ ನಡೆದ ಜಗಳದಲ್ಲಿ ಅಬ್ದುಲ್ ಮೃತಪಟ್ಟಿದ್ದಾರೆ. ಅವರ ಸಹಾಯಕ ಜೈನುಲ್ ಗಾಯಗೊಂಡಿದ್ದಾರೆ. ಅಬ್ದುಲ್ ಮಲೀಕ್ ಮತ್ತು ಜೈನುಲ್ ಅವರು ಐದು ವರ್ಷಗಳಿಂದ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಆರೋಪಿ ಮನೋಜ್ 'ಪೋರ್ಟರ್' ಕಂಪನಿಯಲ್ಲಿ ಡೆಲಿವರಿ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದ. ಅಬ್ದುಲ್ ಅವರ ಕಚೇರಿಗೆ ತೆರಳಿದ್ದ ಮನೋಜ್ ಮೊಬೈಲ್‌ವೊಂದನ್ನು ಕಳ್ಳತನ ಮಾಡಿದ್ದ. ಈ ದೃಶ್ಯವನ್ನು ಅಬ್ದುಲ್ ಮತ್ತು ಜೈನುಲ್ ಸಿ.ಸಿ.ಟಿ.ವಿ.ಯಲ್ಲಿ ನೋಡಿದ್ದರು. ಮೊಬೈಲ್ ಹಿಂದಿರುಗಿಸುವಂತೆ ಮನೋಜ್‌ಗೆ ಒತ್ತಾಯಿಸಿದರು. ಆದರೆ ಆರೋಪಿ ಮೊಬೈಲ್ ನೀಡದೇ ಅಬ್ದುಲ್ ಮತ್ತು ಜೈನುಲ್ ಮೇಲೆ ಹಲ್ಲೆ ನಡೆಸಿದ್ದಾನೆ. ನಂತರ ಅಬ್ದುಲ್‌ಗೆ ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾನೆ. ಜೈನುಲ್‌ಗೆ ಗಂಭೀರ ಗಾಯಗಳಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಅವರು ಬುಧವಾರ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಮಹಿಳಾ ರೋಗಿಗಳು, ಮಹಿಳಾ ಸಿಬ್ಬಂದಿ ಸಮಸ್ಯೆಗಳ ಕುರಿತು ವಿಚಾರಿಸಿದರು ಪ್ರಜಾವಾಣಿ ಚಿತ್ರ

ಕೆ.ಆರ್. ಮಾರುಕಟ್ಟೆ ಮೂಲಸೌಕರ್ಯದ ಕೊರತೆ: ವೈಜ್ಞಾನಿಕವಾಗಿ ವಿಲೇವಾರಿಯಾಗದ ತ್ಯಾಜ್ಯ

ದುರ್ವಾಸನೆ ನಡುವೆಯೇ ವ್ಯಾಪಾರ ವಹಿವಾಟು

• ಖಲೀಲ ಅಹ್ಮದ ಶೇಖ

ಬೆಂಗಳೂರು: ಮಾರುಕಟ್ಟೆಯ ಪ್ರಾಂಗಣದಲ್ಲಿ ಬಿದ್ದಿರುವ ಕಸದ ರಾಶಿ, ಮಳೆ ಬಂದಾಗಲೆಲ್ಲ ಕೆಸರು ಗದ್ದೆಯಾಗುವ ಅಂಗಳ, ಮಾರುಕಟ್ಟೆಯ ಹಿಂಭಾಗದ ರಸ್ತೆಯ ಮೇಲೆ ಹರಿಯುವ ಒಳಚರಂಡಿ ನೀರಿನಿಂದ ಇಡೀ ಪ್ರದೇಶವೇ ಗಬ್ಬೆದ್ದು ನಾರುತ್ತಿದೆ. ನಿತ್ಯ ಈ ದುರ್ವಾಸನೆಯ ನಡುವೆಯೇ ವ್ಯಾಪಾರ ವಹಿವಾಟು ನಡೆಯುತ್ತಿದೆ.

ಕೆ.ಆರ್. ಮಾರುಕಟ್ಟೆಯ ಮುಖ್ಯ ಕಟ್ಟಡದ ಹಿಂಭಾಗದಿಂದ ಚಿಕ್ಕಪೇಟೆ ಮೆಟ್ರೊ ನಿಲ್ದಾಣಕ್ಕೆ ಹೋಗುವ ಮಾರ್ಗದಲ್ಲಿರುವ ಹಣ್ಣು, ತರಕಾರಿ, ಸೊಪ್ಪು ಮತ್ತು ತೆಂಗಿನಕಾಯಿ ವ್ಯಾಪಾರಿಗಳು ಇಂಥ ಅಶುಚಿತ್ವದ ಪರಿಸರದಲ್ಲೇ ವ್ಯಾಪಾರ ಮಾಡುವ ಪರಿಸ್ಥಿತಿ ಇದೆ.

ದುರ್ವಾಸನೆಗೆ ಕಾರಣವೇನು?: ಕೆ.ಆರ್. ಮಾರುಕಟ್ಟೆಯ ಕಟ್ಟಡದ ನೆಲಮಹಡಿಯ ವಾಹನ ನಿಲುಗಡೆ ಸ್ಥಳದಲ್ಲಿ ನಿತ್ಯ ತ್ಯಾಜ್ಯ ಸಂಗ್ರಹವಾಗುತ್ತದೆ. ಬಿಬಿಎಂಪಿಯವರು ತ್ಯಾಜ್ಯವನ್ನು ಜೆಸಿಬಿ ಮೂಲಕ ಲಾರಿಗೆ ತುಂಬಿಸುವ ಸಂದರ್ಭದಲ್ಲಿ ಅದನ್ನು ಕಂಪ್ರೆಸ್ ಮಾಡುತ್ತಾರೆ. ಆಗ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಪೈಪ್ ಮೂಲಕ ಚರಂಡಿಗೆ ಬಿಡುವ ಬದಲು ನಿತ್ಯ ರಸ್ತೆಯಲ್ಲಿ ಹರಿಸಲಾಗುತ್ತಿದೆ. ಇದೇ ದುರ್ವಾಸನೆ ಹೊಮ್ಮಲು ಕಾರಣವಾಗಿದೆ. ಮುಖ್ಯ ಕಟ್ಟಡದಿಂದ ಚರಂಡಿಗೆ ಜೋಡಿಸಿಬೇಕಿದ್ದ ಪೈಪ್ ಹಾಗೆಯೇ ಬಿಟ್ಟಿರುವುದರಿಂದ, ತ್ಯಾಜ್ಯ ನೀರು ರಸ್ತೆಗೆ ಹರಿಯುತ್ತಿದೆ.

'ವಾಹನ ನಿಲುಗಡೆ ಸ್ಥಳದಲ್ಲಿ ಸಂಗ್ರಹಿಸಿದ ತ್ಯಾಜ್ಯವನ್ನು ಬಿಬಿಎಂಪಿ ಸಿಬ್ಬಂದಿ ಜೆಸಿಬಿ ಮೂಲಕ ಮೇಲ್ಭಾಗಕ್ಕೆ ತೆಗೆದುಕೊಂಡು ಬಂದು ರಸ್ತೆಯಲ್ಲಿ ಸುರಿಯುತ್ತಾರೆ. ಸುರಿದ ತ್ಯಾಜ್ಯವನ್ನು ಇನ್ನೊಂದು ಜೆಸಿಬಿಯ ಮೂಲಕ ಟ್ರಕ್‌ಗಳಲ್ಲಿ ತುಂಬಿಸಿ ವಿಲೇವಾರಿ ಮಾಡಲಾಗುತ್ತಿದೆ. ಹಸಿ ಕಸ, ಒಣ ಕಸವೆಂದು ವಿಂಗಡಿಸದೇ ಅವೈಜ್ಞಾನಿಕ ವಾಗಿ ವಿಲೇವಾರಿ ಮಾಡುತ್ತಿದ್ದಾರೆ. ಇದೂ ನಮಗೆ ದೊಡ್ಡ ಸಮಸ್ಯೆಯಾಗಿದೆ' ಎಂದು ವ್ಯಾಪಾರಿಗಳು ದೂರಿದರು.

'ತೆಂಗಿನಕಾಯಿ, ಹಣ್ಣು, ತರಕಾರಿ, ಹೂವು ಸೇರಿದಂತೆ ವಿವಿಧ ಬಗೆಯ ಪದಾರ್ಥಗಳನ್ನು ಮಾರಾಟ ಮಾಡುವ ಹತ್ತಾರು ಅಂಗಡಿಗಳು ಇಲ್ಲಿ ಇವೆ. ಮಾರುಕಟ್ಟೆಗೆ ಸಂಪರ್ಕಿಸುವ ಎಲ್ಲ ಮಾರ್ಗಗಳಲ್ಲೂ ಅಷ್ಟೇ ಪ್ರಮಾಣದ ವ್ಯಾಪಾರ ನಡೆಯುತ್ತಿದೆ. ಆದರೆ, ಇಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಸ್ವಚ್ಛತೆ ಎಂಬುದು ಮರಿಚೀಕೆಯಾಗಿದೆ. ಶೌಚಾಲಯಗಳಿಗೆ ಮೂಗು ಮುಚ್ಚಿಕೊಂಡು ಹೋಗಬೇಕಾಗಿದೆ' ಎಂದು ಅವರು ಅಳಲು ತೋಡಿಕೊಂಡರು.

ರಸ್ತೆಯಲ್ಲೇ ಮಳೆ ನೀರು: ಸ್ವಲ್ಪ ಜೋರಾಗಿ ಮಳೆ ಸುರಿದರೆ ಸಾಕು ಮಾರುಕಟ್ಟೆಯ ಸಂಪರ್ಕದ ರಸ್ತೆಗಳೆಲ್ಲ ಕಾಲುವೆಗಳಂತಾಗುತ್ತವೆ. ಅವೆನ್ಯೂ ರಸ್ತೆಯಲ್ಲಿ ಮಳೆ ಬಂದಾಗ ಒಳಚರಂಡಿಯ ಚೇಂಬರ್‌ಗಳು ತೆರೆದುಕೊಂಡು ಕೊಳಚೆ ನೀರು ಹೊರಗೆ ಹರಿಯುತ್ತದೆ. ಮಾರುಕಟ್ಟೆಯಲ್ಲಿ ಸರಿಯಾದ ಚರಂಡಿ ವ್ಯವಸ್ಥೆಯೇ ಇಲ್ಲ ಎಂದು ವ್ಯಾಪಾರಿಗಳು ಪರಿಸ್ಥಿತಿ ವಿವರಿಸಿದರು.

'ರಸ್ತೆಯಲ್ಲಿ ಹರಿಯುವ ದ್ರವತ್ಯಾಜ್ಯದ ಸಮಸ್ಯೆಯನ್ನು ಬಗೆಹರಿಸುವಂತೆ ಬಿಬಿಎಂಪಿ ಸಿಬ್ಬಂದಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಇದು ನಮ್ಮ ವಿಭಾಗಕ್ಕೆ ಬರುವುದಿಲ್ಲವೆಂದು ಅಧಿಕಾರಿಗಳು ಒಬ್ಬರ ಮೇಲೆ ಇನ್ನೊಬ್ಬರು ಆರೋಪಿಸುತ್ತಿದ್ದಾರೆ. ಎರಡು ವರ್ಷಗಳಿಂದ ಈ ಸಮಸ್ಯೆ ಹಾಗೆಯೇ ಉಳಿದಿದೆ' ಎಂದು ನಿಂಬೆ ಹಣ್ಣಿನ ವ್ಯಾಪಾರಿ ಸರೋಜಮ್ಮ ಅಳಲು ತೋಡಿಕೊಂಡರು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಬಿಎಸ್‌ಡಬ್ಲ್ಯುಎಂಎಲ್‌ನ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ರಮಾಮಣಿ ಅವರಿಗೆ ಕರೆ ಮಾಡಿದರು ಸ್ವೀಕರಿಸಲಿಲ್ಲ.

ಕೆ.ಆರ್. ಮಾರುಕಟ್ಟೆ ಹಿಂಭಾಗದ ರಸ್ತೆಯಲ್ಲಿ ತ್ಯಾಜ್ಯ ಸುರಿದಿರುವುದು

ವಾಹನ ನಿಲುಗಡೆ ತಾಣವೂ ಗಲೀಜು

ಕೆ.ಆರ್. ಮಾರುಕಟ್ಟೆಯ ವಾಹನ ನಿಲುಗಡೆ ಸ್ಥಳದಲ್ಲಿ ತ್ಯಾಜ್ಯ ಸಂಗ್ರಹಿಸಲಾಗುತ್ತಿದೆ. ಇದರಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದೆ. ಹಣ ಪಾವತಿಸಿ ವಾಹನ ನಿಲುಗಡೆ ಮಾಡುವ ಗ್ರಾಹಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಬೀಡಾಡಿ ದನಗಳ ವಿಶ್ರಾಂತಿ ತಾಣವಾಗಿಯೂ ಮಾರ್ಪಟ್ಟಿದೆ. ಸಾರ್ವಜನಿಕರು ಇಲ್ಲಿಯೇ ಮಲ ಮೂತ್ರ ವಿಸರ್ಜನೆ ಮಾಡುತ್ತಿದ್ದಾರೆ ಎಂದು ವ್ಯಾಪಾರಿಗಳು ದೂರುತ್ತಾರೆ.

ವ್ಯಾಪಾರಿಗಳು ಏನಂತಾರೆ?

ಇಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕು. ರಸ್ತೆಯಲ್ಲಿ ಹರಿಯುವ ತ್ಯಾಜ್ಯ ನೀರಿನ ಸಮಸ್ಯೆಗೆ ಮೊದಲು ಪರಿಹಾರ ಕಲ್ಪಿಸಬೇಕು.

ಕೃಷ್ಣಮೂರ್ತಿ, ನಿಂಬೆಹಣ್ಣಿನ ವ್ಯಾಪಾರಿ

ತ್ಯಾಜ್ಯದಿಂದ ರೋಗ–ರುಜಿನಗಳು ಹರಡುವ ಸಾಧ್ಯತೆ ಇದೆ. ಇದು ನಮ್ಮ ವ್ಯಾಪಾರ–ವಹಿವಾಟಿಗೂ ಸಮಸ್ಯೆ ಮಾಡುತ್ತಿದೆ. ನಿತ್ಯ ರಸ್ತೆಯಲ್ಲಿ ಹರಿಯುವ ದ್ರವತ್ಯಾಜ್ಯವನ್ನು ಮೋರಿಗೆ ಹರಿಯುವಂತೆ ಕೊಳವೆ ಜೋಡಿಸಬೇಕು.

ಸೆಂಥಿಲ್, ವ್ಯಾಪಾರಿ

ಕೆ.ಆರ್. ಮಾರುಕಟ್ಟೆಯ ಮುಖ್ಯ ಕಟ್ಟಡದ ಹಿಂಭಾಗದಲ್ಲಿ ತ್ಯಾಜ್ಯದಿಂದ ಉತ್ಪತ್ತಿಯಾಗುವ ದ್ರವತ್ಯಾಜ್ಯ ರಸ್ತೆಯಲ್ಲಿ ಹರಿಯುತ್ತಿದೆ. ಇದರಿಂದ ಇಡೀ ಮಾರುಕಟ್ಟೆ ಪ್ರದೇಶವೇ ಗಬ್ಬೆದ್ದು ನಾರುತ್ತಿದೆ. ಈ ಬಗ್ಗೆ ಬಿಬಿಎಂಪಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ.

ಮಂಜುನಾಥ್, ತೆಂಗಿನಕಾಯಿ ವ್ಯಾಪಾರಿ

ಮೆಟ್ರೊ: ಸ್ವಯಂ ಸೇವಾ ಟಿಕೆಟ್ ಯಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಯೂ ಆರ್ ಆಧಾರಿತ ಟಿಕೆಟ್‌ಗಳನ್ನು ತ್ವರಿತವಾಗಿ ಮತ್ತು ಸಂಪರ್ಕರಹಿತವಾಗಿ ವಿತರಿಸಲು ಅನುಕೂಲವಾಗುವಂತೆ ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ಹತ್ತು ಸ್ವಯಂ ಸೇವಾ ಟಿಕೆಟ್ ಯಂತ್ರಗಳನ್ನು ಸ್ಥಾಪಿಸಲಾಗಿದೆ.

ಏಕ ಪ್ರಯಾಣ ಟೋಕನ್‌ಗಳನ್ನು ಕ್ರಮೇಣ ಬದಲಾಯಿಸಲು ಈ ಯಂತ್ರಗಳನ್ನು ಅಳವಡಿಸಲಾಗಿದೆ. ಪ್ರಯಾಣಿಕರು 30 ಸೆಕೆಂಡ್‌ಗಳಿಗಿಂತ ಕಡಿಮೆ ಅವಧಿಯಲ್ಲಿ ಟಿಕೆಟ್ ಪಡೆಯಬಹುದು.

ಹೀಗೆ ಮಾಡಿ: ಪ್ರಯಾಣಿಕರು ಡ್ರಾಪ್-ಡೌನ್ ಮೆನು ಅಥವಾ ನಕ್ಷೆಯನ್ನು ಉಪಯೋಗಿಸಿ ತಲುಪಬೇಕಾದ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಬೇಕು. ನಂತರ ಪ್ರಯಾಣಿಕರ ಸಂಖ್ಯೆಯನ್ನು ನಮೂದಿಸಿ, ಪ್ರಯಾಣದರ ಪರಿಶೀಲಿಸಬೇಕು. ಯಾವುದೇ ಯುಪಿಐ ಆಧಾರಿತ ಮೊಬೈಲ್ ಆ್ಯಪ್‌ಗಳ ಮೂಲಕ ದರ ಪಾವತಿ ಮಾಡಬಹುದು. ಪಾವತಿ ಪೂರ್ಣಗೊಂಡ ಕೂಡಲೇ ಪೇಪರ್ ಕ್ಯೂಆರ್ ಟಿಕೆಟ್ ಪ್ರಕಟವಾಗುತ್ತದೆ.

ಈ ಕ್ಯೂಆರ್ ಟಿಕೆಟ್‌ಗಳನ್ನು ನಿಲ್ದಾಣದ ಪ್ರವೇಶ ಮತ್ತು ನಿರ್ಗಮನ ದ್ವಾರಗಳಲ್ಲಿ ಬಳಸಬೇಕು. ಪ್ರಯಾಣ ಮುಗಿಸಿದ ನಂತರ, ಟಿಕೆಟ್‌ಗಳನ್ನು ನಿಗದಿತ ಕಸದ ತೊಟ್ಟಿಗಳಲ್ಲಿ ಹಾಕಬೇಕು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಬೈಯಪ್ಪನಹಳ್ಳಿ ಮೆಟ್ರೋ ನಿಲ್ದಾಣದಲ್ಲಿ ಸ್ಥಾಪಿಸಲಾದ ಸ್ವಯಂ ಸೇವಾ ಕ್ಯೂಆರ್ ಟಿಕೆಟ್ ಯಂತ್ರ

'ವಚನಾಸ್ ಇನ್ ಫ್ರೆಂಚ್' ಪುಸ್ತಕದ ಬಿಡುಗಡೆ

ಮುಂದಿನ ವರ್ಷ ಬ್ಯಾಸ್ಟಿಲ್ ಡೇ ಬೆಂಗಳೂರಿನಲ್ಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫ್ರೆಂಚ್ ಇತಿಹಾಸವಿರುವ 'ಬ್ಯಾಸ್ಟಿಲ್ ಡೇ'ಯನ್ನು ಮುಂದಿನ ವರ್ಷ ಬೆಂಗಳೂರು ನಗರದಲ್ಲಿ ಆಚರಿಸಲಾಗುವುದು ಎಂದು ಫ್ರಾನ್ಸ್‌ನ ರಾಯಭಾರಿ ಮಾರ್ಕ್ ಲ್ಯಾಮಿ ತಿಳಿಸಿದರು.

ನಗರದ 'ಅಲಯನ್ಸ್ ಫ್ರಾನ್ಸೈಸ್'ನಲ್ಲಿ ಬುಧವಾರ 'ವಚನಾಸ್ ಇನ್ ಫ್ರೆಂಚ್' ಪುಸ್ತಕದ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ನಾನು ಬೆಂಗಳೂರಿನಲ್ಲಿ ಬ್ಯಾಸ್ಟಿಲ್ ಡೇ ಆಚರಣೆಯ ಪರವಾಗಿದ್ದೇನೆ. ಈ ಕಾರ್ಯಕ್ರಮದ ರೂಪರೇಷೆ ತಯಾರಿಸಲಾಗುವುದು. ಕಾರ್ಯಕ್ರಮಕ್ಕಾಗಿ ವ್ಯವಸ್ಥಾಪನಾ ಸಿದ್ಧತೆ ಮತ್ತು ಭದ್ರತಾ ಸಿದ್ಧತೆಗಳನ್ನು ರೂಪಿಸಬೇಕಿದೆ' ಎಂದು ಹೇಳಿದರು.

'ಭಾರತ ಮತ್ತು ಫ್ರಾನ್ಸ್ ಸಂಬಂಧಗಳು ಹಿಂದಿನಿಂದಲೂ ಅತ್ಯುತ್ತಮ ಸ್ಥಿತಿಯಲ್ಲಿದೆ. ಈ ಕಾರ್ಯಕ್ರಮ ಎರಡು ದೇಶಗಳ ನಡುವಿನ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಸಂಬಂಧವನ್ನು ಬಲಪಡಿಸುತ್ತದೆ' ಎಂದು ತಿಳಿಸಿದರು.

ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಮಾತನಾಡಿ, 'ಬಸವಣ್ಣರ ವಚನಗಳಲ್ಲಿ ಇರುವ ಅಂತಃಶಕ್ತಿಯು ಅವುಗಳನ್ನು ಜಾಗತಿಕ ಮಟ್ಟಕ್ಕೆ ತಲುಪಿಸಿದೆ' ಎಂದರು.

'ಭಾರತ-ಫ್ರಾನ್ಸ್ ನಡುವಿನ ಎಲ್ಲ ಕ್ಷೇತ್ರಗಳಲ್ಲಿ ಸಂಬಂಧವನ್ನು ಬಲಪಡಿಸಲು ಅಲಯನ್ಸ್ ಫ್ರಾನ್ಸೆಸ್ ಸದಾ ಪ್ರಯತ್ನಿಸುತ್ತದೆ' ಎಂದು ಅಲಯನ್ಸ್ ಫ್ರಾನ್ಸೆಸ್ ಅಧ್ಯಕ್ಷ ಚಿನ್ಮಯ ಚಿಗಟೇರಿ ಹೇಳಿದರು.

ಗಾಯಕಿ ಎಂ.ಡಿ. ಪಲ್ಲವಿ ವಚನಗಳನ್ನು ಹಾಡಿದರು. ರಜನಿ ಶಿವರಾಮ ಅವರು ವಚನಗಳನ್ನು ಕನ್ನಡ ಮತ್ತು ಫ್ರೆಂಚ್ ಎರಡೂ ಭಾಷೆಗಳಲ್ಲಿ ಹಾಡಿದರು. ಅಲಯನ್ಸ್ ಫ್ರಾನ್ಸೆಸ್ ನಿರ್ದೇಶಕ ಜೀನ್ ಮಾರ್ಕ್ ಪ್ರಾಸ್ತಾವಿಕವಾಗಿ ಮಾತನಾಡಿದರು.

'ವಚನಾಸ್ ಇನ್ ಫ್ರೆಂಚ್' ಕೃತಿ ಬಿಡುಗಡೆ ಸಮಾರಂಭದಲ್ಲಿ ಜೀನ್ ಮಾರ್ಕ್, ಮಾರ್ಕ್ ಲ್ಯಾಮಿ, ಚಿನ್ಮಯ ಚಿಗಟೇರಿ, ಅರವಿಂದ ಜತ್ತಿ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ರೈಲ್ವೆ: ಹಳೆಯ ಯೋಜನೆಗಳಿಗೆ ಶೀಘ್ರ ಚಾಲನೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ರಾಜ್ಯದಲ್ಲಿ ಬಾಕಿ ಇರುವ ಮೂರು ದಶಕಗಳಷ್ಟು ಹಳೆಯ ರೈಲ್ವೆ ಯೋಜನೆಗಳನ್ನು ₹39,000 ಕೋಟಿ ವೆಚ್ಚದಲ್ಲಿ ಪೂರ್ಣಗೊಳಿಸಲಾಗುತ್ತಿದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರು ತಿಳಿಸಿದರು.

'ಹಂತ ಹಂತವಾಗಿ 2028ರ ಒಳಗಾಗಿ ಎಲ್ಲ ಬಾಕಿ ಕಾಮಗಾರಿಗಳನ್ನೂ ಮುಗಿಸುವ ತೀರ್ಮಾನ ಕೈಗೊಂಡಿದ್ದೇವೆ' ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಇದೇ 15ರಂದು ಗದಗ – ತಳಕಲ್ – ಕುಷ್ಟಗಿ ಮಾರ್ಗದಲ್ಲಿ ರೈಲು ಸೇವೆಗೆ ಚಾಲನೆ ನೀಡಲಾಗುತ್ತಿದೆ. ಸಿಂಧನೂರು – ರಾಯಚೂರಿನ ರೈಲು ಮಾರ್ಗದ ಕಾಮಗಾರಿ ನಡೆದಿದೆ. ಲೋಕಾಪುರ – ಕಜ್ಜಿದೋಣಿ ರೈಲ್ವೆ ಹಳಿ ಕಾಮಗಾರಿಯೂ ನಡೆಯುತ್ತಿದೆ ಎಂದರು.

ಬೆಂಗಳೂರಿನಲ್ಲಿ 'ಆಪರೇಷನ್ ಅಭ್ಯಾಸ' ತಾಲೀಮು • ತುರ್ತು ಸಂದರ್ಭದ ಮುನ್ನೆಚ್ಚರಿಕೆ ಕುರಿತು ಜಾಗೃತಿ

ಸೈರನ್ ಎಚ್ಚರಿಕೆ, ರಕ್ಷಣೆ ಕ್ರಮದ ಪ್ರಾತ್ಯಕ್ಷಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಹಲಸೂರಿನಲ್ಲಿ ಬುಧವಾರ ಸಂಜೆ 4ರ ಸುಮಾರಿಗೆ ಸೈರನ್ ಮೊಳಗುತ್ತಿದ್ದಂತೆಯೇ ಸುತ್ತಮುತ್ತಲ ನಿವಾಸಿಗಳಲ್ಲಿ ಗಾಬರಿ... ಆ ಮಾರ್ಗದಲ್ಲಿ ತೆರಳುತ್ತಿದ್ದ ಪ್ರಯಾಣಿಕರು, ಪಾದಚಾರಿಗಳು, ವಾಹನ ಸವಾರರಲ್ಲಿ ಒಂದುಕ್ಷಣ ದಿಗಿಲು. ಸೈರನ್ ಆದ ಕೆಲವೇ ಕ್ಷಣಗಳಲ್ಲಿ ಅಗ್ನಿಶಾಮಕ ದಳದ ವಾಹನಗಳು ಹಾಗೂ ಆಂಬುಲೆನ್ಸ್‌ಗಳೂ ತಮ್ಮದೇ ಶಬ್ದವನ್ನು ಹೊರಡಿಸುತ್ತಾ ಅಲ್ಲಿಗೆ ದಾಂಗುಡಿ ಇಟ್ಟವು... ವಾಹನದಿಂದ ಧುಮುಕಿದ ರಕ್ಷಣಾ ಸಿಬ್ಬಂದಿ ಕಾರ್ಯಾಚರಣೆಗೆ ಇಳಿದರು...

ಈ ದೃಶ್ಯವು ಹಲಸೂರು ಕೆರೆಯ ಪಕ್ಕದಲ್ಲಿರುವ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಗೃಹರಕ್ಷಕ ದಳ ಮತ್ತು ನಾಗರಿಕ ರಕ್ಷಣೆ, ರಾಜ್ಯ ವಿಪತ್ತು ಸ್ಪಂದನಾ ಪಡೆಯ ಪೊಲೀಸ್ ಮಹಾನಿರ್ದೇಶಕ ಕಚೇರಿ ಆವರಣದಲ್ಲಿ ಕಂಡುಬಂತು.

ಪಹಲ್ಗಾಮ್ ದಾಳಿಯ ಬಳಿಕ ಪಾಕಿಸ್ತಾನ ಜೊತೆಗಿನ ಸಂಬಂಧವು ವಿಷಮಗೊಂಡಿದ್ದು, ಒಂದು ವೇಳೆ ವಾಯುದಾಳಿ ನಡೆದರೆ ನಾಗರಿಕರು ಹೇಗೆ ಸ್ವರಕ್ಷಣೆ ಮಾಡಿಕೊಳ್ಳಬೇಕು ಎಂಬುದರ ಕುರಿತು 'ಆಪರೇಷನ್ ಅಭ್ಯಾಸ್' ಹೆಸರಿನಲ್ಲಿ ನಾಗರಿಕರ ಸ್ವರಕ್ಷಣೆ ತಾಲೀಮು ನಡೆಸಲಾಯಿತು.

ಕಾಲ್ಪನಿಕ ತುರ್ತು ಪರಿಸ್ಥಿತಿ ಸೃಷ್ಟಿಸಿ ನಾಗರಿಕರ ರಕ್ಷಣೆ, ಅಗ್ನಿಶಮನ ಹಾಗೂ ಗಾಯಾಳುಗಳಿಗೆ ಪ್ರಥಮ ಚಿಕಿತ್ಸೆ ನೀಡುವುದು ಸೇರಿದಂತೆ ವಿವಿಧ ಪ್ರಕಾರದ ತಾಲೀಮು ಮಾಡಲಾಯಿತು.

ಹಲಸೂರು ಕೆರೆಯ ದ್ವೀಪದಲ್ಲಿ ಸಿಲುಕಿಕೊಂಡವರನ್ನು ರಕ್ಷಿಸುವ ಕುರಿತ ತಾಲೀಮು ನಡೆಸಲಾಯಿತು. ಎರಡು ಬೋಟ್‌ಗಳಲ್ಲಿ ತೆರಳಿದ ರಕ್ಷಣಾ ಸಿಬ್ಬಂದಿ ದ್ವೀಪದಲ್ಲಿ ಸಿಲುಕಿದ್ದ ಗಾಯಾಳುಗಳನ್ನು ರಕ್ಷಿಸಿ ಕೆರೆಯ ದಡಕ್ಕೆ ಕರೆತಂದು ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಸಾಗಿಸಿದರು. ಮೈದಾನದಲ್ಲೇ ನಿರ್ಮಿಸಿದ್ದ ತುರ್ತು ಚಿಕಿತ್ಸಾ ಘಟಕದಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ ಆಸ್ಪತ್ರೆಗೆ ರವಾನೆ ಮಾಡಲಾಯಿತು. ಇದಕ್ಕೆ ಎಂ.ಎಸ್.ರಾಮಯ್ಯ ಆಸ್ಪತ್ರೆ ವೈದ್ಯರು ನೆರವು ನೀಡಿದರು.

ಆವರಣದಲ್ಲಿದ್ದ ಕಟ್ಟಡದ ಎರಡನೇ ಮಹಡಿಯಲ್ಲಿ ಸಿಲುಕಿದ್ದವರನ್ನು ಹಗ್ಗ, ಸ್ಟ್ರೆಚರ್ ಬಳಸಿ ರಕ್ಷಿಸಲಾಯಿತು. ದಾಳಿ ನಡೆದು ಕಟ್ಟಡ ಹೊತ್ತಿ ಉರಿದರೆ ಬಹುಮಹಡಿ ಕಟ್ಟಡದಲ್ಲಿ ಇದ್ದವರನ್ನು ಸ್ಕೈಲಿಫ್ಟ್ ಕ್ರೇನ್ ನೆರವಿನಿಂದ ರಕ್ಷಣೆ ಮಾಡುವ ವಿಧಾನವನ್ನೂ ಪ್ರದರ್ಶಿಸಲಾಯಿತು. ಬಹುಮಹಡಿ ಕಟ್ಟಡದಲ್ಲಿ ಬೆಂಕಿ ನಂದಿಸುವ ತಾಲೀಮು ನಡೆಸಲಾಯಿತು.

ಕಟ್ಟಡದ ಮೇಲೆ ಬಾಂಬ್ ದಾಳಿ ನಡೆದು ಬೆಂಕಿ ಉರಿಯುತ್ತಿತ್ತು. ಸ್ಥಳಕ್ಕೆ ಬಂದ ಅಗ್ನಿಶಾಮಕದ ದಳದ ಸಿಬ್ಬಂದಿ, ಅಲ್ಯುಮಿನಿಯಂ ಏಣಿಯ ಸಹಾಯದಿಂದ ಕಟ್ಟಡವನ್ನೇರಿ ಜನರನ್ನು ರಕ್ಷಿಸುವ ಕಾರ್ಯಾಚರಣೆ ನಡೆಸುವುದನ್ನು ಪ್ರದರ್ಶಿಸಲಾಯಿತು. ಸುಸಜ್ಜಿತವಾದ ಏರಿಯಲ್ ಲ್ಯಾಡರ್ ವಾಹನದ ಮೂಲಕ ರಕ್ಷಣೆ ಮಾಡುವುದನ್ನೂ ಸಿಬ್ಬಂದಿ ಪ್ರದರ್ಶಿಸಿದರು.

ಅಗ್ನಿಶಾಮಕ ಹಾಗೂ ತುರ್ತು ಸೇವಾ ಇಲಾಖೆ ಸಿಬ್ಬಂದಿ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್), ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್), ನಾಗರಿಕ ರಕ್ಷಣಾ ಸಿಬ್ಬಂದಿ, ಗೃಹರಕ್ಷದಳ, ಎನ್‌ಸಿಸಿ, ಎನ್‌ಎಸ್‌ಎಸ್, ಸ್ಕೌಟ್ಸ್ ಆ್ಯಂಡ್ ಗೈಡ್ಸ್, ರೆಡ್‌ಕ್ರಾಸ್, ಪೊಲೀಸ್ ಸಿಬ್ಬಂದಿ ಪಾಲ್ಗೊಂಡಿದ್ದರು.

'ಪ್ರತಿ ನಿಮಿಷವೂ ಮುಖ್ಯ'

ಜಲಾಶಯಗಳು, ಅಣು ಸ್ಥಾವರ, ಕೈಗಾರಿಕಾ ಪ್ರದೇಶ ಹಾಗೂ ಹೆಚ್ಚು ಜನವಸತಿ ಪ್ರದೇಶ ಆಧರಿಸಿ ತಾಲೀಮು ನಡೆಸಲು ಸ್ಥಳಗಳ ಆಯ್ಕೆ ಮಾಡಲಾಗಿದೆ. ರಾಯಚೂರಿನಲ್ಲಿ ಉಷ್ಣ ವಿದ್ಯುತ್ ಸ್ಥಾವರ ಇದೆ. ಕಾರವಾರದಲ್ಲಿ ಅಣುಸ್ಥಾವರ ಇದೆ. ದೇಶದ ಆರ್ಥಿಕ ವ್ಯವಸ್ಥೆಗೆ ಹೆಚ್ಚು ತೆರಿಗೆ ನೀಡುವ ಶಕ್ತಿ ಬೆಂಗಳೂರಿಗೆ ಇದೆ. ಇಂತಹ ಸ್ಥಳಗಳನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂಬುದನ್ನು ಆಧರಿಸಿ ಗುರುತಿಸಲಾಗಿದೆ. ರಕ್ಷಣೆ ಕಾರ್ಯಾಚರಣೆ ಸಂದರ್ಭದಲ್ಲಿ ಪ್ರತಿಯೊಂದು ನಿಮಿಷವೂ ಬಹಳ ಮುಖ್ಯ ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.

ಬೆಂಗಳೂರಿನಲ್ಲಿ ಬುಧವಾರ ನಡೆದ 'ಆಪರೇಷನ್ ಅಭ್ಯಾಸ' ವೇಳೆ ರಕ್ಷಣಾ ಸಿಬ್ಬಂದಿ ಕಟ್ಟಡದಲ್ಲಿ ಸಿಲುಕಿದ್ದವರನ್ನು ರಕ್ಷಿಸಿದ ದೃಶ್ಯ ಚಿತ್ರ: ಪ್ರಶಾಂತ್ ಎಚ್‌.ಜಿ.

ಸೈರನ್ ಮೊಳಗಿದರೆ ಏನು ಮಾಡಬೇಕು?

ವಾಯುದಾಳಿ ಆದಂತಹ ಸಂದರ್ಭಗಳಲ್ಲಿ ಎರಡು ನಿಮಿಷ (ಕೋಡ್ ರೆಡ್) ಏರಿಳಿತದಲ್ಲಿ ಸೈರನ್ ಮೊಳಗಲಿದೆ. ಆಗ ನಾಗರಿಕರು ಸುರಕ್ಷಿತ ಸ್ಥಳಕ್ಕೆ ತೆರಳಬೇಕು. ಒಂದು ನಿಮಿಷ (ಕೋಡ್ ಗ್ರೀನ್) ಸೈರನ್ ಮೊಳಗಿದರೆ, ಜನರು ತಮ್ಮ ಸ್ಥಳಕ್ಕೆ ವಾಪಸ್ ತೆರಳಬಹುದು ಎಂದರ್ಥ ಎಂದು ಅಗ್ನಿಶಾಮಕ ಇಲಾಖೆ ಅಧಿಕಾರಿಗಳು ತಿಳಿಸಿದರು.

ಬ್ಲಾಕ್ ಔಟ್

ನಾಗರಿಕ ರಕ್ಷಣೆ ತಾಲೀಮು ವೇಳೆ ಬ್ಲಾಕ್ ಔಟ್ ಕ್ರಮವನ್ನೂ ಪ್ರದರ್ಶಿಸಲಾಯಿತು. ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಡಿಜಿಪಿ ಕಚೇರಿ ಆವರಣದಲ್ಲಿ ಸಂಜೆ 6.40ರಿಂದ 7ರ ವರೆಗೆ ವಿದ್ಯುತ್ ದೀಪಗಳನ್ನು ಬಂದ್ ಮಾಡಿಸಿ ಬ್ಲಾಕ್‌ಔಟ್ ಕ್ರಮ ಹೇಗಿರಲಿದೆ ಎಂಬುದನ್ನು ಪ್ರದರ್ಶಿಸಲಾಯಿತು.

ರಾಯಚೂರು: ರೈಲ್ವೆಯಿಂದ ರಕ್ಷಣೆ ತಾಲೀಮು

ರಾಯಚೂರು: ದಕ್ಷಿಣ ಮಧ್ಯ ರೈಲ್ವೆ (ಎಸ್‌ಸಿಆರ್) ಗುಂತಕಲ್ ವಿಭಾಗದ ವ್ಯಾಪ್ತಿಗೆ ಬರುವ ರಾಯಚೂರು ರೈಲು ನಿಲ್ದಾಣದ ಮುಂಭಾಗದಲ್ಲಿ ಬುಧವಾರ ನಾಗರಿಕರ ರಕ್ಷಣೆ ಕುರಿತು ತಾಲೀಮು (ಮಾಕ್ ಡ್ರಿಲ್) ನಡೆಸಲಾಯಿತು.

ರೈಲ್ವೆ ಸಿವಿಲ್ ಡಿಫೆನ್ಸ್ ಅಧಿಕಾರಿಗಳ ಹಾಗೂ ಸಿಬ್ಬಂದಿ ತಂಡ ಮಾಕ್ ಡ್ರಿಲ್ ಮಾಡಿದೆ. ದೇಶದಲ್ಲಿ ಶತ್ರು ರಾಷ್ಟ್ರ ದಾಳಿ ನಡೆಸಿದ ಸಂದರ್ಭದಲ್ಲಿ ನಾಗರಿಕರ ರಕ್ಷಣೆ ಯಾವ ರೀತಿಯಲ್ಲಿ ಮಾಡಲಾಗುತ್ತದೆ ಎಂಬುದರ ಬಗ್ಗೆ ಅಣಕು ಪ್ರದರ್ಶನ ಮಾಡಲಾಯಿತು.

ಪಟಾಕಿ ಸಿಡಿಸಿ ಬಾಂಬ್ ದಾಳಿ ಎಂದು ಬಿಂಬಿಸಿ ಹಸಿರು ಹಾಗೂ ಕೆಂಪು ಬಾವುಟ ಪ್ರದರ್ಶಿಸಿ ನಾಗರಿಕರಿಗೆ ದಾಳಿಯ ಕುರಿತು ಡಂಗೂರ ಸಾರಲಾಯಿತು.

ಬಳಿಕ ದಾಳಿಯಿಂದ ಗಾಯಗೊಂಡು ನೆಲಕ್ಕೆ ಬಿದ್ದವರು ಚೀರಾಡುತ್ತಾ ಸಹಾಯಕ್ಕೆ ಕೋರಿದರು. ಅನೇಕರು ಕೈ ಕಾಲು, ತಲೆಗೆ ಗಾಯಗೊಂಡವರನ್ನು ತಮ್ಮ ಭುಜದ ಮೇಲೆ, ಸ್ಟ್ರೆಚರ್ ಮೂಲಕ ತುರ್ತು ಚಿಕಿತ್ಸಾ ಘಟಕಕ್ಕೆ ಸಾಗಿಸಿದರು. ಅಗತ್ಯ ಪ್ರಮಾಣದಲ್ಲಿ ಸ್ಟ್ರೆಚರ್ ಇಲ್ಲದ ವೇಳೆ ಪ್ಲಾಸ್ಟಿಕ್ ಚೀಲ, ಬಿದಿರಿನಿಂದ ತಯಾರಿಸಿದ ಸ್ಟ್ರೆಚರ್, ಹಗ್ಗವನ್ನು ಸ್ಟ್ರೆಚರ್ ತರಹ ಮಾಡಿ ಸಾಗಿಸುವ ಬಗ್ಗೆ ಹಾಗೂ ಅಲ್ಲಿಯೇ ಪ್ರಥಮ ಚಿಕಿತ್ಸೆ ಘಟಕ, ತುರ್ತು ಚಿಕಿತ್ಸಾ ಕೇಂದ್ರ ಸ್ಥಾಪಿಸಿ ಚಿಕಿತ್ಸೆ ವಿಧಾನ ತೋರಿಸಲಾಯಿತು.

ಮತ್ತೊಂದೆಡೆ ಅಗ್ನಿ ದುರಂತ ಸಂಭವಿಸಿದಾಗ ಯಾವ ರೀತಿಯಲ್ಲಿ ಬೆಂಕಿ ನಂದಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಕಟ್ಟಿಗೆಗಳಿಗೆ ಬೆಂಕಿ ಹೊತ್ತಿಸಿ ಪ್ರಾತ್ಯಕ್ಷಿಕೆ ನೀಡಲಾಯಿತು. ಜನರು ಪ್ರಜ್ಞೆ ಕಳೆದುಕೊಂಡಾಗ ರಕ್ಷಣೆ ಕಾರ್ಯ ಕುರಿತು ಅರಿವು ಮೂಡಿಸಲಾಯಿತು.

ರೈಲ್ವೆ ಪೊಲೀಸರು, ಸಿಬ್ಬಂದಿ ಹಾಗೂ ಸಾರ್ವಜನಿಕರು ಹಾಜರಿದ್ದರು.

ಸುದ್ದಿ 2 ನಿಮಿಷ

ಗಸ್ತು: ಎಲ್ಲ ಬೋಟ್‌ಗಳ ತಪಾಸಣೆ

ಕುಮಟಾ (ಉತ್ತರ ಕನ್ನಡ ಜಿಲ್ಲೆ): ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರು ದಾಳಿ ನಡೆಸಿದ ನಂತರ ಇಲ್ಲಿನ ಕರಾವಳಿ ಪಡೆ ಪೊಲೀಸರು ಅರಬ್ಬಿ ಸಮುದ್ರದಲ್ಲಿ ಸಂಚರಿಸುವ ಎಲ್ಲ ಬೋಟ್‌ಗಳನ್ನು ಕಟ್ಟುನಿಟ್ಟಾಗಿ ತಪಾಸಣೆ ನಡೆಸಿದ್ದಾರೆ.

'ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ ನಂತರ ಹಿರಿಯ ಅಧಿಕಾರಿಗಳ ಸೂಚನೆಯಂತೆ ಸಮುದ್ರದಲ್ಲಿ ಭದ್ರತೆ ಬಿಗಿಗೊಳಿಸಲಾಗಿದೆ.

ಹಿಂದೆ ಸಮುದ್ರದಲ್ಲಿ ಶಂಕಾಸ್ಪದ ಬೋಟ್‌ಗಳನ್ನು ಮಾತ್ರ ತಪಾಸಣೆ ಮಾಡಲಾಗುತ್ತಿತ್ತು. ಈಗ ಎಲ್ಲ ಯಾಂತ್ರೀಕೃತ ಹಾಗೂ ಮೀನುಗಾರಿಕಾ ಬೋಟ್‌ಗಳ ಕಡ್ಡಾಯ ತಪಾಸಣೆ ನಡೆಯಲಿದೆ. ದಾಖಲೆಗಳನ್ನೂ ಪರಿಶೀಲನೆ ಮಾಡಲಾಗುತ್ತಿದೆ' ಎಂದು ಕರಾವಳಿ ಕಾವಲು ಪಡೆಯ ಇನ್‌ಸ್ಪೆಕ್ಟರ್ ಇ.ಸಿ. ಸಂಪತ್ ತಿಳಿಸಿದರು.

'ಜನಾಕ್ರೋಶ' ಕೈಬಿಟ್ಟು ಪೂಜೆ

ಕೋಲಾರ: ರಾಜ್ಯ ಸರ್ಕಾರದ ವಿರುದ್ಧ ಬುಧವಾರ ಕೋಲಾರದಲ್ಲಿ ನಡೆಯಬೇಕಿದ್ದ ನಾಲ್ಕನೇ ಹಂತದ 'ಜನಾಕ್ರೋಶ ಯಾತ್ರೆ'ಯನ್ನು ಕೈಬಿಟ್ಟ ಬಿಜೆಪಿ ಒಗ್ಗಟ್ಟಿನ ಮಂತ್ರ ಜಪಿಸಿದೆ.

ಯಾತ್ರೆಗಾಗಿ ಬಿಜೆಪಿ ರಾಜ್ಯ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮತ್ತು ಇತರ ನಾಯಕರು ಬುಧವಾರ ಬೆಳಗ್ಗೆಯೇ ಕೋಲಾರಕ್ಕೆ ಬಂದರು.

ಆದರೆ, ಯಾತ್ರೆ ಕೈಗೊಳ್ಳುವ ಬದಲು ನಗರದ ಶಕ್ತಿದೇವತೆ ಕೋಲಾರಮ್ಮ ದೇಗುಲದಲ್ಲಿ ಭಾರತದ ಯೋಧರ ಒಳಿತಿಗಾಗಿ ಪೂಜೆ ಸಲ್ಲಿಸಿ ತೆರಳಿದರು.

'ಭಾರತ ಮಾತಾ ಕೀ ಜೈ, ಯೋಧರಿಗೆ ಜಯವಾಗಲಿ' ಎಂಬ ಘೋಷಗಳ ನಡುವೆ ಮುಖಂಡರು ತ್ರಿವರ್ಣಧ್ವಜಕ್ಕೆ ಪೂಜೆ ಸಲ್ಲಿಸಿದರು. ಕಾರ್ಯಕರ್ತರ ಜೊತೆ ವಿಜಯೇಂದ್ರ ತ್ರಿವರ್ಣ ಧ್ವಜ ಹಿಡಿದು ಸಂಭ್ರಮಿಸಿದರು. ಬಿಜೆಪಿ ಕಾರ್ಯಕರ್ತರು ಹಾಗೂ ರಾಜ್ಯದ ಜನರು ದೇಗುಲಗಳಲ್ಲಿ ಪೂಜೆ ಸಲ್ಲಿಸಿ ಸೈನಿಕರಿಗೆ ಶಕ್ತಿ ತುಂಬಲು ಪ್ರಾರ್ಥಿಸಬೇಕು ಎಂದು ಮನವಿ ಮಾಡಿದರು.

ಯೋಧರಿಗೆ ನೈತಿಕ ಸ್ಥೈರ್ಯ ತುಂಬಲು, ಒಗ್ಗಟ್ಟಾಗಿದ್ದೇವೆ ಎಂಬ ಸಂದೇಶವನ್ನು ಜಗತ್ತಿಗೆ ಸಾರಲು 'ಜನಾಕ್ರೋಶ ಯಾತ್ರೆ' ಕೈಬಿಡಲಾಗಿದೆ. ಆದರೆ, ಇಂತಹ ಸಂದರ್ಭದಲ್ಲೂ ಕಾಂಗ್ರೆಸ್‌ನವರು ಶಾಂತಿ ಸ್ಥಾಪನೆ ಮಂತ್ರ ಜಪಿಸುತ್ತಿದ್ದಾರೆ ಟೀಕಿಸಿದರು.

ಅದಿರು ಅಕ್ರಮ ರಫ್ತಿಗೆ ₹89 ಲಕ್ಷ ದಂಡ

ರಾಯಧನ ವಂಚಿಸಿ ಸಾಗಿಸಿದ್ದ ನಾಲ್ವರಿಗೆ 3 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸಪೇಟೆಯಿಂದ ಕಬ್ಬಿಣದ ಅದಿರನ್ನು ಕಾನೂನುಬಾಹಿರವಾಗಿ ಸಾಗಿಸಿ, ಬೇಲೇಕೇರಿ ಬಂದರಿನ ಮೂಲಕ ಅಕ್ರಮವಾಗಿ ರಫ್ತು ಮಾಡಿದ ಪ್ರಕರಣದಲ್ಲಿ ನಾಲ್ವರು ಅಪರಾಧಿಗಳಿಗೆ ಇಲ್ಲಿನ ಲೋಕಾಯುಕ್ತ ವಿಶೇಷ ನ್ಯಾಯಾಲಯವು, ಮೂರು ವರ್ಷ ಜೈಲು ಮತ್ತು ಒಟ್ಟು ₹89.05 ಲಕ್ಷ ದಂಡ ವಿಧಿಸಿದೆ.

ಬೇಲೇಕೇರಿ ಬಂದರಿನಲ್ಲಿ ಕಬ್ಬಿಣದ ಅದಿರು ಕಳ್ಳತನ ಪ್ರಕರಣದ ತನಿಖೆಯ ವೇಳೆ ರಾಜ್‌ದೇವ್ ಟ್ರಾನ್ಸ್‌ಪೋರ್ಟ್ ಎಂಬ ಕಂಪನಿಯು ಹೊಸಪೇಟೆಯಿಂದ ಸಾಗಿಸಿದ ಅದಿರು ಮತ್ತು ರಫ್ತು ಮಾಡಿದ ಪ್ರಮಾಣಕ್ಕೂ ತಾಳೆ ಇಲ್ಲದಿರುವ ಅಂಶ ಪತ್ತೆಯಾಗಿತ್ತು.

ಈ ಸಂಬಂಧ ಲೋಕಾಯುಕ್ತ ವಿಶೇಷ ತನಿಖಾ ತಂಡವು ರಾಜ್‌ದೇವ್ ಟ್ರಾನ್ಸ್‌ಪೋರ್ಟ್‌ನ ಮಾಲೀಕ ಡಿ.ಸುಖದೇವ್ ಸಿಂಗ್, ಮೈನ್‌ಕೋರ್ ರಿಸೋರ್ಸ್ ಲಿಮಿಟೆಡ್‌ನ ಸಾಥಕ್ ಅಬ್ದುಲ್ ಖಾದರ್, ಅಬ್ದುಲ್ ರಾಝಿಕ್ ಮತ್ತು ಎಸ್.ಸೈಯದ್ ಇಬ್ರೂನು ಮೌಲಾನಾ ವಿರುದ್ಧ ಗಣಿ ಮತ್ತು ಖನಿಜ ಅಭಿವೃದ್ಧಿ ಮತ್ತು ನಿಯಂತ್ರಣ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿತ್ತು. ರಾಜ್‌ದೇವ್ ಟ್ರಾನ್ಸ್‌ಪೋರ್ಟ್ ಮತ್ತು ನಾಲ್ವರ ವಿರುದ್ಧ ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಕಳ್ಳತನ, ವಂಚನೆ, ಕಳ್ಳಸಾಗಣೆ ಆರೋಪ ಹೊರಿಸಿತ್ತು.

2009ರಿಂದ 2010ರ ನಡುವೆ ಈ ನಾಲ್ವರು, ರಾಜ್‌ದೇವ್ ಟ್ರಾನ್ಸ್‌ಪೋರ್ಟ್ ಕಂಪನಿಯ ಮೂಲಕ ಸುಮಾರು 1 ಲಕ್ಷ ಟನ್‌ಗಳಷ್ಟು ಅದಿರನ್ನು ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ಹುಲುಕುಂಟೆ ಸ್ಟಾಕ್‌ಯಾರ್ಡ್‌ನಿಂದ ಬೇಲೇಕೇರಿ ಬಂದರಿಗೆ ಕಾನೂನುಬದ್ಧವಾಗಿ ಸಾಗಿಸಿದ್ದಾರೆ. ಕಾನೂನುಬದ್ಧವಾಗಿಯೇ ರಫ್ತು ಮಾಡಿದ್ದಾರೆ. ಇದರ ಮಧ್ಯೆ 1,850 ಟನ್ ಅದಿರನ್ನು ರಾಯಧನ ಪಾವತಿಸದೇ ಸಾಗಿಸಿ, ರಫ್ತು ಮಾಡಿದ್ದಾರೆ. ಈ ಮೂಲಕ ರಾಜ್ಯ ಸರ್ಕಾರಕ್ಕೆ ₹58 ಲಕ್ಷ ನಷ್ಟ ಉಂಟುಮಾಡಿದ್ದಾರೆ ಎಂದು ತನಿಖಾ ತಂಡ ತಿಳಿಸಿತ್ತು.

ಈ ಪ್ರಕರಣದ ವಿಚಾರಣೆ ನಡೆಸಿದ್ದ ಲೋಕಾಯುಕ್ತ ವಿಶೇಷ ನ್ಯಾಯಾಲಯವು ಇದೇ ಏ. 29ರಂದು ತೀರ್ಪು ನೀಡಿದ್ದು, ನಾಲ್ವರೂ ತಪ್ಪೆಸಗಿದ್ದಾರೆ ಎಂದಿದೆ. ನಾಲ್ವರಿಗೂ ನಾಲ್ಕು ವಿವಿಧ ಆರೋಪಗಳ ಅಡಿಯಲ್ಲಿ ಪ್ರತ್ಯೇಕವಾಗಿ 6 ತಿಂಗಳು, ಮೂರು ವರ್ಷ, ಮೂರು ವರ್ಷ ಮತ್ತು ಎರಡು ವರ್ಷಗಳ ಸೆರೆವಾಸ ವಿಧಿಸಿದ್ದು, ಅಷ್ಟೂ ಶಿಕ್ಷೆಯನ್ನು ಏಕಕಾಲದಲ್ಲಿ ಜಾರಿ ಮಾಡಬೇಕು ಎಂದು ತಿಳಿಸಿದೆ.

ಶಿಕ್ಷೆ ವಿವರ

- ಅಪರಾಧಿಕ ಸಂಚು ರೂಪಿಸಿದ ಸಂಬಂಧ ನಾಲ್ವರಿಗೂ ಆರು ತಿಂಗಳು ಜೈಲು ಶಿಕ್ಷೆ ಮತ್ತು ತಲಾ ₹20,000 ದಂಡ. ದಂಡ ಪಾವತಿಸಲು ವಿಫಲವಾದರೆ ಒಂದು ತಿಂಗಳು ಜೈಲು
- ಅದಿರು ಕಳ್ಳತನದ ಸಂಬಂಧ ನಾಲ್ವರಿಗೂ 3 ವರ್ಷ ಜೈಲು ಮತ್ತು ತಲಾ ₹50,000 ದಂಡ. ದಂಡ ಪಾವತಿಸಲು ವಿಫಲವಾದರೆ ಐದು ತಿಂಗಳು ಜೈಲು
- ನಕಲಿ ದಾಖಲೆ ಸೃಷ್ಟಿ ಮತ್ತು ವಂಚನೆಗಾಗಿ ನಾಲ್ವರಿಗೂ ಮೂರು ವರ್ಷ ಜೈಲು ಮತ್ತು ಎಲ್ಲರಿಗೂ ಸೇರಿ ಒಟ್ಟು ₹85 ಲಕ್ಷ ದಂಡ. ದಂಡ ಪಾವತಿಸಲು ವಿಫಲವಾದರೆ ಆರು ತಿಂಗಳು ಜೈಲು
- ಗಣಿ ಮತ್ತು ಖನಿಜ ಅಭಿವೃದ್ಧಿ-ನಿಯಂತ್ರಣ ಕಾಯ್ದೆಯ 21ಮತ್ತು 4(1ಎ) ಸೆಕ್ಷನ್ ಅಡಿಯಲ್ಲಿ ನಾಲ್ವರಿಗೂ ಎರಡು ವರ್ಷ ಜೈಲು ಮತ್ತು ತಲಾ ₹25,000 ದಂಡ. ದಂಡ ಪಾವತಿಸಲು ವಿಫಲವಾದರೆ ಐದು ತಿಂಗಳು ಜೈಲು
- ರಾಜ್‌ದೀಪ್ ಟ್ರಾನ್ಸ್‌ಪೋರ್ಟ್ ಕಂಪನಿಗೆ ₹25,000 ದಂಡ

ಮತ್ತೆ ಪ್ರಶ್ನೆಪತ್ರಿಕೆ ಸೋರಿಕೆ ಶಂಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ವೃಂದದ 384 ಹುದ್ದೆಗಳಿಗೆ ನೇಮಕಾತಿಗೆ ಬುಧವಾರ ಬೆಳಿಗ್ಗೆ ನಡೆದ ಪತ್ರಿಕೆ 3 'ಸಾಮಾನ್ಯ ಅಧ್ಯಯನ-2' ಮತ್ತು ಮಧ್ಯಾಹ್ನ ನಡೆದ ಪತ್ರಿಕೆ 4 'ಸಾಮಾನ್ಯ ಅಧ್ಯಯನ-3' ಪ್ರಶ್ನೆಪತ್ರಿಕೆ ಸೋರಿಕೆ ಕುರಿತು ಶಂಕೆ ವ್ಯಕ್ತಪಡಿಸಿ ಕೆಪಿಎಸ್‌ಸಿ ಕಾರ್ಯದರ್ಶಿಗೆ ಕೆಲವು ಅಭ್ಯರ್ಥಿಗಳು ದೂರು ನೀಡಿದ್ದಾರೆ.

ಕೋರ್ಟ್ ಆದೇಶದ ಅನ್ವಯ ಮುಖ್ಯಪರೀಕ್ಷೆ ಬರೆಯಲು ಅವಕಾಶ ಪಡೆದಿದ್ದ ಅಭ್ಯರ್ಥಿಗಳು, ಕಸ್ತೂರಬಾ ನಗರದ ಬಿಬಿಎಂಪಿ ಪಿಯು ಸಂಯೋಜಿತ ಕಾಲೇಜಿಗೆ ಬಂದಿದ್ದ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂದು ಅಭ್ಯರ್ಥಿಗಳು ಶಂಕೆ ವ್ಯಕ್ತಪಡಿಸಿದ್ದಾರೆ.

'ಪ್ರಶ್ನೆಪತ್ರಿಕೆ ಲಕೋಟೆಯ ಒಳಗಿನ ಹಳದಿ ಸ್ಟಿಕ್ಕರ್ ಅನ್ನು ಮೊದಲೇ ತೆರೆಯಲಾಗಿತ್ತು. ಒಂದೇ ಪ್ರಶ್ನೆಪತ್ರಿಕೆಗೆ ವಿಭಿನ್ನ ಹಳದಿ ಸ್ಟಿಕ್ಕರ್ ಲಗತ್ತಿಸಿರುವುದೂ ಕಂಡುಬಂದಿದೆ. ಇದನ್ನು ಪರೀಕ್ಷಾ ಕೊಠಡಿ ಮೇಲ್ವಿಚಾರಕರು, ಪ್ರಾಂಶುಪಾಲರು ದೃಢೀಕರಿಸಿದ್ದಾರೆ ಎಂದಿದ್ದಾರೆ.



ಭಾಷಾಂತರ ದೋಷ: ಪತ್ರಿಕೆ 3 'ಸಾಮಾನ್ಯ ಅಧ್ಯಯನ-2' ಪ್ರಶ್ನೆಪತ್ರಿಕೆಯಲ್ಲಿ ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರಿಸಿದ ಪ್ರಶ್ನೆಯಲ್ಲಿ ಭಾಷಾಂತರ ದೋಷ ಕಂಡುಬಂದಿದೆ. ಪ್ರಶ್ನೆಪತ್ರಿಕೆಯ 9ನೇ ಪ್ರಶ್ನೆಯಲ್ಲಿ 'ಪಬ್ಲಿಕ್ ಸರ್ವೀಸ್ ಕಮಿಷನ್' ಎಂದಿರುವುದನ್ನು 'ಲೋಕಸೇವಾ ಆಯೋಗಗಳು' ಎಂದು ಭಾಷಾಂತರಿಸುವ ಬದಲು 'ಸಾರ್ವಜನಿಕ ಸೇವಾ ಆಯೋಗಗಳು' ಎಂದು ಮಾಡಲಾಗಿದೆ. 10ನೇ ಪ್ರಶ್ನೆಯಲ್ಲಿ ಇಂಗ್ಲಿಷ್‌ನಲ್ಲಿ 'ಪಿಎಂ ಗರೀಬ್ ಕಲ್ಯಾಣ್ ಯೋಜನಾ' ಎಂದಿರುವುದು ಕನ್ನಡಕ್ಕೆ ಭಾಷಾಂತರಗೊಂಡಾಗ 'ಪ್ರಧಾನ ಮಂತ್ರಿ ಗ್ರಾಮೀಣ ಕಲ್ಯಾಣ ಯೋಜನೆಗಳು' ಎಂದಾಗಿದೆ. ಈ ಬಗ್ಗೆಯೂ ಅಭ್ಯರ್ಥಿಗಳು ಆಕ್ಷೇಪಿಸಿದ್ದಾರೆ.

ಆಲಮಟ್ಟಿ ಜಲಾಶಯ: ಬಿಗಿ ಭದ್ರತೆ

ಆಲಮಟ್ಟಿ (ವಿಜಯಪುರ ಜಿಲ್ಲೆ): ಭಾರತೀಯ ಸೇನೆ ನಡೆಸಿದ 'ಆಪರೇಷನ್ ಸಿಂಧೂರ' ಬಳಿಕ ಭದ್ರತಾ ದೃಷ್ಟಿಯಿಂದ ಆಲಮಟ್ಟಿ ಅಣೆಕಟ್ಟೆಯಲ್ಲಿ ಬುಧವಾರ ತಪಾಸಣೆ ಮತ್ತಷ್ಟು ಬಿಗಿಗೊಳಿಸಲಾಗಿದೆ. ಜಲಾಶಯದ ಭದ್ರತೆ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ (ಕೆಎಸ್‌ಐಎಸ್‌ಎಫ್) ಅಧೀನದಲ್ಲಿದ್ದು, ಭದ್ರತಾ ಕ್ರಮ ಕೈಗೊಳ್ಳಲಾಗಿದೆ. 'ಅಣೆಕಟ್ಟುಗಳ ಬಳಿ ಹೆಚ್ಚಿನ ಭದ್ರತೆ ಕೈಗೊಳ್ಳುವಂತೆ ರಾಜ್ಯ ಪೊಲೀಸ್ ಇಲಾಖೆಯಿಂದ ಸೂಚನೆ ಬಂದಿದೆ' ಎಂದು ಅಣೆಕಟ್ಟು ಭದ್ರತಾ ಉಸ್ತುವಾರಿ ಅಧಿಕಾರಿ ಕೆಎಸ್‌ಐಎಸ್‌ಎಫ್ ಇನ್‌ಸ್ಪೆಕ್ಟರ್ ಶಿವಲಿಂಗ ಕುರೆನ್ನವರ ಮಾಹಿತಿ ನೀಡಿದರು.

ಸಾಹಿತಿ ಜಿ.ಎಸ್‌. ಸಿದ್ದಲಿಂಗಯ್ಯ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಹಿತಿ ಜಿ.ಎಸ್.ಸಿದ್ದಲಿಂಗಯ್ಯ (94) ಅವರು ಮಂಗಳವಾರ ರಾತ್ರಿ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ಅವರು ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಮೃತರಿಗೆ ಪತ್ನಿ ಇದ್ದಾರೆ. ಆರ್‌ಪಿಸಿ ಲೇಔಟ್ ನಲ್ಲಿರುವ ಅವರ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾ ಗಿತ್ತು. ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ಸಕಲ ಸರ್ಕಾರಿ ಗೌರವದೊಂದಿಗೆ ಮಧ್ಯಾಹ್ನ ಅಂತ್ಯಸಂಸ್ಕಾರ ನೆರವೇರಿಸಲಾಯಿತು.

ತುಮಕೂರು ಜಿಲ್ಲೆಯ ಬೆಳ್ಳಾವೆಯಲ್ಲಿ 1931ರಲ್ಲಿ ಜನಿಸಿದ ಸಿದ್ದಲಿಂಗಯ್ಯ ಅವರು, ಮೈಸೂರು ವಿಶ್ವವಿದ್ಯಾಲಯದ ಮಹಾರಾಜ ಕಾಲೇಜಿನಿಂದ ಬಿ.ಎ. ಪದವಿ ಪಡೆದಿದ್ದರು. ಇದೇ ವಿಶ್ವವಿದ್ಯಾಲಯದಿಂದ 1961ರಲ್ಲಿ ಸ್ನಾತಕೋತ್ತರ ಪದವೀಧರರಾದ ಅವರು, ಚಿತ್ರದುರ್ಗದ ಸರ್ಕಾರಿ ಕಲಾ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಉದ್ಯೋಗ ಆರಂಭಿಸಿದ್ದರು. ಮುಂದೆ ಪ್ರಾಂಶುಪಾಲರಾದ ಅವರು, ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದರು.

ಸಾಹಿತಿ, ಕವಿ ಹಾಗೂ ವಿಮರ್ಶಕರಾಗಿದ್ದ ಸಿದ್ದಲಿಂಗಯ್ಯ ಅವರು, 1989ರಿಂದ 1992ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ 17ನೇ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

'ರಸಗಂಗೆ', 'ಉತ್ತರ', 'ಚಿತ್ರ-ವಿಚಿತ್ರ', 'ಐವತ್ತರ ನೆರಳು' ಸೇರಿ ವಿವಿಧ ಕವನ ಸಂಕಲನ, 'ಶ್ರೀ ಕವಿ ಲಕ್ಷ್ಮೀಶ', 'ರತ್ನಾಕರವರ್ಣಿ', 'ಹೊಸಗನ್ನಡ ಕಾವ್ಯ', 'ಪಂಚಮುಖ ಚಾಮರಸ', 'ವಚನ ಸಾಹಿತ್ಯ-ಒಂದು ಇಣುಕು ನೋಟ' ಸೇರಿ ವಿವಿಧ ವಿಮರ್ಶಾ ಕೃತಿಗಳು, 'ಮಹಾನುಭಾವ ಬುದ್ಧ', 'ವಿರತಿಯ ಸಿರಿ ಸಪ್ಪಣ್ಣನವರು', 'ಬಸವಣ್ಣ' ಮೊದಲಾದ ಜೀವನಚರಿತ್ರೆ, 'ಶತಾಬ್ದಿ ದೀಪ', 'ಸಾಲು ದೀಪಗಳು', 'ಅಣ್ಣನ ನೂರೊಂದು ವಚನಗಳು' ಸೇರಿ ವಿವಿಧ ಸಂಪಾದಿತ ಕೃತಿಗಳು ಸೇರಿ ಸಾಹಿತ್ಯ ವಿವಿಧ ಪ್ರಕಾರಗಳಲ್ಲಿ ಅವರು ಕೃತಿ ರಚಿಸಿದ್ದಾರೆ.

ತುಮಕೂರಿನ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಮುಂಬೈನ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ಸೇರಿ ಹಲವು ಗೌರವಕ್ಕೆ ಅವರು ಭಾಜನರಾಗಿದ್ದರು. ಸಾಹಿತ್ಯ ಅಕಾಡೆಮಿಯ ವಿಶೇಷ ಗೌರವ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಬಸವ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ ಸೇರಿ ಹಲವು ಪುರಸ್ಕಾರಗಳಿಗೆ ಭಾಜನರಾಗಿದ್ದರು.

'ದೇಶ ಸೇವೆಗೆ ಮಾಜಿ ಸೈನಿಕರು ಸಿದ್ಧ'

ವಿರಾಜಪೇಟೆ (ಕೊಡಗು): 'ದೇಶದ ರಕ್ಷಣೆಗೆ ಸದಾ ಸಿದ್ಧರಿದ್ದೇವೆ. ಕೇಂದ್ರ ಸರ್ಕಾರ ಯಾವುದೇ ಸಂದರ್ಭದಲ್ಲಿ ಆಹ್ವಾನಿಸಿದರೂ ಮುಕ್ತ ಮನಸ್ಸಿನಿಂದ ತೆರಳುತ್ತೇವೆ' ಎಂದು ಕೊಡಗು ಮಾಜಿ ಸೈನಿಕರ ಸಹಕಾರ ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್ ಉತ್ತಯ್ಯ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು, 'ಪಹಲ್ಗಾಮ್ ದಾಳಿಗೆ ಪ್ರತೀಕಾರವಾಗಿ ಭಾರತೀಯ ಸೇನೆಯು ಕಾರ್ಯಾಚರಣೆ ಆರಂಭಿಸಿರುವುದು ಸ್ವಾಗತಾರ್ಹ. ಇನ್ನು ಮುಂದೆಯೂ ಭಯೋತ್ಪಾದಕರು ಭಾರತದ ತಂಟೆಗೆ ಬಾರದಂತೆ ಪಾಠ ಕಲಿಸಬೇಕು' ಎಂದರು.

ಕರ್ನಾಟಕ ಸರ್ಕಾರ

ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಹಾವೇರಿ

ಮೌಲಾನಾ ಆಜಾದ್ ಭವನ, ಶಿವಾಜಿನಗರ, 3ನೇ ಕ್ರಾಸ್, ಹಾವೇರಿ-581110.
ಇ-ಮೇಲ್: dominoritieshaveri@gmail.com ಫೋನ ನಂ: 08375-234505

ನಂ. ಜಿಅಸಂ/ಹೊಸಿವೇ/ಇ-ಟೆ/ಸಿಆರ್-130/2025-26 ದಿನಾಂಕ: 06.05.2025

ಟೆಂಡರ್ ಪ್ರಕಟಣೆ ಇ- ಪ್ರೋಕ್ಯೂರಮೆಂಟ್ ಮೂಲಕ

ಹಾವೇರಿ ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಛೇರಿ, ತಾಲ್ಲೂಕಾ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳು, ಸರ್ಕಾರಿ ಮೆಟ್ರಿಕ್ ಪೂರ್ವ/ ನಂತರದ ವಿದ್ಯಾರ್ಥಿನಿಲಯಗಳು ಹಾಗೂ ಮೊರಾರ್ಜಿ ದೇಸಾಯಿ / ಡಾ: ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ/ ಮೌಲಾನಾ ಆಜಾದ್ ಮಾದರಿ ಶಾಲೆಗಳಿಗೆ ಬೋಧಕೇತರ ಸಿಬ್ಬಂದಿಗಳಾದ, ಗಣಕ ಯಂತ್ರ ನಿರ್ವಾಹಕರು, ಸ್ಟಾಫ್‌ನರ್ಸ್, ಅಡುಗೆಯವರು, ಅಡುಗೆ ಸಹಾಯಕರು, ರಾತ್ರಿ ಕಾವಲುಗಾರರು, ಸ್ವಚ್ಛತಾ ಸಿಬ್ಬಂದಿ ಹಾಗೂ ಗ್ರೂಪ್ "ಡಿ" ಒಟ್ಟು 181 ಹುದ್ದೆಗಳ ಸೇವೆಯನ್ನು 12 ತಿಂಗಳುಗಳ ವರೆಗೆ ತಾತ್ಕಾಲಿಕವಾಗಿ ಹೊರಸಂಪನ್ಮೂಲ ಅರ್ಹ ಏಜನ್ಸಿ/ಸಂಸ್ಥೆಗಳಿಂದ ಪಡೆಯಲು ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೋಕ್ಯೂರಮೆಂಟ ತಂತ್ರಾಂಶದ ಮೂಲಕ ಟೆಂಡರ ಆಹ್ವಾನಿಸಲಾಗಿದೆ. ಆಸಕ್ತ ಟೆಂಡರದಾರರು ನಿಗದಿಪಡಿಸಿದ ದಿನಾಂಕದೊಳಗಾಗಿ ಟೆಂಡರನಲ್ಲಿ ಭಾಗವಹಿಸಬಹುದಾಗಿದೆ.

1	ಟೆಂಡರ್ ಪ್ರಕಟಣೆ ದಿನಾಂಕ	06.05.2025
2	ಟೆಂಡರ್ ಅಂದಾಜು ಮೊತ್ತ	ರೂ: 4,79,11,972/-ಗಳು
3	ಟೆಂಡರ ಫಾರಂ ಬೆಲೆ	As per E-Portal
4	ಟೆಂಡರ್ ಫಾರಂ ಸಲ್ಲಿಸಲು E-Portal ಲಭ್ಯವಾಗುವ ದಿನಾಂಕ	06.05.2025
5	ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ,	ದಿನಾಂಕ: 06.06.2025 ರಂದು ಸಾಯಂಕಾಲ 05.00 ಗಂಟೆ
6	ತಾಂತ್ರಿಕ ಲಕೋಟೆ ತೆರೆಯುವ ವೇಳೆ ಮತ್ತು ದಿನಾಂಕ ಅಥವಾ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸೂಚಿಸುವ ಇತರೇ ದಿನಾಂಕದಂದು. (ಬದಲಾವಣೆಗೆ ಒಳಪಟ್ಟಿರುತ್ತದೆ)	ದಿನಾಂಕ: 09.06.2025 ರಂದು ಸಾಯಂಕಾಲ 05.00 ಗಂಟೆ
7	ಹಣಕಾಸಿನ ಲಕೋಟೆಯನ್ನು ತೆರೆಯುವ ಸ್ಥಳ ವೇಳೆ ಮತ್ತು ದಿನಾಂಕ ಅಥವಾ ಮಾನ್ಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಸೂಚಿಸುವ ಇತರೇ ದಿನಾಂಕದಂದು. (ಬದಲಾವಣೆಗೆ ಒಳಪಟ್ಟಿರುತ್ತದೆ)	ದಿನಾಂಕ: 10.06.2025 ರಂದು ಸಾಯಂಕಾಲ 05.00 ಗಂಟೆ
8	ಟೆಂಡರನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ	ರೂ: 7,18,680/-
9	ಹೆಚ್ಚಿನ ಮಾಹಿತಿಗಾಗಿ ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ	http:eproc.karnataka.gov.in ಹಾಗೂ ಕಛೇರಿ ವೇಳೆಯಲ್ಲಿ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಆಜಾದ್ ಭವನ, ಶಿವಾಜಿ ನಗರ, 3ನೇ ಕ್ರಾಸ್, ಹಾವೇರಿ, ಫೋನ್ 08375-234505

ಮ್ಯಾನುವಲ್ ಮುಖಾಂತರ ಸಲ್ಲಿಸಿದ ಯಾವುದೇ ಟೆಂಡರಗಳನ್ನು ಪರಿಗಣಿಸಲಾಗುವದಿಲ್ಲ. ಟೆಂಡರಗೆ ಸಂಭಂದಿಸಿದಂತೆ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ http:eproc.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/- ಜಿಲ್ಲಾ ಅಧಿಕಾರಿಗಳು,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾವೇರಿ.

Dipo/76/2025-26

ಸಿಇಟಿ: ನಕಲಿ ಅಭ್ಯರ್ಥಿ ವಿರುದ್ಧ ಕ್ರಮ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿ ವಿವಿಧ ವೃತ್ತಿಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಏ.17ರಂದು ನಡೆದಿದ್ದ ಸಿಇಟಿ ಬರೆಯಲು ಬಂದಿದ್ದ ನಕಲಿ ಅಭ್ಯರ್ಥಿ ವಿರುದ್ಧ ಶಿಸ್ತುಕ್ರಮ ಕೈಗೊಳ್ಳದಿರಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಿರ್ಧರಿಸಿದೆ.

ಮಲ್ಲೇಶ್ವರದ ಸಿಲ್ವರ್ ವ್ಯಾಲಿ ಪಬ್ಲಿಕ್ ಪಿಯು ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಗಣಿತ ವಿಷಯದ ಪರೀಕ್ಷೆ ಬರೆಯಲು ಬಂದಿದ್ದ ಮಹಿಳಾ ಅಭ್ಯರ್ಥಿ ಮುಖಚಹರೆಯನ್ನು ಆ್ಯಪ್ ಮೂಲಕ ಪರಿಶೀಲಿಸಿದಾಗ ನಕಲಿ ಅಭ್ಯರ್ಥಿ ಎನ್ನುವುದು ದೃಢಪಟ್ಟಿತ್ತು. ಪ್ರಕರಣ ಕುರಿತು ವಿಡಿಯೊ ದೃಶ್ಯ ಸಮೇತ ವರದಿ ನೀಡಲು ಕಾಲೇಜಿನ ಪ್ರಾಂಶುಪಾಲರಿಗೆ ಕೆಇಎ ಸೂಚಿಸಿತ್ತು.

'ಯುವತಿಗೆ ವಂಚನೆಯ ಉದ್ದೇಶ ಇರಲಿಲ್ಲ. ದ್ವಿತೀಯ ಪಿಯು ಪರೀಕ್ಷೆ-1ರಲ್ಲಿ ಅನುತ್ತೀರ್ಣರಾಗಿದ್ದು, ಪೋಷಕರ ಒತ್ತಾಯಕ್ಕೆ ಮಣಿದು ಕೊನೆಯ ಕ್ಷಣದಲ್ಲಿ ಫೋಟೊಶಾಪ್ ಬಳಸಿ ಸ್ನೇಹಿತೆ ಪ್ರವೇಶ ಪತ್ರಕ್ಕೆ ತನ್ನ ಫೋಟೊ ಸೇರಿಸಿಕೊಂಡು ಬಂದಿದ್ದರು ಎಚ್ಚರಿಕೆ ನೀಡಿ ಪ್ರಕರಣ ಮುಗಿಸಿದ್ದೇವೆ' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ. ಪಹಲ್ಗಾಮ್ ಪ್ರಕರಣದ ನಂತರ ಆತಂಕದ ಸ್ಥಿತಿಯಿಂದಾಗಿ ಸಿಇಟಿ ದಾಖಲೆಗಳ ಪರಿಶೀಲನೆಗೆ ಕಾಶ್ಮೀರ, ಪಂಜಾಬ್‌ನ ಕೆಲ ವಿದ್ಯಾರ್ಥಿಗಳು ಹಾಜರಾಗಿಲ್ಲ. ಅವರಿಗೆ ಮತ್ತಷ್ಟು ಕಾಲಾವಕಾಶ ನೀಡಲಾಗಿದೆ ಎಂದು ಕೆಇಎ ಹೇಳಿದೆ.

ಸೀಮದಲೆ ನಿಸ್ಸೀಮ...

• ಎಂ.ಎಸ್. ಆಶಾದೇವಿ

ಇದೇ ಜನವರಿ ತಿಂಗಳಲ್ಲಿ ಜಿ.ಎಸ್.ಸಿದ್ದಲಿಂಗಯ್ಯನವರಿಗೆ ಕಲಬುರಗಿಯ ಪಾಳಾ ಸುಭಾಷ್ಚಂದ್ರ ಪಾಟೀಲ ಟ್ರಸ್ಟ್‌ನವರು 'ಬಸವ ಪ್ರಶಸ್ತಿ' ನೀಡಿ ಗೌರವಿಸಿದ್ದರು. ಇನ್ನೂ ಹಲವು ಉನ್ನತ ಪ್ರಶಸ್ತಿಗಳು ಇವರಿಗೆ ಸಾಧಾರವಾಗಿ ಸಲ್ಲಬೇಕಿದ್ದವು. ಪ್ರಶಸ್ತಿಗಳನ್ನು ಕುರಿತ ಮೋಹದಿಂದ ಈ ಮಾತುಗಳನ್ನು ಹೇಳುತ್ತಿಲ್ಲ. ಇವರಿಗೆ ಆ ಪ್ರಶಸ್ತಿಗಳನ್ನು ನೀಡಿದ್ದರೆ, ಆ ಪ್ರಶಸ್ತಿಗಳಿಗೇ ಮರ್ಯಾದೆ ಬರುತ್ತಿತ್ತು. ಆದರೆ, ಅದು ಸಾಧ್ಯವಾಗಲಿಲ್ಲ ಎನ್ನುವ ನೋವು, ವಿಷಾದ ಮತ್ತು ಅಂತಹ ಕೆಲವು ಆಯ್ಕೆ ಸಮಿತಿಗಳಲ್ಲಿ ಸೋತ ವಿಷಾದದಿಂದ ಈ ಮಾತು ಹೇಳುತ್ತಿದ್ದೇನೆ.

ಅಂದು ಮೇಷ್ಟ್ರು ತಿಂಡಿಯನ್ನು ಸವಿಯುತ್ತಲೇ ಸಾಹಿತ್ಯದ ಬಗ್ಗೆ ಸವಿಯಾಗಿಯೂ, ಗಂಭೀರವಾಗಿಯೂ ಮಾತನಾಡುತ್ತಿದ್ದರು. ತಿಂಡಿ ಬೇಡ ಎಂದವರ ಬಗ್ಗೆ ಮರುಕದ ದೃಷ್ಟಿಯನ್ನು ಬೀರಿದ್ದರು. ನಾನು ಮಾಡಿದ ಅಭಿನಂದನಾ ಭಾಷಣವನ್ನು ಮೆಚ್ಚಿ ಅವರ ವ್ಯಕ್ತಿತ್ವಕ್ಕೆ ಅಪರೂಪ ಎನ್ನುವಂತೆ, 'ಇದನ್ನು ಬರೆದು ಕೊಡಮ್ಮ' ಎಂದಿದ್ದರು. ನನ್ನ ಸೋಮಾರಿತನದಲ್ಲಿ ಅದನ್ನು ಬರೆದು ಅವರಿಗೆ ತಲುಪಿಸಲಾಗಲಿಲ್ಲ ಎನ್ನುವ ನೋವು ಕೊನೆಯವರೆಗೂ ಉಳಿಯುತ್ತದೆ. 94ರ ಇಳಿ ವಯಸ್ಸಿನಲ್ಲಿ ಕೈಯ್ಯಲ್ಲೊಂದು ಪುಸ್ತಕ, ಹಾಳೆ ಏನೂ ಇಲ್ಲದೆ ಅಸಹಾಯಶೂರರಂತೆ ಸುಮಾರು ಅರ್ಧ ಗಂಟೆ ವಚನ ಚಳವಳಿ ಮತ್ತು ಸಾಹಿತ್ಯ ಕುರಿತಂತೆ ಅದೆಷ್ಟು ತನ್ಮಯರಾಗಿ ಅವರು ಮಾತನಾಡಿದ್ದರು!

ಜಿ.ಎಸ್.ಸಿದ್ದಲಿಂಗಯ್ಯನವರು ಪಂಡಿತ ಪರಂಪರೆಯ ಶಿಖರವಾಗಿದ್ದರು. ಕನ್ನಡದ ಅತ್ಯುತ್ತಮ ಕವಿಗಳಾಗಿದ್ದರು. ಅಧ್ಯಾಪನಕ್ಕೂ, ಬರಹಕ್ಕೂ, ಆಡಳಿತಕ್ಕೂ ಆಗಿ ಬರುವುದಿಲ್ಲ ಎನ್ನುವ ಮಿಥ್ ಅನ್ನು ಒಡೆದು, ಆಡಳಿತಕ್ಕೇ ಒಂದು ಮಾದರಿಯನ್ನು ಕಟ್ಟಿಕೊಟ್ಟರು. ವಚನ ಚಳವಳಿ ಮತ್ತು ಸಾಹಿತ್ಯ ಅವರ ಮೊದಲ ಪ್ರೀತಿಯಾಗಿ ದ್ದರೂ ಕನ್ನಡ ಸಾಹಿತ್ಯ ಪರಂಪರೆಯನ್ನೂ ಅಷ್ಟೇ ಪ್ರೀತಿಯಿಂದ, ಹೆಮ್ಮೆಯಿಂದ ನೋಡುತ್ತಿದ್ದರು. ಅವರ ಉಪನ್ಯಾಸಗಳೆಂದರೆ ಪಂಡಿತನ ಸಮೃದ್ಧ ಓದು, ವಿಮರ್ಶಕರ ವಸ್ತುನಿಷ್ಠೆ ಮತ್ತು ಕವಿಯ ಅಂತಃಕರಣ ಎಲ್ಲವೂ ಬೆರತು, ಕೇಳುವುದೇ ಒಂದು ಅನುಭವವಾಗುತ್ತಿತ್ತು. ಅವರ ನೇರ ವಿದ್ಯಾರ್ಥಿಗಳು ಅವರನ್ನು ಆದರ್ಶ ಎಂದು ನೋಡುವುದು ತೀರಾ ಸಹಜ.

ನವೋದಯದ ಪಂಡಿತ ಪರಂಪರೆಯವರು ಎಂದು ಇವರನ್ನು ನೋಡುವುದು ಇವರ ಮುಕ್ತ ನಿಲುವುಗಳಿಗೆ ಬೇಲಿ ಹಾಕಿದಂತೆ. ಸತತ ಓದು ಇವರ ಬರವಣಿಗೆಗಳಿಗೆ ದೊಡ್ಡ ಹರಹನ್ನು ಕೊಟ್ಟಂತೆಯೇ, ಸಾಹಿತ್ಯ ಪರಂಪರೆಯನ್ನು ನಿತ್ಯಶೋಧಕ್ಕೆ ಒಡ್ಡದೆ ಬೇರೆ ದಾರಿ ಇಲ್ಲ ಎನ್ನುವ ಸತ್ಯದ ಎದುರಿಗೆ ನಿಲ್ಲಿಸಿತು.

ಚಾಮರಸ, ರತ್ನಾಕರವರ್ಣಿಯಂತಹ ಕವಿಗಳನ್ನಾಗಲೀ, ಬೇಂದ್ರೆ, ಕುವೆಂಪು ಅವರನ್ನಾಗಲೀ ಜಿಎಸ್‌ಎಸ್ ಸ್ಥಾಪಿತವಾದ ಚೌಕಟ್ಟುಗಳ ಆಚೆಗೇ ನೋಡಲು ಹವಣಿಸಿದರು. ಗೂಳೂರು ಸಿದ್ಧವೀರಣ್ಣನನ್ನು ಕುರಿತು ಬರೆಯುವಷ್ಟೇ ಉತ್ಕಟತೆಯಿಂದ ನವ್ಯಕಾವ್ಯದ ಬಗೆಗೂ ಇವರು ಬರೆಯಬಲ್ಲವರಾಗಿದ್ದರು. ಇವರ ಕೆಲವು ಕೃತಿಗಳ ಶೀರ್ಷಿಕೆಗಳೇ ಹೊಸತನವನ್ನು ಕುರಿತ ಇವರ ನಿಸ್ಸಂಕೋಚದ, ನಿರ್ಭಿಡೆಯ ನಿಲುವುಗಳನ್ನು ಸೂಚಿಸುತ್ತವೆ.

ಭಾಷೆ ಗೀಷೆ - ಬೇಂದ್ರೆ, ಕುವೆಂಪು, ಲಯವೂ ಅದರ ಪರಿವಾರವೂ, ಚಿತ್ರ ವಿಚಿತ್ರ, ಮಣ್ಣಿಗಿಳಿದ ಆಕಾಶ, ನನ್ನದೆನ್ನ ಬಹುದೆ.... ಇವರ ಸಮಗ್ರ ಕಾವ್ಯಕ್ಕೆ ಇವರೇ ಆರಿಸಿದ ಶೀರ್ಷಿಕೆ 'ಅಸಮಗ್ರ'. ತಮ್ಮ ಕಾವ್ಯದ ಅಸಮಗ್ರತೆಯನ್ನು, ಒಟ್ಟೂ ಕಾವ್ಯದ ಅಸಮಗ್ರತೆಯನ್ನು, ಸಮಗ್ರ ಎಂದು ಕರೆಯುವುದರ ಅಸಂಗತತೆಯನ್ನು... ಎಷ್ಟೊಂದನ್ನು ಈ ಶೀರ್ಷಿಕೆ ಧ್ವನಿಸುತ್ತಿದೆ!

ಅನುವಾದಗಳು, ಸಂಪಾದನೆಗಳು, ದೊಡ್ಡ ಪ್ರಮಾಣದ, ಗುಣಮಟ್ಟದ ವಿಮರ್ಶೆ, ಕೊನೆಯವರೆಗೂ ಇವರು ನೆಚ್ಚಿದ ಕಾವ್ಯ ಈ ಎಲ್ಲವೂ ಜಿಎಸ್‌ಎಸ್ ಅವರಿಗೆ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಎತ್ತರದ ಸ್ಥಾನವನ್ನು ಸಂಪಾದಿಸಿಕೊಟ್ಟಿವೆ. 'ಮಿಥಿಲೆಗಿಲ್ಲಿಂದಲೇ ಮಾರ್ಗವೇನು ಗುರು?' ಕವಿತೆಯು ಜಿಎಸ್‌ಎಸ್ ಅವರ ಪ್ರಾತಿನಿಧಿಕ ಕವಿತೆ. ಭವ, ಭಾವ ಮತ್ತು ಅನುಭಾವಗಳ ನಡುವೆ ಜೀಕುವ ಮನುಷ್ಯಾವಸ್ಥೆಯನ್ನು, ಬಿಡಿಸಬರದ ಅವುಗಳ ನಡುವಿನ ಅನುಬಂಧವನ್ನು ಈ ಕವಿತೆ ಹಲವು ಮಗ್ಗುಲುಗಳಿಂದ ಧ್ಯಾನಿಸುತ್ತದೆ.

ಇವರ ಕಾವ್ಯವಾದರೂ ಸಾಮಾಜಿಕ ವಾಸ್ತವಗಳು, ವೈಯಕ್ತಿಕವಾದ ಅನುಭವಗಳು, ರಾಜಕೀಯ ಸಂದರ್ಭಗಳು ಈ ಎಲ್ಲವನ್ನೂ ಒಳಗೊಳ್ಳುತ್ತಲೇ ಹೋಗಿವೆ. ಅಮ್ಮ, ಗಾಂಧಿ, ನೆಹರೂ, ಪುರಾಣಗಳು, ಚರಿತ್ರೆಯ ಜೊತೆಗಿನ ಮುಖಾಮುಖಿ, ಪ್ರಕೃತಿ ...ಇವು ಸಿದ್ದಲಿಂಗಯ್ಯನವರಲ್ಲಿ ಆವರ್ತನಗೊಳ್ಳುವ ಧಾತುಗಳು.

ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರಾಗಿ ಇವರು ಕೈಗೊಂಡ ತೀರ್ಮಾನಗಳು ಎಲ್ಲ ಕಾಲಕ್ಕೂ ಅಧಿಕಾರಸ್ಥರು ಪಾಲಿಸಬೇಕಾದ ಸಂಗತಿಗಳಾಗಿವೆ. ಬಡ್ತಿ ನೀಡಬೇಕಾದ ಸಂದರ್ಭವೊಂದರಲ್ಲಿ ಒಬ್ಬರಿಗೆ, ಅವರು ಆ ತಿಂಗಳ ಕೊನೆಗೆ ನಿವೃತ್ತರಾಗುವವರಿದ್ದರು. ಅದಾಗಲೇ ತಿಂಗಳ ಕೊನೆಯ ವಾರ. 'ಅಯ್ಯೋ ಅವರಿಗೆ ಸಿಗುವುದಿಲ್ಲ' ಎಂದು ಅವರ ಸ್ನೇಹಿತರು ಹೇಳಿದ ಕೂಡಲೇ ಅವರನ್ನು ಕರೆಸಿ, ಎರಡು ದಿನಗಳಲ್ಲಿಯೇ ಅವರಿಗೆ ಬಡ್ತಿಯ ಆದೇಶ ನೀಡಿದರು.

ಮತ್ತೊಬ್ಬರು 'ನನ್ನ ಪ್ರಮೋಷನ್ ಫೈಲ್ ಬಂದಿರಬೇಕು, ವಿಚಾರಿಸಲು ಬಂದೆ' ಎಂದರೆ, ಇವರು 'ನೋಡಿ... ಇಲ್ಲೇ ಇದೆ ಫೈಲು' ಎಂದು ತೋರಿಸಿದರು; ಮಾತ್ರವಲ್ಲ ಸಿಬ್ಬಂದಿಯನ್ನು ಕರೆದು, 'ಇವರು ಬಂದಿದ್ದಾರೆ. ಆದೇಶ ತೆಗೆದುಕೊಂಡೇ ಹೋಗಲಿ. ಆದೇಶ ಸಿದ್ಧಮಾಡಿ' ಎಂದರು. ಆ ಮಹಾನುಭಾವರು, 'ಸರ್ ಇವತ್ತು ಮಂಗಳವಾರ' ಎಂದರೆ, 'ಇಂದಿನ ದಿನವೇ ಶುಭದಿನವಯ್ಯ' ಎನ್ನುವ ವಚನ ಉದ್ಧರಿಸಿ, 'ನೀವು ಬೇಕಾದರೆ ನಾಳೆ ಬಂದು ತೆಗೆದುಕೊಂಡು ಹೋಗಿ' ಎಂದರು. ಆತ, ಕೇಳದೆಯೇ, ಬೇಡದೆಯೇ ಬಡ್ತಿ ನೀಡುವ ನಿರ್ದೇಶಕರು ನಮ್ಮ ಇಲಾಖೆಗೆ ಬಂದಿದ್ದಾರೆ ಎಂದು ಆಶ್ಚರ್ಯಪಟ್ಟರಂತೆ.



ತುಂಬು ಮೊಗದಲ್ಲಿ ಒಂದಿಷ್ಟೇ ನಗೆ, ಕೊಂಕಲ್ಲ
ಬಿಂಕವಿಲ್ಲದ ನೇರ ನಿಷ್ಠುರ ಮಾತು; ಕಷ್ಟವೆನಬೇಡ,
ಎಂತಿದ್ದರೂ ಸ್ನೇಹ ಸ್ವಾದಿಷ್ಟ

ಚೆನ್ನವೀರ ಕಣವಿ

ಎಲೆ ಆಪ್ತ ಜೀವವೇ, ಈಗ ನೋಡಿಲ್ಲಿ
ಈ ಒಂದು ಕ್ಷಣದಲ್ಲಿ ಭವದ ಕ್ಷಣಿಕತೆ ಅರಿತ ಈ ಜೀವ
ನಿನ್ನಂಥ ಪರಿಪಕ್ವ ಜೀವಕ್ಕೆ ಉದ್ದಂಡ ನಮಸ್ಕಾರ ಮಾಡುತ್ತೆ
ದಾರಿಯುದ್ದಕ್ಕೂ ಶುಭವ ಕೋರುತ್ತೆ

ಸುಮತೀಂದ್ರ ನಾಡಿಗ

ಜಿ.ಎಸ್.ಸಿದ್ದಲಿಂಗಯ್ಯನವರನ್ನು ಕುರಿತ ಅಭಿನಂದನಾ
ಗ್ರಂಥದ ಹೆಸರು 'ನಿಸ್ಸೀಮ'
ಮಧುರಚೆನ್ನರ ಕಾವ್ಯದ ಸಾಲೊಂದು ನೆನಪಾಗುತ್ತಿದೆ.
ನಿಸ್ಸೀಮ ನಿಸ್ಸೀಮ
ಸೀಮದಲೆ ನಿಸ್ಸೀಮ
(ಜಿ.ಎಸ್.ಸಿದ್ದಲಿಂಗಯ್ಯನವರನ್ನು ಕುರಿತ ಅಭಿನಂದನಾ ಗ್ರಂಥದಲ್ಲಿನ ಸಾಲುಗಳು)

ಇದೇ ಇಲಾಖೆಯಲ್ಲಿ ಸುಮಾರು ಇಪ್ಪತ್ತು ವರ್ಷಗಳಿಂದ ಕೊಡದಿದ್ದ ಬಡ್ತಿ ಪಡೆಯಲು ನಾವು 3 ವರ್ಷ ತಿರುಗಬೇಕಾಯಿತು. ಇವರ ಜಾಗದಲ್ಲಿಯೇ ನಿರ್ದೇಶಕರಾಗಿದ್ದ ಅಧ್ಯಾಪಕ ಮಹನೀಯರೊಬ್ಬರು, ಅವರಿಗೆ ಪಿಎಚ್.ಡಿ ಇರಲಿಲ್ಲ ಎನ್ನುವ ಕಾರಣಕ್ಕೆ ನಾನು ನಿರ್ದೇಶಕನಾಗಿರುವ ತನಕ ಇವರಿಗೆ ಪ್ರಾಧ್ಯಾಪಕರಾಗಿ ಬಡ್ತಿ ಸಿಗದೆ ಇರುವ ಹಾಗೆ ಮಾಡುತ್ತೇನೆ ಎಂದು ಪಣ ತೊಟ್ಟರು. ಮಾತ್ರವಲ್ಲ ಅದನ್ನು ಉಳಿಸಿಕೊಂಡರು ಕೂಡ. ಇಂಥವರ ಎದುರಿಗೆ ಸಿದ್ದಲಿಂಗಯ್ಯನವರು ಇನ್ನೂ ಎತ್ತರದಲ್ಲಿ ನಿಲ್ಲುತ್ತಾರೆ. ❖

ಸುಹಾಸ್ ಶೆಟ್ಟಿ ಹತ್ಯೆ ಖಂಡಿಸಿ ಕಾರವಾರ ಬಂದ್

ಕಾರವಾರ: ಮಂಗಳೂರಿನಲ್ಲಿ ಈಚೆಗೆ ನಡೆದ ಸುಹಾಸ್ ಶೆಟ್ಟಿ ಹತ್ಯೆ ಘಟನೆ ಖಂಡಿಸಿ ಹಿಂದೂ ಸಂಘಟನೆಗಳ ಸಮಾನ ಮನಸ್ಕರ ವೇದಿಕೆ ಬುಧವಾರ ಕರೆ ನೀಡಿದ್ದ ಕಾರವಾರ ಬಂದ್ ಹಿನ್ನೆಲೆಯಲ್ಲಿ ಅಂಗಡಿಗಳು, ಖಾಸಗಿ ಸಂಸ್ಥೆಗಳ ಕಚೇರಿಗಳು ಬಾಗಿಲು ಮುಚ್ಚಿದ್ದವು.

ಆಟೊ ಸಂಚಾರ ಬಹುತೇಕ ಸ್ಥಗಿತಗೊಂಡಿತ್ತು. ತುರ್ತು ಅಗತ್ಯವಿದ್ದ ಪ್ರಯಾಣಿಕರ ಸೇವೆಗೆ ಸೀಮಿತ ಸಂಖ್ಯೆಯ ಆಟೊಗಳು ಸಂಚರಿಸಿದವು. ಸರ್ಕಾರಿ ಕಚೇರಿಗಳು, ಬ್ಯಾಂಕ್‌ಗಳು ತೆರೆದಿದ್ದವು. ಜನರ ಓಡಾಟ ಕಡಿಮೆಯಿತ್ತು.

ಹತ್ಯೆ ಪ್ರಕರಣದ ತನಿಖೆಯನ್ನು ಎನ್‌ಐಎಗೆ ವಹಿಸಬೇಕು ಎಂದು ಒತ್ತಾಯಿಸುವ ಮನವಿ ಪತ್ರವನ್ನು ಜಿಲ್ಲಾಧಿಕಾರಿ ಅವರಿಗೆ ಸಲ್ಲಿಸಲಾಯಿತು.

ದಲಿತರಿಗೆ ಕ್ಷೌರ ನಕಾರ ಕ್ರಮದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ತಾಲ್ಲೂಕಿನ ಮುದ್ದಾಬಳ್ಳಿಯಲ್ಲಿ ದಲಿತರು ಕ್ಷೌರ ಮಾಡುವಂತೆ ಕೇಳಿದ್ದರಿಂದ ಅಂಗಡಿ ಬಂದ್ ಮಾಡಿದ್ದ ಪ್ರಕರಣದ ಸಂಬಂಧ ಬುಧವಾರ ಸಭೆ ನಡೆದಿದ್ದು, ಇಂಥ ಘಟನೆ ಮರುಕಳಿಸಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ಎಚ್ಚರಿಸಿದ್ದಾರೆ.

'ಪ್ರಜಾವಾಣಿ'ಯ ಬುಧವಾರದ ಸಂಚಿಕೆಯಲ್ಲಿ 'ದಲಿತರು ಕ್ಷೌರ ಕೇಳಿದ್ದಕ್ಕೆ ಅಂಗಡಿಯೇ ಬಂದ್' ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು.

ಬಳಿಕ ಗ್ರಾಮಸ್ಥರ ಸಮ್ಮುಖದಲ್ಲಿಯೇ ಅಧಿಕಾರಿಗಳು ದಲಿತ ವ್ಯಕ್ತಿಯೊಬ್ಬರಿಗೆ ಅದೇ ಗ್ರಾಮದ ಕ್ಷೌರಿಕರಿಂದ ಕ್ಷೌರ ಮಾಡಿಸಿದರು. 'ಅಸ್ಪೃಶ್ಯತೆ ಆಚರಣೆಗೆ ಅವಕಾಶ ಇರುವುದಿಲ್ಲ' ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಅಜ್ಜಪ್ಪ ಸೊಗಲದ ತಿಳಿಸಿದರು.

ಕ್ಷಣ ಕ್ಷಣದ ಸುದ್ದಿಗಳಿಗಾಗಿ www.prajavani.netಗೆ ಭೇಟಿ ಕೊಡಿ

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ

ನಂ.16, 2ನೇ ರಾಜಭವನ ರಸ್ತೆ, ಬೆಂಗಳೂರು–560001. ದೂ: 080-22867369
e-mail : cgmksamb@gmail.com Website krishimaratavahini.karnataka.gov.in

ಸಂಖ್ಯೆ: ಕೃಮಾಮಂ/ವಿಭಾಗ.ಅಭಿ/ಕ.ಸಂ.06/366/2025–26 ದಿನಾಂಕ: 07.05.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ಕೇಂದ್ರ ಕಛೇರಿ ಕಟ್ಟಡದ 03 ಹಾಗೂ 04ನೇ ಮಹಡಿಯಲ್ಲಿ ಕಚೇರಿ ಕೊಠಡಿಗಳು, ಅತಿಥಿ ಗೃಹಗಳ, ಕ್ಯಾಂಟೀನ್, ಸಭಾಂಗಣದ ವಿದ್ಯುತೀಕರಣ, ಹವಾನಿಯಂತ್ರಣ, ದೃಶ್ಯ/ವಿವಿಧ ಶ್ರವಣ ಮಾಧ್ಯಮ ಹಾಗೂ ಸಂಪೂರ್ಣ ಒಳಾಂಗಣ ವಿನ್ಯಾಸ ಕಲ್ಪಿಸಲು ವಿನ್ಯಾಸಕರ ಸೇವೆಗೆ ಆಸಕ್ತ ಅರ್ಹ ಸಂಸ್ಥೆಗಳಿಂದ ಅಲ್ಪಾವಧಿಯ ಇ–ಟೆಂಡರ್ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಹೆಚ್ಚಿನ ಮಾಹಿತಿಯನ್ನು **www.kppp.karnataka.gov.in** ವೆಬ್‌ಸೈಟ್‌ನ ಇಂಡೆಂಟ್ ಸಂಖ್ಯೆ: APMC/2025-26/SE0596 ರಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **14.05.2025**

ಸಹಿ/–
ಮುಖ್ಯ ಪ್ರಧಾನ ವ್ಯವಸ್ಥಾಪಕರು
ಕ.ರಾ.ಕೃ.ಮಾ.ಮಂ., ಬೆಂಗಳೂರು.

ವಾಸಾಸಂಇ/ವಾಪ್ರ/ಎಸ್‌ಎಸ್‌ಸಿ/532/2025–26

ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಆಡಳಿತಾಧಿಕಾರಿಗಳ ಕಚೇರಿ, ಕೃಷಿ ನಗರ,
ಎತ್ತಿನಗುಡ್ಡ ಆವರಣ, ಧಾರವಾಡ–580 005. ಕರ್ನಾಟಕ.

ನಂ:ಆಕ:ಸಿಶಾ–5/Enq/2025–26 ದಿನಾಂಕ: 06–05–2025

ನೋಟೀಸು

ವಿಷಯ: ನೌಕರರ ಅನಧಿಕೃತ ಗೈರು ಹಾಜರಾತಿ ಕುರಿತು

ಶ್ರೀ ನಾಗರಾಜ ಡಿ.ಹೆಚ್., ಕ್ಷೇಮಾಭಿವೃದ್ಧಿ ನೌಕರರು, ಮುಖ್ಯ ಕೃಷಿ ಸಂಶೋಧನಾ ಕೇಂದ್ರ, ಧಾರವಾಡ ಆದ ನೀವು **ದಿನಾಂಕ: 10–6–2019** ರಿಂದ ಮೇಲಾಧಿಕಾರಿಗಳ ಅನುಮತಿ ಪಡೆಯದೇ ಈವರೆಗೂ ವಿಶ್ವವಿದ್ಯಾಲಯದ ಸೇವೆಗೆ ಅನಧಿಕೃತ ಗೈರು ಹಾಜರಾಗಿರುತ್ತೀರಿ. ಆದ ಕಾರಣ ನಿಮ್ಮ ಅನಧಿಕೃತ ಗೈರು ಹಾಜರಾತಿಗೆ ಸಂಬಂಧಿಸಿದ ಪತ್ರ/ನೋಟೀಸುಗಳನ್ನು ನಿಮ್ಮ ಖಾಯಂ ವಿಳಾಸಕ್ಕೆ ನೋಂದಾಯಿತ ಅಂಚೆ ಮೂಲಕ ಕಳುಹಿಸಲಾಗಿದ್ದು, ಅದು ತಲುಪಿದ ಬಗ್ಗೆ ಖಚಿತವಾಗಿಲ್ಲ ಹಾಗೂ ನಿಮ್ಮಿಂದ ಯಾವುದೇ ಪ್ರತಿ ಹೇಳಿಕೆ ಸಲ್ಲಿಕೆಯಾಗಿಲ್ಲ. ನಿಮ್ಮ ಅನಧಿಕೃತ ಗೈರು ಹಾಜರಿ ವಿರುದ್ಧದ ಆರೋಪದ ಬಗ್ಗೆ ಕರ್ನಾಟಕ ನಾಗರಿಕ ಸೇವಾ (ಸಿಸಿಎ) ನಿಯಮಗಳು 1957ರ ಪ್ರಕಾರ ಕ್ರಮ ಜರುಗಿಸಲು ಕೃವಿವಿ ಪರಿನಿಯಗಳನ್ವಯ ಶಿಸ್ತು ವಿಚಾರಣಾ ಪ್ರಾಧಿಕಾರ ರಚಿಸಲಾಗಿತ್ತು. ಸದರಿ ಪ್ರಾಧಿಕಾರವು ನಿಮ್ಮನ್ನು ಸೇವೆಯಿಂದ ತೆಗೆದುಹಾಕುವ ದಂಡನೆ ವಿಧಿಸಲು ಶಿಫಾರಸ್ಸು ಮಾಡಿದೆ. ಆದ್ದರಿಂದ ನಿಮ್ಮ ಅನಧಿಕೃತ ಗೈರು ಹಾಜರಾತಿಗಾಗಿ ಶಿಸ್ತು ವಿಚಾರಣಾ ಪ್ರಾಧಿಕಾರದ ಶಿಫಾರಸ್ಸಿನನ್ವಯ ಏಕೆ ಕ್ರಮ ಜರುಗಿಸಬಾರದು ಎಂಬುದರ ಬಗ್ಗೆ ಈ ಕೆಳಗೆ ಸಹಿ ಮಾಡಿದ ಪ್ರಾಧಿಕಾರದ ಮುಂದೆ **ದಿನಾಂಕ: 20–05–2025ರ** ಒಳಗಾಗಿ ನಿಮ್ಮ ವಿವರಣೆಯನ್ನು ಸಲ್ಲಿಸಲು ಸೂಚಿಸಿದೆ. ತಪ್ಪಿದಲ್ಲಿ ನಿಮ್ಮ ಅಹವಾಲು ಏನೂ ಇಲ್ಲವೆಂದು ಭಾವಿಸಿ ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಸಹಿ/– ಆಡಳಿತಾಧಿಕಾರಿಗಳು.
ಕೃವಿವಿ, ಧಾರವಾಡ

ವಾ.ಸಾ.ಇ/ಧಾರವಾಡ/135/ದೇಶಪಾಂಡೆಪಬ್ಲಿಸಿಟಿ/2025–26

ಕರ್ನಾಟಕ ಗೃಹ ಮಂಡಳಿ

3ನೇ ಮಹಡಿ, ಕಾವೇರಿ ಭವನ, ಬೆಂಗಳೂರು.

ಟೆಂಡರ್ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಗುತ್ತಿಗೆದಾರರು ಹಾಗೂ ಪಡೆಯಲು ಇಚ್ಛಿಸುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಕ್ರ. ಸಂ.	ಕಾಮಗಾರಿಯ ಹೆಸರು	ವರ್ಕ್ ಇಂಡೆಂಟ್ ಮತ್ತು ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ)	ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ
1.	ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ಪಟ್ಟಣದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಇಂಜಿನಿಯರಿಂಗ್ / ಮೆಡಿಕಲ್ ಬಾಲಕರ ವಸತಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ (BCWD 1540).	Tender Reference No. KHB/2025-26/BD/ WORK_INDENT 586 & IFT No. 37/2025-26 Date: 06.05.2025	3,78,65,372/-	06.06.2025 ಸಂಜೆ 4.00 ಗಂಟೆಗೆ

ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ:
ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು.
ದೂರವಾಣಿ: 080–22273511 / 080–22100077 Website: https://kppp.karnataka.gov.in

DIPR/CP/YC/538/2025-26 ಸಹಿ/– ಕಾರ್ಯಪಾಲಕ ಅಭಿಯಂತರರು, ಕಗೃಮಂ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮೆ)
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ, ಕೃಭಾಜನಿನಿ, ನಾಎದಂಕಾ, ವಿಭಾಗ
ರೋಡಲಬಂಡಾ–584127, ತಾ: ಲಿಂಗಸುಗೂರು ಜಿ: ರಾಯಚೂರು

ಸಂ.ಕೃಭಾಜನಿನಿ/ನಾಎದಂಕಾ/ವಿ/ಪಿಬಿ/ಟೆಂಡರ್/25–26/141 ದಿನಾಂಕ:–05.05.2025

ಅಲ್ಪಾವಧಿ ಟೆಂಡರ ಪ್ರಕಟಣೆ

(Through Karnataka Public Procurement Portal Only)

*****

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರ ಪರವಾಗಿ **"Consultancy Services For Detailed Survey and Investigation Excavation Of Trial Pit, Drilling Of Trial Core Bores Including With Detailed Project Report (DPR). For Lift Headworks, Raising/Gravity Mains, Delivery Chamber Sub-Station Transmission line, Existing & New Tanks Construction, For The Proposed 39 Existing & New Tanks, By Preparation of Designs, Drawings, Estimates, Draft Tender Documents, Filling of water by lifting from Kishna River To Improve Ground Water Table And Drinking Water Purpose Of Yalaburga and Kukanoor Taluk of Koppal District "Work indent NO. KBJNL/2025-26/OW/WORK INDENT1572)** ಎಂಬ ಕಾಮಗಾರಿಗೆ ಸಂಬಂಧಿಸಿದಂತೆ, ದ್ವಿಲಕೋಟೆ ಮೂಲಕ ಶೇಕಡಾವಾರು ದರದ ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್ ಮೂಲಕ ಕರೆಯಲಾಗಿದೆ. ಸದರಿ ಟೆಂಡರ್‌ಗಳನ್ನು ಅರ್ಹ ಸಮಾಲೋಚಕರ ಸೇವೆಗಳು **(Consultancy Services Agencies/ Firm/ Company)** ರವರು ದಿನಾಂಕ 06.05.2025 ರಿಂದ 15.05.2025 ಸಾಯಂಕಾಲ 4.00 ಗಂಟೆಯವರೆಗೆ **www.kppp.karnataka.gov.in** ನಲ್ಲಿ ವೀಕ್ಷಿಸಿ ಟೆಂಡರ್ ಡಾಕುಮೆಂಟಗಳನ್ನು ಇ–ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ಹಾಗೂ ಸದರಿ ಕಾಮಗಾರಿಯ ತಾಂತ್ರಿಕ ಬಿಡ್ಡನ್ನು ದಿ. 16.05.2025 ಸಾಯಂಕಾಲ 4.30 ಗಂಟೆಗೆ ತೆರೆಯಲಾಗುವುದು.

ಆಸಕ್ತ ಗುತ್ತಿಗೆದಾರರು ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್ ವೆಬ್‌ಸೈಟ್ **www.kppp.karnataka.gov.in** ನಲ್ಲಿ ಹಾಗೂ ಈ ಕೆಳ ಸಹಿ ಮಾಡಿರುವವರ ಕಚೇರಿಯಲ್ಲಿ, ಕಚೇರಿ ವೇಳೆಯಲ್ಲಿ ಪಡೆಯಬಹುದು.

ಕಾರ್ಯನಿರ್ವಾಹಕ ಅಭಿಯಂತರು,
ಕೃಭಾಜನಿನಿ, ನಾಎದಂಕಾ ವಿಭಾಗ,
ರೋಡಲಬಂಡಾ.

DIP/RCR/80/KSMC&A/80/2025-26

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಈ ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಎರಡು ಹಂತದ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಛೇರಿ, (ವಿನ್ಯಾಸ & ಗು.ಆ) 9ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್ ಮೊತ್ತ / ಇ.ಎಂ.ಡಿ
	ಸಂ. ಬೆಂಜಮಂ/ಮುಅ(ವಿ&ಗು.ಆ)/ಅಮುಅ(ವಿ)/ತಾಂಸ/160/2025–26	ದಿನಾಂಕ: 07.05.2025
1)	ಬೆಂಗಳೂರಿನ ಮಲ್ಲೇಶ್ವರಂನ ಸುವರ್ಣ ಭವನ 18ನೇ ಕ್ರಾಸ್‌ನಲ್ಲಿ ಭದ್ರತೆ, ಲಿಫ್ಟ್ ಆಪರೇಟರ್‌ಗಳು, ಕಚೇರಿ ಕೆಲಸದ ಸೇವೆಗಳು ತೋಟಗಾರ, ಪ್ಲಂಬರ್, ಎಲೆಕ್ಟ್ರಿಷಿಯನ್ಸ್, 250KVA DG ಸೆಟ್ ಲಿಫ್ಟ್‌ಗಳ ವಾರ್ಷಿಕ ನಿರ್ವಹಣೆ, ಆಡಿಟೋರಿಯಂನಲ್ಲಿ ಕೇಂದ್ರೀಕೃತ ಹವಾನಿಯಂತ್ರಣ ವ್ಯವಸ್ಥೆ, 2 ವರ್ಷಗಳ ಅವಧಿಗೆ ವಿಭಜಿತ ಹವಾನಿಯಂತ್ರಣಗಳು ಮತ್ತು 2 ವರ್ಷಗಳವರೆಗೆ ವಿಸ್ತರಿಸಬಹುದಾದ ಸೇವೆಗಳನ್ನು ಒದಗಿಸುವ ಕಾಮಗಾರಿ.	ರೂ. 271.00 ಲಕ್ಷಗಳು / ರೂ. 4.00 ಲಕ್ಷಗಳು

ಮೇಲ್ಕಂಡ ಕಾಮಗಾರಿಗಳಿಗೆ ಟೆಂಡರ್ ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 22.05.2025 ರಂದು ಸಂಜೆ 4.00 ಗಂಟೆಯವರೆಗೆ, ಟೆಂಡರ್‌ಗಳನ್ನು ತೆರೆಯುವ ದಿನಾಂಕ : 23.05.2025 ರ ಸಂಜೆ 4.00 ಗಂಟೆಗೆ

ಸಹಿ/– ಮುಖ್ಯ ಅಭಿಯಂತರರು (ವಿನ್ಯಾಸ & ಗು.ಆ)

ಮುಖ್ಯ ಅಭಿಯಂತರರ ಕಛೇರಿ (ತ್ಯಾನೀನಿ–ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್ ಮೊತ್ತ / ಇ.ಎಂ.ಡಿ
	ಸಂ. ಬೆಂಜಮಂ/ಮುಅ(ತ್ಯಾನೀನಿ–ಪ)/ಅಮುಅ(ತ್ಯಾನೀನಿ–ಉ–ಪ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–2/160/2025–26	ದಿ: 07.05.2025
2)	ಶೋಭಾ ಎಲೈಟ್ ಅಪಾರ್ಟ್‌ಮೆಂಟ್‌ನಿಂದ 5 ಎಂಎಲ್‌ಡಿ ಐಎಸ್‌ಪಿಎಸ್ ನಾಗಸಂದ್ರಕ್ಕೆ 600ಮಿ.ಮೀ ವ್ಯಾಸದ ಆರ್‌ಸಿಸಿ ಎನ್ ಪಿ–3 ಮಾರ್ಗದ ಒಳಚರಂಡಿಯನ್ನು ಒದಗಿಸುವುದು ಮತ್ತು ಅಳವಡಿಸುವ ಕಾಮಗಾರಿ. (2ನೇ ಕರೆ).	ರೂ. 399.92 ಲಕ್ಷಗಳು / ರೂ. 6.00ಲಕ್ಷಗಳು

ಮೇಲ್ಕಂಡ ಕಾಮಗಾರಿಗಳಿಗೆ ಟೆಂಡರ್ ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 06.06.2025 ರಂದು ಸಂಜೆ 5.30 ಗಂಟೆಯವರೆಗೆ, ಟೆಂಡರ್‌ಗಳನ್ನು ತೆರೆಯುವ ದಿನಾಂಕ : 09.06.2025 ರ ಬೆಳಿಗ್ಗೆ 11.00 ಗಂಟೆಗೆ

ಸಹಿ/– ಮುಖ್ಯ ಅಭಿಯಂತರರು (ತ್ಯಾನೀನಿ–ಪಶ್ಚಿಮ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/542/Zen/2025-26

ಬೆಳಗಾವಿಗೆ 'ವಂದೇ ಭಾರತ್' ಅನುಮೋದನೆ

ಬೆಳಗಾವಿ: 'ಬೆಂಗಳೂರು– ಬೆಳಗಾವಿ ಮಧ್ಯೆ ಹೊಸ 'ವಂದೇ ಭಾರತ್' ಎಕ್ಸ್‌ಪ್ರೆಸ್ ರೈಲು ಸೇವೆಗೆ ಪ್ರಧಾನಿ ನರೇಂದ್ರ ಮೋದಿ ಹಾಗೂ ರೈಲ್ವೆ ಸಚಿವೆ ಅಶ್ವಿನಿ ವೈಷ್ಣವ್ ಅನುಮೋದನೆ ನೀಡಿದ್ದಾರೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.

'ಎಕ್ಸ್' ಖಾತೆಯಲ್ಲಿ ಬುಧವಾರ ಈ ಮಾಹಿತಿ ನೀಡಿರುವ ಅವರು, 'ಬೆಳಗಾವಿಯಿಂದ ಬೆಳಿಗ್ಗೆ ಮತ್ತು ಬೆಂಗಳೂರಿನಿಂದ ಮಧ್ಯಾಹ್ನ ಈ ರೈಲು ಸಂಚರಿಸಲಿದೆ. ಈ ರೈಲು ಸೇವೆಯಿಂದ ಉತ್ತರ ಕರ್ನಾಟಕದ ಅಭಿವೃದ್ಧಿಗೆ ದೊಡ್ಡ ಉತ್ತೇಜನ ಸಿಗಲಿದೆ' ಎಂದು ಹೇಳಿದ್ದಾರೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–10/268/2025–26 ದಿನಾಂಕ: 07.05.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಆಧುನಿಕ ತಂತ್ರಜ್ಞಾನ ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ 1ನೇ ಮತ್ತು 2ನೇ ಹಂತ ಕೈಗಾರಿಕಾ ಪ್ರದೇಶಕ್ಕೆ ನೀರು ಸರಬರಾಜು ವಿತರಣಾ ಜಾಲವನ್ನು ಒದಗಿಸುವ ಕಾಮಗಾರಿ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 23.05.2025 ಸಂಜೆ 4.00 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/548/Zen/2025-26

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ

ನಗರಾಭಿವೃದ್ಧಿ ಭವನ, ನಂ.22, 17ನೇ 'ಎಫ್' ಕ್ರಾಸ್, ಹಳೆ ಮದ್ರಾಸು ರಸ್ತೆ, ಇಂದಿರಾನಗರ 2ನೇ ಹಂತ,
ಬಿಎಂಟಿಸಿ ಡಿಪೋ ಹತ್ತಿರ, ಬೆಂಗಳೂರು–560 038. ದೂರವಾಣಿ: 91–80–25196100, 25196124 ಫ್ಯಾಕ್ಸ್: 080–25196110
ಇ–ಮೇಲ್ ವಿಳಾಸ: info@kuidfc.com ಅಂತರ್ಜಾಲ ವಿಳಾಸ: www.kuidfc.com

ಸಂಖ್ಯೆ: ಕೆಯುಐಡಿಎಫ್‌ಸಿ/ಯುಡಬ್ಲ್ಯೂಎಮ್/37/ಎನ್‌ಟಿಎಫ್‌ಎನ್/2024–25/15/467 ದಿನಾಂಕ: 06.05.2025

ಆಸಕ್ತಿ ವ್ಯಕ್ತಪಡಿಸುವಿಕೆ(EoI)

ಕೆಯುಐಡಿಎಫ್‌ಸಿ ಸಂಸ್ಥೆಯು ಜಲಶುದ್ಧಿ ಅಭಿಯಾನ ಯೋಜನೆಯಡಿಯಲ್ಲಿ N.G.T ಪರಿಸರ ಪರಿಹಾರ ನಿಧಿ ಹಾಗೂ ಸ್ವಚ್ಛ ಭಾರತ್ ಮಿಷನ್ (ನಗರ) –2.0 ನಿಧಿಯ ಯೋಜನೆಗಳನ್ನು ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನಗೊಳಿಸಲು ನೋಡಲ್ ಸಂಸ್ಥೆಯಾಗಿ 0.5 ಎಂಎಲ್‌ಡಿ ಇಂದ 30 ಎಂಎಲ್‌ಡಿ ಸಾಮರ್ಥ್ಯದವರೆಗೆ ದ್ರವ ತ್ಯಾಜ್ಯ ಸಂಸ್ಕರಣಾ ಘಟಕಗಳ ನಿರ್ಮಾಣ ಮಾಡುವ ಸಲುವಾಗಿ ತಂತ್ರಜ್ಞಾನ ಪೂರೈಕೆದಾರ ಏಜೆನ್ಸಿ/ಕಂಪನಿಗಳಿಂದ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಆಹ್ವಾನಿಸಿದೆ.

ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಆಹ್ವಾನಿಸಿರುವ ದಿನಾಂಕ	08.05.2025
ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಸಲ್ಲಿಸಲು ಕೊನೆಯ ದಿನಾಂಕ & ಸಮಯ	15.05.2025 ಸಮಯ: 4.30 ಅಪರಾಹ್ನ
ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ತೆರೆಯುವ ದಿನಾಂಕ & ಸಮಯ	15.05.2025 ಸಮಯ : 05.30 ಅಪರಾಹ್ನ

ಆಸಕ್ತ ಏಜೆನ್ಸಿಗಳು/ತಂತ್ರಜ್ಞಾನ ಪೂರೈಕೆದಾರರು 0.5 ಎಂಎಲ್‌ಡಿ ಇಂದ 30 ಎಂಎಲ್‌ಡಿ ಸಾಮರ್ಥ್ಯದವರೆಗಿನ ದ್ರವ ತ್ಯಾಜ್ಯ ಸಂಸ್ಕರಣಾ ಘಟಕಗಳಿಗೆ ತಾಂತ್ರಿಕ ಮತ್ತು ಆರ್ಥಿಕ ಪ್ರಸ್ತಾವನೆಗಳನ್ನು ಇಮೇಲ್ info@kuidfc.com ಮುಖಾಂತರ ಅಥವಾ ಖುದ್ದಾಗಿ ನಿಗಧಿತ ಸಮಯದೊಳಗೆ ಸಲ್ಲಿಸಲು ಕೋರಿದೆ. ಅಂತಿಮ ದಿನಾಂಕದ ನಂತರ ಸಲ್ಲಿಸಿದ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುವುದಿಲ್ಲ. ಹೆಚ್ಚಿನ ಸಹಾಯಕ್ಕಾಗಿ ಫೋನ್ ನಂ: 9986338038ನ್ನು ಸಂಪರ್ಕಿಸಬಹುದಾಗಿದೆ.
ಕೆಯುಐಡಿಎಫ್‌ಸಿ ಸಂಸ್ಥೆಯು ಯಾವುದೇ ಪ್ರಸ್ತಾವನೆಗಳನ್ನು ಕಾರಣ ನೀಡದೆ ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತದೆ.

ಸಹಿ/–
ಕಾರ್ಯ ವ್ಯವಸ್ಥಾಪಕರು/ಮುಖ್ಯ ಅಭಿಯಂತರರು,
ಯೋಜನಾ ಮೇಲ್ವಿಚಾರಣಾ ಘಟಕ,
ಯುಡಬ್ಲ್ಯೂಎಮ್– ಕೆಯುಐಡಿಎಫ್‌ಸಿ, ಬೆಂಗಳೂರು.

ವಾಸಾಸಂಇ/ವಾಪ್ರ/527/ಎಂಎಎ/2025–26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ಸಂ.49, 4 & 5ನೇ ಮಹಡಿ, ಪೂರ್ವ ವಿಭಾಗ ಖನಿಜ ಭವನ, ರೇಸ್‌ಕೋರ್ಸ್ ರಸ್ತೆ,
ಬೆಂಗಳೂರು– 560001 ಪೋನ್ ಸಂ. 080–40931272
ವೆಬ್‌ಸೈಟ್: www.kiadb.in ಇ–ಮೇಲ್: cdoce1@kiadb.in or jdtp@kiadb.in

ಟೆಂಡರ್ ಪ್ರಕಟಣೆ ಸಂಖ್ಯೆ: ಐಎಡಿಬಿ/ಜೆಡಿಟಿಪಿ/ಇಐಎ/ಇಟಿಎನ್‌ಡಿ–ಇಸಿ–25/60/2025–26 ದಿನಾಂಕ: 07–05–2025

ಪರಿಸರ ವಿಮೋಚನಾ ಪತ್ರ (ಎನ್‌ವಿರಾನ್‌ಮೆಂಟ್ ಕ್ಲಿಯರೆನ್ಸ್) ಪಡೆಯಲು ಸಲಹಾ ಸೇವೆಗಳನ್ನು ಒದಗಿಸಲು ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಪರಿಸರ ಸಮಾಲೋಚಕರಿಂದ ಸಲಹಾ ಸೇವೆಗಳನ್ನು ಒದಗಿಸಲು ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ. ಪರಿಸರ ಮತ್ತು ಅರಣ್ಯ ಸಚಿವಾಲಯ, ನವದೆಹಲಿ ಇವರಿಂದ ಮಾನ್ಯತೆ ಪಡೆದ ಪಟ್ಟಿಯಲ್ಲಿ 7(c) ವರ್ಗದಲ್ಲಿ ಸಲಹೆಗಾರರಾಗಿ ಹೆಸರು ಸೇರ್ಪಡೆಯಾಗಿರುವ ಸಂಸ್ಥೆಗಳು NABET Accredited/MoU with NABET ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

ಕ್ರಮ ಸಂಖ್ಯೆ	ಕೆಲಸದ ಹೆಸರು	ಇ.ಎಂ.ಡಿ ರೂ. (ಲಕ್ಷಗಳಲ್ಲಿ)
1	ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ–ದೊಡ್ಡಬಳ್ಳಾಪುರ ತಾಲ್ಲೂಕಿನ ಕೋಡಿಗೇಹಳ್ಳಿ, ಕೆಂಚನಪುರ ಮತ್ತು ಬಳಗೆರೆ ಗ್ರಾಮಗಳು ಒಟ್ಟು 1204.17ಎಕರೆ ವಿಸ್ತೀರ್ಣ Kwin City 1ನೇ ಹಂತ ಕೈಗಾರಿಕಾ ಪ್ರದೇಶಕ್ಕೆ ರಾಜ್ಯ ಪರಿಸರ ಅಘಾತ ಅಂದಾಜೀಕರಣ ಪ್ರಾಧಿಕಾರರವರಿಂದ (SEIAA) ಪರಿಸರ ವಿಮೋಚನಾ (EC) ಪತ್ರ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ)ಯಿಂದ ಸ್ಥಾಪನೆ ಅನುಮತಿ ಪತ್ರ (CFE) ಪಡೆಯಲು ಹಾಗೂ 3 ವರ್ಷಗಳ ಅವಧಿಯವರೆಗೆ ಪರಿಸರ ವಿಮೋಚನಾ ಪತ್ರ ಮತ್ತು ಸ್ಥಾಪನೆ ಅನುಮತಿ ಪತ್ರಗಳಲ್ಲಿ ವಿಧಿಸುವ ನಿಬಂಧನೆಗಳಿಗೆ ಅರ್ಧವಾರ್ಷಿಕ ಅನುಸರಣಾ ವರದಿಯನ್ನು ತಯಾರಿಸಿ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸಲು, ಇಐಎ ವರದಿ, ಎಸ್‌ಐಎಸ್ ಅಧ್ಯಯನಗಳು ಇತ್ಯಾದಿಯನ್ನು ಸಿದ್ಧಪಡಿಸಲು (2ನೇ ಕರೆ).	2.00
2	ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ–ದೊಡ್ಡಬಳ್ಳಾಪುರ ತಾಲ್ಲೂಕಿನ ಕೋಡಿಗೇಹಳ್ಳಿ, ಕೆಂಚನಪುರ, ಬಳಗೆರೆ ಮತ್ತು ಹುಲಿಕುಂಟೆ ಗ್ರಾಮಗಳು ಒಟ್ಟು 1121.12ಎಕರೆ ವಿಸ್ತೀರ್ಣ Kwin City 2ನೇ ಹಂತ ಕೈಗಾರಿಕಾ ಪ್ರದೇಶಕ್ಕೆ ರಾಜ್ಯ ಪರಿಸರ ಅಘಾತ ಅಂದಾಜೀಕರಣ ಪ್ರಾಧಿಕಾರರವರಿಂದ (SEIAA) ಪರಿಸರ ವಿಮೋಚನಾ (EC) ಪತ್ರ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ)ಯಿಂದ ಸ್ಥಾಪನೆ ಅನುಮತಿ ಪತ್ರ (CFE) ಪಡೆಯಲು ಹಾಗೂ 3 ವರ್ಷಗಳ ಅವಧಿಯವರೆಗೆ ಪರಿಸರ ವಿಮೋಚನಾ ಪತ್ರ ಮತ್ತು ಸ್ಥಾಪನೆ ಅನುಮತಿ ಪತ್ರಗಳಲ್ಲಿ ವಿಧಿಸುವ ನಿಬಂಧನೆಗಳಿಗೆ ಅರ್ಧವಾರ್ಷಿಕ ಅನುಸರಣಾ ವರದಿಯನ್ನು ತಯಾರಿಸಿ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸಲು, ಇಐಎ ವರದಿ, ಎಸ್‌ಐಎಸ್ ಅಧ್ಯಯನಗಳು ಇತ್ಯಾದಿಯನ್ನು ಸಿದ್ಧಪಡಿಸಲು. (2ನೇ ಕರೆ)	2.00
3	ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ–ದೊಡ್ಡಬಳ್ಳಾಪುರ ತಾಲ್ಲೂಕಿನ ಹುಲಿಕುಂಟೆ, ಜೋಯೀಸ್ ಅಗ್ರಹಾರ ಮತ್ತು ತರಬನಹಳ್ಳಿ ಗ್ರಾಮಗಳು ಒಟ್ಟು 1051.77ಎಕರೆ ವಿಸ್ತೀರ್ಣ Kwin City 3ನೇ ಹಂತ ಕೈಗಾರಿಕಾ ಪ್ರದೇಶಕ್ಕೆ ರಾಜ್ಯ ಪರಿಸರ ಅಘಾತ ಅಂದಾಜೀಕರಣ ಪ್ರಾಧಿಕಾರರವರಿಂದ (SEIAA) ಪರಿಸರ ವಿಮೋಚನಾ (EC) ಪತ್ರ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ)ಯಿಂದ ಸ್ಥಾಪನೆ ಅನುಮತಿ ಪತ್ರ (CFE) ಪಡೆಯಲು ಹಾಗೂ 3 ವರ್ಷಗಳ ಅವಧಿಯವರೆಗೆ ಪರಿಸರ ವಿಮೋಚನಾ ಪತ್ರ ಮತ್ತು ಸ್ಥಾಪನೆ ಅನುಮತಿ ಪತ್ರಗಳಲ್ಲಿ ವಿಧಿಸುವ ನಿಬಂಧನೆಗಳಿಗೆ ಅರ್ಧವಾರ್ಷಿಕ ಅನುಸರಣಾ ವರದಿಯನ್ನು ತಯಾರಿಸಿ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸಲು, ಇಐಎ ವರದಿ, ಎಸ್‌ಐಎಸ್ ಅಧ್ಯಯನಗಳು ಇತ್ಯಾದಿಯನ್ನು ಸಿದ್ಧಪಡಿಸಲು. (2ನೇ ಕರೆ)	2.00
4	ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ–ದೊಡ್ಡಬಳ್ಳಾಪುರ ತಾಲ್ಲೂಕಿನ ಗೋರಘಟ್ಟ, ಹುಲಿಕುಂಟೆ ಮತ್ತು ದೊಡ್ಡಮಂಕನಾಳ ಗ್ರಾಮಗಳು ಒಟ್ಟು 1232.20 ಎಕರೆ ವಿಸ್ತೀರ್ಣ Kwin City 4ನೇ ಹಂತ ಕೈಗಾರಿಕಾ ಪ್ರದೇಶಕ್ಕೆ ರಾಜ್ಯ ಪರಿಸರ ಅಘಾತ ಅಂದಾಜೀಕರಣ ಪ್ರಾಧಿಕಾರರವರಿಂದ (SEIAA) ಪರಿಸರ ವಿಮೋಚನಾ (EC) ಪತ್ರ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ)ಯಿಂದ ಸ್ಥಾಪನೆ ಅನುಮತಿ ಪತ್ರ (CFE) ಪಡೆಯಲು ಹಾಗೂ 3 ವರ್ಷಗಳ ಅವಧಿಯವರೆಗೆ ಪರಿಸರ ವಿಮೋಚನಾ ಪತ್ರ ಮತ್ತು ಸ್ಥಾಪನೆ ಅನುಮತಿ ಪತ್ರಗಳಲ್ಲಿ ವಿಧಿಸುವ ನಿಬಂಧನೆಗಳಿಗೆ ಅರ್ಧವಾರ್ಷಿಕ ಅನುಸರಣಾ ವರದಿಯನ್ನು ತಯಾರಿಸಿ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸಲು, ಇಐಎ ವರದಿ, ಎಸ್‌ಐಎಸ್ ಅಧ್ಯಯನಗಳು ಇತ್ಯಾದಿಯನ್ನು ಸಿದ್ಧಪಡಿಸಲು. (2ನೇ ಕರೆ)	2.00
5	ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ–ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡಮಂಕನಾಳ, ಮಾವಿನಕುಂಟೆ ಮತ್ತು ಕಾಡತಿಪ್ಪನಹಳ್ಳಿ ಗ್ರಾಮಗಳು ಒಟ್ಟು 1229.42 ಎಕರೆ ವಿಸ್ತೀರ್ಣ Kwin City 5ನೇ ಹಂತ ಕೈಗಾರಿಕಾ ಪ್ರದೇಶಕ್ಕೆ ರಾಜ್ಯ ಪರಿಸರ ಅಘಾತ ಅಂದಾಜೀಕರಣ ಪ್ರಾಧಿಕಾರರವರಿಂದ (SEIAA) ಪರಿಸರ ವಿಮೋಚನಾ (EC) ಪತ್ರ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ)ಯಿಂದ ಸ್ಥಾಪನೆ ಅನುಮತಿ ಪತ್ರ (CFE) ಪಡೆಯಲು ಹಾಗೂ 3 ವರ್ಷಗಳ ಅವಧಿಯವರೆಗೆ ಪರಿಸರ ವಿಮೋಚನಾ ಪತ್ರ ಮತ್ತು ಸ್ಥಾಪನೆ ಅನುಮತಿ ಪತ್ರಗಳಲ್ಲಿ ವಿಧಿಸುವ ನಿಬಂಧನೆಗಳಿಗೆ ಅರ್ಧವಾರ್ಷಿಕ ಅನುಸರಣಾ ವರದಿಯನ್ನು ತಯಾರಿಸಿ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸಲು, ಇಐಎ ವರದಿ, ಎಸ್‌ಐಎಸ್ ಅಧ್ಯಯನಗಳು ಇತ್ಯಾದಿಯನ್ನು ಸಿದ್ಧಪಡಿಸಲು. (2ನೇ ಕರೆ)	2.00

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ https://kppp.Karnataka.gov.in ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಟೆಂಡರ್ ದಿನಾಂಕಗಳು ಕೆಳಕಂಡಂತಿರುವುದು:

- ಬಿಡ್ ಪೂರ್ವ ವಿಚಾರಣೆಗಳನ್ನು ಸ್ವೀಕರಿಸುವ ಕಡೆಯ ದಿನಾಂಕ: 14–05–2025 ರಂದು ಸಂಜೆ 4.00 ಘಂಟೆಯವರೆಗೆ.
- ಬಿಡ್ ಪೂರ್ವ ಸಭೆ ನಡೆಯುವ ದಿನಾಂಕ: 15–05–2025 ರಂದು ಬೆಳಿಗ್ಗೆ 11.30 ಘಂಟೆಗೆ.
- ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ: 20–05–2025 ರಂದು ಮಧ್ಯಾಹ್ನ 3.00 ಘಂಟೆಯವರೆಗೆ.
- ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 21–05–2025 ರಂದು ಮಧ್ಯಾಹ್ನ 3.30 ಘಂಟೆ ನಂತರ

ಸಹಿ/–
ಮುಖ್ಯ ಅಭಿಯಂತರರು–1
ಕೆ.ಐ.ಎ.ಡಿ.ಬಿ

ವಾ.ಸಾ.ಸಂ.ಇ/ವಾಪ್ರ/545/ಆಕಾರ್/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ–5,
ಆರೋಗ್ಯ ಮತ್ತು ನೈರ್ಮಲ್ಯ ವಿಭಾಗ, ಬಿಬಿಎಂಪಿ ಕೇಂದ್ರ ಕಛೇರಿ, ನಂ. 408,
ಅನೆಕ್ಸ್–3 ಕಟ್ಟಡ, 4ನೇ ಮಹಡಿ, ಎನ್.ಆರ್. ವೃತ್ತ, ಬೆಂಗಳೂರು – 560002.

ತಿದ್ದುಪಡಿ

ಕಾಮಗಾರಿಯ ಹೆಸರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರವಾಹದ ಸಮಯದಲ್ಲಿ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಗಳಂತಹ ಕೆಲಸಗಳನ್ನು ನಿರ್ವಹಿಸಲು ಲೈಫ್ ಜಾಕೇಟ್, ಪಂಪ್‌ಗಳು, ಓಬಿಎಂ ಮೋಟಾರ್‌ಗಳೊಂದಿಗೆ ಗಾಳಿ ತುಂಬಿದ ದೋಣಿಗಳಂತಹ ವಿಪತ್ತು ನಿರ್ವಹಣಾ ಸಲಕರಣೆಗಳನ್ನು ಪೂರೈಸುವುದು.

ಟೆಂಡರ್ ಸಂಖ್ಯೆ: ಬಿಬಿಎಂಪ/ಕಾಅ–5/ಆ&ನೈ/ಟೆಂಡರ್/01/2025–26 ದಿನಾಂಕ: 06.05.2025

ಕ್ರ. ಸಂ.	ವಿವರ	ಟೆಂಡರ್ ಪ್ರಕಟಣೆಯ ಪ್ರಕಾರ	ಈ ರೀತಿ ಓದಿಕೊಳ್ಳತಕ್ಕದ್ದು
1	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಗಳಲ್ಲಿ)	61,47,200.00	62,00,000.00
2	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	1,23,000.00	1,24,000.00

ಸಹಿ/– ಕಾರ್ಯಪಾಲಕ ಅಭಿಯಂತರರು–5,
ಆರೋಗ್ಯ ಮತ್ತು ನೈರ್ಮಲ್ಯ ವಿಭಾಗ, ಬಿಬಿಎಂಪಿ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ರಾಮಕೃಷ್ಣಾಶ್ರಮ ರಸ್ತೆ ಅಮರಜ್ಯೋತಿ ನಗರ ತುಮಕೂರು–572105
ದೂ: 0816–2200209

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾಮಗಾರಿ ಹೆಸರು: ಪುರಸಭೆ ಪಾವಗಡ ರವರ ಠೇವಣಿ ಕೊಡುಗೆಯಡಿ, ಪಟ್ಟಣದ ಕಾವಲಗೆರೆಯಲ್ಲಿ ಹಾಲಿ ಇರುವ 2.50ಲ.ಲೀ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಗಾರವನ್ನು ತೆರವುಗೊಳಿಸುವುದು ಹಾಗೂ 1 ಸಂಖ್ಯೆ 2.50ಲ.ಲೀ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಗಾರವನ್ನು ನಿರ್ಮಿಸುವ ಕಾಮಗಾರಿ.

ಟೆಂಡರ್ ಸಂಖ್ಯೆ : KUWSDB/2025-26/WS/WORK_INDENT336/CALL-2.

ಟೆಂಡರ್ ಮೊತ್ತ: ರೂ. 63.70 ಲಕ್ಷಗಳು (ಜಿ.ಎಸ್.ಟಿ ಮೊತ್ತ ಹೊರತುಪಡಿಸಿ).

ಟೆಂಡರ್ ವಿವರ: ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **14–05–2025 ರಂದು ಸಂಜೆ 05.30** ಗಂಟೆಯವರೆಗೆ.

ಹೆಚ್ಚಿನ ವಿವರಗಳನ್ನು **https://kppp.karnataka.gov.in** website ನಲ್ಲಿ ಪಡೆಯುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕನನೀಸ ಮತ್ತು ಒಚ ಮಂಡಳಿ ವಿಭಾಗ, ತುಮಕೂರು

DIPR/TUM/RO-13/25-26/Oysters

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹೊಳಲ್ಕೆರೆ–577526

(ಚಿತ್ರದುರ್ಗ ಜಿಲ್ಲೆ)
Ph No:08191–275113 E- Mail:apmcholalkere@gmail.com

ಪತ್ರ.ಸಂ:ಕೃಉಮಾಸ/ಹೊಳ/53/2025–26 ದಿನಾಂಕ: 07/05/2025

ಟೆಂಡರ್ ಪ್ರಕಟಣೆ (2ನೇ ಕರೆ)

ಹೊಳಲ್ಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಎಸ್.ಬಿ.ಐ ಉಳಿತಾಯ ಖಾತೆಯಲ್ಲಿರುವ ಹೆಚ್ಚುವರಿ ಹಣವನ್ನು ಇ–ಪೋರ್ಟಲ್‌ನಲ್ಲಿ ಇ–ಹರಾಜಿನ ಮೂಲಕ ನಿಶ್ಚಿತ ಠೇವಣಿಯಲ್ಲಿ ತೊಡಗಿಸುವ ಕುರಿತು ಆಸಕ್ತ Public Sector Banks Including regional Banks(RRBs) ಹಾಗೂ Private Sector Scheduled Commercial Banks ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ (Auction No:APMC/2025-26/ACTION87) ಶಾಖೆಗಳಿಂದ ಯಿಂದ ಸ್ಪರ್ಧಾತ್ಮಕ ಬಡ್ಡಿದರವನ್ನು ಇ–ಬಿಡ್ಡಿಂಗ್ ಮೂಲಕ ಆಹ್ವಾನಿಸಲಾಗಿದ್ದು, ಸಮಜಾಯಿಷಿ ನೀಡುವ ಕೊನೆಯ ದಿನಾಂಕ:13/05/2025 ಸಂಜೆ 4:30 ಘಂಟೆಯವರೆಗೆ, ಇ–ಹರಾಜಿನಲ್ಲಿ ಭಾಗವಹಿಸುವವರ ಕೊನೆಯ ದಿನಾಂಕ: 20/05/2025 ಬೆಳಗ್ಗೆ 11:00 ಘಂಟೆಯವರೆಗೆ ಮತ್ತು ಇ–ಹರಾಜನ್ನು ದಿನಾಂಕ: 22/05/2025 ರಂದು ಬೆಳಗ್ಗೆ 11:00 ಘಂಟೆಯಿಂದ ಸಂಜೆ 5:00 ಘಂಟೆಯವರೆಗೆ ನಡೆಸಲಾಗುವುದು ಮತ್ತು ಟೆಂಡರ್ ತೆರೆಯುವ ದಿನಾಂಕ: 26/05/2025 ರ ಬೆಳಗ್ಗೆ 11:00 ಘಂಟೆಗೆ ಇರುತ್ತದೆ.

ಹೆಚ್ಚಿನ ವಿವರಗಳನ್ನು https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ. ಮತ್ತು ಈ ಕಛೇರಿಯ ಸಿಬ್ಬಂದಿಯವರ ದೂರವಾಣಿ ಸಂಖ್ಯೆ:9008805123 ರ ಮೂಲಕ ಪಡೆಯಬಹುದಾಗಿರುತ್ತದೆ. ಟೆಂಡರ್‌ನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿದೆ.

ಸಹಿ/– ಕಾರ್ಯದರ್ಶಿ,
ಕೃ.ಉ.ಮಾ.ಸ., ಹೊಳಲ್ಕೆರೆ.

ಸಹಿ/– ಆಡಳಿತಾಧಿಕಾರಿಗಳು,
ಕೃ.ಉ.ಮಾ.ಸ.,
ಹೊಳಲ್ಕೆರೆ.

DIPR/CTA/KSMCA/50/2025-26

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಫ್ಲ್ಯಾಟ್ ನಂ. 1234, 5 ನೇ ಮಹಡಿ, ಕೆಎಸ್‌ಐಐಡಿಸಿ ಕಟ್ಟಡ, ಐಟಿ ಪಾರ್ಕ್,
ಸೌತ್ ಬ್ಲಾಕ್, ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು– 560010
ದೂರವಾಣಿ 080–22342162 e-mail: karnregs.office@gmail.com

ಸಂಖ್ಯೆ: RDC-EGS/99/2024 (CALL-3) C.No. 1321445 ದಿನಾಂಕ: 07.05.2025

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರಾಜ್ಯ/ ಜಿಲ್ಲೆ/ ತಾಲ್ಲೂಕು/ಗ್ರಾಮ ಪಂಚಾಯತಿ/ ಅನುಷ್ಠಾನ ಇಲಾಖೆಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಸಾಮೂಹಿಕ ವೈದ್ಯಕೀಯ ವಿಮೆ ಸೌಲಭ್ಯವನ್ನು ಒದಗಿಸಲು ಸಂಸ್ಥೆಗಳ ಆಯ್ಕೆಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಂತರ್ಜಾಲ ಅರ್ಜಿಗೆ ಅರ್ಹತೆ ಇರುವ ಬಿಡ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಟೆಂಡರ್‌ಗೆ ಸಂಬಂಧಿಸಿದ ವಿವರಗಳು ವೆಬ್‌ಸೈಟ್ **https://kppp.karnataka.gov.in/** ನಲ್ಲಿ ದಿನಾಂಕ: **08–05–2025** ರ ನಂತರ ಲಭ್ಯವಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಜಂಟಿ ನಿರ್ದೇಶಕರು(ತಾಂತ್ರಿಕ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ **(ದೂರವಾಣಿ ಸಂಖ್ಯೆ 080–22342162)** ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಜಂಟಿ ನಿರ್ದೇಶಕರು(ತಾಂತ್ರಿಕ) ಹಾಗೂ
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

DIPR/CP/YC/539/2025-26

ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮಂಡ್ಯ.

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಕ್ಕರೆ ನಗರ, ಮಂಡ್ಯ 571 402.
Ref:fJA/ವಾ.ವಿ./ಬಿಸ್&ಸಕ್ಕರೆ/40/2025–26 Dated: 07.05.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮೈಸೂರು ಸಕ್ಕರೆ ಕಂಪನಿಯ ಉತ್ಪನ್ನವಾದ ಎಸ್–30 ಹಾಗೂ ಬಿಸ್ ಸಕ್ಕರೆಯನ್ನು ಮಾರಾಟದ ಆದೇಶದನ್ವಯ ಮಾರಾಟ ಮಾಡಲು ಅಲ್ಪಾವಧಿ ಟೆಂಡರ್ ಪ್ರಕಟಣೆಯ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರಿನ ಇ.ಎಂ.ಡಿ ಹಣ ಹಾಗೂ ಷರತ್ತು ಮತ್ತು ನಿಬಂಧನೆಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ ಸಂ	ಸಾಮಾಗ್ರಿ ವಿವರ	ಮಾರಾಟದ ಪ್ರಮಾಣ	ಇ.ಎಂ.ಡಿ ಹಣ ಪ್ರತಿ ಕ್ವಿಂಟಾಲಿಗೆ
01	ಸಕ್ಕರೆ ಎಸ್–30 (2024–25)	120.00 ಕ್ವಿಂಟಾಲ್	ರೂ. 100/– ಪ್ರತಿ ಕ್ವಿಂಟಾಲ್‌ಗೆ
02	ಬಿಸ್ ಸಕ್ಕರೆ (2024–25)	346.00 ಕ್ವಿಂಟಾಲ್	ರೂ. 100/– ಪ್ರತಿ ಕ್ವಿಂಟಾಲ್‌ಗೆ

ಸೂಚನೆ:(1)ಬಿಡ್‌ದಾರರು ಮೈಸೂರು ಸಕ್ಕರೆ ಕಂಪನಿ, ಮಂಡ್ಯದ ಗೋದಾಮುಗಳಿಗೆ ಭೇಟಿ ನೀಡಿ, ಸಕ್ಕರೆಯ ಗುಣಮಟ್ಟವನ್ನು ಪರಿಶೀಲಿಸಿ, ನಂತರ ದರವನ್ನು ನಮೂದಿಸುವುದು. (2)ಬಿಡ್‌ದಾರರು ಇ.ಎಂ.ಡಿ ಹಣವನ್ನು ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಮೈಸೂರು ಸಕ್ಕರೆ ಕಂಪನಿ, ಮಂಡ್ಯ ಪರವಾಗಿ ಡಿಡಿ ಮುಖಾಂತರ ಮಾತ್ರ ಪಾವತಿಸುವುದು. (3) ಇ.ಎಂ.ಡಿಯೊಂದಿಗೆ ತುಂಬಿದ ಟೆಂಡರ್ ಅರ್ಜಿಗಳನ್ನು ಎರಡು ಮುಚ್ಚಿದ ಪ್ರತ್ಯೇಕ ಲಕ್ಕೋಟೆಗಳಲ್ಲಿ (ಒಂದರಲ್ಲಿ ಇ.ಎಂ.ಡಿ ಮತ್ತು ಎರಡನೇ ಲಕ್ಕೋಟೆಯಲ್ಲಿ ವಾಣಿಜ್ಯ ಬಿಡ್) ಕೊನೆಯ ದಿನಾಂಕ:19.05.2025 ರ ಮಧ್ಯಾಹ್ನ 2.30 ಗಂಟೆಯೊಳಗೆ ಸಲ್ಲಿಸುವುದು ಹಾಗೂ ಅದೇ ದಿನ ಮಧ್ಯಾಹ್ನ 3.00 ಗಂಟೆಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರ ಕಛೇರಿ ಮಂಡ್ಯದಲ್ಲಿ ಟೆಂಡರನ್ನು ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ವಾಣಿಜ್ಯ ವ್ಯವಸ್ಥಾಪಕರು(ಪ್ರ)ರವರ ಮೊಬೈಲ್ ಸಂಖ್ಯೆ:9845937173/7353328103 ಸಂಪರ್ಕಿಸುವುದು. ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಂತಿಮ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ.

ದಿನಾಂಕ:07–05–2025 ಸಹಿ/– ಪ್ರಧಾನ ವ್ಯವಸ್ಥಾಪಕರು.

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/075/2025–26

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ನಾವು ನಂಬುವ ತತ್ವಗಳಿಗಿಂತ ಬದುಕುವ ರೀತಿ ಮುಖ್ಯ.
–ಎ.ಎನ್.ಮೂರ್ತಿ ರಾವ್

ಆಪರೇಷನ್ ಸಿಂಧೂರ ಕಾರ್ಯಾಚರಣೆ ಪಾಕಿಸ್ತಾನ ಪಾಠ ಕಲಿಯಬೇಕು

ಪಹಲ್ಗಾಮ್‌ನಲ್ಲಿ ಉಗ್ರರು ದಾಳಿ ನಡೆಸಿದ್ದಕ್ಕೆ ಪ್ರತೀಕಾರದ ರೂಪದಲ್ಲಿ ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಭಯೋತ್ಪಾದಕರ ಶಿಬಿರಗಳ ಮೇಲೆ ಭಾರತವು ದಾಳಿ ನಡೆಸಿದೆ. ಬಹಾವಲ್‌ಪುರ, ಮುಜಫ್ಫರಾಬಾದ್ ಮತ್ತು ಇತರ ಕೆಲವು ಸ್ಥಳಗಳಲ್ಲಿನ ಒಟ್ಟು ಒಂಬತ್ತು ಶಿಬಿರಗಳ ಮೇಲೆ ಭಾರತವು ಮಿಲಿಟರಿ ದಾಳಿ ನಡೆಸಿದೆ. ಪಹಲ್ಗಾಮ್‌ನಲ್ಲಿ ಉಗ್ರರು ದಾಳಿ ನಡೆಸಿದ ನಂತರದಲ್ಲಿ, ಈ ದಾಳಿ ನಡೆಸಿದವರು ಹಾಗೂ ದಾಳಿಗೆ ಬೆಂಬಲ ನೀಡಿದವರ ವಿರುದ್ಧ ಕ್ರಮ ಜರುಗಿಸುವುದು ಖಚಿತ ಎಂಬ ಮಾತನ್ನು ಭಾರತ ಸ್ಪಷ್ಟವಾಗಿ ಹೇಳಿತ್ತು. ಭಯೋತ್ಪಾದಕರು ಎಲ್ಲಿಯೇ ಇದ್ದರೂ ಅವರನ್ನು ಹುಡುಕಿ ಶಿಕ್ಷಿಸಲಾಗುತ್ತದೆ ಎಂಬ ಮಾತನ್ನು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದರು. ಕೇಂದ್ರ ಸರ್ಕಾರದ ಇತರ ಕೆಲವು ಪ್ರಮುಖ ಮುಖಂಡರು ಕೂಡ, ದೇಶದ ದೃಢಸಂಕಲ್ಪವನ್ನು ಸ್ಪಷ್ಟವಾಗಿ ಹೇಳಿದ್ದರು. ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಗುರಿಗಳ ಮೇಲೆ ಭಾರತ ನಡೆಸಿರುವ ದಾಳಿಯು ಯಶಸ್ವಿಯಾಗಿದೆ ಎಂದು ವರದಿಗಳು ಹೇಳುತ್ತಿವೆ. ಈ ದಾಳಿಗೆ ಹಲವು ಭಯೋತ್ಪಾದಕರು ಬಲಿಯಾಗಿದ್ದಾರೆ. 'ಆಪರೇಷನ್ ಸಿಂಧೂರ' ಹೆಸರಿನ ಈ ಕಾರ್ಯಾಚರಣೆಯು 'ಭಯೋತ್ಪಾದಕರನ್ನು ತಯಾರು ಮಾಡುವ ಮೂಲಸೌಕರ್ಯ'ವನ್ನು ಗುರಿಯಾಗಿಸಿಕೊಂಡಿತ್ತು.

ದೇಶದ ಹಿತಾಸಕ್ತಿಯನ್ನು, ಸಾರ್ವಭೌಮತ್ವವನ್ನು ರಕ್ಷಿಸಲು ಸಶಸ್ತ್ರ ಪಡೆಗಳು ಕೈಗೊಂಡಿರುವ ಕ್ರಮಕ್ಕೆ ಇಡೀ ದೇಶ ಬೆಂಬಲ ವ್ಯಕ್ತಪಡಿಸಿದೆ

ಪಾಕಿಸ್ತಾನದ ಯಾವುದೇ ಮಿಲಿಟರಿ ಸ್ಥಳಗಳ ಮೇಲೆ ದಾಳಿ ನಡೆಸಿಲ್ಲ ಎಂಬುದನ್ನು ಭಾರತ ಸ್ಪಷ್ಟಪಡಿಸಿದೆ. ತನ್ನ ಗುರಿಯು ಬಹಳ ನಿಖರವಾಗಿತ್ತು, ಪ್ರತಿದಾಳಿಯನ್ನು ಆಲೋಚಿಸಿ ನಡೆಸಲಾಗಿದೆ, ಅದು ಪರಿಸ್ಥಿತಿಯನ್ನು ಉದ್ವಿಗ್ನಗೊಳಿಸುವ ಸ್ವರೂಪದ್ದಲ್ಲ ಎಂಬುದನ್ನು ಕೂಡ ಭಾರತ ಹೇಳಿದೆ. ಗುರಿಯನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಮತ್ತು ದಾಳಿಯ ಆಲೋಚನೆಯನ್ನು ಕಾರ್ಯರೂಪಕ್ಕೆ ತರುವ ಸಂದರ್ಭದಲ್ಲಿ ಸಂಯಮ ಪಾಲಿಸಲಾಗಿದೆ ಎಂದೂ ಹೇಳಿದೆ. ಭಾರತ ನಡೆಸಿರುವ ದಾಳಿಯನ್ನು 'ಅಪ್ರಚೋದಿತ' ಎಂದು ಪಾಕಿಸ್ತಾನ ಕರೆದಿದೆ. 'ದಾಳಿಗೆ ಪ್ರತಿಯಾಗಿ ಶಿಕ್ಷೆ ಇಲ್ಲದಿಲ್ಲ' ಎಂದು ಅಲ್ಲಿನ ಪ್ರಧಾನಿ ಶೆಹಬಾಜ್ ಷರೀಫ್ ಹೇಳಿದ್ದಾರೆ. ಅಂದರೆ ಪಾಕಿಸ್ತಾನ ಪ್ರತಿದಾಳಿ ನಡೆಸುವ ಸಾಧ್ಯತೆ ಇದೆ ಎಂಬುದನ್ನು ಅವರ ಮಾತು ಹೇಳುತ್ತಿದೆ. ಬಿಕ್ಕಟ್ಟು ಇನ್ನಷ್ಟು ತೀವ್ರ ಸ್ವರೂಪ ಪಡೆದುಕೊಳ್ಳುವ ಸಾಧ್ಯತೆಯನ್ನು ಭಾರತವು ಮೊದಲೇ ಅಂದಾಜು ಮಾಡಿದೆ. ನಾಗರಿಕರ ಸ್ವಯಂ ರಕ್ಷಣೆಯ ಸಿದ್ಧತೆಗಳನ್ನು ಇನ್ನಷ್ಟು ಹೆಚ್ಚುಮಾಡುವ ಉದ್ದೇಶದಿಂದ ಸ್ವಯಂ ರಕ್ಷಣಾ ತಾಲೀಮುಗಳನ್ನು ದೇಶದೆಲ್ಲೆಡೆ ಆಯೋಜಿಸಿರುವುದು ಇದೇ ಕಾರಣಕ್ಕಾಗಿ. ಇಂತಹ ತಾಲೀಮು ದೇಶದಲ್ಲಿ ಐದು ದಶಕಗಳ ನಂತರ ಇದೇ ಮೊದಲ ಬಾರಿಗೆ ನಡೆದಿದೆ. ಅಂದರೆ, ಪಾಕಿಸ್ತಾನದ ಜೊತೆಗಿನ ಸಂಘರ್ಷವು ಒಂದೆರಡು ದಿನಗಳ ಏಟು–ಎದಿರೇಟಿನ ಆಚೆಗೂ ವಿಸ್ತರಿಸುವ ಸಾಧ್ಯತೆ ಇಲ್ಲದಿಲ್ಲ. ಸಿಂಧೂ ಜಲ ಒಪ್ಪಂದವನ್ನು ಅಮಾನತಿನಲ್ಲಿ ಇರಿಸುವುದು, ರಾಜತಾಂತ್ರಿಕ ಸಂಬಂಧವನ್ನು ಕಡಿಮೆ ಮಾಡಿದ್ದು ಸೇರಿದಂತೆ ಇತರ ಹಲವು ಕ್ರಮಗಳನ್ನು ಕೈಗೊಂಡ ನಂತರದಲ್ಲಿ ಭಾರತವು ದಾಳಿ ನಡೆಸಿದೆ. ಪಹಲ್ಗಾಮ್ ದಾಳಿಯ ವಿಚಾರವಾಗಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಪಾಕಿಸ್ತಾನವನ್ನು ತರಾಟೆಗೆ ತೆಗೆದುಕೊಂಡಿದೆ ಎಂಬ ವರದಿಗಳು ಬಂದ ನಂತರದಲ್ಲಿ ಭಾರತ ದಾಳಿ ನಡೆಸಿದೆ. ಭಾರತದಲ್ಲಿ ನಡೆಯುವ ಭಯೋತ್ಪಾದಕ ಕೃತ್ಯಗಳಿಗೆ ಪಾಕಿಸ್ತಾನವು ಬೆಂಬಲ ನೀಡುವುದನ್ನು ಭಾರತದ ಮೇಲಿನ ಆಕ್ರಮಣ ಎಂದು ಮಾತ್ರವೇ ಅರ್ಥ ಮಾಡಿಕೊಳ್ಳಬಹುದು. ಪಾಕಿಸ್ತಾನದ ಕೃತ್ಯಗಳ ಕಾರಣದಿಂದಾಗಿ ಭಾರತ ಎದುರಿಸುತ್ತಿರುವ ಪರಿಸ್ಥಿತಿಯ ಬಗ್ಗೆ ಕೇಂದ್ರ ಸರ್ಕಾರವು ಜಗತ್ತಿನ ಪ್ರಮುಖ ದೇಶಗಳಿಗೆ ಮಾಹಿತಿ ನೀಡಿದೆ.

ದೇಶದ ಹಿತಾಸಕ್ತಿಯನ್ನು, ಸಾರ್ವಭೌಮತ್ವವನ್ನು ರಕ್ಷಿಸಲು ಸಶಸ್ತ್ರ ಪಡೆಗಳು ಕೈಗೊಂಡಿರುವ ಕ್ರಮಕ್ಕೆ ಇಡೀ ದೇಶ ಬೆಂಬಲ ವ್ಯಕ್ತಪಡಿಸಿದೆ. ಎಲ್ಲ ರಾಜಕೀಯ ಪಕ್ಷಗಳು ಕೂಡ ಸಶಸ್ತ್ರ ಪಡೆಗಳಿಗೆ ಬೆಂಬಲ ಸೂಚಿಸಿವೆ. ಪಾಕಿಸ್ತಾನವು ಪಾಠ ಕಲಿತುಕೊಂಡು, ಹೆಜ್ಜೆಯನ್ನು ಹಿಂದಕ್ಕೆ ಇರಿಸಿದರೆ ಒಳಿತು. ಅದು ನೆರೆಯ ರಾಷ್ಟ್ರದ ಜೊತೆ ಒಳ್ಳೆಯ ಸಂಬಂಧ ಹೊಂದುವುದನ್ನು ತನ್ನ ನೀತಿಯನ್ನಾಗಿಸಿಕೊಳ್ಳಬೇಕು. ದೀರ್ಘ ಅವಧಿಯ ಸಮರವು ಎರಡೂ ದೇಶಗಳಿಗೆ ಒಳಿತು ಮಾಡುವುದಿಲ್ಲ. ಅದರಲ್ಲೂ ಮುಖ್ಯವಾಗಿ, ಆರ್ಥಿಕವಾಗಿ ದುರ್ಬಲಗೊಂಡಿರುವ ಹಾಗೂ ರಾಜಕೀಯವಾಗಿ ಕುಸಿಯುವ ಹಂತ ತಲುಪಿರುವ ಪಾಕಿಸ್ತಾನಕ್ಕೆ ಯುದ್ಧ ಒಳಿತಲ್ಲ. ಪಾಕಿಸ್ತಾನಕ್ಕಿಂತ ಹೆಚ್ಚು ಬಲಿಷ್ಠವಾಗಿರುವ ಹಾಗೂ ಎಲ್ಲ ವಿಚಾರಗಳಲ್ಲಿಯೂ ಉತ್ತಮ ಸ್ಥಾನದಲ್ಲಿರುವ ಭಾರತವು ಇದುವರೆಗೆ ಬಹಳ ಪ್ರಬುದ್ಧವಾಗಿ ಮತ್ತು ಜವಾಬ್ದಾರಿಯಿಂದ ನಡೆದುಕೊಂಡಿದೆ. ಆ ಕೆಲಸವನ್ನು ಭಾರತ ಮುಂದುವರಿಸಬೇಕು.

ದಿನದ ಟ್ವೀಟ್

ಅಗತ್ಯವಾಗಿದ್ದ ಕ್ರಮ

ಇಲ್ಲ, ಇದು ಯುದ್ಧದಲ್ಲಿ ತೊಡಗುವ ಸಂಗತಿಯಲ್ಲ. ಪಾಕಿಸ್ತಾನದಲ್ಲಿದ್ದ ಉಗ್ರರ 9 ಶಿಬಿರಗಳನ್ನು ಭಾರತ ತಟಸ್ಥಗೊಳಿಸಿದೆ ಮತ್ತು ಅಂತಹ ಕ್ರಮ ಅಗತ್ಯವಾಗಿತ್ತು. ಭಾರತದ ಪ್ರದೇಶಕ್ಕೆ ನುಸುಳಿ ಮುಗ್ಧ ನಾಗರಿಕರ ಮೇಲೆ ದಾಳಿ ನಡೆಸಿದರೂ ತಾವು ಯಾವ ಪರಿಣಾಮಗಳನ್ನೂ ಎದುರಿಸಬಾರದು ಎಂಬ ಉಗ್ರರ ನಿರೀಕ್ಷೆ ಸರಿಯಲ್ಲ. ಉಗ್ರರ ಅಡಗುದಾಣಗಳು ಎಲ್ಲೇ ಇದ್ದರೂ ನಾಶಪಡಿಸಬೇಕು. ಈ ಶಿಬಿರಗಳ ವಿರುದ್ಧ ಕ್ರಮ ಕೈಗೊಳ್ಳಲು ಪಾಕಿಸ್ತಾನ ವಿಫಲವಾದರೆ, ತನ್ನ ಭದ್ರತೆಗಾಗಿ ಅಂತಹ ಕ್ರಮಕ್ಕೆ ಮುಂದಾಗಬೇಕಾದ ಹೊಣೆ ಸಹಜವಾಗಿಯೇ ಭಾರತದ ಮೇಲೆ ಬೀಳುತ್ತದೆ.

ತಸ್ಲಿಮಾ ನಸ್ರೀನ್, ಲೇಖಕಿ

ಕಿಡಿನುಡಿ

ನಾಚಿಕೆಗೆಟ್ಟ ಮಾಧ್ಯಮಗಳು, ವಾಯುದಾಳಿಯ ಬಗ್ಗೆ ತಮಗೆ ಏನನ್ನಿಸುತ್ತಿದೆ ಎಂದು ಪಹಲ್ಗಾಮ್ ಸಂತ್ರಸ್ತರನ್ನು ಕೇಳತೊಡಗಿವೆ. ಅವರು ಇನ್ನೂ ಆಘಾತದಲ್ಲೇ ಇದ್ದಾರೆ, ಈ ಕ್ಷಣದಲ್ಲಿ ಅವರಿಂದ ಸಿಹಿಯಾದ ಮಾತುಗಳನ್ನು ನಿರೀಕ್ಷಿಸಬಾರದು ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿ. ಅವರನ್ನು ಅವರ ಪಾಡಿಗೆ ಬಿಡಿ. ಸರ್ಕಾರ ಮತ್ತು ಪಡೆಗಳು ಏನು ಮಾಡಬೇಕೋ ಅದನ್ನು ಮಾಡುತ್ತವೆ.

ರೋಹಿತ್ ಸಿಂಹ, ಎಂಜಿನಿಯರ್

25 ವರ್ಷಗಳ ಹಿಂದೆ

ಸೋಮವಾರ, 8-5-2000

• **ನಕ್ಸಲೀಯರ ಜತೆ ಚಕಮಕಿ: 2 ಸಾವು**

ಬೆಂಗಳೂರು, ಮೇ 7– ಆಂಧ್ರ ಪೊಲೀಸರು ಹಾಗೂ ನಕ್ಸಲೀಯರ ನಡುವೆ ಇಂದು ರಾತ್ರಿ ನಗರದ ಹೊರವಲಯದ ನೆಲಮಂಗಲ ಬಳಿ ನಡೆದ ಗುಂಡಿನ ಚಕಮಕಿಯಲ್ಲಿ ಆಂಧ್ರ ಪೊಲೀಸ್ ಪೇದೆಯೊಬ್ಬ ಹಾಗೂ ನಕ್ಸಲೀಯನೊಬ್ಬ ಸತ್ತಿದ್ದು, ಇನ್ನೊಬ್ಬ ಗಾಯಗೊಂಡ ಘಟನೆ ನಡೆದಿದೆ.

ಧರ್ಮಾವರಂ ವಿಭಾಗಕ್ಕೆ ಸೇರಿದ ಡಿವೈಎಸ್ಪಿ ಒಬ್ಬರು ಖಚಿತ ಮಾಹಿತಿ ಮೇಲೆ ಸಿಬ್ಬಂದಿಯೊಂದಿಗೆ ನಕ್ಸಲೀಯರ ಶೋಧನೆಯಲ್ಲಿ ನೆಲಮಂಗಲಕ್ಕೆ ಬಂದಿದ್ದು, ಏಳು ಗಂಟೆ ವೇಳೆಯಲ್ಲಿ ಸೊಂಡೇಕೊಪ್ಪ ಕ್ರಾಸ್ ಬಳಿ ದೀಪ್ತಿ ಡಾಬಾ ಸಮೀಪ ನಕ್ಸಲೀಯರ ಮೇಲೆ ಪೊಲೀಸರು ಗುಂಡು ಹಾರಿಸಿದಾಗ ಅವರೂ ಪ್ರತಿಗುಂಡು ಹಾರಿಸಿದ್ದಾರೆ.

• **ಅವ್ಯವಸ್ಥೆಯ ಆಗರ ವಾಣಿ ವಿಲಾಸ ಆಸ್ಪತ್ರೆ**

ಬೆಂಗಳೂರು, ಮೇ 7– ತುರ್ತು ನಿಗಾ ಘಟಕದ (ಐಸಿಯು) ಸೌಲಭ್ಯವಿಲ್ಲದೆ ಸಂಕಟಪಡುತ್ತಿರುವ ರೋಗಿಗಳು, ಪ್ರತ್ಯೇಕ ಅರಿವಳಿಕೆ ವಿಭಾಗವಿಲ್ಲದೆ 15 ದಿನಗಳಿಗೊಮ್ಮೆ ಶಸ್ತ್ರಚಿಕಿತ್ಸೆಗಳು, ಬಳಕೆಯಾಗದ ಶಸ್ತ್ರಚಿಕಿತ್ಸಾ ಸಮುಚ್ಚಯ, ಸಮಯಕ್ಕೆ ಸರಿಯಾಗಿ ಕರ್ತವ್ಯಕ್ಕೆ ಬಾರದ ವೈದ್ಯರು– ಹಾಜರಿ ಪುಸ್ತಕಕ್ಕೆ ನಕಲಿ ಸಹಿ, ದೂಳು ತಿನ್ನುತ್ತಿರುವ ಲಕ್ಷಾಂತರ ರೂಪಾಯಿ ಮೌಲ್ಯದ ವೈದ್ಯಕೀಯ ಉಪಕರಣಗಳು, ಕೆಲಸ ಮಾಡದ 'ಲಿಫ್ಟ್'ಗಳು, ಹೊಸ–ಹಳೆ ಸರಕು ಸರಂಜಾಮುಗಳಿಗೆ ಉಗ್ರಾಣಗಳಾಗಿರುವ ವಾರ್ಡ್‌ಗಳು.

– ಇವು ಬೆಂಗಳೂರು ನಗರದ ಅತ್ಯಂತ ಹಳೆಯ ಆಸ್ಪತ್ರೆಗಳಲ್ಲಿ ಒಂದಾದ ವಾಣಿ ವಿಲಾಸ ಆಸ್ಪತ್ರೆಯ ಅವ್ಯವಸ್ಥೆಗೆ ಹಿಡಿದ ಕನ್ನಡಿ. ಈ ಆಸ್ಪತ್ರೆಯಲ್ಲಿ ಎಲ್ಲವೂ ಸರಿಯಿಲ್ಲ ಎಂಬುದಕ್ಕೆ, ಆಧುನೀಕರಣದ ಹೆಸರಿನಲ್ಲಿ ಆಸ್ಪತ್ರೆಯ ಪ್ರಮುಖ ಶಸ್ತ್ರಚಿಕಿತ್ಸಾ ಘಟಕವನ್ನು (ಮೇಜರ್ ಒ.ಟಿ.) ಸುಮಾರು ಒಂದೂವರೆ ವರ್ಷಕ್ಕೂ ಹೆಚ್ಚು ಕಾಲ ಮುಚ್ಚಿ ಏಪ್ರಿಲ್ 19ರಿಂದ ಪುನಃ ಆರಂಭಿಸಿರುವುದೇ ಸಾಕ್ಷಿ.

50 ವರ್ಷಗಳ ಹಿಂದೆ

ಗುರುವಾರ, 8-5-1975

• **ರಾಜ್ಯಗಳಿಗೆ ಹೆಚ್ಚು ಅಧಿಕಾರ ನೀಡಲು ಜೆ.ಪಿ. ಕರೆ**

ಮದ್ರಾಸ್, ಮೇ 7– ಕೇಂದ್ರ ಸರ್ಕಾರದಲ್ಲಿ ಈಗ ಸಂಗ್ರಹವಾಗಿರುವ 'ಅಗಾಧ' ಅಧಿಕಾರವನ್ನು ಸಂಪೂರ್ಣವಾಗಿ ಮರು ಹಂಚಿಕೆಗೊಳಿಸಬೇಕೆಂದು ಸರ್ವೋದಯ ನಾಯಕ ಜಯಪ್ರಕಾಶ್ ನಾರಾಯಣ್ ಅವರು ಇಂದು ಇಲ್ಲಿ ಕರೆ ನೀಡಿದರು.

ದೇಶದಲ್ಲಿ 'ಪೂರ್ಣ ರಾಜಕೀಯ ಕ್ರಾಂತಿ'ಯುಂಟಾಗಬೇಕಾದರೆ, ಒಬ್ಬ ವ್ಯಕ್ತಿ ಇಲ್ಲವೇ ಒಂದು ಸಂಸ್ಥೆಯಲ್ಲಿ ಅಧಿಕಾರ ಸಂಗ್ರಹಣೆಯನ್ನು ತೊಡೆದುಹಾಕಬೇಕೆಂದು ಅವರು ಬುದ್ಧಿಜೀವಿಗಳ ಸಭೆಯೊಂದರಲ್ಲಿ ಮಾತನಾಡುತ್ತಾ ಹೇಳಿದರು.

ಕೇಂದ್ರ ಸರ್ಕಾರವು ರಕ್ಷಣೆ, ವಿದೇಶ ವ್ಯವಹಾರ, ಶಸ್ತ್ರಾಸ್ತ್ರ ಉತ್ಪಾದನೆ, ಆಂತರಿಕ ಭದ್ರತೆ ಮತ್ತು ನಾಣ್ಯ ವ್ಯವಸ್ಥೆಯ ಅಧಿಕಾರವನ್ನು ತನ್ನಲ್ಲಿಟ್ಟುಕೊಂಡು, ಉಳಿದ ಅಧಿಕಾರಗಳನ್ನು ರಾಜ್ಯಗಳಿಗೆ ಹಂಚಬೇಕೆಂದೂ ಜಯಪ್ರಕಾಶ್ ಹೇಳಿದರು.

ಪುರಾತನ ಜ್ಞಾನಕ್ಕೆ ವಿಜ್ಞಾನದ ಮುದ್ರೆ ಹಾಕಲು ಹೋದಲ್ಲೆಲ್ಲ ಮುದ್ರೆಗೇ ಕಳಂಕ

ಸೋಮಯಾಗದಲ್ಲಿ ಅಗ್ನಿ ಮತ್ತು ಮಳೆ

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ವೇದಕಾಲದ ವಿಜ್ಞಾನವನ್ನು ಒರೆಗಲ್ಲಿಗೆ ಹಚ್ಚಲು ಮತ್ತೊಮ್ಮೆ ವಿಜ್ಞಾನಿಗಳು ಹೊರಟಿದ್ದಾರೆ. ಉಜ್ಜಯಿನಿಯ ಮಹಾಕಾಳೇಶ್ವರ ದೇಗುಲದಲ್ಲಿ ಏಪ್ರಿಲ್ 24ರಿಂದ ಐದು ದಿನಗಳ ಕಾಲ ಸೋಮಯಾಗ ನಡೆಯಿತು. ಮಧ್ಯಪ್ರದೇಶದ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯ 15 ವಿಜ್ಞಾನಿಗಳು ನಾನಾ ಬಗೆಯ ಶೋಧ ಸಲಕರಣೆಗಳ ಜೊತೆ ಅಲ್ಲಿಗೆ ಹೋಗಿದ್ದರು. ಯಜ್ಞದಿಂದ ನಿಜಕ್ಕೂ ಮಳೆ ಬರಿಸಲು ಸಾಧ್ಯವೆ ಎಂಬುದನ್ನು ಪರೀಕ್ಷೆ ಮಾಡುವುದು ಅವರ ಉದ್ದೇಶವಾಗಿತ್ತು.

ಸೋಮಯಾಗ ಅಂದರೆ ಸೋಮವಲ್ಲಿ ಎಂಬ ಸಸ್ಯವನ್ನು ವೇದಘೋಷಗಳೊಂದಿಗೆ ಯಜ್ಞಕುಂಡಕ್ಕೆ ಅರ್ಪಿಸುವುದು. ಕಳ್ಳಿಯಂತೆ ಪೊದೆಯೆತ್ತರ ಬೆಳೆಯುವ, ಎಲೆಗಳಿಲ್ಲದ ಈ Sarcostemma brevistigma ಸಸ್ಯವನ್ನು ಚಿವುಟಿದರೆ ಬಿಳಿದ್ರವ ಒಸರುತ್ತದೆ. ಕಾಲಕಾಲಕ್ಕೆ ಬಿಳಿಹೂಗಳನ್ನೂ ಅರಳಿಸುವ ಈ ಕಳ್ಳಿಯನ್ನು ಹಿಂಡಿ ಅಥವಾ ಒಣಪುಡಿಯಾಗಿಸಿ ನಾನಾ ಬಗೆಯ ಕಾಯಿಲೆಗಳಿಗೆ ಬಳಸುವ ಪದ್ಧತಿ ಇದೆ. ಹಾವಿನ ಕಡಿತಕ್ಕೆ ಪ್ರತಿವಿಷವಾಗಿ, ಗಾಯ-ವ್ರಣಗಳಿಂದ ಹಿಡಿದು ಸಂಧಿವಾತ, ಅಜೀರ್ಣ, ಮೂಳೆಮುರಿತ, ಅಸ್ತಮಾವರೆಗೆ ಇದನ್ನು ಆದಿವಾಸಿಗಳಿಂದ ಹಿಡಿದು ನಾಟಿವೈದ್ಯರೂ ಆಯುರ್ವೇದ ಪಂಡಿತರೂ ಬಳಸುತ್ತ ಬಂದಿದ್ದಾರೆ. ಇದರ ರಸದ ಸೇವನೆ ದೇವತೆಗಳಿಗೆ ಪುಷ್ಟಿದಾಯಕ (ಮತ್ತೇರಿಸುವುದಲ್ಲ) ಆಗುತ್ತದೆಂದು ಋಗ್ವೇದದಲ್ಲಿ ಹೇಳಲಾಗಿದೆ. ಈ ಸಸ್ಯದ ರಸದ ಕೆಮಿಕಲ್ ಗುಣಗಳನ್ನು ವಿಜ್ಞಾನಿಗಳು ಈಗಾಗಲೇ ಪಟ್ಟಿ ಮಾಡಿ ಇಟ್ಟಿದ್ದಾರೆ. ಇದೀಗ ಸೋಮವಲ್ಲಿಯನ್ನು ಹೋಮದ ಅಗ್ನಿಯಲ್ಲಿ ಉರಿಸಿದಾಗ ಮಳೆ ಬರುತ್ತದೆ ಎಂಬ ನಂಬಿಕೆಯ ವೈಜ್ಞಾನಿಕ ಪರೀಕ್ಷೆ ನಡೆದಿದೆ. ಹೋಮದ ಹೊಗೆಯಲ್ಲಿರುವ ಕೆಮಿಕಲ್ ಕಣಗಳ ವಿಶ್ಲೇಷಣೆಗೆಂದೇ 13 ಸಾಧನಗಳಿದ್ದವು. ಬಲೂನಿಗೆ 'ಟೆದರ್‌ಸೋಂಡ್' ಎಂಬ ಸಾಧನವನ್ನು ಕಟ್ಟಿ ಆಕಾಶಕ್ಕೇರಿಸಿ ಹೊಗೆಕಣಗಳ ಉಷ್ಣತೆ, ತೇವಾಂಶವನ್ನು ದಾಖಲಿಸಲಾಗಿತ್ತು.

ಮೋಡಗಳಿಗೆ ಘನಕಣಗಳು ತಾಗಿದರೆ ಹೊಗೆಯಂತಿರುವ ಮಂಜು ತಕ್ಷಣ ಹನಿಗಟ್ಟುತ್ತದೆ. ಅದು ನಮಗೆಲ್ಲ ಗೊತ್ತು. ಮುಂಜಾವಿನ ಮಂಜಿನಲ್ಲಿ ಹುಲ್ಲೆಸಳುಗಳ ತುದಿಗೆ ಮುತ್ತಿನಂಥ ಹನಿಗಳನ್ನೂ ಜೇಡರ ಬಲೆಯ ಮೇಲೆ ಮುತ್ತಿನ ಮಾಲೆಗಳನ್ನೂ ನಾವು ನೋಡಿದ್ದೇವೆ. ಮಳೆಗರೆಯಲು ಮೋಡ ಸಿದ್ಧವಾಗಿದ್ದರೆ ವಿಮಾನದಿಂದ ಮರಳು ಅಥವಾ ಉಪ್ಪಿನ ಕಣಗಳನ್ನು ಎರಚಿ ಮೋಡಬಿತ್ತನೆ ಮಾಡುವುದೂ ಗೊತ್ತು. ಬರಿನೆಲದ ದೂಳು ಕಣಗಳೂ ಬಿರುಗಾಳಿಯಲ್ಲಿ ಆಕಾಶಕ್ಕೇರಿ ಮಳೆ ಬರಿಸುತ್ತವೆ. ಆಫ್ರಿಕಾದ ಸಹರಾ ಮರುಭೂಮಿಯಿಂದ ಮೇಲೆದ್ದು ಸಾಗುವ ದೂಳು ಕಣಗಳು ಅಮೆಝಾನ್ ಕಾಡಿನ ಮೇಲೆ ಪೋಷಕಾಂಶಗಳ ಮಳೆ ಸುರಿಸುತ್ತವೆ; ನಮೀಬಿಯಾದಿಂದ ಹೊರಟ ಮರಳುಕಣಗಳು ಏಷ್ಯಾದ ಮಾನ್ಸೂನ್‌ಗೂ ಪುಷ್ಟಿ ಕೊಡುತ್ತವೆ.

ಭಾರೀ ಪ್ರಮಾಣದಲ್ಲಿ ಹೊಗೆ ಮೇಲೆದ್ದಾಗ (ಆಕಾಶದಲ್ಲಿ ಮೋಡಗಳಿದ್ದರೆ) ಮಳೆ ಸುರಿಯುತ್ತದೆ. ಏಕೆಂದರೆ ಹೊಗೆಯಲ್ಲಿ ಸೂಕ್ಷ್ಮ ಘನಕಣಗಳಿರುತ್ತವೆ. 2021ರ ಆಗಸ್ಟ್‌ನಲ್ಲಿ ಗ್ರೀಸ್ ದೇಶದ ಈವಿಯಾ ದ್ವೀಪಕ್ಕೆ ಕಾಳ್ಗಿಚ್ಚು ಹಬ್ಬಿ 50 ಸಾವಿರ ಹೆಕ್ಟೇರ್ ಕಾಡು ಬೂದಿಯಾದ ನಂತರ ಭಾರೀ ಮಳೆ ಬಂತು. ಬೂದಿಯ ಮಹಾಪೂರವೇ ಸುತ್ತಲಿನ ಸಮುದ್ರಕ್ಕೆ ಸೇರಿ ಮತ್ಸ್ಯಗಳಿಗೂ ಮಾರಕವಾಯಿತು. ಫ್ಯಾಕ್ಟರಿಗಳ ಮಲಿನ ಹೊಗೆಯೂ ಆ್ಯಸಿಡ್ ಮಳೆ ತರಿಸುತ್ತದೆ. ಚೆರ್ನೊಬಿಲ್ ಪರಮಾಣು ಸ್ಥಾವರ ಸ್ಫೋಟಿಸಿದ (26.4.1986) ತರುವಾಯ ಭಾರೀ ಮಳೆ ಬಂತು. ಸಾವಿರಾರು ಚದರ ಕಿ.ಮೀ.ವರೆಗೆ ವಿಕಿರಣದ ಮಳೆ ಸುರಿಸಿತು. ಆದರೆ ಭೋಪಾಲ ದುರಂತದಲ್ಲಿ (3.12.1984) ಎಮ್‌ಐಸಿ ವಿಷಾನಿಲ ಸುತ್ತೆಲ್ಲ ಹಬ್ಬಿ ಬೆಳಗಾಗುವುದರಲ್ಲಿ ಮೂರು ಸಾವಿರಕ್ಕೂ ಹೆಚ್ಚು ಜನ, ಜಾನುವಾರು ಗತಿಸಿದರೂ ಮಳೆ ಬರಲಿಲ್ಲ. ಏಕೆಂದರೆ, ಗಾಳಿಗಿಂತ ವಿಷಾನಿಲದ ಸಾಂದ್ರತೆ ಜಾಸ್ತಿ ಇದ್ದುದರಿಂದ ಹೊಗೆ ಮೇಲಕ್ಕೇರುವ ಬದಲು ನೆಲಮಟ್ಟದಲ್ಲೇ ಮೃತ್ಯುಮಾರಿ ಪೂತ್ಕರಿಸಿತು (ಇದರ ಕುರಿತು 2014ರಲ್ಲಿ ನಿರ್ಮಿತವಾದ, ಯೂಟ್ಯೂಬ್‌ನಲ್ಲಿ ಉಚಿತ ನೋಡಬಹುದಾದ ಸಿನಿಮಾದ ಹೆಸರೇ 'ಭೋಪಾಲ್: ಮಳೆಗಾಗಿ ಪ್ರಾರ್ಥನೆ' ಎಂದಿತ್ತು).

ಹೊಗೆಗೂ ಮೋಡಕ್ಕೂ ಮಳೆಗೂ ಇರುವ ಸಂಬಂಧವೇ ಯಜ್ಞಕ್ಕೂ ಮಳೆಗೂ ಇದ್ದೇ ಇರುತ್ತದೆ. ಆದರೆ ಯಜ್ಞವೆಂದರೆ ಹೊಗೆ ತಾನೆ? ಮೋಡವೇನಲ್ಲ. ಮೇಲಾಗಿ ಆ ಹೊಗೆ ಮೇಲಕ್ಕೇರಿ ನೂರಾರು ಚದರ ಕಿಲೊಮೀಟರ್‌ಗಟ್ಟಲೆ ವ್ಯಾಪಿಸಬೇಕೆಂದರೆ ಆ ಯಜ್ಞಕುಂಡದ ಅಗ್ನಿ ಅನೇಕ ಹೆಕ್ಟೇರುಗಟ್ಟಲೆ ವಿಶಾಲವಾಗಿ ಉರಿಯುತ್ತಿರಬೇಕು. ಸಾಮಾನ್ಯ ಅಗ್ನಿಕುಂಡದ ಹೊಗೆ ಮೇಲೆದ್ದರೆ, ಸಾಮಾನ್ಯ ತರ್ಕದ ಪ್ರಕಾರ ಅಲ್ಲೊಂದು ಇಲ್ಲೊಂದು ಹನಿಯನ್ನು ಉದುರಿಸೀತು ಅಷ್ಟೆ. ಅದೂ ಆ ಹೊಗೆ ಅತ್ತಿತ್ತ ಚದುರದೇ ನೇರ ಮೇಲಕ್ಕೆ ಏರಬೇಕು. ಮೇಲಾಗಿ ಆಗ ಆಕಾಶದಲ್ಲಿ ಮೋಡ ಇರಬೇಕು. ಅದೂ ಬಂಜೆಯಲ್ಲ, ಗರ್ಭಿಣಿ ಮೋಡವೇ ಆಗಿರಬೇಕು.

ವಿಜ್ಞಾನಿಗಳು ಇವೆಲ್ಲವನ್ನೂ ಪರಿಗಣಿಸುತ್ತಾರೆಯೆ? ಹೊಗೆಯ ಕಣಗಳು ಎಷ್ಟೆತ್ತರಕ್ಕೇರಿ, ಎಷ್ಟು ವಿಶಾಲ ಕ್ಷೇತ್ರಕ್ಕೆ ವ್ಯಾಪಿಸುತ್ತವೆ ಎಂಬುದನ್ನು ಅಳೆಯಲು ಸದ್ಯಕ್ಕಂತೂ ಯಾವ ಸಾಧನವೂ ಇಲ್ಲ. ಬಲೂನಿಗೆ ಕಟ್ಟಿದ ಟೆದರ್‌ಸೋಂಡ್ ಹೆಚ್ಚೆಂದರೆ ತನ್ನ ಬಳಿ ಬಂದ ಹೊಗೆಯ ಕಣಗಳನ್ನಷ್ಟೇ ವಿಶ್ಲೇಷಣೆ ಮಾಡೀತು. ಹೊಗೆ ನಿಜಕ್ಕೂ ಮೇಲಕ್ಕೇರಿ ವ್ಯಾಪಿಸುತ್ತ ಹೋದರೆ ಹತ್ತಾರೇನು, ನೂರಾರು ಬಲೂನುಗಳಿದ್ದರೂ ಸಾಲದು. ಇಷ್ಟಕ್ಕೂ ಸೋಮವಲ್ಲಿಗೂ ಹೊಗೆಕಣಕ್ಕೂ ಏನು ಸಂಬಂಧ ಇರಲು ಸಾಧ್ಯ? ಮಂಜಿನಂಥ ಮೋಡದ ಕಣಗಳು ಘನೀಭವಿಸಲು ಯಾವ ಘನಕಣವಾದರೇನು? ಯಾವುದೇ ಕಣ ಸಿಕ್ಕರೂ ಅದನ್ನು ಅಪ್ಪಿಕೊಂಡು ಹರಳುಗಟ್ಟುತ್ತದೆ. ಮೋಡ ಆಗ ತೀರಾ ತಂಪಾಗಿದ್ದರೆ ಹನಿಗಟ್ಟುತ್ತಲೇ ಹಿಮಪಕಳೆಯಾಗಿ ಆಲಿಕಲ್ಲಾಗಿ ಕೆಳಕ್ಕೆ ಬೀಳುತ್ತದೆ. ಬೀಳುವಾಗ ಇನ್ನಷ್ಟು ತಂಪಿನ ನೀರಾವಿ ಕಣಗಳು ಅಂಟಿಕೊಂಡರೆ ದೊಡ್ಡ ಆಲಿಕಲ್ಲಾಗಿ ಬೀಳುತ್ತದೆ. ಇದು ಹೈಸ್ಕೂಲ್ ವಿದ್ಯಾರ್ಥಿಗೂ ಗೊತ್ತಿರುವ ಅಂಶ.

ಆದರೂ ಸಂಶೋಧನೆಯ ಹುಕಿ ಯಾಕೆ ಗೊತ್ತೆ? ಸೋಮವಲ್ಲಿಯ ಬೂದಿ ಕಣಗಳು ಮಳೆಗರೆಯಲಿ, ಬಿಡಲಿ, ದಂಡಿಯಾಗಿ ಡೇಟಾ ಸುರಿಮಳೆಯಾಗಬೇಕು. ಈ ಸಸ್ಯದ ಔಷಧೀಯ ಗುಣಗಳನ್ನು ವಿಶ್ಲೇಷಣೆ ಮಾಡಿದ ವಿಜ್ಞಾನಿಗಳೂ ಅದನ್ನೇ ಮಾಡಿದರು. ಸಸ್ಯರಸದಲ್ಲಿ ಯಾವ ಯಾವ ಕೆಮಿಕಲ್‌ಗಳು ಇವೆ ಎಂದು ವರದಿ ಮಾಡಿ ಅದನ್ನು ಅಲ್ಲಿಗೆ ಕೈಬಿಟ್ಟರು. ಅದು ನಿಜಕ್ಕೂ ಹಾವಿನ ವಿಷವನ್ನು ಇಳಿಸುತ್ತದೆಯೆ ಎಂದು ನೋಡಲು ವೈದ್ಯ ವಿಜ್ಞಾನಿಗಳು ಬೇರೊಂದು ಸಂಶೋಧನೆ ಮಾಡಬೇಕು. ಮಾಡಲಿಲ್ಲ. 'ವಿಷ ಇಳಿಸುವ ಅಂಶ ಇಲ್ಲ' ಎಂಬುದು ಗೊತ್ತಾದರೆ ಅದನ್ನು ಘೋಷಿಸಲು ಈಗಿನ ದಿನಗಳಲ್ಲಿ ಎಂಟೆದೆ ಬೇಕು. ಗೋಮೂತ್ರದಲ್ಲಿ ಏನೇನು ವಿಶೇಷಗಳಿವೆ ಎಂದು ಐಐಟಿ ದಿಲ್ಲಿಯ ವಿಜ್ಞಾನಿಗಳು ಸಂಶೋಧನೆ ಮಾಡಿದರು. ಎಮ್ಮೆಯ ಅಥವಾ ಬೇರಾವುದೇ ಸ್ತನಿಜೀವಿಯ ಮೂತ್ರಕ್ಕೂ ಇದಕ್ಕೂ ಏನು ವ್ಯತ್ಯಾಸ ಎಂಬುದನ್ನು ಮಾತ್ರ ನೋಡಲಿಲ್ಲ. 'ಏನೂ ವ್ಯತ್ಯಾಸವಿಲ್ಲ' ಎಂಬುದು ಗೊತ್ತಾದರೆ ಆ ವಿಜ್ಞಾನಿಗೆ ಮುಂದೆಂದೂ ಸಂಶೋಧನೆಗೆ ಹಣ ಸಿಗಲಿಕ್ಕಿಲ್ಲ. ಸೋಮವಲ್ಲಿಯ ಹೊಗೆ ಕಣದ ಕತೆಯೂ ಇದೇ ಆಗಿಬಿಟ್ಟರೆ?

ಪುರಾತನ ಜ್ಞಾನವನ್ನು ಒರೆಗಲ್ಲಿಗೆ ಹಚ್ಚುವ ಅನೇಕ ಭಾರತೀಯ ಅರೆಬರೆ ಸಂಶೋಧನೆಗಳು ಮತ್ತೆ ಮತ್ತೆ ವ್ಯಾಪಕ ಟೀಕೆಗಳಿಗೆ ಗುರಿಯಾಗಿವೆ. ಸತ್ಯ ಯಾರಿಗೆ ಬೇಕು? ಸಂಶೋಧನೆ ನಡೆದಿದೆ ಎಂಬುದು ಸುದ್ದಿಯಾಗುವುದೇ ಮುಖ್ಯ. ಪುರಾತನ ನಂಬಿಕೆ, ರೂಢಿಗತ ಸಂಪ್ರದಾಯ-ಗಳಿಂದ ಯಾರಿಗೂ ಅಪಾಯವಿಲ್ಲ ಎಂದಾದರೆ ಅವನ್ನು ಅವುಗಳ ಪಾಡಿಗೆ ಬಿಡಬಾರದೆ? ಅದಕ್ಕೆ ವಿಜ್ಞಾನದ ಠಸ್ಸೆ ಒತ್ತುವ ಹಪಹಪಿ ಯಾಕೊ? ಇದರಿಂದ ಇದುವರೆಗಂತೂ ಠಸ್ಸೆಗೇ ಕಳಂಕ ತಗಲಿದೆ.

ಅಂದಹಾಗೆ, ಎರಡು ವರ್ಷಗಳ ಹಿಂದೆ ಇದೇ ಮಹಾಕಾಳೇಶ್ವರ ದೇಗುಲದಲ್ಲಿ ಯಾವ ಯಜ್ಞಯಾಗವೂ ಇಲ್ಲದೇ ಆಲಿಕಲ್ಲುಗಳ ಭಾರೀ ಮಳೆ ಮತ್ತು ಬಿರುಗಾಳಿ ಬಂತು. ಆವರಣದಲ್ಲಿ ಕೂರಿಸಿದ್ದ ಅಷ್ಟದಿಕ್ಪಾಲಕರ ಎಂಟು ಬೃಹತ್ ವಿಗ್ರಹಗಳಲ್ಲಿ ಏಳು ಪಲ್ಟಿ ಹೊಡೆದು ಭಗ್ನಗೊಂಡವು. ಆ ಫೈಬರ್‌ಗ್ಲಾಸ್ ವಿಗ್ರಹಗಳನ್ನು ಸ್ಥಾಪಿಸುವ ಮುಂಚೆ ಗಾಳಿ-ಮಳೆಯ ಭೀಕರ ಸಾಧ್ಯತೆಯ ಮಾಹಿತಿಯನ್ನು ವಿಜ್ಞಾನಿಗಳು ನೀಡಿರಲಿಲ್ಲ. ಅಥವಾ ಅದಕ್ಕೆ ಸಮಯವೂ ಇರಲಿಲ್ಲವೇನೊ. ಚುನಾವಣೆ ಹತ್ತಿರ ಬರುತ್ತಿತ್ತು. ದೇಗುಲ ನಿರ್ಮಾಣ ಕೆಲಸ ಪೂರ್ತಿ ಆಗಿರದಿದ್ದರೂ ತುರ್ತಾಗಿ ಉದ್ಘಾಟನೆ ಆಗಲೇಬೇಕಿತ್ತು. ಅಷ್ಟದಿಕ್ಪಾಲಕರ ಅಸ್ತಿವಾರವೇ ಅಲ್ಲಿ ಅಸ್ಥಿರವಾಗಿತ್ತು.

ಚುರುಮುರಿ

ಉಗ್ರರು ಉಡೀಸ್...

• ಗುರು ಪಿ.ಎಸ್.

'ಜೈ ಹಿಂದ್...' ಟಿ.ವಿ. ನೋಡುತ್ತಾ ಕೂಗಿದಳು ಹೆಂಡತಿ. ಇನ್ನೂ ನಿದ್ದೆಗಣ್ಣಲ್ಲಿ ಇದ್ದ ನಾನೂ 'ಜೈ ಹಿಂದ್' ಎಂದು ಅರಿವಿಲ್ಲದೆ ಕೂಗುತ್ತಾ, 'ಏನಾಯ್ತೆ ನಿನಗೆ ಹೀಗೆ ಕೂಗ್ತಿದ್ದೀಯ' ಎಂದೆ.

'ಆಪರೇಷನ್ ಸಿಂಧೂರ...'

'ಅಂದ್ರೆ?'

'ನಮ್ಮ ಭಾರತೀಯ ಸೇನೆ ಪಾಕಿಸ್ತಾನದಲ್ಲಿನ ಉಗ್ರರ ನೆಲೆಗಳನ್ನೆಲ್ಲ ಉಡೀಸ್ ಮಾಡಿದೆ' ಯುದ್ಧ ಗೆದ್ದ ಸಂಭ್ರಮದಲ್ಲಿ ಹೇಳಿದಳು ಹೆಂಡತಿ.

'ಹೇಗೆ ದಾಳಿ ಮಾಡಿದ್ದಾರೆ?'

'ಮಧ್ಯರಾತ್ರಿ ಏರ್‌ಸ್ಟ್ರೈಕ್, ಕ್ಷಿಪಣಿ ದಾಳಿ' ಉತ್ಸಾಹದಿಂದ ಹೇಳಿದಳು.

'ಅಯ್ಯೋ ಪಾಪ?' ಎಂದೆ ಬೇಸರದಲ್ಲಿ.

'ಪಾಪ! ಯಾರಿಗೆ ರೀ ಪಾಪ ಅಂತಿದ್ದೀರಿ, ಅಮಾಯಕರನ್ನು ಸಾಯಿಸಿದವರ ಮೇಲೆ ನಿಮಗೇನಿಷ್ಟು ಅನುಕಂಪ?'

'ಏನೇ ಆಗಲಿ, ಯುದ್ಧಕ್ಕಿಂತ ಶಾಂತಿ ಮುಖ್ಯ. ನಮ್ಮದು ಶಾಂತಿಪ್ರಿಯ ದೇಶ'.

'ಅದಕ್ಕೇ ಟೆರರಿಸ್ಟ್‌ಗಳ ಮೇಲಷ್ಟೇ ಅಟ್ಯಾಕ್ ಮಾಡಿರೋದು, ಪಾಕಿಸ್ತಾನದ ಜನಗಳ ಮೇಲೆ ಮಾಡಿಲ್ಲ'.

'ಆದರೂ ಅವರು ಮಲಗಿರುವಾಗ ದಾಳಿ ಮಾಡಿದ್ದು ಸರಿ ಕಾಣಿಸ್ತಿಲ್ಲ' ಶಾಂತಿಪ್ರಿಯನಂತೆ ಹೇಳಿದೆ.

'ಅವರು ಎದ್ದ ಮೇಲೆ ಅವರಿಗೆ ಊಟ-ತಿಂಡಿ ಎಲ್ಲ ಕೊಡಿಸಿ, ಹೊಸ ಬಟ್ಟೆ ತೊಡಿಸಿ ಆಮೇಲೆ ಅಟ್ಯಾಕ್ ಮಾಡಬೇಕಿತ್ತಾ?' ವ್ಯಂಗ್ಯವಾಡಿದಳು.

'ಆದರೂ, ದೇಶದಲ್ಲಿ ಅಣಕು ಸಮರಾಭ್ಯಾಸ ಮಾಡ್ತೀವಿ ಅಂತ ಹೇಳಿ, ಉಗ್ರರ ಮೇಲೆ ರಿಯಲ್ ಅಟ್ಯಾಕ್ ಮಾಡಬಾರದಿತ್ತು' ಕರುಣಾರಸದಲ್ಲಿ ಹೇಳಿದೆ.

'ಅವನ್ಯಾರೋ ಉಗ್ರ, ಹೋಗಿ ಮೋದಿಗೆ ಹೇಳು ಅಂದಿದ್ದನಂತಲ್ಲ, ಅದಕ್ಕೇ ಮೋದಿ ಬೆಳಗಾಗೋದರೊಳಗೆ ದೀಪಾವಳಿ ಮಾಡಿ ತೋರಿಸಿದ್ದಾರೆ' ಹೆಮ್ಮೆಯಿಂದ ಹೇಳಿದಳು.

'ಉಗ್ರರ ಮೇಲೆ ಸರ್ಜಿಕಲ್ ಸ್ಟ್ರೈಕ್ ಮಾಡ್ತೀರಿ ಓಕೆ, ದೇಶದಲ್ಲಿನ ಭ್ರಷ್ಟರ ಮೇಲೆ ದಾಳಿ ಯಾವಾಗ?'

'ಅದು ಸೇನೆ ಕೆಲಸ ಅಲ್ಲ, ಜನರ ಕೆಲಸ. ಎಲೆಕ್ಷನ್ ಬಂದಾಗ ಜನರೇ ಆ ಕೆಲಸ ಮಾಡಬೇಕು' ಎನ್ನುತ್ತಾ ಟಿ.ವಿ. ಕಡೆ ಮುಖ ಮಾಡಿದಳು ಹೆಂಡತಿ.

ಸಂಗತ

ತಡೆಗಟ್ಟಬೇಕಿದೆ ಥಲಸ್ಸೇಮಿಯ

ಆನುವಂಶಿಕ ರಕ್ತರೋಗಗಳ ಬಗ್ಗೆ ಜನಜಾಗೃತಿ ಮೂಡಿಸಬೇಕಾಗಿದೆ

• ಶ್ರೀಗುರು

'ಟುಗೆದರ್ ಫಾರ್ ಥಲಸ್ಸೇಮಿಯ– ಯುನೈಟಿಂಗ್ ಕಮ್ಯೂನಿಟೀಸ್, ಪ್ರಯಾರಿಟೈಸಿಂಗ್ ಪೇಷಂಟ್ಸ್' ಎಂಬ ತಿರುಳಿನೊಂದಿಗೆ ಇಂದು (ಮೇ 8) ಈ ವರ್ಷದ ಅಂತರರಾಷ್ಟ್ರೀಯ ಥಲಸ್ಸೇಮಿಯ ದಿನವನ್ನು ವಿಶ್ವದಾದ್ಯಂತ ಆಚರಿಸಲಾಗುತ್ತಿದೆ. ಮನುಷ್ಯನ ದೇಹವು ಆರೋಗ್ಯವಂತ ಕೆಂಪು ರಕ್ತಕಣಗಳನ್ನು ಬಹಳಷ್ಟು ಪ್ರಮಾಣದಲ್ಲಿ ಉತ್ಪಾದಿಸದಿದ್ದರೆ ಥಲಸ್ಸೇಮಿಯ ಕಾಯಿಲೆ ಬರುತ್ತದೆ. ದೋಷಯುಕ್ತ ವಂಶವಾಹಿಗಳಿಂದ (ಜೀನ್) ಮತ್ತು ಜೀನ್ ಮ್ಯುಟೇಶನ್‌ನಿಂದ (ವಂಶವಾಹಿ ಹಠಾತ್ ಪರಿವರ್ತನೆ) ಈ ಸಮಸ್ಯೆ ತಲೆದೋರುತ್ತದೆ.

ಇದು ಆನುವಂಶಿಕ ರಕ್ತರೋಗವಾಗಿದ್ದು ತಂದೆ-ತಾಯಿಯಿಂದ ಮಕ್ಕಳಿಗೆ ಬರುತ್ತದೆ. ಈ ರೋಗವು ಮೆಡಿಟರೇನಿಯನ್ ಪ್ರದೇಶ, ಆಫ್ರಿಕಾ, ಏಷ್ಯಾ ಮತ್ತು ಮಧ್ಯಪ್ರಾಚ್ಯ ದೇಶಗಳ ಜನರನ್ನು ಹೆಚ್ಚು ಬಾಧಿಸುತ್ತದೆ.

ಥಲಸ್ಸೇಮಿಯ ಕಾಯಿಲೆಯಲ್ಲಿ ಆಲ್ಫಾ ಮತ್ತು ಬೀಟಾ ಎಂಬ ಎರಡು ವಿಧಗಳಿವೆ. ಜೊತೆಗೆ ರೋಗದ ಸ್ವರೂಪವನ್ನು ಆಧರಿಸಿ ಟ್ರೇಯ್ಟ್, ಮೈನರ್, ಇಂಟರ್‌ಮೀಡಿಯಟ್ ಮತ್ತು ಮೇಜರ್ ಎಂದು ಗುರುತಿಸಲಾಗುತ್ತದೆ. ಥಲಸ್ಸೇಮಿಯ ಟ್ರೇಯ್ಟ್‌ನ ಪರಿಣಾಮಗಳು ಅಲ್ಪವಾಗಿದ್ದರೆ, ಇಂಟರ್ ಮೀಡಿಯಟ್‌ನ ಪರಿಣಾಮಗಳು ಸೌಮ್ಯವಾಗಿ ಹಾಗೂ ಮೇಜರ್‌ನಿಂದ ಬಳಲುವವರಲ್ಲಿ ಕಾಯಿಲೆಯ ಸ್ವರೂಪ ಗಂಭೀರವಾಗಿ ಇರುತ್ತವೆ. ಮೈನರ್ ರೋಗಿಗಳು ಎಲ್ಲರಂತೆ ಸಹಜ ಜೀವನ ನಡೆಸುತ್ತಾರೆ.

ಇವರನ್ನು ವಾಹಕರು ಎನ್ನುತ್ತೇವೆ. ಗರ್ಭಾವಸ್ಥೆಯ ಸಮಯದಲ್ಲೇ ಮಗುವಿನಲ್ಲಿ ಅಸಹಜ ಬೆಳವಣಿಗೆ ಉಂಟಾಗುತ್ತದೆ. ಮಗುವಿನಲ್ಲಿ ಈ ಸಮಸ್ಯೆ ಇದೆ ಎಂದು ಪೋಷಕರಿಗೆ ತಿಳಿದಿರುವುದಿಲ್ಲ. ಪೋಷಕರಿಬ್ಬರೂ ಥಲಸ್ಸೇಮಿಯ ಮೈನರ್‌ನಿಂದ ಬಳಲುತ್ತಿದ್ದರೆ ಜನಿಸುವ ಮಗು ಥಲಸ್ಸೇಮಿಯ ಮೇಜರ್ ಆಗಿರುವ ಸಾಧ್ಯತೆ ಹೆಚ್ಚಿರುತ್ತದೆ. ಪ್ರಪಂಚದಲ್ಲಿ ಹೆಚ್ಚಿನ ಜನ ಬೀಟಾ ಥಲಸ್ಸೇಮಿಯದಿಂದ ಬಳಲುತ್ತಾರೆ.

ರೋಗಿಗೆ ಥಲಸ್ಸೇಮಿಯ ಇದ್ದರೆ ಅಸ್ಥಿಮಜ್ಜೆಯು (ಮೂಳೆ) ಕಡಿಮೆ ಪ್ರಮಾಣದ ಆರೋಗ್ಯಯುತ ಕೆಂಪು ರಕ್ತಕಣಗಳನ್ನು ಉತ್ಪಾದಿಸುತ್ತದೆ ಮತ್ತು ದೇಹವು ಕಡಿಮೆ ಪ್ರಮಾಣದ ಹಿಮೊಗ್ಲೋಬಿನ್ ಪ್ರೋಟೀನ್ ಉತ್ಪಾದಿಸುತ್ತದೆ. ಕೆಂಪು ರಕ್ತಕಣಗಳ ಸಂಖ್ಯೆ ಕಡಿಮೆ ಇದ್ದಾಗ ರಕ್ತಹೀನತೆ ತಲೆದೋರುತ್ತದೆ. ಆಗ ದೇಹದ ಇತರ ಭಾಗಗಳಿಗೆ ತಲುಪುವ ಆಮ್ಲಜನಕವು ಕಡಿಮೆಯಾಗಿ ದೇಹದಲ್ಲಿ ಶಕ್ತಿಹೀನತೆ ಉಂಟಾಗುತ್ತದೆ. ಮುಖದ ಮೂಳೆಗಳಲ್ಲಿ ಅಸಮರ್ಪಕತೆ, ತಡವಾಗಿ ವಯಸ್ಕರಾಗುವುದು... ಈ ರೋಗದ ಲಕ್ಷಣಗಳು.

ಥಲಸ್ಸೇಮಿಯ ಕಾಯಿಲೆಯು ಗಂಭೀರ ಸ್ವರೂಪದ್ದಾಗಿದ್ದು ಅಸ್ಥಿಮಜ್ಜೆ ಕಸಿಯಿಂದ ಮಾತ್ರ ಗುಣವಾಗುತ್ತದೆ. ದಾನ ಪಡೆಯುವ ಅಸ್ಥಿಮಜ್ಜೆಯನ್ನು ರೋಗಿಗೆ ಅಳವಡಿಸಲಾಗುತ್ತದೆ. ಸಾಮಾನ್ಯವಾಗಿ ಕುಟುಂಬದವರೇ ಅಸ್ಥಿಮಜ್ಜೆ ದಾನ ಮಾಡುತ್ತಾರೆ. ದಾನ ಮಾಡುವವರಿಗೆ ಯಾವುದೇ ಆರೋಗ್ಯದ ತೊಂದರೆಗಳಾಗುವುದಿಲ್ಲ. ಅಸ್ಥಿಮಜ್ಜೆ ಕಸಿ ಸಾಧ್ಯವಾಗದಿದ್ದರೆ ಎರಡರಿಂದ ಮೂರು ವಾರಗಳಿಗೊಮ್ಮೆ ರಕ್ತ ನೀಡಬೇಕಾಗುತ್ತದೆ. ಭಾರತದಲ್ಲಿ ಪ್ರತಿವರ್ಷ 10,000 ಥಲಸ್ಸೇಮಿಯ ಪ್ರಕರಣಗಳು ವರದಿಯಾಗುತ್ತವೆ. ಥಲಸ್ಸೇಮಿಯ ರಾಜಧಾನಿ ಎಂದು ಕರೆಸಿಕೊಳ್ಳುವ ಭಾರತದಲ್ಲಿ ರೋಗದ ಚಿಕಿತ್ಸೆಯ ವೆಚ್ಚ ಹಲವು ಲಕ್ಷಗಳಲ್ಲಿದೆ.

ಬೆಂಗಳೂರಿನಲ್ಲಿ 2003ರಲ್ಲಿ ಪ್ರಾರಂಭವಾದ 'ಸಂಕಲ್ಪ ಇಂಡಿಯಾ ಫೌಂಡೇಶನ್'ನ ರಕ್ತ ಕೇಂದ್ರ, ಮಕ್ಕಳ ಆರೈಕೆ ಕೇಂದ್ರ, ಥಲಸ್ಸೇಮಿಯ ಡೇ ಕೇರ್ ಕೇಂದ್ರಗಳು ಮಕ್ಕಳಲ್ಲಿ ಕಂಡುಬರುವ ಥಲಸ್ಸೇಮಿಯ ರೋಗಕ್ಕೆ ನಿರಂತರವಾಗಿ ಚಿಕಿತ್ಸೆ ನೀಡುತ್ತಿವೆ.

ಕೇಂದ್ರ ಸರ್ಕಾರವು ನ್ಯಾಷನಲ್ ಹೆಲ್ತ್ ಮಿಷನ್ ಅಡಿಯಲ್ಲಿ ಕೋಲ್ ಇಂಡಿಯಾ ಲಿಮಿಟೆಡ್‌ನ ಸಹಯೋಗದೊಂದಿಗೆ ಥಲಸ್ಸೇಮಿಯ ಬಾಲ ಸೇವಾ ಯೋಜನೆ ರೂಪಿಸಿದ್ದು, ಅಸ್ಥಿಮಜ್ಜೆ ಕಸಿಗೆ ₹ 10 ಲಕ್ಷ ಧನಸಹಾಯ ನೀಡುತ್ತಿದೆ. ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಯೋಜನೆ ಅಡಿಯಲ್ಲಿ ಅಸ್ಥಿಮಜ್ಜೆ ಕಸಿಗಾಗಿ ಪರಿಶಿಷ್ಟ ಸಮುದಾಯದ ಥಲಸ್ಸೇಮಿಯ ರೋಗಿಗಳಿಗೆ ₹ 7 ಲಕ್ಷದಿಂದ 21 ಲಕ್ಷದವರೆಗಿನ ಸಹಾಯಧನ ಸಿಗುತ್ತಿದೆ.

ಬೆಂಗಳೂರಿನ ಕೆಂಗೇರಿಯಲ್ಲಿ ಸಬ್ ರಿಜಿಸ್ಟ್ರಾರ್ ಆಗಿರುವ, ದಿವ್ಯಾಂಗನ ರಾಷ್ಟ್ರಪ್ರಶಸ್ತಿ ವಿಜೇತೆ ಮಂಜುದರ್ಶಿನಿ ಅವರು ಥಲಸ್ಸೇಮಿಯ ಮೇಜರ್‌ನಿಂದ ಬಳಲುತ್ತಿದ್ದರೂ ಅಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಾ ಇತರ ರೋಗಿಗಳಿಗೆ ಮಾದರಿ ಎನಿಸಿದ್ದಾರೆ. ನಟ ಅಮಿತಾಭ್ ಬಚ್ಚನ್, ಟೆನಿಸ್ ತಾರೆ ಪೀಟ್ ಸಾಂಪ್ರಸ್, ಫುಟ್ಬಾಲ್ ಕೋಚ್ ಜಿಡಾನೆ ಇವರೆಲ್ಲ ಥಲಸ್ಸೇಮಿಯ ಮೈನರ್ ಕಾಯಿಲೆಯಿಂದ ಬಳಲುತ್ತಿದ್ದಾರೆ.

ಹಾವೇರಿ ಜಿಲ್ಲೆಯ ಅಕ್ಕಿ ಆಲೂರನ್ನು 'ರಕ್ತ ಸೈನಿಕ'ರ ತವರು ಎನ್ನಲಾಗುತ್ತದೆ. ಅಲ್ಲಿನ ಯುವ ಸಮಾಜಸೇವಕರು ಪ್ರತಿವರ್ಷ ಬಹಳಷ್ಟು ಸಂಖ್ಯೆಯಲ್ಲಿ ರಕ್ತದಾನ ಮಾಡಿ ರಕ್ತವನ್ನು ರೋಗಿಗಳಿಗೆ ಮೀಸಲಿರಿಸಿದ್ದಾರೆ. ಕರ್ನಾಟಕದಲ್ಲಿ 36 ಥಲಸ್ಸೇಮಿಯ ಡೇ ಕೇರ್ ಕೇಂದ್ರಗಳಿವೆ. ಚಿಕಿತ್ಸಾ ಕೇಂದ್ರಗಳಲ್ಲಿ ನೋಂದಾಯಿತ 2,288 ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ.

ಮದುವೆಗೆ ಮುಂಚೆ ಗಂಡು ಮತ್ತು ಹೆಣ್ಣು ವಂಶವಾಹಿ ಪರೀಕ್ಷೆಗಳನ್ನು ಮಾಡಿಸಿಕೊಳ್ಳಬೇಕು. ವಂಶವಾಹಿಗಳಲ್ಲಿ ದೋಷವಿದ್ದರೆ ಅವರಿಗೆ ಪ್ರಸವಪೂರ್ವ ಮತ್ತು ಜೆನೆಟಿಕ್ ಕೌನ್ಸೆಲಿಂಗ್ ನೀಡಿ ಗರ್ಭಧಾರಣೆ ಆಗುವುದನ್ನು ತಡೆಯಬಹುದು. ಗ್ರಾಮೀಣ ಪ್ರದೇಶಗಳಲ್ಲಿ ಥಲಸ್ಸೇಮಿಯ ಮತ್ತು ಇತರ ಆನುವಂಶಿಕ ರಕ್ತರೋಗಗಳ ಬಗ್ಗೆ ಹೆಚ್ಚಿನ ತಿಳಿವಳಿಕೆ ಇಲ್ಲ. ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಆಗಬೇಕಾಗಿದೆ.

ವಾಚಕರ ವಾಣಿ

ಫಡಣವೀಸ್ ಆದೇಶದಿಂದ ಸ್ಟಾಲಿನ್ ಸ್ಫೂರ್ತಿ?

ಮಕ್ಕಳಿಗೆ ಮತ್ತು ವ್ಯಾಪಾರೋದ್ಯಮಗಳಿಗೆ ಇನ್ನುಮುಂದೆ ತಮಿಳು ಹೆಸರುಗಳನ್ನೇ ಇಡುವಂತೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ತಮ್ಮ ರಾಜ್ಯದ ಜನತೆಗೆ ಮನವಿ ಮಾಡಿರುವುದಾಗಿ ವರದಿಯಾಗಿದೆ. ಇದು, ತಮಿಳರ ತಮಿಳು ಅಸ್ಮಿತೆ ಇನ್ನೊಂದು ಹಂತಕ್ಕೆ ಮೇಲೇರಿರುವುದಕ್ಕೆ ಉದಾಹರಣೆ ಎಂಬ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಮಹಾರಾಷ್ಟ್ರದ ಸರ್ಕಾರಿ ಕಚೇರಿಗಳಲ್ಲಿ ಮರಾಠಿಯಲ್ಲಿಯೇ ಮಾತನಾಡಬೇಕು ಎನ್ನುವ ಅಲ್ಲಿನ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರ ಆದೇಶದಿಂದ ಸ್ಟಾಲಿನ್ ಸ್ಫೂರ್ತಿ ಪಡೆದಿರಬೇಕು ಎಂದೂ ಹೇಳಲಾಗುತ್ತಿದೆ.

ವಿಪರ್ಯಾಸವೆಂದರೆ, ಈ ಆದೇಶ ಹೊರಡಿಸಿದ ಮುಖ್ಯಮಂತ್ರಿ ಸ್ಟಾಲಿನ್ ಅವರ ಹೆಸರೇ ವಿದೇಶಿ ಮೂಲದ್ದಾಗಿದೆ. ಹಾಗಿದ್ದರೆ ಸ್ಟಾಲಿನ್ ಅವರು ತಮ್ಮ ಹೆಸರನ್ನು ಬದಲಿಸಿಕೊಳ್ಳುವರೇ ಎನ್ನುವ ಪ್ರಶ್ನೆ ಜಾಲತಾಣದಲ್ಲಿ ಕೇಳಿಬಂದಿದೆ.

ರಮಾನಂದ ಶರ್ಮಾ, ಬೆಂಗಳೂರು

ಮನ ಕಲಕಿದ ಜಾತಿ ಶ್ರೇಷ್ಠತೆಯ ವ್ಯಸನ

ಅಧಿಸೂಚಿತ ಪರಿಶಿಷ್ಟ ಜಾತಿಯ ಪಟ್ಟಿಗೆ ಸೇರದ ಕೆಲವು ಸಣ್ಣಪುಟ್ಟ ಜಾತಿಗಳು ಸರ್ಕಾರದ ಸವಲತ್ತುಗಳನ್ನು ಪಡೆಯುವುದರಿಂದ ಹೇಗೆ ವಂಚಿತವಾಗುತ್ತಿವೆ ಎಂಬುದನ್ನು ವಿವರಿಸಿರುವ ಸಿ.ಎಸ್.ದ್ವಾರಕಾನಾಥ್ ಅವರ 'ಮನ್ಸರಾದವರು ಪರಿಗಣಿಸಬೇಕಲ್ಲವೇ?' ಎನ್ನುವ ಶೀರ್ಷಿಕೆಯ ಲೇಖನ (ಸಂಗತ, 6) ಮನ ಕಲಕಿತು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಮೇಲ್ವರ್ಗಗಳು 'ಮನ್ಸ'ರನ್ನು ತೀರಾ ಕೀಳಾಗಿ ಕಾಣುವುದರಿಂದ ಕೆಲವು ಪ್ರದೇಶಗಳಲ್ಲಿ ತಮ್ಮ ಜಾತಿಯ ಗುರುತನ್ನು ಮರೆಮಾಚುವುದೂ ಈ ಜಾತಿಗೆ ಪ್ರತ್ಯೇಕ ಅಸ್ಮಿತೆ ಸಿಗದಿರುವುದಕ್ಕೆ ಕಾರಣವಾಗಿದೆ ಎಂಬುದನ್ನು ಓದಿದಾಗ, ಜಾತಿ ಶ್ರೇಷ್ಠತೆಯ ವ್ಯಸನ ಎಲ್ಲಿಗೆ ಬಂದು ನಿಂತಿದೆ ಎಂಬುದು ತಿಳಿಯುತ್ತದೆ. ಇದು ನಮ್ಮ ನಾಡಿನ ದುರಂತ. ಯಾವುದೇ ಪಕ್ಷವು ಸರ್ಕಾರದ ನೇತೃತ್ವ ವಹಿಸಲಿ, ಈ ಲೇಖನದಲ್ಲಿ ನೀಡಿರುವಂತಹ ಸಲಹೆಗಳನ್ನು ಪಡೆಯುವ ಮನಸ್ಸು ಮಾಡಬೇಕಾಗಿದೆ.

ಗುರು ಜಗಳೂರು, ಹರಿಹರ

ನಾವು ಕೇಳಿದಂತೆ ಮಾಡುತ್ತೇವೆ, ನೀವು...

ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಪ್ರಮಾಣ ಕುಸಿಯುತ್ತಿರುವುದರ ವಿಡಂಬನೆಯಾದ 'ಮಕ್ಕಳಿರಲವ್ವ...' ಬರಹ (ಚುರುಮುರಿ, ಮೇ 7) ತುಂಬಾ ಅರ್ಥಗರ್ಭಿತವಾಗಿದೆ. ಸರ್ಕಾರಿ ಶಾಲೆಗಳಿಗೆ ಪ್ರವೇಶ ಪಡೆಯಿರಿ ಎಂದು ಬೇಡಿಕೊಳ್ಳುವ ಸ್ಥಿತಿಯೇ ಹಾಸ್ಯಾಸ್ಪದ. 'ಎಲ್ಲವನ್ನೂ ಉಚಿತವಾಗಿ ಕೊಡುವ ನಮ್ಮ ಸರ್ಕಾರಿ ಶಾಲೆಗೆ ಸೇರಿಸಿ' ಎಂದು ಮನವೊಲಿಸಲು ಶಂಕ್ರಿಯ ಮನೆಗೆ ಬಂದ ಅಧಿಕಾರಿಯು 'ನಿಮ್ಮ ಮಕ್ಕಳು ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದಾರಾ ಸರ್' ಎಂಬ ಶಂಕ್ರಿಯ ಪ್ರಶ್ನೆಗೆ ಉತ್ತರ ಕೊಡದೆ ಜಾರಿಕೊಳ್ಳುವುದು ಇಂದಿನ ವಸ್ತುಸ್ಥಿತಿಗೆ ಕನ್ನಡಿ ಹಿಡಿಯುತ್ತದೆ. ಇಂದೂ ಎಷ್ಟೋ ಗ್ರಾಮಗಳ ಶಾಲೆಗಳು ಕಟ್ಟಡಗಳ ಕೊರತೆ, ಶಿಕ್ಷಕರ ಕೊರತೆಯನ್ನು ಎದುರಿಸುತ್ತಿವೆ. ಕೆಲವು ಶಾಲೆಗಳ ಕಟ್ಟಡಗಳು ಅಪಾಯದ ಅಂಚಿನಲ್ಲಿ ಇವೆ. ಸುರಕ್ಷತೆಯ ಖಾತರಿ ಇಲ್ಲದ ಇಂತಹ ಶಾಲೆಗಳಿಗೆ ಪೋಷಕರು ತಮ್ಮ ಮಕ್ಕಳನ್ನು ಸೇರಿಸಲು ಹೇಗೆ ಮನಸ್ಸು ಮಾಡುತ್ತಾರೆ?

ಏಕರೂಪದ ಶಿಕ್ಷಣ ನೀಡಿದರೆ ಎಲ್ಲ ಮಕ್ಕಳೂ ಒಂದೇ ಎಂಬ ಭಾವನೆ ಮೂಡುತ್ತದೆ. ಎಷ್ಟೊಂದು ಪಠ್ಯಕ್ರಮ-ಗಳು ನಮ್ಮನ್ನು, ನಮ್ಮ ಮಕ್ಕಳನ್ನು ಪ್ರತ್ಯೇಕವಾಗಿ ಇರಿಸಿವೆ. ಐಸಿಎಸ್‌ಇ, ಸಿಬಿಎಸ್‌ಇ, ಕೇಂದ್ರೀಯ ಪಠ್ಯಕ್ರಮ, ರಾಜ್ಯ ಪಠ್ಯಕ್ರಮದಲ್ಲಿ ಸರ್ಕಾರಿ, ಅನುದಾನರಹಿತ, ಅನುದಾನಿತ, ಪಾಲಿಕೆ ಶಾಲೆ... ಹೀಗೆ ಎಷ್ಟೊಂದು ಬಗೆ. ಇಂತಹ ಸ್ಥಿತಿಯಲ್ಲಿ ಸರ್ಕಾರಿ ಶಾಲೆಗಳಿಗೆ ನಡೆಯುವ ಪ್ರವೇಶ ಆಂದೋಲನ ಹೇಗಿದೆ ಎಂದರೆ, 'ನಾವು ಕೇಳಿದಂತೆ ಮಾಡುತ್ತೇವೆ, ನೀವು ಬೇಕಾದಂತೆ ಮಾಡಿ' ಎನ್ನುವಂತಿದೆ.

ಮಲ್ಲತಹಳ್ಳಿ ಎಚ್. ತುಕಾರಾಂ, ಬೆಂಗಳೂರು

ಮನುವಾದದ ಮರುಸ್ಥಾಪನೆಯ ಹುನ್ನಾರ

'1,300 ವರ್ಷಗಳ ಹಿಂದೆಯೇ ಶಂಕರಾಚಾರ್ಯರು ಸಮಾನತೆಯನ್ನು ಪ್ರತಿಪಾದಿಸಿದ್ದರು. ಇನ್ನು 20 ವರ್ಷಗಳ ಬಳಿಕವಾದರೂ ಸಮಾನತೆ ತಂದವರು ಯಾರು ಎಂದು ಕೇಳಿದಾಗ, ಅಂಬೇಡ್ಕರ್ ಬದಲು ಶಂಕರಾಚಾರ್ಯರ ಹೆಸರು ಹೇಳುವಂತೆ ಆಗಬೇಕು' ಎಂದು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್ ಅವರು ಹೇಳಿರುವುದಾಗಿ ವರದಿಯಾಗಿದೆ (ಪ್ರ.ವಾ., ಮೇ 3). ಇದನ್ನು ಓದಿದಾಗ, ನಿಜ ಇತಿಹಾಸ ತಿಳಿದವರು ಕಳವಳಕ್ಕೆ ಈಡಾಗುವುದು ನಿಶ್ಚಿತ. ಇದು, ಕೆಲವರಿಗೆ ಅಂಬೇಡ್ಕರ್ ಬಗೆಗೆ ಇರುವ ಅನಾದರವನ್ನೂ ಮನು ಸಿದ್ಧಾಂತವನ್ನು ಪ್ರಚ್ಛನ್ನವಾಗಿ ಪ್ರತಿಪಾದಿಸಿದ ಶಂಕರರನ್ನು ಮುನ್ನೆಲೆಗೆ ತರುವ ಇರಾದೆಯನ್ನೂ ತೋರಿಸುತ್ತದೆ.

ಶಂಕರರು ಅಪ್ರತಿಮ ಪಾಂಡಿತ್ಯ ಇದ್ದವರು. ಅವರು ಪ್ರತಿಪಾದಿಸಿದ ಅದ್ವೈತ ಸಿದ್ಧಾಂತವು ಭಾರತೀಯ ತತ್ವಶಾಸ್ತ್ರಕ್ಕೆ ಮಹತ್ವದ ಕೊಡುಗೆ. ಇದೆಲ್ಲಾ ಸೈದ್ಧಾಂತಿಕವಾದುದು. ಸಾಮಾಜಿಕವಾಗಿ ಶಂಕರರ ಕೊಡುಗೆ ಎಂದರೆ ಚಾತುರ್ವರ್ಣ ಪದ್ಧತಿಯನ್ನು ಬಿಗಿಗೊಳಿಸಿದ್ದು, ಲೌಕಿಕಕ್ಕೊಂದು, ಪಾರಮಾರ್ಥಿಕಕ್ಕೊಂದು ಎಂಬಂತಹ ಸಿದ್ಧಾಂತವನ್ನು ಪ್ರಚುರಪಡಿಸಿ ದೇಶದ ನಾಲ್ಕು ಮೂಲೆಗಳಲ್ಲಿ ನಾಲ್ಕು ಪೀಠಗಳನ್ನು ಭೌತಿಕವಾಗಿ ಸ್ಥಾಪಿಸಿದ್ದು. ಇದನ್ನೇ ಸಮಾನತೆ ಎನ್ನುವುದಾದರೆ, 'ಶಂಕರಾಚಾರ್ಯರ ತತ್ವಗಳನ್ನು ಪಾಲನೆ ಮಾಡಿದ್ದರೆ ಇಂಥ ದುಃಸ್ಥಿತಿ ನಮಗೆ ಬರುತ್ತಿರಲಿಲ್ಲ, ದೇಶವೂ ಹಿಂದುಳಿಯುತ್ತಿರಲಿಲ್ಲ' ಎಂಬ ನ್ಯಾಯಮೂರ್ತಿಗಳ ಮಾತು ನಿಜವೇ ಆಗಿದ್ದರೆ, ಶಂಕರರ ನಂತರ ಕನ್ನಡದ ನೆಲದಲ್ಲಿ ಅಸಮಾನತೆಯ ಜಾತಿ ವಿರೋಧಿ, ಪುರೋಹಿತಶಾಹಿ ವಿರೋಧಿ ಚಳವಳಿ ಹುಟ್ಟಿಕೊಳ್ಳುವ ಪ್ರಸಂಗವೇ ಬರುತ್ತಿರಲಿಲ್ಲ. ಇಂದಿಗೂ ಜಾತಿಯೇ ಸತ್ಯವಾಗಿರುವ ಈ ದೇಶದ ದುರಂತದಲ್ಲಿ ನಾವೆಲ್ಲ ನರಳಬೇಕಾಗಿಯೂ ಇರಲಿಲ್ಲ. ಇದು, ಮನುವಾದದ ಮರುಸ್ಥಾಪನೆಯ ಹುನ್ನಾರ. ದೇಶದ ಶೂದ್ರ ಸಮುದಾಯ ಈ ನಯವಾದ ಮಾತಿನ ಮೋಡಿಗೆ ಸಿಲುಕದೆ ಎಚ್ಚೆತ್ತುಕೊಂಡರೆ ಅವರಿಗೇ ಹಿತ.

ಚಂದ್ರಶೇಖರ ತಾಳ್ಯ, ಹೊಳಲ್ಕೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜ್ಯ ಸರ್ಕಾರವು ಕಾರ್ಮಿಕ ಕಾಯ್ದೆ–1948 ಮತ್ತು ಅದರ ಅಡಿಯಲ್ಲಿ ಬರುವ 1969ರ ನಿಯಮಾವಳಿಗಳಿಗೆ ತಿದ್ದುಪಡಿ ತರಲು ಹೊರಟಿದೆ. ಉದ್ಯಮರಂಗಕ್ಕೆ ಅನುಕೂಲ ಕಲ್ಪಿಸಲು ನಿಯಮಗಳನ್ನು ಸರಳೀಕರಿಸುವುದು ಮತ್ತು ನಿಯಂತ್ರಣ ಮುಕ್ತಗೊಳಿಸುವುದು ಸರ್ಕಾರದ ಉದ್ದೇಶ. ಆದರೆ, ಕಾರ್ಮಿಕ ಸಂಘಟನೆಗಳಿಂದ ಇದಕ್ಕೆ ವಿರೋಧ ವ್ಯಕ್ತವಾಗಿದೆ. ಕೇಂದ್ರ ಸರ್ಕಾರವು 2020ರಲ್ಲಿ ರೂಪಿಸಿದ್ದ ಕಾರ್ಮಿಕ ಸಂಹಿತೆಗಳಿಗೆ ತಕ್ಕಂತೆ, ಕಾರ್ಖಾನೆ ಮಾಲೀಕರ ಪರವಾಗಿ ರಾಜ್ಯವು ತಿದ್ದುಪಡಿ ತರಲು ಹೊರಟಿದೆ ಎಂದು ಕಾರ್ಮಿಕ ಮುಖಂಡರು ಆರೋಪಿಸಿದ್ದಾರೆ

ಕೇಂದ್ರದ ಒತ್ತಡ ಮತ್ತು ಮಾಲೀಕರ ಲಾಬಿಗೆ ಮಣಿದು ರಾಜ್ಯ ಸರ್ಕಾರ ಬದಲಾವಣೆ ಮಾಡುತ್ತಿದೆ ಎಂದು ಆರೋಪ

ಕಾರ್ಖಾನೆ ಕೆಲಸ ನಿಯಮ ತಿದ್ದುಪಡಿಗೆ ವಿರೋಧ

ಪ್ರಜಾವಾಣಿ ವಾರ್ತೆ

ರಾಜ್ಯ ಸರ್ಕಾರವು 'ಕಾರ್ಖಾನೆಗಳ ಕಾಯ್ದೆ–1948' ಅಡಿಯಲ್ಲಿನ ಕರ್ನಾಟಕ ಕಾರ್ಖಾನೆಗಳ ನಿಯಮಾವಳಿಗಳಿಗೆ (1969) ತಿದ್ದುಪಡಿ ತರಲು ಹೊರಟಿದೆ. ಈ ಬಗ್ಗೆ ಚರ್ಚಿಸಲು ಮತ್ತು ಅಭಿಪ್ರಾಯ ಸಂಗ್ರಹಿಸಲು ಗುರುವಾರ (ಮೇ 8) ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ ಬೆಂಗಳೂರಿನಲ್ಲಿ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳ ಸಭೆ ಕರೆದಿದೆ. ಆದರೆ, ಕಾರ್ಮಿಕ ಸಂಘಟನೆಗಳು ಸಭೆ ಕರೆದಿರುವ ರೀತಿಯ ಬಗ್ಗೆಯೇ ಆಕ್ಷೇಪಣೆ ಎತ್ತಿದ್ದು, ರಾಜ್ಯ ಸರ್ಕಾರವು ಉದ್ಯಮಿಗಳ ಲಾಬಿಗೆ ಮಣಿದಿದೆ ಎಂದು ಆರೋಪಿಸಿವೆ.

ಸಭೆಗೆ ಕಾರ್ಯಸೂಚಿಯನ್ನೂ ಇಲಾಖೆ ಪ್ರಕಟಿಸಿದೆ. ಅಪಾಯಕಾರಿ ತಯಾರಿಕಾ ಕಾರ್ಯದಲ್ಲಿ ಮಹಿಳಾ ಕಾರ್ಮಿಕರ ನೇಮಕಾತಿಗೆ ಇರುವ ನಿರ್ಬಂಧವನ್ನು ತೆಗೆದುಹಾಕುವುದು, ರಾತ್ರಿ ಪಾಳಿಯಲ್ಲಿ ಮಹಿಳಾ ಕಾರ್ಮಿಕರನ್ನು ನೇಮಿಸಿಕೊಳ್ಳಲು ವಿಧಿಸಲಾಗಿರುವ ನಿಬಂಧನೆಗಳನ್ನು ಬದಲಾಯಿಸುವುದು, ಕಾರ್ಮಿಕರ ದೈನಂದಿನ ಕೆಲಸದ ಅವಧಿಯನ್ನು ಹೆಚ್ಚಿಸುವುದೂ ಸೇರಿದಂತೆ ನಾಲ್ಕೈದು ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಇಲಾಖೆ ತಿಳಿಸಿದೆ. ಈ ಬದಲಾವಣೆಗಳು 2020–21ರಲ್ಲಿ ಕೇಂದ್ರ ಸರ್ಕಾರವು ರೂಪಿಸಿದ್ದ ಕಾರ್ಮಿಕ ಸಂಹಿತೆಗಳಿಗೆ ತಕ್ಕಂತಿದೆ ಎಂದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ದೂರಿದೆ.

> **ಇದು ಆಂತರಿಕ ಸಭೆ. ಕಾರ್ಮಿಕ ಸಂಘಟನೆಗಳೊಂದಿಗೆ ಚರ್ಚಿಸಿ, ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು. ಸಭೆಯಲ್ಲಿ ಏನು ಚರ್ಚೆಯಾಗಲಿದೆ ಎಂಬುದನ್ನು ಈಗಲೇ ಹೇಳಲು ಸಾಧ್ಯವಿಲ್ಲ**
> **ಕೆ. ಶ್ರೀನಿವಾಸ್,** ನಿರ್ದೇಶಕ ಕಾರ್ಖಾನೆಗಳು, ಬಾಯ್ಲರ್‌ಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ

ಕಾರ್ಮಿಕ ಕಾನೂನುಗಳಿಗೆ ಬದಲಾವಣೆ ತರುವ ದಿಸೆಯಲ್ಲಿ ಕೇಂದ್ರ ಸರ್ಕಾರವು ನಾಲ್ಕು ಕಾನೂನು ಸಂಹಿತೆಗಳನ್ನು– ವೇತನ ಸಂಹಿತೆ, ಕೈಗಾರಿಕಾ ಸಂಬಂಧಗಳ ಸಂಹಿತೆ, ಕೆಲಸದ ಸ್ಥಳದಲ್ಲಿ ಸುರಕ್ಷತೆ, ಆರೋಗ್ಯ ಮತ್ತು ಸ್ಥಿತಿಗತಿ ಸಂಹಿತೆ ಮತ್ತು ಸಾಮಾಜಿಕ ಭದ್ರತಾ ಸಂಹಿತೆ– ಸಂಸತ್ತಿನಲ್ಲಿ ಮಂಡಿಸಿ ಅನುಮೋದನೆ ಪಡೆದಿತ್ತು. ಅವುಗಳ ಅನ್ವಯ ನಿಯಮಗಳನ್ನೂ ರೂಪಿಸಿತ್ತು. ಆದರೆ, ಕಾರ್ಮಿಕ ಕಾನೂನು ಸಮವರ್ತಿ ಪಟ್ಟಿಯಲ್ಲಿರುವುದರಿಂದ ನಿಯಮಗಳು ಜಾರಿಯಾಗಬೇಕು ಎಂದರೆ, ರಾಜ್ಯ ಸರ್ಕಾರಗಳೇ ಅಧಿಸೂಚನೆ ಹೊರಡಿಸಬೇಕು. ಬಹುತೇಕ ರಾಜ್ಯಗಳು ಈ ಸಂಬಂಧ ಕರಡು ನಿಯಮಗಳನ್ನು ಪ್ರಕಟಿಸಿದ್ದವು. ಕರ್ನಾಟಕವೂ ಎರಡು ಸಂಹಿತೆಗಳಿಗೆ ಸಂಬಂಧಿಸಿದ ಕರಡು ನಿಯಮಗಳನ್ನು 2021ರ ಮಾರ್ಚ್‌ನಲ್ಲಿ ಪ್ರಕಟಿಸಿ, ಆಕ್ಷೇಪಣೆಗಳನ್ನು ಸಲ್ಲಿಸಲು 45 ದಿನ ಕಾಲಾವಕಾಶ ನೀಡಿತ್ತು. ಆದರೆ, ನಂತರ ಈ ಪ್ರಕ್ರಿಯೆ ಸ್ಥಗಿತಗೊಂಡಿತ್ತು. ಕೇಂದ್ರ ಸರ್ಕಾರದ ಒತ್ತಡಕ್ಕೆ ಮಣಿದು ರಾಜ್ಯ ಸರ್ಕಾರವು ಕಾರ್ಖಾನೆ ನಿಯಮಗಳಿಗೆ ತಿದ್ದುಪಡಿ ತರುವ ಮೂಲಕ ಕಾರ್ಮಿಕ ಸಂಹಿತೆಗಳನ್ನು ಜಾರಿ ಮಾಡಲು ಮುಂದಾಗಿದೆ ಎಂದು ಕಾರ್ಮಿಕ ಮುಖಂಡರು ವಿಶ್ಲೇಷಿಸುತ್ತಿದ್ದಾರೆ.

ಕೆಲಸದ ಅವಧಿ ವಿಸ್ತರಣೆ: ಕಾರ್ಖಾನೆಗಳ ಕಾಯ್ದೆ 1948ರ ಪ್ರಕಾರ, ಕಾರ್ಮಿಕ ವಾರಕ್ಕೆ 48 ಗಂಟೆ ಕೆಲಸ ಮಾಡಬೇಕು (ಸೆಕ್ಷನ್ 51) ಮತ್ತು ಅವರ ದೈನಂದಿನ ಕೆಲಸದ ಅವಧಿ 9 ಗಂಟೆ ಮೀರುವಂತಿಲ್ಲ (ಸೆಕ್ಷನ್ 54). ಕೇಂದ್ರವು ರೂಪಿಸಿದ್ದ ಕಾರ್ಮಿಕ ಸಂಹಿತೆಯಲ್ಲಿ ಇರುವ ಅಂಶಗಳ ಪೈಕಿ ಕಾರ್ಮಿಕರ ಕೆಲಸದ ಅವಧಿಯನ್ನು ದಿನಕ್ಕೆ 12 ಗಂಟೆವರೆಗೆ ವಿಸ್ತರಿಸುವುದೂ ಒಂದಾಗಿದೆ. ಅದಕ್ಕೆ ತಕ್ಕಂತೆ ಕರ್ನಾಟಕ ಸರ್ಕಾರವು 2023ರಲ್ಲಿ 'ಕಾರ್ಖಾನೆಗಳ ಕಾಯ್ದೆ 1948'ಕ್ಕೆ ತಿದ್ದುಪಡಿ ತಂದಿತ್ತು. ಅದರಲ್ಲಿ ವಾರಕ್ಕೆ 48 ಗಂಟೆಗಳ ಮಿತಿಯಲ್ಲೇ ಕಾರ್ಮಿಕರು ದಿನಕ್ಕೆ 12 ಗಂಟೆಯವರೆಗೆ ಕೆಲಸ ಮಾಡಲು ಅವಕಾಶ ಕಲ್ಪಿಸುವ ನಿಯಮವನ್ನು ಅಳವಡಿಸಿತ್ತು.

ರಾಜ್ಯ ಸರ್ಕಾರವು ಕೆಲಸದ ಅವಧಿ ವಿಸ್ತರಣೆಗೆ ಮತ್ತು ಮಹಿಳೆಯರಿಗೆ ರಾತ್ರಿಪಾಳಿ ಕೆಲಸಕ್ಕೆ ಕಾರ್ಮಿಕರ ಒಪ್ಪಿಗೆ ಬೇಕು ಎಂಬ ಷರತ್ತು ಹಾಕಿತ್ತು. ಕಾರ್ಖಾನೆಗಳು ಬಲವಂತದಿಂದ ಕಾರ್ಮಿಕರ ಒಪ್ಪಿಗೆ ಪಡೆಯುತ್ತವೆ ಎಂದು ಸಿಐಟಿಯು ಅನುಮಾನ ವ್ಯಕ್ತಪಡಿಸಿತ್ತು. ಈಗ ಒಪ್ಪಿಗೆಯ ಷರತ್ತನ್ನೂ ಕೈಬಿಡುವ ಷಡ್ಯಂತ್ರ ನಡೆಯುತ್ತಿದೆ ಎನ್ನುವ ಆರೋಪ ಕೇಳಿಬಂದಿದೆ. ಬೃಹತ್ ತಯಾರಿಕಾ ಗುರಿ ನಿಗದಿಪಡಿಸಿ, ಅದು ಈಡೇರಲು ಕಾರ್ಮಿಕರನ್ನು 12 ಗಂಟೆ ದುಡಿಸಿಕೊಳ್ಳಲು ಅನುಮತಿ ನೀಡುವುದು ಕಾರ್ಮಿಕ ವಿರೋಧಿ ನೀತಿಯಾಗುತ್ತದೆ; ವಾರಕ್ಕೆ ಎರಡು ದಿನ ರಜೆ ನೀಡುತ್ತೇವೆ ಎನ್ನುವುದು ಸುಳ್ಳು ಮತ್ತು ಅಪ್ರಾಯೋಗಿಕ. ಕಾರ್ಖಾನೆ ಮಾಲೀಕರ ಲಾಬಿಗೆ ಮಣಿದು ರಾಜ್ಯ ಸರ್ಕಾರವು ನಿಯಮಗಳ ತಿದ್ದುಪಡಿಗೆ ಹೊರಟಿದೆ ಎನ್ನುವುದು ಕಾರ್ಮಿಕ ಸಂಘಟನೆಗಳ ಆರೋಪ.

ಅಪಾಯಕಾರಿ ಕೆಲಸದಲ್ಲಿ ಮಹಿಳೆಯರ ತೊಡಗುವಿಕೆ

- 1948ರ ಕಾಯ್ದೆಯ ಸೆಕ್ಷನ್ 87, ಅಪಾಯಕಾರಿ ಕೆಲಸಗಳ ಕುರಿತಾಗಿ ಇದೆ. 1969ರ ಕರ್ನಾಟಕ ಕಾರ್ಖಾನೆಗಳ ನಿಯಮಾವಳಿಗಳಲ್ಲಿ 87ನೇ ನಿಯಮ ಕೂಡ ಇದರ ಬಗ್ಗೆಯೇ ಇದೆ. ಅವುಗಳ ಪ್ರಕಾರ, ಅಪಾಯಕಾರಿ ಎಂದು ಘೋಷಿಸಲಾದ ಕೆಲವು ಕೆಲಸಗಳನ್ನು ಮಾಡುವುದಕ್ಕೆ ಮಹಿಳೆಯರನ್ನು ನಿಯೋಜಿಸಬಾರದು. ಉದಾ: ಸೋಡಾ ಸೇರಿದಂತೆ ಇನ್ನಿತರ ಏರೇಟೆಡ್ ನೀರಿನ ತಯಾರಿಕೆ, ಗಾಜು ತಯಾರಿಕೆ, ಲೋಹಗಳಿಗೆ ಹೊಳಪು ನೀಡುವುದು, ಸತುವಿನ ಸಂಸ್ಕರಣೆ ಇತ್ಯಾದಿ
- ಸುರಕ್ಷತಾ ವಿಧಾನಗಳನ್ನು ಅನುಸರಿಸಿ ಇಂತಹ ಅಪಾಯಕಾರಿ ಎಂದು ಘೋಷಿಸಲಾದ ಕೆಲಸಗಳನ್ನು ಮಾಡಲು ಮಹಿಳೆಯರಿಗೆ ಅವಕಾಶ ನೀಡಲು ಸರ್ಕಾರ ಮುಂದಾಗಿದೆ ಎಂಬುದು ಕಾರ್ಮಿಕ ಸಂಘಟನೆಗಳ ದೂರು

ಸಂಹಿತೆ ಏನು ಹೇಳುತ್ತದೆ?

- ಕೇಂದ್ರ ಸರ್ಕಾರವು ರೂಪಿಸಿರುವ 'ಕೆಲಸ ಸ್ಥಳದಲ್ಲಿ ಸುರಕ್ಷತೆ ಮತ್ತು ಆರೋಗ್ಯ ಹಾಗೂ ಸ್ಥಿತಿಗತಿ ಸಂಹಿತೆ'ಯು ಎಲ್ಲ ರೀತಿಯ ಕಾರ್ಖಾನೆಗಳಲ್ಲಿ ಯಾವುದೇ ರೀತಿಯ ಕೆಲಸಗಳನ್ನು ಮಹಿಳೆಯರು ಮಾಡಬಹುದು
- ಬೆಳಿಗ್ಗೆ 6 ಗಂಟೆಗಿಂತ ಮೊದಲು ಮತ್ತು ರಾತ್ರಿ 7 ಗಂಟೆಯ ನಂತರವೂ ಅವರು ಕೆಲಸ ಮಾಡಬಹುದು. ಆದರೆ, ಇದಕ್ಕಾಗಿ ಮಹಿಳೆಯರ ಒಪ್ಪಿಗೆ ಬೇಕು. ಒಂದು ವೇಳೆ ಮಹಿಳೆಯರನ್ನು ರಾತ್ರಿ ಪಾಳಿಯಲ್ಲಿ ಅಥವಾ ಯಾವುದೇ ರೀತಿಯ ಕೆಲಸಕ್ಕೆ ನಿಯೋಜಿಸುವುದಕ್ಕೂ ಮೊದಲು ಸುರಕ್ಷತೆ, ರಜೆಗಳು, ಕೆಲಸದ ಅವಧಿ ಸೇರಿದಂತೆ ಇನ್ನಿತರ ವಿಷಯಗಳಲ್ಲಿ ಸರ್ಕಾರಗಳು ನೀಡುವಂತಹ ನಿರ್ದೇಶನಗಳನ್ನು ಮಾಲೀಕರು ಕಡ್ಡಾಯವಾಗಿ ಪಾಲಿಸಬೇಕು ಎಂದೂ ಸಂಹಿತೆಯಲ್ಲಿ ಹೇಳಲಾಗಿದೆ
- ಅಪಾಯಕಾರಿ ಎಂದು ಗುರುತಿಸಲಾದ ಕೆಲಸಕ್ಕೆ ಮಹಿಳೆಯರನ್ನು ನೇಮಿಸಿಕೊಳ್ಳುವುದಕ್ಕೂ ಮುನ್ನ ಅವರ ಸುರಕ್ಷತೆಗೆ ಬೇಕಾದ ಎಲ್ಲ ಕ್ರಮಗಳನ್ನೂ ಕಾರ್ಖಾನೆಗಳು ಕೈಗೊಳ್ಳಬೇಕು

ಸಂಹಿತೆ ಜಾರಿಗೊಳಿಸುವ ಯತ್ನ

ಗುರುವಾರ ಕರೆದಿರುವ ಸಭೆ ಅಭಿಪ್ರಾಯ ಸಂಗ್ರಹಿಸುವುದಕ್ಕಲ್ಲ. ಸರ್ಕಾರ ನಿಯಮಗಳನ್ನು ತಿದ್ದುಪಡಿ ಮಾಡಿದೆ. ಇದನ್ನು ನಾವು ತೀವ್ರವಾಗಿ ವಿರೋಧಿಸುತ್ತೇವೆ. ಮಹಿಳೆಯರನ್ನು ರಾತ್ರಿ ಪಾಳಿಗೆ ನೇಮಿಸುವುದು, ಅಪಾಯಕಾರಿ ಕೆಲಸದಲ್ಲಿ ಅವರನ್ನು ತೊಡಗುವಂತೆ ಮಾಡುವುದರಿಂದ ಅವರ ಸುರಕ್ಷತೆಗೆ ಧಕ್ಕೆಯಾಗುತ್ತದೆ. ಕೆಲಸದ ಅವಧಿಯನ್ನು ದಿನಕ್ಕೆ ಗರಿಷ್ಠ 12ಗಂಟೆವರೆಗೆ ವಿಸ್ತರಿಸುವುದಕ್ಕೂ ಸರ್ಕಾರ ಹೊರಟಿದೆ. ಕಾರ್ಮಿಕರು ಹೆಚ್ಚುವರಿ ಕೆಲಸ ಮಾಡಿದರೆ ಹೆಚ್ಚುವರಿ ವೇತನ ನೀಡುವುದಿಲ್ಲ. ಸರ್ಕಾರ ಸಂಬಂಧಿಸಿದವರಿಂದ ಅಭಿಪ್ರಾಯ ಸಂಗ್ರಹಿಸುವುದಾದರೆ ಕಾರ್ಖಾನೆಗಳ ಮಾಲೀಕರು ಮತ್ತು ಕಾರ್ಮಿಕ ಸಂಘಟನೆಗಳೊಂದಿಗೆ ಏಕಕಾಲಕ್ಕೆ ಸಭೆ ನಡೆಸುತ್ತಿತ್ತು. ಆದರೆ, ಗುರುವಾರ ಬೆಳಿಗ್ಗೆ ಮಾಲೀಕರ ಸಭೆ ನಿಗದಿಯಾಗಿದ್ದರೆ, ನಮ್ಮ ಸಭೆ ಮಧ್ಯಾಹ್ನ ನಡೆಯಲಿದೆ. ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಒತ್ತಡಕ್ಕೆ ಮಣಿದು ಕಾರ್ಮಿಕ ಸಂಹಿತೆಗಳನ್ನು ರಾಜ್ಯದಲ್ಲಿ ಜಾರಿಗೆ ತರಲು ಮುಂದಾಗಿದೆ

ಎಸ್.ವರಲಕ್ಷ್ಮಿ, ಸಿಐಟಿಯು ರಾಜ್ಯ ಸಮಿತಿ ಅಧ್ಯಕ್ಷೆ

ಅಧಿಕಾರಿಗಳು ಹೇಳುವುದೇನು?

'ಸಭೆಯಲ್ಲಿ ಹಲವು ವಿಚಾರಗಳು ಚರ್ಚೆಗೆ ಬರಲಿವೆ. ಅಪಾಯಕಾರಿ ಕೆಲಸಗಳಲ್ಲಿ ಮಹಿಳಾ ಕಾರ್ಮಿಕರ ನೇಮಕಾತಿಗೆ ಇರುವ ನಿರ್ಬಂಧವನ್ನು ತೆಗೆದುಹಾಕುವುದೂ ಅದರಲ್ಲೊಂದು. ಸಭೆಯಲ್ಲಿ ಸಂಘಟನೆಗಳ ಅಭಿಪ್ರಾಯವನ್ನು ಕೇಳಲಿದ್ದೇವೆ. ಮಹಿಳಾ ಕಾರ್ಮಿಕರನ್ನು ಅಪಾಯಕ್ಕೆ ದೂಡುವ ವಿಚಾರ ಇದಲ್ಲ. ಈಗ ಆಧುನಿಕ ಸುರಕ್ಷತಾ ಕ್ರಮಗಳು ಬಂದಿರುವುದರಿಂದ ಅವುಗಳನ್ನು ಬಳಸಿ ಅಪಾಯವಿಲ್ಲದಂತೆ ಕೆಲಸ ಮಾಡುವುದಕ್ಕೆ ಸಾಧ್ಯ ಇರುವಲ್ಲಿ ಮಹಿಳೆಯರಿಗೆ ಉದ್ಯೋಗ ನಿರಾಕರಣೆ ಆಗಬಾರದು ಎಂಬ ಕಾರಣಕ್ಕೆ ಆ ಅಂಶವನ್ನು ಚರ್ಚೆಗೆ ಇಡಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ವಾರಕ್ಕೆ 48 ಗಂಟೆ ಮೀರದಂತೆ ದೈನಂದಿನ ಕೆಲಸದ ಅವಧಿಯನ್ನು ಹೆಚ್ಚಿಸುವ ಬಗ್ಗೆಯೂ ಚರ್ಚೆಗಳಾಗಲಿವೆ. ಗಾರ್ಮೆಂಟ್ಸ್ ಸಹಿತ ಕೆಲವು ಕ್ಷೇತ್ರಗಳಲ್ಲಿ ವಾರಕ್ಕೆ ಎರಡು ದಿನ ರಜೆ ನೀಡಿ ಐದು ದಿನ ಕೆಲಸ ಮಾಡುವಾಗ ದಿನಕ್ಕೆ 9 ಗಂಟೆ ಕೆಲಸ ಮಾಡಿದರೆ ವಾರಕ್ಕೆ 45 ಗಂಟೆಯಷ್ಟೇ ಆಗುತ್ತದೆ. ಅದಕ್ಕೆ ದಿನಕ್ಕೆ ಒಂಬತ್ತೂವರೆ ಗಂಟೆ ಕೆಲಸ ಮಾಡಬೇಕಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ನಿಯಮಗಳಲ್ಲಿ ಬದಲಾವಣೆ ಮಾಡಬೇಕಾಗುತ್ತದೆ. ಸಚಿವ ಸಂಪುಟ ಸಭೆ ಈ ತೀರ್ಮಾನ ಕೈಗೊಳ್ಳಬೇಕಾಗುತ್ತದೆ' ಎಂದು ಅವರು ಹೇಳಿದ್ದಾರೆ.

ಮಹಿಳೆಯರಿಗೆ ರಾತ್ರಿ ಪಾಳಿ ಕೆಲಸ

- 1948ರ ಕಾರ್ಖಾನೆಗಳ ಕಾಯ್ದೆಯ 66ನೇ ಸೆಕ್ಷನ್, ಕಾರ್ಖಾನೆಗಳಲ್ಲಿ ಮಹಿಳೆಯರನ್ನು ರಾತ್ರಿ ಪಾಳಿಯ ಕೆಲಸಕ್ಕೆ ನಿಯೋಜಿಸುವುದನ್ನು ನಿರ್ಬಂಧಿಸುತ್ತದೆ. ಅದರ ಪ್ರಕಾರ, ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 7 ಗಂಟೆಯ ನಡುವಿನ ಅವಧಿ ಬಿಟ್ಟು ಬೇರೆ ಸಮಯದಲ್ಲಿ ಯಾವುದೇ ಮಹಿಳೆ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಅಗತ್ಯವಿಲ್ಲ ಅಥವಾ ಮಹಿಳೆಯನ್ನು ಕೆಲಸಕ್ಕೆ ನಿಯೋಜಿಸುವಂತಿಲ್ಲ
- ರಾಜ್ಯ ಸರ್ಕಾರ 2023ರಲ್ಲಿ ಜಾರಿಗೆ ತಂದಿರುವ ತಿದ್ದುಪಡಿ ಕಾಯ್ದೆಯಲ್ಲಿ ಈ 66ನೇ ಸೆಕ್ಷನ್‌ಗೆ ತಿದ್ದುಪಡಿ ಮಾಡಲಾಗಿದೆ. ಅದರಲ್ಲಿ ಉಪ ಸೆಕ್ಷನ್‌ಗಳನ್ನು ಸೇರಿಸಲಾಗಿದ್ದು, ಮಹಿಳೆಯರ ಸುರಕ್ಷತೆಯನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ವಿವಿಧ ಷರತ್ತುಗಳನ್ನು ಪಾಲಿಸಿದರೆ, ಮಹಿಳೆಯರನ್ನು ರಾತ್ರಿ ಪಾಳಿಗೂ ನೇಮಕ ಮಾಡಿಕೊಳ್ಳಬಹುದು ಎಂದು ಹೇಳಲಾಗಿದೆ

ಪ್ರಮುಖ ಷರತ್ತುಗಳು ಇಂತಿವೆ...

(i) ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳವನ್ನು ತಡೆಯುವುದು ಕಾರ್ಖಾನೆ ಮಾಲೀಕರು ಅಥವಾ ಇತರೆ ಜವಾಬ್ದಾರಿಯುತ ವ್ಯಕ್ತಿಗಳ ಕರ್ತವ್ಯ. ಅದಕ್ಕೆ ಬೇಕಾದ ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು

(ii) ನೇರವಾಗಿ ಲೈಂಗಿಕ ವರ್ತನೆ ಅಥವಾ ಯಾವುದೇ ರೂಪದ ಲೈಂಗಿಕ ಕಿರುಕುಳವನ್ನು ನಿರ್ಬಂಧಿಸಬೇಕು

(iii) ಮಹಿಳೆಯರಿಗೆ ಕೆಲಸಕ್ಕೆ ಅನುಕೂಲಕರವಾದ ವಾತಾವರಣವನ್ನು ಕಲ್ಪಿಸಬೇಕು. ವಿಶ್ರಾಂತಿ, ಆರೋಗ್ಯ, ಸ್ವಚ್ಛತೆ ಸೌಲಭ್ಯ ಕಲ್ಪಿಸಬೇಕು

(iv) ಮಾಲೀಕರು ಕಾರ್ಖಾನೆಯಲ್ಲಿ ದೂರು ಪರಿಹಾರ ವ್ಯವಸ್ಥೆಯನ್ನು ರೂಪಿಸಬೇಕು. ಈ ವ್ಯವಸ್ಥೆಯು ನಿಗದಿತ ಸಮಯದ ಒಳಗಾಗಿ ದೂರನ್ನು ಇತ್ಯರ್ಥಪಡಿಸಬೇಕು

(v) ಕಾರ್ಮಿಕರ ಸಭೆ ಅಥವಾ ಇನ್ನಿತರ ವೇದಿಕೆಗಳಲ್ಲಿ ಲೈಂಗಿಕ ಕಿರುಕುಳದ ಬಗ್ಗೆ ಪ್ರಸ್ತಾಪಿಸಲು ಮಹಿಳಾ ಉದ್ಯೋಗಿಗಳಿಗೆ ಅವಕಾಶ ನೀಡಬೇಕು

(vi) ಕಾರ್ಖಾನೆಯ ಒಳಗೆ ಮಾತ್ರವಲ್ಲದೆ ಹೊರ ಆವರಣ ಮತ್ತು ಮಹಿಳಾ ಕಾರ್ಮಿಕರು ಓಡಾಡುವ ಜಾಗದಲ್ಲೆಲ್ಲ ಸಾಕಷ್ಟು ಬೆಳಕಿನ ವ್ಯವಸ್ಥೆ ಮತ್ತು ಸಿ.ಸಿ.ಟಿ.ವಿ ಕ್ಯಾಮೆರಾ ವ್ಯವಸ್ಥೆಯನ್ನು ಮಾಲೀಕರು ಮಾಡಬೇಕು

(vii) ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರು ಒಂದು ತಂಡದಲ್ಲಿ ಕನಿಷ್ಠ 10 ಜನರು ಇರುವುದನ್ನು ಖಾತ್ರಿಪಡಿಸಬೇಕು

ಆಧಾರ: 1948ರ ಕಾರ್ಖಾನೆಗಳ ಕಾಯ್ದೆ, 2023ರ ತಿದ್ದುಪಡಿ ಕಾಯ್ದೆ, 1969ರ ಕಾರ್ಖಾನೆ ನಿಯಮಾವಳಿಗಳು, ಕೆಲಸ ಸ್ಥಳದಲ್ಲಿ ಸುರಕ್ಷತೆ ಮತ್ತು ಆರೋಗ್ಯ ಹಾಗೂ ಸ್ಥಿತಿಗತಿ ಸಂಹಿತೆ

ರಾಷ್ಟ್ರೀಯ

ನ್ಯಾ. ವರ್ಮಾ ವಿರುದ್ಧದ ಆರೋಪಕ್ಕೆ ಪುಷ್ಟಿ

ಯಶವಂತ ವರ್ಮಾ

ನವದೆಹಲಿ (ಪಿಟಿಐ): ನ್ಯಾಯಮೂರ್ತಿ ಯಶವಂತ ವರ್ಮಾ ಅವರ ಮನೆಯಲ್ಲಿ ನೋಟಿನ ಕಂತೆಗಳು ಅರ್ಧ ಸುಟ್ಟ ಸ್ಥಿತಿಯಲ್ಲಿ ಪತ್ತೆಯಾದ ಆರೋಪದ ಬಗ್ಗೆ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ನೇಮಕ ಮಾಡಿದ್ದ ಸಮಿತಿಯು, ಆರೋಪಗಳು ನಿಜ ಎಂದು ತನ್ನ ವರದಿಯಲ್ಲಿ ಹೇಳಿದೆ ಎನ್ನಲಾಗಿದೆ.

ವರದಿಯಲ್ಲಿ ಇರುವ ಅಂಶಗಳನ್ನು ಉಲ್ಲೇಖಿಸಿ, ನ್ಯಾಯಮೂರ್ತಿ ಸ್ಥಾನದಿಂದ ಕೆಳಗಿಳಿಯುವಂತೆ ವರ್ಮಾ ಅವರಿಗೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಅವರು ಹೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಹಜ ನ್ಯಾಯದ ತತ್ವವನ್ನು ಪಾಲಿಸಿರುವ ಸಿಜೆಐ, ವರದಿಯ ಪ್ರತಿಯನ್ನು ನ್ಯಾಯಮೂರ್ತಿ ವರ್ಮಾ ಅವರಿಗೆ ರವಾನಿಸಿದ್ದು, ಪ್ರತಿಕ್ರಿಯೆ ಕೊಡುವಂತೆ ಹೇಳಿದ್ದಾರೆ.

ಮೂವರು ಸದಸ್ಯರು ಇರುವ ಸಮಿತಿಯು ತನ್ನ ವರದಿಯನ್ನು ಸಿಜೆಐ ಅವರಿಗೆ ಈಚೆಗೆ ಸಲ್ಲಿಸಿದೆ. ಸಾಕ್ಷ್ಯಗಳನ್ನು ಪರಿಶೀಲಿಸಿರುವ ಸಮಿತಿಯು, 50ಕ್ಕೂ ಹೆಚ್ಚು ಮಂದಿಯಿಂದ ಹೇಳಿಕೆ ಪಡೆದುಕೊಂಡಿದೆ. ದೆಹಲಿ ಪೊಲೀಸ್ ಆಯುಕ್ತ ಸಂಜಯ್ ಅರೋರ ಮತ್ತು ದೆಹಲಿ ಅಗ್ನಿಶಾಮಕ ದಳದ ಮುಖ್ಯಸ್ಥರ ಹೇಳಿಕೆಗಳನ್ನೂ ಸಮಿತಿಯು ಪಡೆದುಕೊಂಡಿದೆ.

ವರ್ಮಾ ಅವರ ನಿವಾಸದಲ್ಲಿ ಮಾರ್ಚ್ 14ರ ರಾತ್ರಿ 11.35ರ ವೇಳೆಗೆ ಬೆಂಕಿ ಕಾಣಿಸಿಕೊಂಡಾಗ ಅಲ್ಲಿಗೆ ಮೊದಲು ಧಾವಿಸಿದ್ದವರಲ್ಲಿ ಈ ಇಬ್ಬರು ಕೂಡ ಸೇರಿದ್ದಾರೆ. ವರ್ಮಾ ಅವರು ಆ ಸಂದರ್ಭದಲ್ಲಿ ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿ ಆಗಿದ್ದರು.

ಬೆಂಕಿ ಕಾಣಿಸಿಕೊಂಡಾಗ ವರ್ಮಾ ಅವರ ಅಧಿಕೃತ ನಿವಾಸದ ಕೊಠಡಿಯೊಂದರಲ್ಲಿ ಭಾರಿ ಪ್ರಮಾಣದ ನೋಟಿನ ಕಂತೆಗಳು ಸಿಕ್ಕವು ಎಂಬ ಆರೋಪವನ್ನು ಖಚಿತಪಡಿಸುವ ಸ್ಪಷ್ಟ ಸಾಕ್ಷ್ಯಗಳು ಸಮಿತಿಗೆ ದೊರೆತಿವೆ ಎಂದು ಮೂಲಗಳು ತಿಳಿಸಿವೆ. ವರ್ಮಾ ಅವರು ನೋಟಿನ ಕಂತೆಗಳು ಸಿಕ್ಕ ಆರೋಪವನ್ನು ನಿರಾಕರಿಸಿದ್ದಾರೆ.

ಸಿಜೆಐ ಖನ್ನಾ ಅವರು ವರದಿಯಲ್ಲಿರುವ ಅಂಶಗಳ ಬಗ್ಗೆ ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ಸದಸ್ಯರ ಜೊತೆ ಚರ್ಚಿಸಿದ್ದಾರೆ, ಅವರು ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಒಯ್ಯುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಪ್ರವೀಣ್ ಸೂದ್ ಅವಧಿ ವಿಸ್ತರಣೆ



ಪ್ರವೀಣ್ ಸೂದ್

ನವದೆಹಲಿ (ಪಿಟಿಐ): ಸಿಬಿಐ ನಿರ್ದೇಶಕ ಪ್ರವೀಣ್ ಸೂದ್ ಅವರ ಅಧಿಕಾರಾವಧಿಯನ್ನು ಕೇಂದ್ರ ಸರ್ಕಾರವು ಬುಧವಾರ ಒಂದು ವರ್ಷ ವಿಸ್ತರಿಸಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ಲೋಕಸಭೆ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಒಳಗೊಂಡ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸಮಿತಿಯು ಸೋಮವಾರ ನಡೆಸಿದ ಸಭೆಯಲ್ಲಿ ಈ ನಿರ್ಧಾರವನ್ನು ಕೈಗೊಂಡಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪ್ರವೀಣ್ ಅವರ ಅಧಿಕಾರಾವಧಿಯನ್ನು ಇದೇ ಮೇ 24ರಿಂದ ಒಂದು ವರ್ಷ ವಿಸ್ತರಿಸುವಂತೆ ಸಮಿತಿ ನೀಡಿರುವ ಶಿಫಾರಸನ್ನು ಸಂಪುಟದ ನೇಮಕಾತಿ ಸಮಿತಿ(ಎಸಿಸಿ) ಅಂಗೀಕರಿಸಿದೆ.

ಬಾಲ್ಯವಿವಾಹಕ್ಕೆ ಯತ್ನ: ಬಂಧನ

ಠಾಣೆ (ಪಿಟಿಐ): ಪೋಷಕರಿಗೆ ಹಣ ನೀಡಿ, 14 ವರ್ಷದ ಬುಡಕಟ್ಟು ಬಾಲಕಿಯನ್ನು ಮದುವೆಯಾಗಲು ಮುಂದಾದ ಆರೋಪದಡಿ 35 ವರ್ಷದ ವ್ಯಕ್ತಿ ಸೇರಿದಂತೆ ಎಂಟು ಜನರನ್ನು ಪೊಲೀಸರು ಬಂಧಿಸಿದ್ದಾರೆ.

ಬಾಲಕಿ ಕಾತಕರಿ ಸಮುದಾಯಕ್ಕೆ ಸೇರಿದವಳಾಗಿದ್ದು, ಆಕೆಯ ತಂದೆ ಮಹಾರಾಷ್ಟ್ರದ ಅಹಮದ್‌ನಗರ ಜಿಲ್ಲೆಯ ನಿವಾಸಿ ಮಂಗೇಶ್ ಗಡೇಕರ್ (35) ಅವರಿಂದ ₹1.20 ಲಕ್ಷ ಹಣ ಪಡೆದು, ಆತನೊಂದಿಗೆ ವಿವಾಹ ಮಾಡಲು ಮುಂದಾಗಿದ್ದರು. ಇದನ್ನು ತಿಳಿದ ಶ್ರಮಜೀವಿ ಸಂಘಟನೆಯ (ಬುಡಕಟ್ಟು ಜನಾಂಗದವರ ಕಲ್ಯಾಣಕ್ಕಾಗಿ ಕೆಲಸ ಮಾಡುವ ಸಂಘಟನೆ) ಸ್ಥಳೀಯ ಸ್ವಯಂಸೇವಕ ದಯಾನಂದ್ ಪಾಟೀಲ್ ಅವರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪೊಲೀಸರು ಬುಧವಾರ ಸ್ಥಳಕ್ಕೆ ತೆರಳಿ ವಿವಾಹವನ್ನು ನಿಲ್ಲಿಸಿ, 11 ಜನರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮಧ್ಯವರ್ತಿಯೊಂದಿಗೆ ಬಾಲಕಿ ತಂದೆ ಮತ್ತು ಮಲತಾಯಿ ಪರಾರಿ ಆಗಿದ್ದಾರೆ ಎಂದಿದ್ದಾರೆ.

ಗುಂಡಣ್ಣ



ಪ್ರಯತ್ನದಿಂದ ಸಾಧನೆ ಸಾಧ್ಯ

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

190

ನಿಸರ್ಗ ಎಲ್ಲರಿಗೂ ಸಮಾನ ಅವಕಾಶ ನೀಡಿದೆ. ಅಲ್ಲಿ ಬಡತನ ಶ್ರೀಮಂತಿಕೆ ಎಂಬುದಿಲ್ಲ. ಸೂರ್ಯ ಶ್ರೀಮಂತನ ಮನೆಗೆ ಹೆಚ್ಚು ಬೆಳಕು, ಬಡವನ ಮನೆಗೆ ಕಡಿಮೆ ಬೆಳಕು ನೀಡುವುದಿಲ್ಲ. ನಮ್ಮ ದೃಷ್ಟಿಯಲ್ಲಿ ಬಂಗ್ಲೆ ಶ್ರೀಮಂತಿಕೆ, ಆಶ್ರಯ ಮನೆ ಬಡತನ. ಆದರೆ ಸೂರ್ಯನ ದೃಷ್ಟಿಯಲ್ಲಿ ಬಡತನವೂ ಇಲ್ಲ, ಶ್ರೀಮಂತಿಕೆಯೂ ಇಲ್ಲ. ಆಕಾಶದಲ್ಲಿ ಮೇಘಗಳು ತೇಲಿ ಬರುತ್ತಿರುತ್ತವೆ. 'ನಮ್ಮ ಜಾತಿಯ ಹೊಲದ ಮೇಲೆ ಮಳೆ ಸುರಿಸಿ' ಎನ್ನಲು ಆಗುತ್ತದೇನು? ಹಾಗೆ ಹೇಳಿದರೆ, ಆಗ ಮೋಡ 'ನೀವು ಕೆಳಗೆ ನಿಂತು ನೋಡುವವರಿಗೆ ಮಾತ್ರ ಆ ಜಾತಿ ಈ ಜಾತಿ ಅಂತ ಕಾಣುತ್ತದೆ. ನಾವು ಮೇಲೆ ನಿಂತು ನೋಡುವವರಿಗೆ ಕೆಳಗೆ ಇದ್ದವರೆಲ್ಲಾ ಭೂಮಿ ತಾಯಿಯ ಮಕ್ಕಳು ಎನ್ನುವುದಷ್ಟೇ ಕಾಣುತ್ತದೆ' ಎಂದು ಹೇಳುತ್ತದೆ. ನೀರು, ಗಾಳಿ, ಬೆಳಕು, ಬಯಲು ಎಲ್ಲರಿಗೂ ಸಮಾನವಾಗಿ ಕರುಣಿಸಿದರೂ ಇಲ್ಲಿ ಒಬ್ಬ ಬುದ್ಧನಾಗುತ್ತಾನೆ. ಇನ್ನೊಬ್ಬ ಯಾಕೆ ಬಿದ್ದ? ಯಾಕೆ ಒಬ್ಬ ವಿಜ್ಞಾನಿ, ಇನ್ನೊಬ್ಬ ಯಾಕೆ ಅಜ್ಞಾನಿ? ಇದು ವೈಪರೀತ್ಯ ಯಾಕಾತು? ಒಂದೇ ತರಗತಿ, ಒಂದೇ ವಿಷಯ, ಒಂದೇ ಶಿಕ್ಷಕ. ಆದರೂ ಒಬ್ಬ ಮೊದಲನೇ ಸ್ಥಾನ ಗಳಿಸುತ್ತಾನೆ, ಇನ್ನೊಬ್ಬ ಫೇಲ್ ಆಗುತ್ತಾನೆ ಯಾಕೆ?

ಮನುಷ್ಯನಿಗೆ ಎರಡು ಪ್ರವೃತ್ತಿಗಳು. ಒಂದು ಸಹಜ ಪ್ರವೃತ್ತಿ, ಇನ್ನೊಂದು ಪ್ರಯತ್ನ ಪ್ರವೃತ್ತಿ. ನಮಗೆ ಬಾಲ್ಯ ಇರುತ್ತದೆ. ನಾವು ಯುವಕರಾಗಲು ಏನೂ ಪ್ರಯತ್ನ ಪಡೋದು ಬೇಡ. ಹಾಗೆಯೇ ಮುದುಕರಾಗಲೂ ಯಾವ ಪ್ರಯತ್ನ ಬೇಡ. ಸಾಯುವಾಗಲೂ ಯಾವ ಪ್ರಯತ್ನ ಇಲ್ಲ. ಇದು ಮನುಷ್ಯನ ಸಹಜ ಪ್ರವೃತ್ತಿ. ಇದನ್ನು ತಡೆಯಲು ಸಾಧ್ಯವಿಲ್ಲ. ಮುಪ್ಪಾಗುವುದನ್ನು ತಡೆಯಲು ಸಾಧ್ಯವಿಲ್ಲ. ಇದು ನೈಸರ್ಗಿಕ ಕ್ರಿಯೆ. ಈಗ ಕೆಲವರಿಗೆ ಕಣ್ಣು ಕಾಣಿಸುವುದಿಲ್ಲ. ಕಣ್ಣಿದ್ದವರಿಗೆ ಜಗತ್ತು ಕಾಣುತ್ತದೆ. ಆದರೆ ತಮಗೆ ಏನು ಬೇಕು ಎನ್ನುವುದು ಗೊತ್ತಾಗುವುದಿಲ್ಲ. ಆದರೆ ಕಣ್ಣಿಲ್ಲದವರಿಗೆ ಜಗತ್ತೇ ಕಾಣದು. ಆದರೆ ತಮಗೆ ಏನು ಬೇಕು ಎನ್ನುವುದು ಕಾಣುತ್ತದೆ. ಇದು ಪ್ರಯತ್ನ ಪ್ರವೃತ್ತಿ. ಪ್ರಯತ್ನದಿಂದ ಜನ ಏನನ್ನಾದರೂ ಸಾಧಿಸಬಹುದು. ಎರಡು ಮಕ್ಕಳ ತಾಯಿಯಾಗಿದ್ದ ಮೇರಿ ಕೋಮ್ ಒಲಿಂಪಿಕ್ ಪದಕ ಪಡೆದಳು. ಇದು ಪ್ರಯತ್ನದ ಫಲ. ಸಂಪತ್ತು ಗಳಿಸುವುದು ಸಾಧನೆಯಲ್ಲ. ಸತತ ಪ್ರಯತ್ನದ ಮೂಲಕ ಸಾಧನೆ ಮಾಡುವುದೇ ಸಂಪತ್ತಾಗಬೇಕು.

ಯಾವ ವಿದ್ಯಾರ್ಥಿಗೆ ಪರೀಕ್ಷೆಯಲ್ಲಿ ನಪಾಸಾಗಬೇಕು ಎಂಬ ಬಯಕೆ ಇದೆ? ಯಾವ ವ್ಯಾಪಾರಿಗೆ ತನಗೆ ನಷ್ಟ ಆಗಬೇಕು ಎಂಬ ಬಯಕೆ ಇದೆ? ಎಲ್ಲರಿಗೂ ಬಯಕೆ ಇದೆ. ಆದರೂ ನಾವು ಅಂದುಕೊಂಡಿದ್ದು ಆಗುವುದಿಲ್ಲವಲ್ಲ ಯಾಕೆ? ಎಲ್ಲಿ ದೋಷವಿದೆ? ದೋಷ ಹೊರಗಿಲ್ಲ. ನಮ್ಮ ಒಳಗೆಯೇ ಇದೆ. ನಮಗೆ ಯಶಸ್ಸು ಗಳಿಸುವ ಇಚ್ಛೆ ಇದ್ದರೂ ಒಳಗಿರುವ ಚಂಚಲ ಮನಸ್ಸು ಯಾವುದನ್ನೂ ಮಾಡಲು ಕೊಡುವುದಿಲ್ಲ. ಆ ದೋಷದಿಂದ ಸಾಧನೆ ಮಾಡಲು ಆಗುವುದಿಲ್ಲ. ಗಾಳಿಯನ್ನು ಕಟ್ಟಿ ಹಿಡಿಯಬಹುದು, ಆದರೆ ಮನಸ್ಸನ್ನು ಕಟ್ಟಿ ನಿಲ್ಲಿಸಲು ಆಗುವುದಿಲ್ಲ. ಬೆಳಿಗ್ಗೆ ಬೇಗ ಎದ್ದು ಓದಬೇಕು ಅಂತ ಅಲಾರಂ ಇಟ್ಟಿರುತ್ತಾರೆ. ಅಲಾರಾಂ ಆದಾಗ ಇನ್ನು ಐದು ನಿಮಿಷ ಮಲಗೋಣ ಎಂದು ಮಲಗಿದರೆ ಏಳೋವಾಗ 8 ಗಂಟೆ ಆಗಿರತ್ತದೆ. ಅಲಾರಾಂ ಇಡು ಅಂತ ಹೇಳಿದ್ದೂ ಮನಸ್ಸು. ಮತ್ತೆ ಮಲಗು ಅಂತ ಹೇಳಿದ್ದೂ ಮನಸ್ಸು. ಈ ಮನಸ್ಸಿನ ಮೇಲೆ ನಿಯಂತ್ರಣ ಇರಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಮೇ 8, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ಏಕಾದಶಿ ಗಂ.12-30 ನಕ್ಷತ್ರ: ಉತ್ತರ ಫಾಲ್ಗುಣಿ ಗಂ. 21-07 ಯೋಗ: ಹರ್ಷಣ ಗಂ. 25-57 ಕರಣ: ವಿಷ್ಟಿ ಗಂ. 12-30, ಮೇಷ ಮಾಸದ 25 ನೇ ದಿನ.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-10 ಸೂರ್ಯಾಸ್ತ : 06-44
ಮುಸ್ಲಿಂ ದಿನಾಂಕ : 09 ಜುಲ್ಹಾಯದ್
ದಿನ ವಿಶೇಷ : ಮೀನಾಕ್ಷಿ ಕಲ್ಯಾಣಂ, ಮೋಹಿನಿ ಏಕಾದಶಿ, ಅದೃಷ್ಟ ಸಂಖ್ಯೆ : 6, 7

ಮೇಷ: ನ್ಯಾಯಾಲಯದ ಕೆಲಸದಲ್ಲಿ ಕೆಲವು ಸಣ್ಣ-ಪುಟ್ಟ ಅಡೆತಡೆಗಳು ಎದುರಾದರೂ ಸತ್ಯಕ್ಕೆ ಜಯವಿದೆ. ಹಾಗಾಗಿ ಚಿಂತಿಸಬೇಕಾದ ಅಗತ್ಯವಿಲ್ಲ. ವಿದ್ಯಾರ್ಥಿಗಳ ಹತ್ತಾರು ದಿನಗಳ ಪರಿಶ್ರಮ ಸಾರ್ಥಕವಾಗಲಿದೆ.

ವೃಷಭ: ಮನೆಯಲ್ಲಿ ಎದುರಾಗುವ ಅನಿವಾರ್ಯತೆಗಳಿಗೆ ಸುಲಭವಾಗಿ ಹೊಂದಿಕೊಳ್ಳುವಿರಿ. ನಿರುದ್ಯೋಗಿಗಳಿಗೆ ಸಾಮಾಜಿಕ ಬದುಕಿನಲ್ಲಿ ಒಂದು ಹೊಸ ತಿರುವು ಸಿಗುತ್ತದೆ.

ಮಿಥುನ: ತಾತ್ಕಾಲಿಕ ಹುದ್ದೆಯನ್ನು ಹೊಂದಿರುವವರಿಗೆ ಬದಲಾವಣೆಯ ಯೋಚನೆ ಸರಿ ಎನಿಸುವುದು. ಧನಾಗಮನದಲ್ಲಿ ವ್ಯತ್ಯಯ, ವಿಳಂಬ ತೋರಿಬರಲಿದೆ. ಕುತೂಹಲಕಾರಿ ವಿಷಯಗಳನ್ನು ತಿಳಿದು ಅಚ್ಚರಿಗೊಳ್ಳುವಿರಿ.

ಕರ್ಕಾಟಕ: ಶತ್ರುಗಳು ವಂಚನೆ ಮಾಡುವ ಸಲುವಾಗಿ ಮಿತ್ರರಾಗುವಂತೆ ನಟನೆ ಮಾಡಿಯಾರು. ಅಂಥವರನ್ನು ದೂರವಿಡುವುದು ಶುಭ. ಕಂದಮ್ಮನ ಆಗಮನ ಸಂತೋಷ ಉಂಟುಮಾಡಲಿದೆ.

ಸಿಂಹ: ಧನ ಹೂಡಿಕೆಯ ಯೋಜನೆ ಸರಿ ಮಾರ್ಗದಲ್ಲಿ ಇರುವುದರಿಂದ ನಾನಾ ರೀತಿಯ ಲಾಭ ಸಿಗುವುದು. ಸರ್ಕಾರಿ ಗುತ್ತಿಗೆದಾರರಿಗೆ ಆರ್ಥಿಕ ಸಮಸ್ಯೆ ಎದುರಾಗುತ್ತದೆ. ಧಾರ್ಮಿಕ ಕಾರ್ಯಗಳ ವ್ಯವಸ್ಥಾಪಕರಿಗೆ ಆಶಾದಾಯಕ ದಿನ.

ಕನ್ಯಾ: ಅವಿವಾಹಿತರಿಗೆ ಕಂಕಣ ಭಾಗ್ಯ ದೊರೆಯುವುದು. ನೂತನ ಕಾರ್ಯವನ್ನು ಆರಂಭಿಸಲು ಸಮಯಾವಕಾಶ ಒದಗಿ ಬರುವುದು. ನಿರ್ವಿಘ್ನತೆಗಾಗಿ ಮಹಾಗಣಪತಿಯನ್ನು ಆರಾಧಿಸಿ.

ತುಲಾ: ರಕ್ಷಣಾ ವಿಭಾಗದಲ್ಲಿ ಕಾರ್ಯನಿರ್ವಹಿಸುವವರು ಜಾಗ್ರತರಾಗಿರಿ. ಗಮನಕ್ಕೆ ಬಾರದಂತೆ ದೋಷಗಳು ಸಂಭವಿಸಬಹುದು. ಮೆಕಾನಿಕಲ್ ವಿದ್ಯಾರ್ಥಿಗಳಿಗೆ ಓದಿನಲ್ಲಿ ಪರಿಶ್ರಮ ಪಡುವುದು ಅಗತ್ಯ.

ವೃಶ್ಚಿಕ: ತೋಟದ ಬೆಳೆಗಳಿಂದ ಉತ್ತಮ ಆದಾಯದೊಂದಿಗೆ ಮುಂದಿನ ಬೆಳೆ ವಿಸ್ತರಣೆಯ ಬಗ್ಗೆ ಯೋಚನೆ ನಡೆಸಬಹುದು. ರಾಜಕೀಯ ವರ್ಗದವರಿಗೆ ಶತ್ರುಗಳ ಸಂಖ್ಯೆ ಹೆಚ್ಚಲಿದೆ. ಶತ್ರುಗಳಿಂದ ತೊಂದರೆ ಎದುರಾಗುವುದು.

ಧನು: ದೀರ್ಘಕಾಲದಿಂದಿರುವ ಆರೋಗ್ಯ ಸಮಸ್ಯೆಗೆ ವೈದ್ಯರಿಂದ ಸೂಕ್ತ ಸಲಹೆ ಸಿಗಲಿದೆ. ಆರೋಗ್ಯದಲ್ಲಿ ಚೇತರಿಕೆಯನ್ನು ಕಾಣುವಿರಿ. ಸುಗಂಧದ್ರವ್ಯಗಳ ಅಥವಾ ಸೌಂದರ್ಯವರ್ಧಕಗಳ ವ್ಯಾಮೋಹ ಕಾಡಲಿದೆ.

ಮಕರ: ಕೋಪದ ಮೇಲೆ ನಿಯಂತ್ರಣವಿರಲಿ ಹಾಗೂ ವಾದ-ವಿವಾದಗಳಿಂದ ದೂರವಿರಿ. ಆರನೇ ಇಂದ್ರಿಯದ ಸಹಾಯ ಉಪಯುಕ್ತ. ವ್ಯಾಪಾರದಲ್ಲಿ ಅತೀವ ಆಸಕ್ತಿ ಮೂಡುತ್ತದೆ.

ಕುಂಭ: ಯಾರಿಗೂ ಸಾಲ ಕೊಡದಿರಲು ನಿಶ್ಚಯಿಸುವುದು ಉತ್ತಮ. ಈ ದಿನ ಹೆಂಡತಿ ಆರೋಗ್ಯ ಹಂತವಾಗಿ ಸುಧಾರಿಸುತ್ತದೆ. ಹೊಸ ಕಾರ್ಯದ ಸಂಪೂರ್ಣ ಜವಾಬ್ದಾರಿ ಯಶಸ್ವಿಯಾಗಿ ನಿರ್ವಹಿಸಿದ ಹೆಗ್ಗಳಿಕೆ ನಿಮ್ಮದಾಗಲಿದೆ.

ಮೀನ: ಪ್ರಯತ್ನ ಬಲಕ್ಕೆ ಉತ್ತಮ ಫಲ ದೊರೆಯುವುದು. ವೃತ್ತಿ ಬದಲಾಣೆಯ ಸಮಸ್ಯೆ ನಿವಾರಣೆಯಾಗುವುದು. ಸಂಪಾದನೆಯ ಯೋಚನೆಯ ಬಿಟ್ಟು ಓದು ಮುಂದುವರಿಸಿ.

ಪದಬಂಧ 6036

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈತ ಹೆದರುವ ವ್ಯಕ್ತಿ (3)
2.ಕನ್ನಡಿಗನ ಬಾಯಲ್ಲಿ ನೈಟ್ರೋಜನ್! (5)
4.ಎದುರಿಗೆ ಮೂರ್ತೀಭವಿಸುವುದು (4)
6.ದಂಪತಿಗಳು ಹಬ್ಬಿಸಿದ ಗಾಳಿಸುದ್ದಿ! (3)
7.ಮತ ಹಾಕುವಾಗ ಆವರಿಸಿದ ಕತ್ತಲು (2)
9.ಆ ದಿನ ಕಾಣಿಸಿರುವ ಮಂತ್ರಿ (3)
11.ತಿಲಕದ ಬಳಿಯಿರುವ ಎಳ್ಳು (2)
13.ಬವಣೆಯಿಂದ ಶೇಖರಿಸಿದ ಧಾನ್ಯ (3)
14.ಕೈಯಲ್ಲಿರಿಸಿಕೊಂಡಿರುವ ಖಡ್ಗ (4)
16.ಕಲಹ ಮಾಡುವ ಸ್ವಭಾವದವಳು (5)
17.ಶಿವನಿಗೆ ಸಲ್ಲಿಸಿದ ಮುಡಿಪು (3)

ಮೇಲಿಂದ ಕೆಳಕ್ಕೆ
1.ಹಿಂಸೆ ಮಾಡಬಾರದೆಂಬ ವ್ರತ (5)
2.ಗಂಧವನ್ನು ತೇಯುವ ಕಲ್ಲು (2)
3.ಅದೇ ತಾನೆ ಮದುವೆಯಾದ ಜೋಡಿ (5)
5.ಪಾವತಿ ಪತ್ರ ಇಲ್ಲಿದೆ (3)
8.ಈತ ಲಗ್ನವಾಗುತ್ತಿರುವವನು (5)
10.ನರನಿಗೆ ಕಾಣಿಸಿದ್ದು ಪಾಪಿಗಳ ಲೋಕ (3)
12.ರಾಮನ ಮಗ ಬಂದಿರುವುದಕ್ಕೇ ಈ ಹುರುಪು! (5)
15.ತುಂಟಿಯ ಅಧರ! (2)



6035ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗ್ರಹಚಾರ 3.ಅಭ್ಯಂತರ 5.ಬಳಪ 7.ವಿನಿಮಯ 9.ಗಗನಗಾಮಿ 11.ಅಭಿಮಾನ 13.ನವಿಲು 15.ಕರಣಿಕ 16.ಅಭಿಮತ

ಮೇಲಿಂದ ಕೆಳಕ್ಕೆ:
2.ಹವಳ 3.ಅವನಿ 4.ತನಯ 5.ಬನವಾಸಿ 6.ಪರಾಗ 7.ವಿಮಾನಯಾನ 8.ಅಹವಾಲು 10.ಮಿಥುನ 11.ಅಧರ 12.ಮಾದಕ 14.ವಿರಾಮ

ಸುಡೊಕು 6420

			9		2	1		6
1		6					8	
	8	2		6			4	5
7								
	5		7	1		2		8
4					6			7
2		5		7			6	
	6					8		
8		1	6		3		2	9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ

6419 ಸುಡೊಕು

4	3	8	2	1	9	5	6	7
1	2	9	6	5	7	3	4	8
7	6	5	8	4	3	2	9	1
3	4	2	9	6	1	8	7	5
8	7	6	3	2	5	9	1	4
5	9	1	7	8	4	6	3	2
9	1	7	5	3	2	4	8	6
6	5	3	4	7	8	1	2	9
2	8	4	1	9	6	7	5	3



1. ಭಾರತೀಯ ಸೇನೆಯು ಬುಧವಾರ ನಸುಕಿನಲ್ಲಿ ಉಗ್ರರ ನೆಲೆಗಳನ್ನು ಗುರಿಯಾಗಿಸಿಕೊಂಡು ನಡೆಸಿದ 'ಆಪರೇಷನ್ ಸಿಂಧೂರ' ದಾಳಿ ಯಶಸ್ವಿಯಾಗಿರುವುದಕ್ಕೆ ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ ಜನರು ರಾಷ್ಟ್ರಧ್ವಜವನ್ನು ಬೀಸುತ್ತಾ, ಪಟಾಕಿ ಸಿಡಿಸಿ ಸಂಭ್ರಮಿಸಿದರು 2. ಪಾಕಿಸ್ತಾನದ ಮುರೀದ್ಕೆನಲ್ಲಿದ್ದ ಉಗ್ರರ ಶಿಬಿರವನ್ನು ಗುರಿಯಾಗಿಸಿಕೊಂಡು ನಡೆಸಿದ ದಾಳಿಯಲ್ಲಿ ಕಟ್ಟಡ ಹೊತ್ತಿ ಉರಿದ ದೃಶ್ಯ 3. ಬಹಾವಲ್ಪುರದ ಮದರಸದ ಕಟ್ಟಡವು ಕ್ಷಿಪಣಿ ದಾಳಿಯಲ್ಲಿ ಧ್ವಂಸವಾಗಿದೆ 4. ಮುರೀದ್ಕೆಯಲ್ಲಿನ ಸರ್ಕಾರಿ ಆರೋಗ್ಯ ಮತ್ತು ಶಿಕ್ಷಣ ಸಂಕೀರ್ಣದ ಮೇಲೆ ದಾಳಿಗೆ ಬಳಸಲಾಗಿದ್ದ ಕ್ಷಿಪಣಿಯ ಅವಶೇಷಗಳನ್ನು ಅಲ್ಲಿನ ಜನರು ಪರಿಶೀಲಿಸಿದರು ಪಿಟಿಐ, ಎಎಫ್‌ಪಿ ಚಿತ್ರಗಳು

ಉಗ್ರರ ಒಂಬತ್ತು ನೆಲೆಗಳು ಧ್ವಂಸ

ನವದೆಹಲಿ: ಪಾಕಿಸ್ತಾನ ಹಾಗೂ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ದಶಕಗಳಿಂದ ಕಾರ್ಯಾಚರಿಸುತ್ತಿದ್ದ ಉಗ್ರರ ಪ್ರಮುಖ ತಾಣಗಳನ್ನು ಭಾರತೀಯ ಸೇನೆ ನಾಶಪಡಿಸಿದೆ. ಇದರಲ್ಲಿ ಬಹಾವಲ್ಪುರದಲ್ಲಿರುವ ಜೈಷ್-ಎ-ಮೊಹಮ್ಮದ್ ಪ್ರಧಾನ ಕಚೇರಿ ಹೊರತುಪಡಿಸಿ, ಉಳಿದೆಲ್ಲ ಭಯೋತ್ಪಾದಕರ ಶಿಬಿರಗಳು ನಿಯಂತ್ರಣ ರೇಖೆ ಮತ್ತು ಅಂತರರಾಷ್ಟ್ರೀಯ ಗಡಿಗೆ ಹತ್ತಿರದಲ್ಲಿವೆ. ಪಾಕ್ ಹಾಗೂ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ 21 ಭಯೋತ್ಪಾದಕ ಶಿಬಿರಗಳು ಸಕ್ರಿಯವಾಗಿರುವ ಬಗ್ಗೆ ಭಾರತೀಯ ಸೇನೆಗೆ ಮಾಹಿತಿ ಸಿಕ್ಕಿತ್ತು. ಈ ಪೈಕಿ, ಒಂಬತ್ತು ಶಿಬಿರಗಳನ್ನು ಮಾತ್ರ ಗುರಿಯಾಗಿಸಿ ಕಾರ್ಯಾಚರಣೆ ನಡೆಸಲಾಯಿತು. ಭಾರತದಲ್ಲಿ ನಡೆದ ಪ್ರಮುಖ ದಾಳಿಗಳಲ್ಲಿ ಇಲ್ಲಿ ತರಬೇತಿ ಪಡೆದವರೇ ಭಾಗಿಯಾಗಿದ್ದರು. ಮುಂಬೈ ದಾಳಿಕೋರ ಅಜ್ಮಲ್ ಕಸಬ್ ಇಲ್ಲಿನ ಶಿಬಿರದಲ್ಲಿ ತರಬೇತಿ ಪಡೆದಿದ್ದ. ಡೇವಿಡ್ ಹೆಡ್ಲಿ, ಝಕಿ-ಉರ್-ರೆಹಮಾನ್ ಲಖ್ವಿ ಮತ್ತು ಮಸೂದ್ ಅಜರ್ ಆಗಾಗ್ಗೆ ಭೇಟಿ ನೀಡಿದ ಶಿಬಿರಗಳನ್ನು ಧ್ವಂಸಗೊಳಿಸಲಾಗಿದೆ

1. ಮರ್ಕಜ್ ಸುಭಾನ್, ಬಹಾವಲ್ಪುರ, ಪಾಕಿಸ್ತಾನ: ಇಲ್ಲಿ 'ಜೈಷ್-ಇ-ಮೊಹಮ್ಮದ್' ಉಗ್ರ ಸಂಘಟನೆಯ ಪ್ರಮುಖ ಕಚೇರಿ ಇದೆ. ಈ ಪ್ರದೇಶವು ಅಂತರರಾಷ್ಟ್ರೀಯ ಗಡಿಯಿಂದ 100 ಕಿ.ಮೀ. ದೂರದಲ್ಲಿದೆ. ಉಗ್ರರ ನೇಮಕಾತಿ, ತರಬೇತಿ ಹಾಗೂ ಬೋಧನೆಗೆ ಬಳಕೆಯಾಗುತ್ತಿರುವ ಸ್ಥಳವಿದು. ಜಾಗತಿಕ ಭಯೋತ್ಪಾದಕ ಮಸೂದ್ ಅಜರ್ ಸೇರಿದಂತೆ ಹಲವು ಕಮಾಂಡರ್‌ಗಳು ಆಗಾಗ್ಗೆ ಇಲ್ಲಿಗೆ ಭೇಟಿ ನೀಡುತ್ತಿದ್ದರು. ಈ ಶಿಬಿರದಿಂದಲೇ ಸಹಚರರಿಗೆ ನಿರ್ದೇಶನ ನೀಡುತ್ತಿದ್ದರು.

2. ಸೈಯದ್ನಾ ಬಿಲಾಲ್ ಉಗ್ರರ ತಾಣ, ಮುಜಫ್ಫರಾಬಾದ್, ಪಾಕ್ ಆಕ್ರಮಿತ ಕಾಶ್ಮೀರ: ಜೈಷ್-ಇ-ಮೊಹಮ್ಮದ್‌ನ ಶಿಬಿರ ಇದಾಗಿದೆ. ಗಡಿ ನಿಯಂತ್ರಣ ರೇಖೆಯ ಆಜುಬಾಜಿನಲ್ಲಿ ಭಯೋತ್ಪಾದಕ ಚಟುವಟಿಕೆಗಳನ್ನು ಕೈಗೊಳ್ಳಲು ಉಗ್ರರಿಗೆ ಶಸ್ತ್ರಾಸ್ತ್ರ, ಸ್ಫೋಟಕಗಳನ್ನು ಒದಗಿಸುವುದು ಹಾಗೂ ವಿವಿಧ ತಂತ್ರಗಳ ತರಬೇತಿ ನೀಡಲಾಗುತ್ತಿತ್ತು.

ಮ್ಯಾಪ್: ಗೂಗಲ್ ಅರ್ಥ್

3. ಗುಲ್ಪುರ್ ಶಿಬಿರ, ಕೋಟ್ಲಿ, ಪಾಕ್ ಆಕ್ರಮಿತ ಕಾಶ್ಮೀರ: ಗಡಿ ನಿಯಂತ್ರಣ ರೇಖೆಯಿಂದ 30 ಕಿ.ಮೀ ದೂರದಲ್ಲಿರುವ ಇದು ರಾಜೌರಿ-ಪೂಂಛ್‌ನಲ್ಲಿ ಕೃತ್ಯ ಎಸಗುತ್ತಿದ್ದ ಎಲ್‌ಇಟಿ ಭಯೋತ್ಪಾದಕರ ನೆಲೆ. 2023ರ ಏಪ್ರಿಲ್ 20ರಂದು ಪೂಂಛ್‌ನಲ್ಲಿ ನಡೆದ ದಾಳಿ ಮತ್ತು 2024ರ ಜೂನ್ 9ರಂದು ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಯಾತ್ರಿಕರ ಮೇಲಿನ ದಾಳಿಗಳನ್ನು ಇಲ್ಲಿ ತರಬೇತಿ ಪಡೆದ ಭಯೋತ್ಪಾದಕರು ನಡೆಸಿದ್ದರು. 26/11ರ ಸಂಚುಕೋರ ಝಕಿ-ಉರ್-ರೆಹಮಾನ್ ಲಖ್ವಿ ಆಗಾಗ್ಗೆ ಈ ಶಿಬಿರಕ್ಕೆ ಭೇಟಿ ನೀಡಿ ಬೋಧನೆ ಮತ್ತು ಪ್ರಚೋದನಕಾರಿ ಭಾಷಣ ಮಾಡುತ್ತಿದ್ದ ಎಂಬ ಮಾಹಿತಿಗಳಿವೆ.

4. ಬರ್ನಾಲಾ ಶಿಬಿರ, ಭೀಂಬರ್, ಪಾಕ್ ಆಕ್ರಮಿತ ಕಾಶ್ಮೀರ: ರಾಜೌರಿ-ಪೂಂಛ್ ವಲಯದ ಎದುರಿನ ಗಡಿ ನಿಯಂತ್ರಣ ರೇಖೆಯಿಂದ 9 ಕಿ.ಮೀ ದೂರದಲ್ಲಿದೆ. ಇಲ್ಲಿ ಭಯೋತ್ಪಾದಕರಿಗೆ ಶಸ್ತ್ರಾಸ್ತ್ರ ನಿರ್ವಹಣೆ ಹಾಗೂ ವಿವಿಧ ತಂತ್ರಗಳ ಬಗ್ಗೆ ತರಬೇತಿ ನೀಡಲಾಗುತ್ತದೆ.

5. ಅಬ್ಬಾಸ್ ತಾಣ, ಕೋಟ್ಲಿ, ಪಾಕ್ ಆಕ್ರಮಿತ ಕಾಶ್ಮೀರ: ಗಡಿ ನಿಯಂತ್ರಣ ರೇಖೆಯಿಂದ ಸುಮಾರು 13 ಕಿ.ಮೀ ದೂರದಲ್ಲಿರುವ ಇದು ಎಲ್‌ಇಟಿಯ ಆತ್ಮಹತ್ಯಾ ಬಾಂಬರ್‌ಗಳ ತರಬೇತಿ ಕೇಂದ್ರವೆಂದು ಕರೆಯಲಾಗುತ್ತದೆ. ಇಲ್ಲಿ 50 ಉಗ್ರರಿಗೆ ತರಬೇತಿ ನೀಡುವ ಮೂಲಸೌಕರ್ಯ ಇದೆ.

6. ಮರ್ಕಜ್ ಸುಭಾನ್, ಬಹಾವಲ್ಪುರ್, ಪಾಕಿಸ್ತಾನ: ಇಲ್ಲಿ 'ಜೈಷ್-ಇ-ಮೊಹಮ್ಮದ್' ಉಗ್ರ ಸಂಘಟನೆಯ ಪ್ರಮುಖ ಕಚೇರಿ ಇದೆ. ಈ ಪ್ರದೇಶವು ಅಂತರರಾಷ್ಟ್ರೀಯ ಗಡಿಯಿಂದ 100 ಕಿ.ಮೀ. ದೂರದಲ್ಲಿದೆ. ಭಯೋತ್ಪಾದಕರ ನೇಮಕಾತಿ, ತರಬೇತಿ ಹಾಗೂ ಬೋಧನೆಗೆ ಬಳಕೆಯಾಗುತ್ತಿರುವ ಸ್ಥಳವಿದು. ಜಾಗತಿಕ ಭಯೋತ್ಪಾದಕ ಮಸೂದ್ ಅಜರ್ ಸೇರಿದಂತೆ ಹಲವು ಕಮಾಂಡರ್‌ಗಳು ಆಗಾಗ್ಗೆ ಇಲ್ಲಿಗೆ ಭೇಟಿ ನೀಡುತ್ತಿದ್ದರು. ಅವರು ಈ ಶಿಬಿರದಿಂದಲೇ ತಮ್ಮ ಸಹಚರರಿಗೆ ನಿರ್ದೇಶನ ನೀಡುತ್ತಿದ್ದರು.

1999ರಲ್ಲಿ ಕಂದಹಾರ್ ವಿಮಾನ (ಐಸಿ-814) ಅಪಹರಿಸಲಾಗಿತ್ತು. ಭಾರತದ ಜೈಲಿನಲ್ಲಿದ್ದ ಮಸೂದ್ ಅಜರ್‌ನನ್ನು ಬಿಡುಗಡೆ ಮಾಡಿದರೆ ಮಾತ್ರ ಒತ್ತೆಯಾಳುಗಳನ್ನು ಬಿಡುವುದಾಗಿ ಉಗ್ರರು ಬೆದರಿಕೆ ಒಡ್ಡಿದ್ದರು. ಸರ್ಕಾರವು ಮಸೂದ್ ಅಜರ್‌ನನ್ನು ಬಿಡುಗಡೆ ಮಾಡಿತ್ತು. ಆ ಬಳಿಕ, ಈ ಪ್ರದೇಶವು ಜೆಇಎಂನ ಪ್ರಮುಖ ಕೇಂದ್ರವಾಯಿತು.

2001ರಲ್ಲಿ ಸಂಸತ್ತಿನ ಮೇಲೆ ದಾಳಿ, 2000ರಲ್ಲಿ ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ ಮೇಲಿನ ದಾಳಿ, 2016ರಲ್ಲಿ ಪಠಾಣ್‌ಕೋಟ್‌ನಲ್ಲಿರುವ ವಾಯುನೆಲೆ ಮೇಲಿನ ದಾಳಿ ಮತ್ತು 2019 ರಲ್ಲಿ ಪುಲ್ವಾಮಾ ಆತ್ಮಹತ್ಯಾ ಬಾಂಬ್ ದಾಳಿ ಸೇರಿದಂತೆ ಭಾರತದಲ್ಲಿ ನಡೆದ ಸರಣಿ ಭಯೋತ್ಪಾದಕ ದಾಳಿಗಳಲ್ಲಿ ಈ ಉಗ್ರರ ಗುಂಪು ಭಾಗಿಯಾಗಿದೆ.

ಅಜರ್ ಏಪ್ರಿಲ್ ಸಾರ್ವಜನಿಕವಾಗಿ 2019ರಿಂದ ಕಾಣಿಸಿಕೊಂಡಿಲ್ಲ. ಆತ 2000ರ ಜನವರಿಯಲ್ಲಿ ಈ ಉಗ್ರ ಸಂಘಟನೆ ಆರಂಭಿಸಿದ. ಪಾಕಿಸ್ತಾನದ ಐಎಸ್‌ಐ, ತಾಲಿಬಾನ್ ನಾಯಕರು, ಬಿನ್ ಲಾಡೆನ್ ಮತ್ತು ಪಾಕಿಸ್ತಾನದ ಸುನ್ನಿ ಪಂಥೀಯ ಸಂಘಟನೆಗಳಿಂದ ಸಹಾಯ ಪಡೆದಿದ್ದ.

7. ಮರ್ಕಜ್ ತಯಬಾ, ಮುರೀದ್ಕೆ , ಪಾಕಿಸ್ತಾನ: ಅಂತರರಾಷ್ಟ್ರೀಯ ಗಡಿಯಿಂದ ಸುಮಾರು 25 ಕಿ.ಮೀ ದೂರದಲ್ಲಿರುವ ಇದು ಲಷ್ಕರ್-ಎ-ತಯಬಾದ ಪ್ರಧಾನ ಕಚೇರಿ. ಇದನ್ನು ಭಯೋತ್ಪಾದಕರನ್ನು ತಯಾರಿಸುವ ಕಾರ್ಖಾನೆ ಎಂದೂ ಕರೆಯಲಾಗುತ್ತದೆ. ಈ ಪ್ರದೇಶವು ಲಾಹೋರ್‌ನಿಂದ 40 ಕಿ.ಮೀ. ದೂರದಲ್ಲಿದೆ. ಇಲ್ಲಿ ಉಗ್ರರಿಗೆ ದೈಹಿಕ ತರಬೇತಿ ನೀಡಿ ಎರಡು ವಾರಗಳ ಬೋಧನೆ ಮಾಡಲಾಗುತ್ತದೆ.

ಇಲ್ಲಿ ತರಬೇತಿ ಪಡೆದ ಭಯೋತ್ಪಾದಕರು 26/11ರ ಮುಂಬೈ ದಾಳಿ ಸೇರಿದಂತೆ ಹಲವಾರು ಭಯೋತ್ಪಾದಕ ದಾಳಿಯೊಂದಿಗೆ ನಂಟು ಹೊಂದಿದ್ದಾರೆ. 2008ರ ಮುಂಬೈ ದಾಳಿಯಲ್ಲಿ ಸೆರೆಸಿಕ್ಕ ಏಕೈಕ ಭಯೋತ್ಪಾದಕ ಅಜ್ಮಲ್ ಕಸಬ್ ಇಲ್ಲಿ ತರಬೇತಿ ಪಡೆದಿದ್ದಾಗಿ ಒಪ್ಪಿಕೊಂಡಿದ್ದ. 26/11 ದಾಳಿಯ ಸಂಚುಕೋರರಲ್ಲಿ ಒಬ್ಬನಾದ ಡೇವಿಡ್ ಹೆಡ್ಲಿ ಹಾಗೂ ಭಾರತಕ್ಕೆ ಇತ್ತೀಚೆಗೆ ಹಸ್ತಾಂತರಗೊಂಡ ಉಗ್ರ ತಹವ್ವುರ್ ಹುಸೇನ್ ರಾಣಾ ಕೂಡ ಈ ಶಿಬಿರಕ್ಕೆ ಭೇಟಿ ನೀಡಿ ತರಬೇತಿ ಪಡೆದಿದ್ದರು.

2011ರಲ್ಲಿ ಪಾಕಿಸ್ತಾನದಲ್ಲಿ ಕೊಲ್ಲಲ್ಪಟ್ಟ ಅಲ್ ಖೈದಾ ಭಯೋತ್ಪಾದಕ ಒಸಾಮಾ ಬಿನ್ ಲಾದೆನ್ ಮುರೀದ್ಕೆ ಅತಿಥಿಗೃಹ ನಿರ್ಮಾಣಕ್ಕಾಗಿ ₹10 ಲಕ್ಷ ದೇಣಿಗೆ ನೀಡಿದ್ದ.

ಹಫೀಜ್ ಸಯೀದ್ ನೇತೃತ್ವದಲ್ಲಿ ಈ ಉಗ್ರ ಸಂಘಟನೆಯು ಜಮ್ಮು ಮತ್ತು ಕಾಶ್ಮೀರ, ಬೆಂಗಳೂರು ಮತ್ತು ಹೈದರಾಬಾದ್ ಸೇರಿದಂತೆ ದೇಶದ ಹಲವು ಭಾಗಗಳಲ್ಲಿ ಭಯೋತ್ಪಾದಕ ದಾಳಿಗಳನ್ನು ನಡೆಸಿದೆ.



8. ಸರ್ಜಲ್ ತೆಹ್ರಾ ಕಲಂ ಉಗ್ರ ಶಿಬಿರ, ಸಿಯಾಲ್‌ಕೋಟ್, ಪಾಕಿಸ್ತಾನ: ಇದು ಅಂತರರಾಷ್ಟ್ರೀಯ ಗಡಿಯಿಂದ ಆರು ಕಿ.ಮೀ ದೂರದಲ್ಲಿದೆ. 2025ರ ಮಾರ್ಚ್‌ನಲ್ಲಿ ಜಮ್ಮು ಮತ್ತು ಕಾಶ್ಮೀರದ ನಾಲ್ವರು ಪೊಲೀಸ್ ಸಿಬ್ಬಂದಿಯನ್ನು ಕೊಂದ ಭಯೋತ್ಪಾದಕರಿಗೆ ಇಲ್ಲಿ ತರಬೇತಿ ನೀಡಲಾಗಿತ್ತು.

9. ಮೆಹಮೂನಾ ಜೋಯಾ ಸಿಯಾಲ್‌ಕೋಟ್, ಪಾಕಿಸ್ತಾನ: ಹಿಜ್‌ಬುಲ್ ಮುಜಾಹಿದೀನ್ ಸಂಘಟನೆಯ ಪ್ರಮುಖ ತರಬೇತಿ ಕೇಂದ್ರವಾಗಿರುವ ಇದು ಅಂತರರಾಷ್ಟ್ರೀಯ ಗಡಿಯಿಂದ 12 ಕಿ.ಮೀ. ದೂರದಲ್ಲಿದೆ. ಕಠುವಾ ಮತ್ತು ಜಮ್ಮು ಪ್ರದೇಶದಲ್ಲಿ ಭಯೋತ್ಪಾದನಾ ಚಟುವಟಿಕೆಗಳನ್ನು ಪುನರುಜ್ಜೀವನಗೊಳಿಸಲು ಈ ಶಿಬಿರವನ್ನು ನಿಯಂತ್ರಣ ಕೇಂದ್ರವಾಗಿ ಬಳಸಲಾಗುತ್ತಿತ್ತು. ಪಠಾಣ್‌ಕೋಟ್ ವಾಯುಪಡೆ ನೆಲೆಯ ಮೇಲಿನ ದಾಳಿ ಸೇರಿದಂತೆ ಪ್ರಮುಖ ಭಯೋತ್ಪಾದಕ ದಾಳಿಗಳನ್ನು ಈ ಶಿಬಿರದಿಂದಲೇ ಯೋಜಿಸಿ ಕಾರ್ಯಗತಗೊಳಿಸಲಾಗಿತ್ತು.

ಸಂಘರ್ಷದ ಹಾದಿ

1947 ರಾಜಪ್ರಭುತ್ವದಲ್ಲಿದ್ದ ಜಮ್ಮು-ಕಾಶ್ಮೀರದ ಮೇಲೆ ಪಾಕಿಸ್ತಾನ ಬೆಂಬಲಿತ ಭಯೋತ್ಪಾದಕರು ಆಕ್ರಮಣ ನಡೆಸಿದಾಗ ಮಹಾರಾಜ ಹರಿ ಸಿಂಗ್ ಅವರು ಜಮ್ಮು-ಕಾಶ್ಮೀರವನ್ನು ಭಾರತದ ಒಕ್ಕೂಟಕ್ಕೆ ಸೇರ್ಪಡೆಗೊಳಿಸಿದರು. ಜಮ್ಮು ಕಾಶ್ಮೀರದ ರಕ್ಷಣೆಗೆ ಭಾರತ ಸರ್ಕಾರ 1947ರ ಅಕ್ಟೋಬರ್‌ನಲ್ಲಿ ಸೇನೆ ನಿಯೋಜಿಸುತ್ತಿದ್ದಂತೆಯೇ ಉಭಯ ರಾಷ್ಟ್ರಗಳ ನಡುವೆ ಯುದ್ಧ ಏರ್ಪಟ್ಟು, 1949ರಲ್ಲಿ ಕದನವಿರಾಮದ ಮೂಲಕ ಕೊನೆಗೊಂಡಿತು

1965 ಜಮ್ಮು-ಕಾಶ್ಮೀರದಲ್ಲಿ ಸ್ಥಳೀಯ ದಂಗೆಯನ್ನು ಪ್ರಚೋದಿಸುವ ಉದ್ದೇಶದಿಂದ 'ಆಪರೇಷನ್ ಜಿಬ್ರಾಲ್ಟರ್' ಹೆಸರಿನ ಕಾರ್ಯಾಚರಣೆಯನ್ನು ಪಾಕಿಸ್ತಾನ ಪಡೆ ಪ್ರಾರಂಭಿಸಿತ್ತು. ಪಾಕಿಸ್ತಾನಿ ಸೈನಿಕರು ಸಾಮಾನ್ಯ ನಾಗರಿಕರಂತೆ ವೇಷ ಮರೆಸಿಕೊಂಡು ಭಾರತದ ಗಡಿಯೊಳಗೆ ನುಸುಳಿದ್ದರು. ಭಾರತೀಯ ಸೇನೆ ಪ್ರತಿದಾಳಿ ನಡೆಸುತ್ತಿದ್ದಂತೆಯೇ 1965ರ ಆಗಸ್ಟ್‌ನಲ್ಲಿ ಯುದ್ಧ ಶುರುವಾಗಿ 1965ರ ಸೆಪ್ಟೆಂಬರ್ 23ರವರೆಗೆ ನಡೆದಿತ್ತು

1971 ಬಾಂಗ್ಲಾದೇಶದ ಮೇಲಿನ ಪಾಕಿಸ್ತಾನದ ಆಕ್ರಮಣವನ್ನು ಹತ್ತಿಕ್ಕಲು ಬಾಂಗ್ಲಾ ಪರವಾಗಿ ಭಾರತ ಯುದ್ಧಕ್ಕಿಳಿಯಿತು. 1971ರ ಡಿಸೆಂಬರ್ 16ರಂದು ಭಾರತದ ಮುಂದೆ ಪಾಕಿಸ್ತಾನ ಪಡೆ ಮಂಡಿಯೂರಿತು. ಪರಿಣಾಮವಾಗಿ ಬಾಂಗ್ಲಾದೇಶ ವಿಮೋಚನೆಗೊಂಡಿತು

1999 ಪಾಕಿಸ್ತಾನಿ ಪಡೆಗಳು ಹಾಗೂ ಉಗ್ರರು ಜಮ್ಮು-ಕಾಶ್ಮೀರದ ಕಾರ್ಗಿಲ್ ಸೆಕ್ಟರ್ ಅನ್ನು ಅತಿಕ್ರಮಿಸಿಕೊಂಡಿದ್ದರು. ಕಾರ್ಗಿಲ್ ಅನ್ನು ಮರಳಿ ಪಡೆಯುವುದಕ್ಕಾಗಿ ಭಾರತ 'ಆಪರೇಷನ್ ವಿಜಯ್' ಕಾರ್ಯಾಚರಣೆ ಆರಂಭಿಸಿತು. 1999ರ ಮೇ-ಜುಲೈ ಅವಧಿವರೆಗೆ ನಡೆದ ಈ ಯುದ್ಧದಲ್ಲಿ ಭಾರತವು ಪಾಕಿಸ್ತಾನವನ್ನು ಮಣಿಸಿತು

2016 ಜಮ್ಮು ಕಾಶ್ಮೀರದ ಉರಿ ಸೆಕ್ಟರ್‌ನಲ್ಲಿದ್ದ ಸೇನಾ ನೆಲೆಯ ಮೇಲೆ 2016ರ ಸೆ.18ರಂದು ಭಯೋತ್ಪಾದಕ ದಾಳಿ ನಡೆದಿತ್ತು. ಈ ಕೃತ್ಯದಲ್ಲಿ 19 ಮಂದಿ ಭಾರತೀಯ ಸೈನಿಕರು ಹುತಾತ್ಮರಾಗಿದ್ದರು. ಇದಕ್ಕೆ ಪ್ರತಿಯಾಗಿ ಎಲ್‌ಒಸಿ ಹಾಗೂ ಪಿಒಕೆಯಲ್ಲಿನ ಭಯೋತ್ಪಾದಕ ನೆಲೆಗಳ ಮೇಲೆ ಸೆ.28-29ರಂದು ಭಾರತೀಯ ಸೇನೆ ಸರ್ಜಿಕಲ್ ಸ್ಟ್ರೈಕ್ ನಡೆಸಿತ್ತು

2019 40 ಮಂದಿ ಸಿಆರ್‌ಪಿಎಫ್ ಯೋಧರನ್ನು ಬಲಿ ಪಡೆದಿದ್ದ ಪುಲ್ವಾಮಾ ಆತ್ಮಾಹುತಿ ದಾಳಿಗೆ ಪ್ರತಿಯಾಗಿ 2019ರ ಫೆಬ್ರುವರಿ 26ರಂದು ಭಾರತ ಪ್ರತಿದಾಳಿ ನಡೆಸಿತ್ತು. ಪಾಕಿಸ್ತಾನದ ಬಾಲಾಕೋಟ್‌ನಲ್ಲಿ ಉಗ್ರರ ತರಬೇತಿ ಕೇಂದ್ರಗಳನ್ನು ಧ್ವಂಸಗೊಳಿಸಲಾಗಿತ್ತು. 1971ರ ಯುದ್ಧದ ಬಳಿಕ ಯುದ್ಧ ವಿಮಾನಗಳನ್ನು ಬಳಸಿ ಪಾಕಿಸ್ತಾನದ ಒಳ ಪ್ರವೇಶಿಸಿ ನಡೆಸಿದ ಮೊದಲ ಯುದ್ಧ ಇದಾಗಿದೆ

ಪಹಲ್ಗಾಮ್ ಸಂತ್ರಸ್ತರು ಕಂಡಂತೆ 'ಆಪರೇಷನ್ ಸಿಂಧೂರ'

ಸಶಸ್ತ್ರ ಪಡೆಗಳು ಭಯೋತ್ಪಾದಕರನ್ನು ಗುರಿಯಾಗಿಸಿಕೊಂಡು ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಪ್ರದೇಶದ ಕೆಲವು ಗುರಿಗಳ ಮೇಲೆ ನಡೆಸಿದ ದಾಳಿಯನ್ನು ಪಹಲ್ಗಾಮ್‌ನಲ್ಲಿ ಉಗ್ರರಿಗೆ ಬಲಿಯಾದವರ ಕುಟುಂಬದ ಸದಸ್ಯರು ಶ್ಲಾಘಿಸಿದ್ದಾರೆ. 'ಮಹಿಳೆಯರ ಸಿಂಧೂರ ಅಳಿಸಿದ ಉಗ್ರರಿಗೆ ಆಪರೇಷನ್ ಸಿಂಧೂರ ಹೆಸರಿನಲ್ಲಿ ತಕ್ಕ ಉತ್ತರ ನೀಡಲಾಗಿದೆ' ಎಂದಿದ್ದಾರೆ

ನನಗೆ ತೃಪ್ತಿಯಾಗಿದೆ. ನನ್ನ ಮೃತ ತಂದೆಯವರ ಆತ್ಮಕ್ಕೆ ಈಗ ಶಾಂತಿ ಸಿಗುತ್ತದೆ. ನನ್ನ ಸಂಬಂಧಿಯೊಬ್ಬರು ತಮ್ಮನ್ನು ಬಿಟ್ಟುಬಿಡುವಂತೆ ಉಗ್ರರಲ್ಲಿ ಬೇಡಿಕೊಂಡಿದ್ದರು. ಆದರೂ ಅವರನ್ನು ಕೊಲ್ಲಲಾಯಿತು

ಹರ್ಷಲ್ ಲೆಲೆ, ಪಹಲ್ಗಾಮ್ ದಾಳಿಯಲ್ಲಿ ಹತ್ಯೆಯಾದ ಸಂಜಯ್ ಲೆಲೆ ಅವರ ಮಗ

ನನಗಾದ ನಷ್ಟ ಸರಿಪಡಿಸಲು ಆಗುವುದಿಲ್ಲ. ಆದರೆ ಬುಧವಾರದ ದಾಳಿ ಮುಖ್ಯವಾಗುತ್ತದೆ, ಭಾರತವು ಉಗ್ರರಿಗೆ ಅವರ ಜಾಗ ತೋರಿಸಿದೆ... ಉಗ್ರರು ವ್ಯಕ್ತಿಗಳ ಮೇಲಷ್ಟೇ ದಾಳಿ ನಡೆಸಲಿಲ್ಲ; ಭಾರತದ ಆತ್ಮದ ಮೇಲೆ ದಾಳಿ ನಡೆಸಿದ್ದರು

ಅನುಷ್ಕಾ ಮೋಣೆ, ಮೃತ ಅತುಲ್ ಮೋಣೆ ಅವರ ಪತ್ನಿ

ನನ್ನ ಪತಿಯ ಸಾವಿಗೆ ಪ್ರತೀಕಾರ ತೆಗೆದುಕೊಂಡದ್ದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ, ಸಚಿವರಿಗೆ ಮತ್ತು ಸಶಸ್ತ್ರ ಪಡೆಗಳ ಮುಖ್ಯಸ್ಥರಿಗೆ ಧನ್ಯವಾದ ಅರ್ಪಿಸುತ್ತೇನೆ. ಉಗ್ರರನ್ನು ಮತ್ತು ಅವರ ಬೆಂಬಲಿಗರನ್ನು ಭಾರತ ಬೇಟೆಯಾಡುತ್ತದೆ, ಅವರನ್ನು ಶಿಕ್ಷಿಸುತ್ತದೆ ಎಂಬ ಸಂದೇಶವನ್ನು ಸಶಸ್ತ್ರ ಪಡೆಗಳ ಕಾರ್ಯವು ಜಗತ್ತಿಗೆ ರವಾನಿಸಿದೆ

ಆಶಾನ್ಯಾ, ಮೃತ ಶುಭಂ ದ್ವಿವೇದಿ ಅವರ ಪತ್ನಿ

ಕೇಂದ್ರ ಸರ್ಕಾರ ಮತ್ತು ಪ್ರಧಾನಿ ಮೋದಿ ಅವರ ಮೇಲಿನ ವಿಶ್ವಾಸ ಗಟ್ಟಿಗೊಳಿಸುವ ಕೆಲಸವನ್ನು ಸಶಸ್ತ್ರ ಪಡೆಗಳು ನಡೆಸಿದ ದಾಳಿಯು ಮಾಡಿದೆ... ಮೋದಿ ಮತ್ತು ಸಶಸ್ತ್ರ ಪಡೆಗಳ ಸಿಬ್ಬಂದಿ ಉಗ್ರರ ದಾಳಿಗೆ ಬಲಿಯಾದವರ ನೋವಿಗೆ ಕಿವಿಗೊಡುವ ಕೆಲಸ ಮಾಡಿದರು

ಸಂಜಯ್ ದ್ವಿವೇದಿ, ಶುಭಂ ದ್ವಿವೇದಿ ಅವರ ತಂದೆ

ಸೇನೆ ನಡೆಸಿದ ದಾಳಿಗೆ 'ಆಪರೇಷನ್ ಸಿಂಧೂರ' ಎನ್ನುವುದಕ್ಕಿಂತ ಹೆಚ್ಚು ಉತ್ತಮವಾದ ಇನ್ನೊಂದು ಹೆಸರು ಸಿಗಲಿಕ್ಕಿಲ್ಲ. ತಂದೆ, ಪತಿ, ಮಕ್ಕಳನ್ನು ಕಣ್ಣೆದುರೇ ಕೊಂದ ಉಗ್ರರಿಗೆ ಇದಕ್ಕಿಂತ ಹೆಚ್ಚು ಸೂಕ್ತವಾದ ಉತ್ತರ ಇನ್ನೊಂದು ಇರಲಾರದು

ಆರತಿ, ಮೃತ ಎನ್. ರಾಮಚಂದ್ರನ್ ಅವರ ಮಗಳು

ಉಗ್ರರು ಹಲವು ಮಹಿಳೆಯರ ಹಣೆಯ ಮೇಲಿನ ತಿಲಕ ಅಳಿಸಿದ್ದರು. ಹೀಗಾಗಿ 'ಆಪರೇಷನ್ ಸಿಂಧೂರ' ಎನ್ನುವ ಹೆಸರು ಸರಿಯಾಗಿದೆ

ಚನ್ನವೀರಪ್ಪ, ಮೃತ ಭರತ್ ಭೂಷಣ್ ಅವರ ತಂದೆ

ಪಾಕಿಸ್ತಾನದ ಮೇಲಿನ ದಾಳಿ ನನ್ನಲ್ಲಿ ಹೆಮ್ಮೆಯ ಭಾವ ಮೂಡಿಸಿದೆ. ಸಶಸ್ತ್ರ ಪಡೆಗಳಿಗೆ ನಮಸ್ಕರಿಸುತ್ತ ನಾನು ಭಾರತ ಮಾತೆಗೆ ಜಯವಾಗಲಿ ಎನ್ನುವೆ... ಇಂತಹ ದಾಳಿಗಳು ಇನ್ನಷ್ಟು ನಡೆಯಲಿ, ಪಾಕಿಸ್ತಾನವು ಭೂಪಟದಿಂದ ಅಳಿಸಿಹೋಗಲಿ ಎನ್ನುವುದು ಮೋದಿ ಸಾಹೇಬರಲ್ಲಿ ನನ್ನ ಮನವಿ

ಕಾಜಲ್‌ಬೆನ್, ಇವರ ಪತಿ ಮತ್ತು ಪುತ್ರ ಉಗ್ರರಿಂದ ಹತ್ಯೆಗೀಡಾಗಿದ್ದಾರೆ

ನಮ್ಮ ಮನೆಯ ದುಡಿಮೆಯ ಮೂಲವನ್ನೇ ಉಗ್ರರು ಇನ್ನಿಲ್ಲವಾಗಿಸಿದರು. ತನ್ನ ತಂದೆಗೆ ತನ್ನ ಕಣ್ಣೆದುರೇ ಉಂಟಾದ ಸ್ಥಿತಿಯನ್ನು ಮಗಳಿಗೆ ಈಗಲೂ ನಂಬಲು ಆಗುತ್ತಿಲ್ಲ

ಶೀತಲ್‌ಬೆನ್ ಕಲಾಥಿಯಾ, ಇವರ ಪತಿಯನ್ನು ಉಗ್ರರು ಹತ್ಯೆ ಮಾಡಿದ್ದಾರೆ

ಭಯೋತ್ಪಾದಕರಿಗೆ ಮನುಷ್ಯನ ಜೀವದ ಬೆಲೆ ಈಗ ಗೊತ್ತಾಗುತ್ತದೆ. ಕ್ರಮ ಕೈಗೊಳ್ಳಲಾಗುತ್ತದೆ ಎಂದು ಸೇನಾ ಸಿಬ್ಬಂದಿ ನನ್ನ ಪತಿಯ ಮೃತದೇಹದ ಬಳಿ ಹೇಳಿದ್ದರು. ಅದು ಈಗ ಈಡೇರಿದೆ. ಉಗ್ರರು ಹಲವಾರು ಮಹಿಳೆಯರ ಸಿಂಧೂರ ಅಳಿಸಿದ್ದರು, ಅವರಿಗೆ ಸರಿಯಾದ ಶಿಕ್ಷೆ ಆಗಿದೆ

ಪ್ರಿಯದರ್ಶಿನಿ ಆಚಾರ್ಯ, ಹತ್ಯೆಗೀಡಾದ ಪ್ರಶಾಂತ್ ಸತ್ಪತಿ ಅವರ ಪತ್ನಿ

ಹೆಸರು ಸೂಚಿಸಿದ್ದು ಮೋದಿ: ಮೂಲಗಳು

ನವದೆಹಲಿ (ಪಿಟಿಐ): ಉಗ್ರರ ನೆಲೆಗಳ ಮೇಲೆ ಭಾರತೀಯ ಸೇನೆ ನಡೆಸಿದ ಕಾರ್ಯಾಚರಣೆಗೆ 'ಆಪರೇಷನ್ ಸಿಂಧೂರ' ಎಂಬ ಹೆಸರು ಸೂಚಿಸಿದ್ದು ಪ್ರಧಾನಿ ನರೇಂದ್ರ ಮೋದಿ ಎಂದು ಅಧಿಕೃತ ಮೂಲಗಳು ಬುಧವಾರ ತಿಳಿಸಿವೆ.

ಪಹಲ್ಗಾಮ್‌ನಲ್ಲಿ ಉಗ್ರರು ಪುರುಷರನ್ನೇ ಕೇಂದ್ರೀಕರಿಸಿ ಗುಂಡಿಕ್ಕಿ ಹತ್ಯೆಗೈದು, ಅವರ ಪತ್ನಿಯರ ಬದುಕನ್ನು ನಾಶಗೊಳಿಸಿದ್ದಕ್ಕೆ ಪ್ರತ್ಯುತ್ತರ ನೀಡಲು ಈ ಹೆಸರಿಡಲಾಗಿದೆ ಎಂದು ಹೇಳಿವೆ.

ವಾರದ ಹಿಂದೆಯಷ್ಟೇ ಮದುವೆಯಾಗಿದ್ದ ನೌಕಾಪಡೆಯ ಲೆಫ್ಟಿನೆಂಟ್ ವಿನಯ್ ನರ್ವಾಲ್ ಅವರ ಮೃತದೇಹದ ಎದುರು ಪತ್ನಿ ಹಿಮಾಂಶಿ ನರ್ವಾಲ್ ಅವರು ರೋದಿಸುತ್ತಿದ್ದ ಫೋಟೊ ಉಗ್ರರ ಹೀನ ಕೃತ್ಯದ ಸೂಚಕವಾಗಿತ್ತು. ಭಯೋತ್ಪಾದಕ ಕೃತ್ಯಕ್ಕೆ ದೇಶದಾದ್ಯಂತ ಆಕ್ರೋಶ ವ್ಯಕ್ತವಾಗಿತ್ತು.

ಮದುವೆಯಾದ ಮಹಿಳೆಯರು ಸುಮಂಗಲಿಯ ಸಂಕೇತವಾಗಿ ತಿಲಕ ಅಥವಾ ಸಿಂಧೂರ ಇಡುವ ಪದ್ಧತಿ ಭಾರತದಲ್ಲಿದೆ.

ಸೇನೆಗೆ ಮೋದಿ ಶ್ಲಾಘನೆ

'ಆಪರೇಷನ್ ಸಿಂಧೂರ' ಬಳಿಕ ಸಚಿವ ಸಂಪುಟ ಸಭೆ ನಡೆಯಿತು –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ ಉಗ್ರರ ಅಡಗುದಾಣಗಳ ಮೇಲೆ ದಾಳಿ ನಡೆಸಿದ ಭಾರತೀಯ ಸೇನೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಶ್ಲಾಘಿಸಿದರು.

'ಆಪರೇಷನ್ ಸಿಂಧೂರ'ದ ಬೆನ್ನಲ್ಲೇ ಪ್ರಧಾನಿ ನೇತೃತ್ವದಲ್ಲಿ ಸಚಿವ ಸಂಪುಟ ಸಭೆ ನಡೆಯಿತು. ಈ ವೇಳೆ ಸೇನೆಯ ಕಾರ್ಯಾಚರಣೆಯನ್ನು ಸಂಪುಟ ಪ್ರಶಂಸಿಸಿತು.

ಭಯೋತ್ಪಾದನೆಯನ್ನು ಸರ್ಕಾರವು ಸ್ವಲ್ಪವೂ ಸಹಿಸಿಕೊಳ್ಳಲಾಗದು ಎಂದು ಪ್ರಧಾನಿ ಮೋದಿ ಹೇಳಿದರು. ಬಳಿಕ ಪ್ರಧಾನಿ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಎನ್‌ಎಸ್‌ಎ ಅಜಿತ್ ಡೊಭಾಲ್ ಅವರೊಂದಿಗೆ ಪ್ರತ್ಯೇಕ ಸಭೆ ನಡೆಸಿ, ಮಾಹಿತಿ ಪಡೆದರು ಎಂದು ಮೂಲಗಳು ತಿಳಿಸಿವೆ.

'ಯೋಜನೆಯಂತೆ ನಮ್ಮ ದಾಳಿ ಯಶಸ್ವಿ'

'ಆಪರೇಷನ್ ಸಿಂಧೂರ ಅಡಿಯಲ್ಲಿ, ನಾವು ಯೋಜಿಸಿದಂತೆ ದಾಳಿ ಮಾಡಲು ಗುರುತಿಸಲಾಗಿದ್ದ ಎಲ್ಲ ಸ್ಥಳಗಳನ್ನೂ ನಾಶಪಡಿಸಲಾಗಿದೆ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಬುಧವಾರ ಹೇಳಿದರು.

ಸೇನೆಯು, ನಿಖರತೆ, ಜಾಗರೂಕತೆ, ಸೂಕ್ಷ್ಮತೆಯಿಂದ ಕಾರ್ಯ ನಿರ್ವಹಿಸಿದೆ. ನಾಗರಿಕರಿಗೆ ದಾಳಿಯಿಂದ ತೊಂದರೆಯುಂಟಾಗಿಲ್ಲ. ಸಶಸ್ತ್ರ ಪಡೆಗಳ ಶೌರ್ಯಕ್ಕೆ ಸೆಲ್ಯೂಟ್

ರಾಜನಾಥ್ ಸಿಂಗ್, ರಕ್ಷಣಾ ಸಚಿವ

ಆರು ರಾಜ್ಯಗಳು ಹಾಗೂ ಎರಡು ಕೇಂದ್ರಾಡಳಿತ ಪ್ರದೇಶಗಳಲ್ಲಿ 50 ಮೂಲಸೌಕರ್ಯ ಯೋಜನೆಗಳ ಉದ್ಘಾಟನೆ ಸಮಾರಂಭದಲ್ಲಿ ಸಿಂಗ್ ಮಾತನಾಡಿದರು. 'ಭಯೋತ್ಪಾದಕರ ತರಬೇತಿ ಶಿಬಿರಗಳನ್ನು ನಾಶಪಡಿಸುವ ಮೂಲಕ ಭಾರತವು ಸರಿಯಾದ ಉತ್ತರ ನೀಡಿದೆ' ಎಂದರು.

'ತನ್ನ ನೆಲದಲ್ಲಿ ನಡೆದ ದಾಳಿಗೆ ಪ್ರತಿಕ್ರಿಯಿಸುವ ಹಕ್ಕನ್ನು ಭಾರತ ಚಲಾಯಿಸಿದೆ ಹಾಗೂ ದಾಳಿಗೆ ತಕ್ಕ ಪ್ರತ್ಯುತ್ತರ ನೀಡಿದೆ. ನಮ್ಮ ಮುಗ್ಧ ಜನರನ್ನು ಕೊಂದವರನ್ನು ಮಾತ್ರ ನಾವು ಕೊಂದಿದ್ದೇವೆ. ಭಯೋತ್ಪಾದಕರ ಆತ್ಮಸ್ಥೈರ್ಯವನ್ನು ಮಟ್ಟಹಾಕುವ ಗುರಿಯೊಂದಿಗೆ ಅವರ ಅಡಗುತಾಣಗಳ ಮೇಲಷ್ಟೇ ದಾಳಿ ಮಾಡಲಾಗಿದೆ' ಎಂದು ಹೇಳಿದರು.

'ದಾಳಿ ಸಂತೋಷದ ಸಂಗತಿ'

ಮಂಜುನಾಥರಾವ್ ಮನೆಗೆ ಎನ್‌ಐಎ ಅಧಿಕಾರಿಗಳ ಭೇಟಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಪಹಲ್ಗಾಮ್‌ನಲ್ಲಿ ಉಗ್ರರ ಗುಂಡೇಟಿಗೆ ಬಲಿಯಾದ ಇಲ್ಲಿನ ಮಂಜುನಾಥ ರಾವ್ ಅವರ ತಾಯಿ ಸುಮತಿ ರಾವ್ ಪಾಕಿಸ್ತಾನದ ಭಯೋತ್ಪಾದಕರ ನೆಲೆಗಳ ಮೇಲೆ ಸೇನೆ ನಡೆಸಿರುವ 'ಆಪರೇಷನ್ ಸಿಂಧೂರ' ದಾಳಿಯನ್ನು ಸ್ವಾಗತಿಸಿದ್ದಾರೆ.

ಸುದ್ದಿಗಾರರಿಗೆ ಈ ಕುರಿತು ಪ್ರತಿಕ್ರಿಯಿಸಿದ ಅವರು, 'ಪಾಕಿಸ್ತಾನಕ್ಕೆ ಭಾರತೀಯ ಸೇನೆ ತಕ್ಕ ಉತ್ತರ ನೀಡಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಸೂಕ್ತ ಸಮಯದಲ್ಲಿ ಸರಿಯಾದ ಉತ್ತರ ನೀಡಿದ್ದಾರೆ. ಎಲ್ಲದಕ್ಕೂ ಸಮಯ ಬಂದೇ ಬರುತ್ತದೆ. ನಾವು ಕಾಯಬೇಕಷ್ಟೇ' ಎಂದರು.

'ನಮ್ಮ ಪುತ್ರ ಮಂಜುನಾಥ್ ವಾಪಸ್ ಬರುವುದಿಲ್ಲ. ಅದರೆ ಸೇನೆಯ ಈ ಕ್ರಮದಿಂದ ನಮ್ಮ ಕುಟುಂಬಕ್ಕೆ ಶಾಂತಿ ಸಿಕ್ಕಿದೆ' ಎಂದು ಹೇಳಿದರು.

ಪತ್ನಿ ನಿರಾಕರಣೆ: ಮಂಜುನಾಥ ರಾವ್ ಅವರ ಪತ್ನಿ ಪಲ್ಲವಿ 'ಆಪರೇಷನ್ ಸಿಂಧೂರ' ಬಗ್ಗೆ ಪ್ರತಿಕ್ರಿಯೆ ನೀಡಲು ಅನಾರೋಗ್ಯದ ಕಾರಣ ನೀಡಿ ನಿರಾಕರಿಸಿದರು.

ಮಂಜುನಾಥರಾವ್ ನಿವಾಸಕ್ಕೆ ಮಂಗಳವಾರ ರಾತ್ರಿ ಎನ್‌ಐಎ ಅಧಿಕಾರಿಗಳ ತಂಡ ಭೇಟಿ ನೀಡಿ, ಪತ್ನಿ ಪಲ್ಲವಿ ಹಾಗೂ ಪುತ್ರ ಅಭಿಜಯರಾವ್ ಅವರೊಂದಿಗೆ ಚರ್ಚಿಸಿ ಅಗತ್ಯ ಮಾಹಿತಿ ಪಡೆದರು ಎಂದು ತಿಳಿದುಬಂದಿದೆ.

ಕಾರ್ಯಾಚರಣೆಗೆ ಸೇನೆ ಬಳಸಿದ ಅಸ್ತ್ರಗಳಿವು

ಭಯೋತ್ಪಾದಕರ ನೆಲೆಗಳನ್ನು ನಾಶ ಮಾಡಲು ಭಾರತೀಯ ಸೇನೆಯು 'ಸ್ಕಾಲ್ಪ್' ಕ್ಷಿಪಣಿ, 'ಹ್ಯಾಮರ್ ಸ್ಮಾರ್ಟ್ ಶಸ್ತ್ರಾಸ್ತ್ರ ವ್ಯವಸ್ಥೆ', 'ಕಾಮಿಕೇಜ್ ಡ್ರೋನ್', ಗುರಿ ನಿರ್ದೇಶಿತ ಬಾಂಬ್ ಕಿಟ್‌ಗಳನ್ನು ಬಳಸಿದೆ ಎಂದು ಸೇನಾ ಮೂಲಗಳು ತಿಳಿಸಿವೆ. ರಫೆಲ್ ಯುದ್ಧ ವಿಮಾನಗಳನ್ನು ಬಳಸಿಕೊಂಡು ಸೇನೆ ಈ ದಾಳಿಯನ್ನು ಸಂಘಟಿಸಿದೆ.

ಸ್ಕಾಲ್ಪ್ ಕ್ಷಿಪಣಿ: 'ಸ್ಟಾರ್ಮ್ ಶಾಡೋ' ಎಂದು ಕರೆಯಲಾಗುವ, ಯುರೋಪಿನ ರಕ್ಷಣಾ ಕಂಪನಿ ಎಂಬಿಡಿಎ ಅಭಿವೃದ್ಧಿ ಪಡಿಸಿರುವ ಈ ಕ್ಷಿಪಣಿ ನಿಗದಿತ ಗುರಿಯ ಮೇಲೆ ನಿಖರವಾಗಿ ದಾಳಿ ಮಾಡುವುದಕ್ಕೆ ಹೆಸರುವಾಸಿ. ಅಂದಾಜು 1,300 ಕೆಜಿ ತೂಗುವ, 5.10 ಮೀಟರ್ ಉದ್ದದ ಈ ಕ್ಷಿಪಣಿಯನ್ನು ರಕ್ಷಣಾ ಉದ್ದೇಶದ ಬಂಕರ್‌ಗಳು ಮತ್ತು ಮಹತ್ವದ ಮೂಲಸೌಕರ್ಯಗಳನ್ನು ನಾಶ ಮಾಡಲು ಬಳಸಲಾಗುತ್ತದೆ.

ದೂರ ವ್ಯಾಪ್ತಿಯಲ್ಲಿರುವ ಗುರಿಯ ಮೇಲೆ ದಾಳಿ ಮಾಡುವ ಸಾಮರ್ಥ್ಯವಿರುವ ಈ ಕ್ಷಿಪಣಿಯನ್ನು ಯುದ್ಧವಿಮಾನದಲ್ಲಿ ಅಳವಡಿಸಿ, ಗುರಿಯೆಡೆಗೆ ನಿರ್ದೇಶಿಸಲಾಗುತ್ತದೆ. ಇರಾಕ್, ಲಿಬಿಯಾ, ಸಿರಿಯಾದಲ್ಲೂ ಯುದ್ಧದ ಸಂದರ್ಭದಲ್ಲಿ ಈ ಕ್ಷಿಪಣಿಯನ್ನು ಬಳಸಲಾಗಿತ್ತು. ಉಕ್ರೇನ್ ಕೂಡ ರಷ್ಯಾದ ವಿರುದ್ಧ 'ಸ್ಕಾಲ್ಪ್' ಅನ್ನು ಬಳಸಿದೆ.

ಸ್ಕಾಲ್ಪ್ ಕ್ಷಿಪಣಿ

'ಹ್ಯಾಮರ್' ವ್ಯವಸ್ಥೆ: ಫ್ರಾನ್ಸ್‌ನ ರಕ್ಷಣಾ ಸಲಕರಣೆಗಳ ತಯಾರಿಕಾ ಸಂಸ್ಥೆ ಸಫ್ರಾನ್ ಎಲೆಕ್ಟ್ರಾನಿಕ್ಸ್ ಆ್ಯಂಡ್ ಡಿಫೆನ್ಸ್ ಅಭಿವೃದ್ಧಿ ಪಡಿಸಿರುವ ನೆಲದಲ್ಲಿರುವ ಗುರಿಯ ಮೇಲೆ ಆಗಸದಿಂದ ದಾಳಿ ನಡೆಸುವ ನಿರ್ದಿಷ್ಟ ಗುರಿ ನಿರ್ದೇಶಿತ ಕ್ಷಿಪಣಿ ವ್ಯವಸ್ಥೆ ಇದು. ಸ್ಥಿರವಾದ ಮತ್ತು ಸಂಚರಿಸುವ ಗುರಿಯ ಮೇಲೆ ನಿಖರವಾಗಿ ದಾಳಿ ನಡೆಸುವ ಸಾಮರ್ಥ್ಯ ಇದಕ್ಕಿದೆ. ಜಿಪಿಎಸ್, ಇನ್‌ಫ್ರಾರೆಡ್ ಇಮೇಜಿಂಗ್, ಲೇಸರ್ ಗುರಿ ಸೇರಿದಂತೆ ಹಲವು ತಂತ್ರಜ್ಞಾನಗಳನ್ನು ಬಳಕೆ ಮಾಡಿಕೊಂಡು ಈ ಬಾಂಬ್ ಅನ್ನು ಬಳಸಬಹುದು.

ಈ ಎರಡು ಕ್ಷಿಪಣಿ ವ್ಯವಸ್ಥೆಗಳೊಂದಿಗೆ ನಿಗಾ ಮತ್ತು ಗುರಿಯನ್ನು ಗುರುತಿಸುವುದಕ್ಕೆ ಬಳಸುವ ಮತ್ತು 'ಕಾಮಿಕೇಜ್ ಡ್ರೋನ್' ಎಂದು ಕರೆಯಲಾಗುವ ಅಸ್ತ್ರವನ್ನೂ ಬಳಸಿದೆ. 1000 ಕಿ.ಮೀ ದೂರದವರೆಗೂ ಸಂಚರಿಸುವ ಸಾಮರ್ಥ್ಯವಿರುವ ಈ ಈ ಡ್ರೋನ್ ಅನ್ನು ಡಿಆರ್‌ಡಿಒ ಕೆಲವು ಖಾಸಗಿ ಸಂಸ್ಥೆಗಳ ಸಹಕಾರದೊಂದಿಗೆ ಅಭಿವೃದ್ಧಿ ಪಡಿಸಿದೆ. ಶತ್ರುಗಳ ನೆಲೆಯನ್ನು ಗುರುತಿಸಿ, ನಂತರ ದಾಳಿ ಮಾಡುವ ಸಾಮರ್ಥ್ಯವನ್ನೂ ಹೊಂದಿದೆ.

ಸಂಯಮಕ್ಕೆ ಜಾಗತಿಕ ನಾಯಕರ ಕರೆ

ವಾಷಿಂಗ್ಟನ್/ಮಾಸ್ಕೊ/ಲಂಡನ್ (ಪಿಟಿಐ): ಭಾರತ ಮತ್ತು ಪಾಕಿಸ್ತಾನ ಸಂಯಮದಿಂದ ವರ್ತಿಸಬೇಕು. ಉಭಯ ದೇಶಗಳ ನಡುವಿನ ಉದ್ವಿಗ್ನತೆ ಶೀಘ್ರ ಕೊನೆಗೊಳ್ಳಲಿದೆ ಎಂಬ ವಿಶ್ವಾಸ ಇದೆ ಎಂದು ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆಂಟೋನಿ ಗುಟೆರಸ್ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೇರಿದಂತೆ ಜಾಗತಿಕ ನಾಯಕರು ಹೇಳಿದ್ದಾರೆ.

'ಇದು ನಾಚಿಕೆಗೇಡಿನ ಸಂಗತಿ. ಈ ಹಿಂದಿನ ಘಟನೆಗಳನ್ನು ಅವಲೋಕಿಸಿದಾಗ ಏನಾದರೂ ಸಂಭವಿಸಲಿದೆ ಎಂದು ಜನರಿಗೆ ಗೊತ್ತಿತ್ತು. ಉಭಯ ದೇಶಗಳು ದೀರ್ಘಕಾಲದಿಂದಲೂ ಹೋರಾಟ ಮಾಡುತ್ತಿವೆ. ಇದೆಲ್ಲವೂ ಶೀಘ್ರದಲ್ಲಿ ಕೊನೆಗೊಳ್ಳಲಿದೆ ಎಂಬ ಭರವಸೆ ಇದೆ' ಎಂದು ಟ್ರಂಪ್ ಹೇಳಿದ್ದಾರೆ.

ಶಾಂತಿ ಮಾತುಕತೆ ನಡೆಸಿ

1972ರ ಶಿಮ್ಲಾ ಒಪ್ಪಂದ ಮತ್ತು 1999ರ ಲಾಹೋರ್ ಒಪ್ಪಂದಗಳ ಅವಕಾಶಗಳಡಿ ಭಾರತ ಮತ್ತು ಪಾಕಿಸ್ತಾನ ಶಾಂತಿಯುತ, ರಾಜಕೀಯ ಮತ್ತು ರಾಜತಾಂತ್ರಿಕವಾಗಿ ದ್ವಿಪಕ್ಷೀಯ ಮಾತುಕತೆ ಮೂಲಕ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿಕೊಳ್ಳಬಹುದು ಎಂಬ ಭರವಸೆ ಇದೆ
ಮಾರಿಯಾ ಜಖರೋವಾ, ರಷ್ಯಾ ವಿದೇಶಾಂಗ ಇಲಾಖೆ ವಕ್ತಾರೆ

ಪರಸ್ಪರ ಪ್ರತೀಕಾರವು ಸೇನಾ ಸಂಘರ್ಷವಾಗಿ ಬದಲಾಗುತ್ತಿರುವುದು ಕಳವಳ ಉಂಟುಮಾಡಿದೆ. ದಕ್ಷಿಣ ಏಷ್ಯಾದ ಶಾಂತಿ ಮತ್ತು ಸ್ಥಿರತೆಗಾಗಿ ಭಾರತ ಮತ್ತು ಪಾಕಿಸ್ತಾನ ಮಾತುಕತೆ ನಡೆಸುವಂತೆ ಒತ್ತಾಯಿಸುತ್ತೇವೆ
ಯೊಶಿಮಸ ಹಯಾಶಿ, ಜಪಾನ್‌ನ ಮುಖ್ಯ ಸಂಪುಟ ಕಾರ್ಯದರ್ಶಿ

ಭಾರತ ಮತ್ತು ಪಾಕಿಸ್ತಾನ ಸಂಯಮ ಕಾಪಾಡಬೇಕು. ಸಂಘರ್ಷದಿಂದ ಪ್ರಾದೇಶಿಕ ಮತ್ತು ಅಂತರರಾಷ್ಟ್ರೀಯ ಶಾಂತಿಗೆ ಅಪಾಯವಿದೆ. ಮಾತುಕತೆ ಮೂಲಕ ಉದ್ವಿಗ್ನತೆ ತಗ್ಗಿಸಿ, ದಕ್ಷಿಣ ಏಷ್ಯಾದಲ್ಲಿ ಸ್ಥಿರತೆ ಬಲಗೊಳಿಸಲು ಎರಡೂ ದೇಶಗಳು ಮುಂದಾಗಬೇಕು
ಶೇಖ್ ಅಬ್ದುಲ್ಲಾ ಬಿನ್ ಝಯೇದ್ ಅಲ್ ನಹ್ಯಾನ್,
ಯುಎಇಯ ವಿದೇಶಾಂಗ ವ್ಯವಹಾರಗಳ ಉಪಪ್ರಧಾನಿ

ಪಾಕಿಸ್ತಾನದ ಮೇಲೆ ಭಾರತದ ಪಡೆಗಳು ನಡೆಸಿದ ದಾಳಿ ನಂತರ ಉಲ್ಬಣಿಸಿರುವ ಸಂಘರ್ಷಮಯ ಪರಿಸ್ಥಿತಿಯನ್ನು ತಿಳಿಗೊಳಿಸಲು ಉಭಯ ದೇಶಗಳ ಜೊತೆ ಬ್ರಿಟನ್ ಮಾತುಕತೆ ನಡೆಸಲಿದೆ
ಕಿಯರ್ ಸ್ಟಾರ್ಮರ್, ಬ್ರಿಟನ್ ಪ್ರಧಾನಿ

ವಿಷಾದನೀಯ: ಚೀನಾ

'ಭಾರತ ಸೇನಾ ಕಾರ್ಯಾಚರಣೆಯು ವಿಷಾದನೀಯವಾದದ್ದು. ಎರಡು ದೇಶಗಳು ಶಾಂತಿ ಮತ್ತು ಸ್ಥಿರತೆಯನ್ನು ಕಾಯ್ದುಕೊಳ್ಳಬೇಕು. ಪರಿಸ್ಥಿತಿ ಮತ್ತಷ್ಟು ಉದ್ವಿಗ್ನಗೊಳ್ಳುವುದನ್ನು ತಡೆಯಬೇಕು. ಚೀನಾವು ಭಯೋತ್ಪಾದನೆಯನ್ನು ವಿರೋಧಿಸುತ್ತದೆ' ಎಂದು ಚೀನಾ ಬುಧವಾರ ಹೇಳಿದೆ.

ಪಾಕಿಸ್ತಾನದಿಂದ ತೀವ್ರಗೊಂಡ ಶೆಲ್ ದಾಳಿ • ಭಾರತದಿಂದ ಪ್ರತಿದಾಳಿ

ಕಾಶ್ಮೀರ ಗಡಿಭಾಗದ ಜನರಲ್ಲಿ ಆತಂಕ

ಶ್ರೀನಗರ (ಪಿಟಿಐ): 'ಆಪರೇಷನ್ ಸಿಂಧೂರ' ಬಳಿಕ ಗಡಿ ನಿಯಂತ್ರಣ ರೇಖೆಯಾದ್ಯಂತ ಗುಂಡಿನ ಚಕಮಕಿ ನಡೆದ ಕಾರಣ ಕಾಶ್ಮೀರ ಗಡಿಭಾಗದಲ್ಲಿನ ನಿವಾಸಿಗಳು ರಾತ್ರಿ ಇಡೀ ಆತಂಕದಿಂದ ನಿದ್ದೆ ಮಾಡಲಿಲ್ಲ.

ಉತ್ತರ ಕಾಶ್ಮೀರದ ಕುಪ್ವಾಡ ಜಿಲ್ಲೆಯ ಕರ್ನಾಹ್ ಮತ್ತು ಬಾರಾಮುಲ್ಲಾ ಜಿಲ್ಲೆಯ ಉರಿ ಸೆಕ್ಟರ್‌ನಲ್ಲಿ ಪಾಕಿಸ್ತಾನಿ ಸೇನೆಯು ತೀವ್ರ ಶೆಲ್ ದಾಳಿ ನಡೆಸಿದೆ. ಭಾರತವು ಇದಕ್ಕೆ ಪ್ರತಿಯಾಗಿ ದಾಳಿ ನಡೆಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪಾಕಿಸ್ತಾನದ ದಾಳಿಯಿಂದ ತಪ್ಪಿಸಿಕೊಳ್ಳಲು ಕುಪ್ವಾಡ ಜಿಲ್ಲೆಯಲ್ಲಿ ಜನರು ಭೂಗತ ಬಂಕರ್‌ಗಳಲ್ಲಿ ಆಶ್ರಯ ಪಡೆದರು. ಉರಿಯಲ್ಲಿನ ಜನರು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಗೊಂಡರು.

ಶ್ರೀನಗರದಲ್ಲಿಯೂ ಜನರು ಮಧ್ಯರಾತ್ರಿಯಿಂದಲೇ ಟಿ.ವಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿಯನ್ನು ನೋಡುತ್ತಾ ಆತಂಕಗೊಂಡಿದ್ದರು.

ಒಂಬತ್ತು ಶಿಬಿರಗಳ ನಿರ್ಮಾಣಕ್ಕೆ ಸಿದ್ಧತೆ: ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯಲ್ಲಿ ಪಾಕಿಸ್ತಾನವು ಭಾರಿ ಶೆಲ್ ದಾಳಿ ನಡೆಸುತ್ತಿದೆ. ದಾಳಿಯಿಂದ ಬಾಧಿತವಾಗಿರುವ ಭಾರತ–ಪಾಕಿಸ್ತಾನ ಗಡಿ ಪ್ರದೇಶದಲ್ಲಿರುವ ಈ ಜಿಲ್ಲೆಯ ಗ್ರಾಮಗಳಲ್ಲಿ ವಾಸಿಸುತ್ತಿರುವ ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗುತ್ತಿದ್ದು, ಇದಕ್ಕಾಗಿ ಒಂಬತ್ತು ಶಿಬಿರಗಳನ್ನು ಸಿದ್ಧಪಡಿಸಲಾಗುತ್ತಿದೆ.

ವಸತಿ, ಆಹಾರ, ವೈದ್ಯಕೀಯ ಸೇವೆ ಸೇರಿದಂತೆ ಜನರಿಗೆ ಅಗತ್ಯವಿರುವ ಎಲ್ಲ ಸೌಕರ್ಯಗಳು ಈ ಶಿಬಿರಗಳಲ್ಲಿ ಲಭ್ಯ ಇರಲಿವೆ. ಶಿಬಿರಗಳ ನಿರ್ಮಾಣದ ಸಿದ್ಧತೆಯನ್ನು ಹಿರಿಯ ಅಧಿಕಾರಿಗಳ ತಂಡವು ಬುಧವಾರ ಪರಿಶೀಲಿಸಿತು.

ಪಾಕಿಸ್ತಾನದ ದಾಳಿಯಿಂದಾಗಿ ಉರಿಯಲ್ಲಿ ಹಾನಿಗೊಂಡಿರುವ ಮನೆ – ಪಿಟಿಐ ಚಿತ್ರ

200 ವಿಮಾನ ಸಂಚಾರ ರದ್ದು, 18 ವಿಮಾನ ನಿಲ್ದಾಣ ಬಂದ್

ನವದೆಹಲಿ/ ಮುಂಬೈ (ಪಿಟಿಐ): ಭಾರತೀಯ ಸೇನೆಯು 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ನಡೆಸಿದ ಬೆನ್ನಲ್ಲೇ, ದೇಶದಾದ್ಯಂತ 200ಕ್ಕೂ ಹೆಚ್ಚು ವಿಮಾನಗಳ ಸಂಚಾರವನ್ನು ಬುಧವಾರ ರದ್ದು ಮಾಡಲಾಗಿದೆ. ಶ್ರೀನಗರ ಸೇರಿದಂತೆ 18 ವಿಮಾನ ನಿಲ್ದಾಣಗಳ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಏರ್ ಇಂಡಿಯಾ, ಇಂಡಿಗೊ, ಏರ್ ಇಂಡಿಯಾ ಎಕ್ಸ್‌ಪ್ರೆಸ್, ಆಕಾಶ ಏರ್ ಮತ್ತು ಕೆಲವು ವಿದೇಶಿ ವಿಮಾನಯಾನ ಸಂಸ್ಥೆಗಳ ವಿಮಾನಗಳ ಕಾರ್ಯಾಚರಣೆಯನ್ನು ರದ್ದು ಮಾಡಲಾಗಿದೆ. 'ಸರ್ಕಾರವು ವಾಯು ಪ್ರದೇಶ ಬಳಕೆ ನಿರ್ಬಂಧಿಸಿದ ಕಾರಣ ಅಮೃತಸರ, ಶ್ರೀನಗರ ಸೇರಿದಂತೆ ದೇಶೀಯವಾಗಿ ಸಂಚರಿಸುವ 165ಕ್ಕೂ ಹೆಚ್ಚು ವಿಮಾನಗಳ ಸೇವೆಯನ್ನು ಮೇ 10ರವರೆಗೆ ರದ್ದು ಮಾಡಲಾಗಿದೆ' ಎಂದು ಇಂಡಿಗೊ ಮತ್ತು ಏರ್ ಇಂಡಿಯಾ ತಿಳಿಸಿವೆ.

ಈಗಾಗಲೇ ಟಿಕೆಟ್ ಕಾಯ್ದಿರಿಸಿರುವ ಪ್ರಯಾಣಿಕರ ಹಣವನ್ನು ಪೂರ್ಣ ಪ್ರಮಾಣದಲ್ಲಿ ವಾಪಸ್ ನೀಡಲಾಗುವುದು ಎಂದು ಕೆಲ ವಿಮಾನಯಾನ ಸಂಸ್ಥೆಗಳು ತಿಳಿಸಿವೆ.

ಸ್ಥಗಿತಗೊಂಡ ಪ್ರಮುಖ ವಿಮಾನ ನಿಲ್ದಾಣಗಳು: ಶ್ರೀನಗರ, ಲೇಹ್, ಜಮ್ಮು, ಅಮೃತಸರ, ಪಠಾಣ್‌ಕೋಟ್, ಚಂಡೀಗಢ, ಜೋಧಪುರ, ಜೈಸಲ್ಮೇರ್, ಶಿಮ್ಲಾ, ಧರ್ಮಶಾಲಾ ಮತ್ತು ಜಾಮ್‌ನಗರ

'ಪಾಕಿಸ್ತಾನಕ್ಕೆ ಎಚ್ಚರಿಕೆ ಗಂಟೆ'

ಸೈನಿಕರ ಕಾರ್ಯದಕ್ಷತೆಗೆ ದೊಡ್ಡ ಸಲಾಂ: ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಾಕಿಸ್ತಾನ ಹಾಗೂ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿರುವ ಉಗ್ರಗಾಮಿಗಳ ಒಂಬತ್ತು ನೆಲೆಗಳ ಮೇಲೆ 'ಆಪರೇಷನ್ ಸಿಂಧೂರ' ಹೆಸರಿನಲ್ಲಿ ದೇಶದ ಸೇನಾ ಪಡೆ ನಡೆಸಿದ ದಾಳಿ ಪಾಕಿಸ್ತಾನ ಮತ್ತು ಭಾರತದ ಜೊತೆ ಕಿಡಿಗೇಡಿತನ ನಡೆಸುವ ನೆರೆಯ ಎಲ್ಲ ದೇಶಗಳಿಗೆ ಎಚ್ಚರಿಕೆಯ ಗಂಟೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಸಂವಿಧಾನ ಉಳಿಸಿ ಮತ್ತು ಬೆಲೆ ಏರಿಕೆ ಖಂಡಿಸಿ ಕೇಂದ್ರ ಸರ್ಕಾರದ ವಿರುದ್ಧ ರಾಯಚೂರಿನಲ್ಲಿ ಪಕ್ಷದ ವತಿಯಿಂದ ಬುಧವಾರ ಪ್ರತಿಭಟನಾ ರ‍್ಯಾಲಿ ಹಮ್ಮಿಕೊಳ್ಳಲಾಗಿತ್ತು. ಆದರೆ, ಕೇಂದ್ರದ ನೀತಿ ವಿರುದ್ಧ ಈ ಸಂದರ್ಭದಲ್ಲಿ ಪ್ರತಿಭಟನೆ ನಡೆಸುವುದು ಸಮಂಜಸವಲ್ಲ ಎಂಬ ಕಾರಣಕ್ಕೆ ಕಾರ್ಯಕ್ರಮವನ್ನು ರದ್ದುಪಡಿಸಲಾಗಿದೆ' ಎಂದರು.

'ರಾಷ್ಟ್ರೀಯ ಭದ್ರತೆ ವಿಷಯಲ್ಲಿ ಯಾವುದೇ ರಾಜಿ ಸಾಧ್ಯವಿಲ್ಲ. ಈ ದಾಳಿಯನ್ನು ಎಲ್ಲರೂ ಬೆಂಬಲಿಸಿದ್ದೇವೆ. ರಾಜ್ಯದಲ್ಲಿ ಸುರಕ್ಷತೆಗೆ ಸಂಬಂಧಿಸಿದಂತೆ ಎಲ್ಲ ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಭದ್ರತಾ ವ್ಯವಸ್ಥೆ ಮೇಲೆ ನಿಗಾ ಇಡುವಂತೆ ಪೊಲೀಸ್ ವರಿಷ್ಠರಿಗೆ ಸೂಚನೆ ನೀಡಲಾಗಿದೆ. ಕೇಂದ್ರ ಸರ್ಕಾರದ ಜೊತೆಯಲ್ಲಿಯೂ ಸಂಪರ್ಕದಲ್ಲಿದ್ದು, ಅಲ್ಲಿಂದ ಬರುವ ಸೂಚನೆಗಳನ್ನು ಪಾಲಿಸಲಾಗುವುದು. ಯಾರೂ ಭಯಭೀತರಾಗುವ ಅವಶ್ಯಕತೆ ಇಲ್ಲ' ಎಂದರು.

ಸೈನಿಕರ ಕಾರ್ಯದಕ್ಷತೆಗೆ ದೊಡ್ಡ ಸಲಾಂ: 'ಉಗ್ರರ ನೆಲೆಗಳನ್ನು ಪತ್ತೆ ಹಚ್ಚಿ ದಾಳಿ ಮಾಡಿರುವ ನಮ್ಮ ಸೈನಿಕರು, ಅಮಾಯಕ ಜನರ ಸಾವು ನೋವು ತಪ್ಪಿಸಿದ್ದಾರೆ. ಅವರ ಕಾರ್ಯದಕ್ಷತೆಗೆ ದೊಡ್ಡ ಸಲಾಂ' ಎಂದರು.

'ಸೇನಾ ದಾಳಿ ನಡೆಸದೆ ಭಾರತದ ಮುಂದೆ ಬೇರೆ ಆಯ್ಕೆಗಳಿರಲಿಲ್ಲ. ಕಾಶ್ಮೀರದ ಪಹಲ್ಗಾಮ್‌ನಲ್ಲಿ ಹತ್ಯಾಕಾಂಡ ನಡೆಸಿದ ಉಗ್ರಗಾಮಿಗಳು ಪಾಕಿಸ್ತಾನಕ್ಕೆ ಸೇರಿದವರೆಂದು ಜಗಜ್ಜಾಹೀರಾಗಿದ್ದರೂ ಪಾಕಿಸ್ತಾನ ಇದನ್ನು ಒಪ್ಪಿಕೊಂಡು ಕ್ರಮಕೈಗೊಳ್ಳುವ ಭರವಸೆ ನೀಡಿಲ್ಲ. ಈ ಹಟಮಾರಿ ಧೋರಣೆ ತಳೆದಿರುವ ಕಾರಣದಿಂದಾಗಿ ಭಾರತಕ್ಕೂ ಈ ದಾಳಿ ನಡೆಸದೆ ಬೇರೆ ಆಯ್ಕೆಗಳಿರಲಿಲ್ಲ. ಈ ದಾಳಿ ಉಗ್ರರಿಗೆ ಆಶ್ರಯ ಮತ್ತು ನೆರವು ನೀಡಿ ಭಾರತದ ವಿರುದ್ಧ ಅವರನ್ನು ಛೂ ಬಿಡುತ್ತಿದ್ದ ಪಾಕಿಸ್ತಾನಕ್ಕೆ ನೀಡಿರುವ ಎಚ್ಚರಿಕೆ. ಉಗ್ರಗಾಮಿಗಳ ನೆಲೆಗಳನ್ನು ಧೂಳೀಪಟ ಮಾಡಿದ ನಮ್ಮ ಸೈನಿಕರ ಪರಾಕ್ರಮದಿಂದ ಪಹಲ್ಗಾಮ್ ಹತ್ಯಾಕಾಂಡದಲ್ಲಿ ತಮ್ಮವರನ್ನು ಕಳೆದುಕೊಂಡ ಕುಟುಂಬಗಳಿಗೆ ತುಸು ನೆಮ್ಮದಿ, ಸಮಾಧಾನ ಸಿಕ್ಕಿರಬಹುದೆಂದು ಭಾವಿಸಿದ್ದೇನೆ' ಎಂದೂ ಹೇಳಿದರು.

ಇದು ಗಾಂಧಿ, ಬಸವಣ್ಣನ ಕಾಲ ಅಲ್ಲ. ಈಗ ಕಾಲ ಬದಲಾಗಿದೆ. ಪಾಕಿಸ್ತಾನ ಕಾಲು ಕೆರೆದು ಜಗಳಕ್ಕೆ ಬಂದರೆ ಸುಮ್ಮನೆ ಇರಲು ಆಗುತ್ತದೆಯೇ?
ಸಿದ್ದರಾಮಯ್ಯ, ಮುಖ್ಯಮಂತ್ರಿ

ಪ್ರತಿಭಟನೆ ದಾಖಲಿಸಿದ ಪಾಕ್

ಇಸ್ಲಾಮಾಬಾದ್ (ಪಿಟಿಐ): ಭಾರತದ ರಾಜತಾಂತ್ರಿಕ ಅಧಿಕಾರಿಯನ್ನು ಕರೆಸಿಕೊಂಡಿದ್ದ ಪಾಕಿಸ್ತಾನ ವಿದೇಶಾಂಗ ಇಲಾಖೆ ಭಾರತದ ದಾಳಿಯ ವಿರುದ್ಧ ಪ್ರತಿಭಟನೆ ದಾಖಲಿಸಿದೆ.

ಪಾಕಿಸ್ತಾನದ ಪಂಜಾಬ್ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ ನಗರಗಳ ಮೇಲೆ ಮಧ್ಯರಾತ್ರಿ ನಡೆದ ದಾಳಿಯಲ್ಲಿ 26 ಮಂದಿ ಮೃತಪಟ್ಟಿದ್ದು, 46 ಜನ ಗಾಯಗೊಂಡಿದ್ದಾರೆ ಎಂದು ಪಾಕಿಸ್ತಾನದ ಸೇನೆ ತಿಳಿಸಿದೆ.

'ಪಾಕಿಸ್ತಾನದ ತೀವ್ರ ಪ್ರತಿಭಟನೆಯನ್ನು ದಾಖಲಿಸುವ ಸಲುವಾಗಿ ಭಾರತದ ರಾಜತಾಂತ್ರಿಕ ಅಧಿಕಾರಿಯನ್ನು ವಿದೇಶಾಂಗ ಇಲಾಖೆಯ ಕಚೇರಿಗೆ ಕರೆಸಿಕೊಳ್ಳಲಾಗಿತ್ತು' ಎಂದು ಪಾಕಿಸ್ತಾನ ವಿದೇಶಾಂಗ ಕಚೇರಿಯ ಪ್ರಕಟಣೆ ತಿಳಿಸಿದೆ.

ಭಾರತದ ಆಕ್ರಮಣಕಾರಿ ನಡೆಯಿಂದ ಪಾಕಿಸ್ತಾನದ ಸಾರ್ವಭೌಮತ್ವದ ಉಲ್ಲಂಘನೆಯಾಗಿದೆ. ಇಂತಹ ಕೃತ್ಯಗಳು ವಿಶ್ವಸಂಸ್ಥೆಯ ನಿಯಮಗಳು, ಅಂತರರಾಷ್ಟ್ರೀಯ ಕಾನೂನು ಮತ್ತು ಅಂತರರಾಷ್ಟ್ರೀಯ ಸಂಬಂಧಗಳಿಗೆ ಸಂಬಂಧಿಸಿದ ನಿಯಮಗಳಿಗೆ ವಿರುದ್ಧವಾಗಿವೆ ಎಂದು ಭಾರತದ ರಾಜತಾಂತ್ರಿಕ ಅಧಿಕಾರಿಗೆ ತಿಳಿಸಿರುವುದಾಗಿ ಪಾಕಿಸ್ತಾನ ಹೇಳಿದೆ.

300 ಜಿಲ್ಲೆಗಳಲ್ಲಿ ಸ್ವರಕ್ಷಣೆ ತಾಲೀಮು

ನವದೆಹಲಿ (ಪಿಟಿಐ): ಸುಮಾರು ಒಂದೂವರೆ ಗಂಟೆ ದೇಶದ ಅಂದಾಜು 300 ಜಿಲ್ಲೆಗಳಲ್ಲಿ ಬುಧವಾರ ಸ್ವರಕ್ಷಣೆ ತಾಲೀಮನ್ನು ನಡೆಸಲಾಯಿತು. ಅಣ್ವಸ್ತ್ರ ಘಟಕ, ಸೇನಾ ನೆಲೆಗಳು, ತೈಲ ಶುದ್ಧೀಕರಣ ಘಟಕಗಳು, ಅಣೆಕಟ್ಟುಗಳು ಸೇರಿದಂತೆ ವಿವಿಧ ಸೂಕ್ಷ್ಮ ಸ್ಥಳಗಳಲ್ಲಿ ತಾಲೀಮು ನಡೆಸಲಾಗಿದೆ. ದಾಳಿಯ ಸಂದರ್ಭದಲ್ಲಿ ಹೇಗೆ ಎಚ್ಚರಿಕೆ ವಹಿಸಬೇಕು ಎಂಬ ಬಗ್ಗೆ ಸಾರ್ವಜನಿಕರಿಗೆ ತರಬೇತಿ ನೀಡಲಾಯಿತು.

ತಾಲೀಮಿನ ವೇಳೆ ವಾಯುದಾಳಿಯ ಮುನ್ನೆಚ್ಚರಿಕೆ ನೀಡುವ ಸೈರನ್‌ಗಳನ್ನು ಮೊಳಗಿಸಲಾಯಿತು. ಬಂಕರ್‌ಗಳನ್ನು ಶುಚಿಗೊಳಿಸಲಾಯಿತು. ಅಗ್ನಿ ಅವಘಡ ಸಂಭವಿಸಿದಾಗ ಏನು ಮಾಡಬೇಕು, ಕಟ್ಟಡದ ಅವಶೇಷಗಳ ಅಡಿಯಲ್ಲಿ ಸಿಲುಕಿರುವವರನ್ನು ಹೇಗೆ ಹೊರತೆಗೆಯಬೇಕು, ಬಹು ಅಂತಸ್ತಿನ ಕಟ್ಟಡದ ಮಧ್ಯೆ ಸಿಲುಕಿರುವವರ ರಕ್ಷಣೆ ಹೇಗೆ ಕೈಗೊಳ್ಳಬೇಕು, ವೈದ್ಯಕೀಯ ತುರ್ತಿನ ವೇಳೆ ಹೇಗೆ ಎಚ್ಚರಿಕೆ ವಹಿಸಬೇಕು ಎಂಬ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಲಾಯಿತು.

ಕರ್ನಾಟಕ, ಹರಿಯಾಣ, ಪಂಜಾಬ್, ಅಸ್ಸಾಂ, ಅರುಣಾಚಲ ಪ್ರದೇಶ, ತೆಲಂಗಾಣ, ರಾಜಸ್ಥಾನ, ಕೇರಳ, ಸಿಕ್ಕಿಂ, ಮಹಾರಾಷ್ಟ್ರ, ದೆಹಲಿ, ಮಣಿಪುರ, ಒಡಿಶಾ, ಮಿಜೋರಾಂ, ಜಾರ್ಖಂಡ್ ಸೇರಿದಂತೆ ವಿವಿಧ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ತಾಲೀಮು ನಡೆಯಿತು.

ಹೈದರಾಬಾದ್‌ನ ರೈಲು ನಿಲ್ದಾಣದಲ್ಲಿ ಸ್ವಯಂಸೇವಕರೊಂದಿಗೆ ಸೇರಿ ಪೊಲೀಸರು ಮತ್ತು ರೈಲ್ವೆ ನಾಗರಿಕ ರಕ್ಷಣಾ ಸಿಬ್ಬಂದಿ ಬುಧವಾರ ಸ್ವರಕ್ಷಣೆ ತಾಲೀಮು ನಡೆಸಿದರು –ಪಿಟಿಐ ಚಿತ್ರ

ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಶರೀಫ್ ನೇತೃತ್ವದಲ್ಲಿ ಎನ್‌ಎಸ್‌ಸಿ ಸಭೆ

ಭಾರತದ 5 ಯುದ್ಧವಿಮಾನ ನಾಶ: ಪಾಕ್

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ ಭಾಗಗಳಲ್ಲಿನ ಭಯೋತ್ಪಾದಕರ 9 ತಾಣಗಳನ್ನು ಗುರಿಯಾಗಿಸಿ ಭಾರತ ನಡೆಸಿದ ಕ್ಷಿಪಣಿ ದಾಳಿಗೆ ಪಾಕಿಸ್ತಾನ ಸೇನೆ ಪ್ರತ್ಯುತ್ತರ ನೀಡಿದ್ದು, ಭಾರತದ ಐದು ಯುದ್ಧವಿಮಾನಗಳನ್ನು ಹೊಡೆದುರುಳಿಸಿದೆ ಎಂದು ಪ್ರಧಾನಿ ಶೆಹಬಾಜ್ ಶರೀಫ್ ಬುಧವಾರ ಹೇಳಿದ್ದಾರೆ.

ದಾಳಿ ಬೆನ್ನಲ್ಲೇ, ಸಂಸತ್‌ನ ಅಧಿವೇಶನ ಉದ್ದೇಶಿಸಿ ಮಾತನಾಡಿದ ಅವರು, ತಮ್ಮ ಹೇಳಿಕೆಗೆ ಯಾವುದೇ ಪುರಾವೆಗಳನ್ನು ಒದಗಿಸಲಿಲ್ಲ.

'ಮಂಗಳವಾರ ರಾತ್ರಿ ನಡೆದ ದಾಳಿಯಲ್ಲಿ ಭಾರತದ 80 ಯುದ್ಧವಿಮಾನಗಳು ಪಾಲ್ಗೊಂಡಿದ್ದವು. ಪಾಕಿಸ್ತಾನ ಸೇನೆ ಸಮರ್ಥವಾಗಿ ಅವುಗಳನ್ನು ಹಿಮ್ಮೆಟ್ಟಿಸಿದೆ' ಎಂದೂ ಹೇಳಿದ್ದಾರೆ.

'ಪಾಕಿಸ್ತಾನ ವಾಯುಪಡೆ ಕ್ಷಿಪ್ರವಾಗಿ ಪ್ರತಿಕ್ರಿಯೆ ನೀಡಿದೆ. ಭಾರತ ನಡೆಸುವ ದಾಳಿ ಬಗ್ಗೆ ನಮ್ಮ ಸಶಸ್ತ್ರ ಪಡೆಗಳಿಗೆ ಮುಂಚಿತವಾಗಿಯೇ ಮಾಹಿತಿ ಇತ್ತು' ಎಂದರು.

ರಫೇಲ್ ಯುದ್ಧವಿಮಾನಗಳ ಕುರಿತು ಪ್ರಸ್ತಾಪಿಸಿದ ಅವರು, 'ನಮ್ಮ ಪಡೆಗಳು ಅವುಗಳನ್ನು ನಿಷ್ಕ್ರಿಯಗೊಳಿಸಿವೆ' ಎಂದಿದ್ದಾರೆ.

ಇಸ್ಲಾಮಾಬಾದ್‌ನಲ್ಲಿ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಶರೀಫ್ ನೇತೃತ್ವದಲ್ಲಿ ರಾಷ್ಟ್ರೀಯ ಭದ್ರತಾ ಪರಿಷತ್ತಿನ (ಎನ್‌ಎಸ್‌ಸಿ) ಸಭೆ ಬುಧವಾರ ನಡೆಯಿತು –ಎಎಫ್‌ಪಿ ಚಿತ್ರ

ಎನ್‌ಎಸ್‌ಸಿ ಸಭೆ: ಇದಕ್ಕೂ ಮುನ್ನ, ಪ್ರಧಾನಿ ಶೆಹಬಾಜ್ ಶರೀಫ್, ರಾಷ್ಟ್ರೀಯ ಭದ್ರತಾ ಪರಿಷತ್ತಿನ (ಎನ್‌ಎಸ್‌ಸಿ) ಸಭೆ ನಡೆಸಿದರು.

'ವಿಶ್ವಸಂಸ್ಥೆ ಸನ್ನದಿನ 51ನೇ ವಿಧಿ ಪ್ರಕಾರ, ಪಾಕಿಸ್ತಾನಕ್ಕೆ ಆತ್ಮರಕ್ಷಣೆ ಮತ್ತು ಪ್ರತೀಕಾರದ ಹಕ್ಕಿದೆ. ಭಾರತದ ದಾಳಿಯಿಂದ ಮುಗ್ಧ ಪಾಕಿಸ್ತಾನಿಗಳು ಜೀವ ಕಳೆದುಕೊಂಡಿದ್ದಾರೆ. ಇದು ಪಾಕಿಸ್ತಾನದ ಸಾರ್ವಭೌಮತ್ವದ ಸ್ಪಷ್ಟ ಉಲ್ಲಂಘನೆ. ಹೀಗಾಗಿ ಪ್ರತೀಕಾರದ ಹಕ್ಕನ್ನು ಕಾಯ್ದಿರಿಸಿಕೊಂಡಿದೆ' ಎಂದು ಸರ್ಕಾರದ ಪ್ರಕಟಣೆ ತಿಳಿಸಿದೆ.

'ಭಯೋತ್ಪಾದಕ ಶಿಬಿರಗಳು ಎಂಬ ನೆಪದಲ್ಲಿ ಭಾರತವು ನಾಗರಿಕ ಪ್ರದೇಶಗಳನ್ನು ಗುರಿಯಾಗಿಸಿದೆ. ಈ ಮೂಲಕ ಮಕ್ಕಳು, ಮಹಿಳೆಯರು ಮತ್ತು ನಾಗರಿಕರ ಮೇಲೆ ದಾಳಿ ನಡೆಸಿದೆ. ಮಸೀದಿ ಸೇರಿದಂತೆ ಹಲವು ಮೂಲಸೌಕರ್ಯಗಳಿಗೆ ಹಾನಿಯಾಗಿದೆ' ಎಂದು ಅದು ಹೇಳಿದೆ.

26 ಸಾವು: ಪಾಕ್ ಸೇನಾ ವಕ್ತಾರ

ಭಾರತ ನಡೆಸಿದ ಕ್ಷಿಪಣಿ ದಾಳಿಯಿಂದ 26 ಜನರು ಮೃತಪಟ್ಟಿದ್ದು, 46 ಜನರಿಗೆ ಗಾಯಗಳಾಗಿವೆ ಎಂದು ಪಾಕಿಸ್ತಾನದ ಸೇನಾ ವಕ್ತಾರ ಲೆಫ್ಟಿನೆಂಟ್ ಜನರಲ್ ಅಹ್ಮದ್ ಷರೀಫ್ ಚೌಧರಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

'ಶತ್ರುಗಳಿಗೆ ಹೇಗೆ ಪ್ರತ್ಯುತ್ತರ ನೀಡಬೇಕು ಎಂಬುದು ನಮ್ಮ ಸೇನೆಗೆ ಚೆನ್ನಾಗಿ ಗೊತ್ತಿದೆ' ಎಂದು ಪ್ರಧಾನಿ ಶೆಹಬಾಜ್ ಶರೀಫ್ ಹೇಳಿದ್ದಾರೆ.

'ಭಾರತ ಕೈಗೊಂಡ ಈ ಯುದ್ಧದ ನಡೆಗೆ ತಕ್ಕ ಉತ್ತರ ನೀಡುವ ಹಕ್ಕು ಪಾಕಿಸ್ತಾನಕ್ಕಿದೆ. ಬಲವಾದ ಪ್ರತ್ಯುತ್ತರವನ್ನೇ ನೀಡಲಾಗುವುದು. ಶತ್ರು ದೇಶದ ದುಷ್ಟ ಉದ್ದೇಶ ಈಡೇರಲು ಬಿಡುವುದಿಲ್ಲ' ಎಂದು ಪ್ರತಿಕ್ರಿಯಿಸಿದ್ದಾರೆ.

'ಯುದ್ಧ ತಡೆಯಲು ಯತ್ನಿಸುತ್ತಿದ್ದೇವೆ'

ಭಾರತವು ಅಂತರರಾಷ್ಟ್ರೀಯ ಗಡಿಯನ್ನು ದಾಟಿದೆ. ಇದು ನಿಯಮಗಳ ಸ್ಪಷ್ಟ ಉಲ್ಲಂಘನೆ ಮತ್ತು ಸಂಘರ್ಷವು ಅಧಿಕಗೊಳಿಸುವ ಸಂಬಂಧ ನೀಡಿದ ಆಮಂತ್ರಣ. ಸಂಘರ್ಷವು ಇನ್ನಷ್ಟು ಅಧಿಕಗೊಂಡು ಪೂರ್ಣ ಪ್ರಮಾಣದ ಯುದ್ಧವಾಗುವ ಸಂಭವವಿದೆ. ಆದರೆ, ಇದನ್ನು ತಡೆಯಲು ನಾವು ಯತ್ನಿಸುತ್ತಿದ್ದೇವೆ. ಹಾಗಿದ್ದರೂ ನಾವು ಯುದ್ಧಕ್ಕೆ ಸಂಪೂರ್ಣವಾಗಿ ಸಿದ್ಧರಿದ್ದೇವೆ. ಇದರಲ್ಲಿ ಸಂಶಯವೇ ಬೇಡ

ನಾವಾಗಿಯೇ ಭಾರತದ ಮೇಲೆ ದಾಳಿ ನಡೆಸುವುದಿಲ್ಲ. ಇದನ್ನು ಕಳೆದ 14 ದಿನಗಳಿಂದ ನಾವು ಹೇಳುತ್ತಲೇ ಇದ್ದೇವೆ. ಆದರೆ, ನಮ್ಮ ಮೇಲೆ ದಾಳಿ ನಡೆಸಿದರೆ ಮಾತ್ರ ನಾವು ಪ್ರತ್ಯುತ್ತರ ನೀಡುತ್ತೇವೆ. ಒಂದು ವೇಳೆ ಭಾರತವು ದಾಳಿಯಿಂದ ಹಿಂದೆ ಸರಿದರೆ, ನಾವು ಖಂಡಿತವಾಗಿಯೂ ಈ ಉದ್ವಿಗ್ನತೆಯನ್ನು ಅಂತ್ಯಗೊಳಿಸುತ್ತೇವೆ
ಖ್ವಾಜಾ ಆಸಿಫ್, ಪಾಕಿಸ್ತಾನ ರಕ್ಷಣಾ ಸಚಿವ

ಇಂದು ಸರ್ವಪಕ್ಷ ಸಭೆ

ನವದೆಹಲಿ (ಪಿಟಿಐ): ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಭಾರತದ ಸೇನೆ ನಡೆಸಿದ ದಾಳಿಯ ಬಗ್ಗೆ ಮಾಹಿತಿ ನೀಡಲು ಕೇಂದ್ರ ಸರ್ಕಾರವು ಗುರುವಾರ ಸರ್ವಪಕ್ಷಗಳ ಸಭೆಯನ್ನು ಕರೆದಿದೆ.

'ನವದೆಹಲಿಯ ಸಂಸತ್ ಭವನದಲ್ಲಿ ಬೆಳಿಗ್ಗೆ 11 ಗಂಟೆಗೆ ಸರ್ವಪಕ್ಷಗಳ ಸಭೆ ನಡೆಯಲಿದೆ' ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಪ್ರಧಾನಿ ಭಾಗಿಯಾಗಲಿ: ಗುರುವಾರ ನಡೆಯಲಿರುವ ಸರ್ವಪಕ್ಷ ಸಭೆಯಲ್ಲಾದರೂ ಪ್ರಧಾನಿ ನರೇಂದ್ರ ಮೋದಿ ಅವರು ಭಾಗವಹಿಸುತ್ತಾರೆ ಎಂಬ ನಿರೀಕ್ಷೆಯಿದೆ ಎಂದು ಕಾಂಗ್ರೆಸ್ ಬುಧವಾರ ಹೇಳಿದೆ.

'ಏ.24ರಂದು ನಡೆದಿದ್ದ ಸರ್ವಪಕ್ಷದ ಸಭೆಯಲ್ಲಿ ಪ್ರಧಾನಿ ಅವರು ಭಾಗಿಯಾಗುವಂತೆ ನಾವು ಮನವಿ ಮಾಡಿದ್ದೇವು. ಆದರೆ, ಅವರು ಭಾಗವಹಿಸಲಿಲ್ಲ. ಗುರುವಾರದ ಸಭೆಯಲ್ಲಾದರೂ ಅವರು ಉಪಸ್ಥಿತರಿರಲಿ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಆಗ್ರಹಿಸಿದ್ದಾರೆ.

'ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸಭೆಯಲ್ಲಿ ಭಾಗಿಯಾಗಲಿದ್ದಾರೆ' ಎಂದು ತಿಳಿಸಿದ್ದಾರೆ.

ಪ್ರಮುಖ ಬೆಳವಣಿಗೆಗಳು

- ಪಾಕಿಸ್ತಾನದಲ್ಲಿನ ಉಗ್ರರ ನೆಲೆಗಳನ್ನು ಗುರಿಯಾಗಿಸಿ ಭಾರತ ನಡೆಸಿರುವ ದಾಳಿಗೆ ಸಂಬಂಧಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಸಂದೇಶಗಳನ್ನು ಪೋಸ್ಟ್ ಮಾಡುವ ಮೊದಲು ಪರಿಶೀಲಿಸಬೇಕು. ಪಾಕಿಸ್ತಾನ ಪರವಿರುವ ಖಾತೆಗಳ ಬಗ್ಗೆ ಎಚ್ಚರಿಕೆ ಅಗತ್ಯ ಎಂದು ಚೀನಾ ಸರ್ಕಾರಿ ಒಡೆತನದ ಗ್ಲೋಬಲ್ ಟೈಮ್ಸ್ ನಿಯತಕಾಲಿಕೆಗೆ ಬೀಜಿಂಗ್‌ನಲ್ಲಿರುವ ಭಾರತದ ರಾಯಭಾರ ಕಚೇರಿ ಸೂಚಿಸಿದೆ
- ಭಾರತದ 16 ಯುಟ್ಯೂಬ್ ಸುದ್ದಿ ಚಾನೆಲ್‌ಗಳು, 32 ಯುಟ್ಯೂಬ್ ಲಿಂಕ್‌ಗಳು, 32 ವೆಬ್‌ಸೈಟ್‌ಗಳನ್ನು ಪಾಕಿಸ್ತಾನ ನಿಷೇಧಿಸಿದೆ
- ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ಬುಧವಾರ ತುರ್ತು ಪರಿಸ್ಥಿತಿ ಘೋಷಿಸಲಾಯಿತು. ಭಾರತದ ದಾಳಿ ಹಿನ್ನೆಲೆಯಲ್ಲಿ ಎಲ್ಲ ಶಿಕ್ಷಣ ಸಂಸ್ಥೆಗಳಿಗೆ ರಜೆ ಘೋಷಿಸಲಾಯಿತು
- ಲಾಹೋರ್ ಸಮೀಪದ ಮುರಿಡ್ಕೆಯಲ್ಲಿರುವ ಹಫೀಜ್ ಸಯೀದ್ ನೇತೃತ್ವದ ಜಮಾತ್-ಉದ್-ದಾವಾ (ಜೆಯುಡಿ) ಕೇಂದ್ರ ಕಚೇರಿ ಮೇಲೆ ನಡೆದ ದಾಳಿಯಲ್ಲಿ ಮೃತಪಟ್ಟ ಸಂಘಟನೆಯ ಉಗ್ರರಾದ ಕಾರಿ ಅಬ್ದುಲ್ ಮಲಿಕ್, ಖಾಲಿದ್ ಹಾಗೂ ಮುದರ್ಸಿ ಅಂತ್ಯಕ್ರಿಯೆಯಲ್ಲಿ ಸಂಘಟನೆ ಸದಸ್ಯರು ಹಾಗೂ ಪಾಕಿಸ್ತಾನ ಸೇನೆ ಸಿಬ್ಬಂದಿ ಪಾಲ್ಗೊಂಡಿದ್ದರು
- ಭಾರತದ ಪಡೆಗಳು ದಾಳಿ ನಡೆಸಿದ ನಂತರ ಇಸ್ಲಾಮಾಬಾದ್ ಮತ್ತು ಲಾಹೋರ್‌ನ ವಾಯು ಪ್ರದೇಶವನ್ನು 48 ಗಂಟೆ ಬಂದ್ ಮಾಡಿದ್ದಾಗಿ ಘೋಷಿಸಿದ ಪಾಕಿಸ್ತಾನ ವಿಮಾನಗಳ ಮಾರ್ಗವನ್ನು ಕರಾಚಿಗೆ ಬದಲಾಯಿಸಿತು
- ಪಾಕಿಸ್ತಾನದಲ್ಲಿನ ಚೀನಾ ರಾಯಭಾರಿ ಜಿಯಾಂಗ್ ಝೈಡಾಂಗ್ ಅವರು ಉಪಪ್ರಧಾನಿ ಹಾಗೂ ವಿದೇಶಾಂಗ ಸಚಿವ ಇಶಾಕ್ ದರ್ ಅವರನ್ನು ಭೇಟಿ ಮಾಡಿದ್ದರು. ಈ ವೇಳೆ, ಭಾರತ ನಡೆಸಿದ ದಾಳಿ ಕುರಿತು ಚೀನಾ ರಾಯಭಾರಿಗೆ ವಿವರಿಸಲಾಗಿದೆ

ಫ್ಯಾಕ್ಟ್ ಚೆಕ್

ಭಾರತದ ವಾಯುದಾಳಿ; ಸುಳ್ಳು ಸುದ್ದಿಗಳ ಮಹಾಸ್ಫೋಟ

ಪಹಲ್ಗಾಮ್ ದಾಳಿಗೆ ಪ್ರತೀಕಾರವಾಗಿ ಭಾರತವು ಪಾಕ್ ಆಕ್ರಮಿತ ಕಾಶ್ಮೀರ ಮತ್ತು ಪಾಕಿಸ್ತಾನದ 9 ಭಾಗಗಳಲ್ಲಿ ವಾಯುದಾಳಿ ನಡೆಸಿದ ನಂತರ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳ ಮಹಾಸ್ಫೋಟವೇ ನಡೆಯುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ಮತ್ತು ಡಿಜಿಟಲ್ ಸರ್ವೀಸಸ್ ಮುಖ್ಯಸ್ಥ ಪ್ರತ್ಯೂಷ್ ರಂಜನ್ ಲೇಖನವೊಂದನ್ನು ಪ್ರಕಟಿಸಿದ್ದಾರೆ. ಅದರ ಸಂಗ್ರಹ ಭಾಗ ಇಲ್ಲಿದೆ.

ಅಧಿಕೃತ ಪ್ರಕಟಣೆ, ಚಿತ್ರ/ವಿಡಿಯೊ ಬಿಡುಗಡೆಯಾಗುವ ಮುನ್ನವೇ ಸುಳ್ಳು ಸುದ್ದಿಗಳು, ತಿರುಚಿದ ಚಿತ್ರ ಮತ್ತು ವಿಡಿಯೊಗಳು ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದ್ದು, ಇವೆಲ್ಲ ಘಟನೆ ನಡೆದ ಸ್ಥಳಗಳ ಸಾಕ್ಷಾತ್ ಸುದ್ದಿಗಳು ಎಂದು ಪ್ರತಿಪಾದನೆ ಮಾಡಲಾಗುತ್ತಿದೆ.

ಸಿರಿಯಾ, ಗಾಜಾ, ಉಕ್ರೇನ್ ಮುಂತಾದ ಚಿತ್ರ/ದೃಶ್ಯಗಳನ್ನು ಭಾರತದ ವಾಯುದಾಳಿಗೆ ಸಂಬಂಧಿಸಿದವು ಎಂದು ಹಂಚಿಕೊಳ್ಳಲಾಗುತ್ತಿದೆ. ಚಿತ್ರ, ವಿಡಿಯೊಗಳಿಗೆ ನಾಟಕೀಯವಾದ ಸಂಗೀತ, ಅಡಿಬರಹಗಳನ್ನು ಜೋಡಿಸಲಾಗುತ್ತಿದೆ. ಇಷ್ಟು ದಿನದಂತೆ ಇದು ವ್ಯವಸ್ಥಿತ ಸುಳ್ಳು ಪ್ರಚಾರ ಮಾತ್ರವಲ್ಲ; ಭಾವುಕತೆ, ಪಕ್ಷಪಾತ, ಪೂರ್ವಗ್ರಹ ಮತ್ತು ಅತ್ಯುಗ್ರ ದೇಶಭಕ್ತಿಯಿಂದ ಪ್ರಚೋದನೆಗೊಂಡ ಹಲವರು ಈ ರೀತಿಯ ಸುಳ್ಳುಗಳನ್ನು ಹರಡುತ್ತಿದ್ದಾರೆ. ಹೀಗೆ ಹಂಚುತ್ತಿರುವ ಬಹುತೇಕರಿಗೆ ಇದರ ಪರಿಣಾಮಗಳ ಪರಿವೆಯೇ ಇಲ್ಲ. ನಮ್ಮ ಕಣ್ಣಮುಂದೆಯೇ ಸತ್ಯದ ಸೌಧಗಳು ಕುಸಿಯುತ್ತಿವೆ, ಜನರ ನಂಬಿಕೆಗಳು ಪಲ್ಲಟವಾಗುತ್ತಿವೆ, ಸಾಮಾಜಿಕ ಕಂದಕಗಳು ವಿಸ್ತಾರಗೊಳ್ಳುತ್ತಿವೆ.

ಪ್ರವಾಹದೋಪಾದಿಯಲ್ಲಿ ಸೃಷ್ಟಿಯಾಗುತ್ತಿರುವ ಇವನ್ನು ತಡೆಯುವುದು ಫ್ಯಾಕ್ಟ್ ಚೆಕ್ ಸಂಸ್ಥೆಗಳಿಂದ ಮಾತ್ರವೇ ಸಾಧ್ಯವಿಲ್ಲ. ಇದು ಸಾಮಾಜಿಕ ಜಾಲತಾಣಗಳನ್ನು ಬಳಸುತ್ತಿರುವ ಎಲ್ಲರ ಜವಾಬ್ದಾರಿ. ಬಿಕ್ಕಟ್ಟು ಉಲ್ಬಣಗೊಳ್ಳುವುದನ್ನು ತಡೆಯಲು ಎಲ್ಲರೂ ಸ್ವಯಂನಿಯಂತ್ರಣ ಸಾಧಿಸಬೇಕು, ಸಂಯಮದಿಂದ ವರ್ತಿಸಬೇಕು.

ಭೌತಿಕ ಯುದ್ಧವು ಕೆಲವು ಪ್ರದೇಶಗಳಿಗೆ ಮಾತ್ರ ಸೀಮಿತವಾಗಿದೆ. ಆದರೆ, ಮಾಹಿತಿ ಯುದ್ಧವು ಎಲ್ಲೆಡೆ ವ್ಯಾಪಿಸಿದೆ. ನಾವೆಲ್ಲರೂ ಅದರಲ್ಲಿ ಭಾಗಿಗಳಾಗಿದ್ದೇವೆ. ಸತ್ಯದ ಪರವಾಗಿ ನಾವು ನಿಲ್ಲದಿದ್ದರೆ, ಸುಳ್ಳು ಹೀಗೆಯೇ ವಿಜೃಂಭಿಸಲು ಬಿಟ್ಟರೆ, ನಾವು ಸಾಮುದಾಯಿಕ ವಿವೇಕವನ್ನು ಕಳೆದುಕೊಳ್ಳುತ್ತೇವೆ. ಯಾವ ವೈರಿಯನ್ನು ಸೋಲಿಸಲು ಪ್ರಯತ್ನ ಪಡುತ್ತಿದ್ದೇವೆಯೋ, ನಾವೂ ಅದರಂತಾಗುತ್ತೇವೆ.

ಇದು ಕೇವಲ ಸಾಮಾಜಿಕ ವೇದಿಕೆಗಳ ಸಮಸ್ಯೆಯಲ್ಲ, ಜನರ ಸಮಸ್ಯೆ ಕೂಡ; ಇದು 'ಡಿಜಿಟಲ್ ವಿಪತ್ತು' ಎಂದು ಪ್ರತ್ಯೂಷ್ ರಂಜನ್ ವಿಶ್ಲೇಷಿಸಿದ್ದಾರೆ.

ಸೇನಾ ಕಾರ್ಯಕ್ಕೆ ಶ್ಲಾಘನೆ

'ನ್ಯಾಯ ಒದಗಿಸುವ ಪ್ರಕ್ರಿಯೆ ಆರಂಭ'

ಪಹಲ್ಗಾಮ್‌ನ ಉಗ್ರರ ದಾಳಿ ಕೃತ್ಯದ ಸಂತ್ರಸ್ತರಿಗೆ ನ್ಯಾಯವನ್ನು ಒದಗಿಸುವ ಪ್ರಕ್ರಿಯೆಯು ಈಗ ಆರಂಭವಾಗಿದೆ. ಈ ಕಾರ್ಯಾಚರಣೆಗೆ ಇಡೀ ದೇಶವೇ ಬೆಂಬಲಿಸುತ್ತದೆ. ಜೈ ಹಿಂದ್. ಭಾರತ್ ಮಾತಾ ಕೀ ಜೈ
ಸುನಿಲ್ ಅಂಬೇಕರ್,
ಅಖಿಲ ಭಾರತ ಪ್ರಚಾರ ಪ್ರಮುಖ, ಆರ್‌ಎಸ್‌ಎಸ್

ನವದೆಹಲಿ (ಪಿಟಿಐ):ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಉಗ್ರರ ನೆಲೆಗಳನ್ನು ಗುರಿಯಾಗಿಸಿ ಸೇನೆಯು ನಡೆಸಿರುವ 'ಆಪರೇಷನ್ ಸಿಂಧೂರ' ದಾಳಿಗೆ ವ್ಯಾಪಕ ಶ್ಲಾಘನೆ ವ್ಯಕ್ತವಾಗಿದೆ. 'ಗಡಿಯಾಚೆಗಿನ ಭಯೋತ್ಪಾದನೆ' ಹತ್ತಿಕ್ಕಬೇಕು ಎಂದು ಪಕ್ಷಗಳು ಸ್ವಾಗತಿಸಿವೆ.

'ಪಹಲ್ಗಾಮ್ ಕೃತ್ಯದ ಬಳಿಕ ಇಂತಹ ಕಾರ್ಯಾಚರಣೆಗೆ ಕಾಂಗ್ರೆಸ್ ಪಕ್ಷ ಸೇನೆಗೆ ಬೆಂಬಲವಾಗಿ ನಿಂತಿತ್ತು ಹಾಗೂ ಕೇಂದ್ರವು ಕೈಗೊಳ್ಳುವ ಯಾವುದೇ ಪ್ರತಿಕ್ರಿಯಾತ್ಮಕ ಕ್ರಮಗಳ ಪರವಾಗಿ ನಿಂತಿತ್ತು' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರತಿಕ್ರಿಯಿಸಿದ್ದಾರೆ.

'ಎಕ್ಸ್'ನಲ್ಲಿ ಈ ಕುರಿತು ಪ್ರತಿಕ್ರಿಯಿಸಿರುವ ಖರ್ಗೆ ರಾಷ್ಟ್ರೀಯ ಏಕತೆ ಮತ್ತು ಸಾರ್ವಭೌಮತೆ ಈಗಿನ ತುರ್ತು. ಕಾಂಗ್ರೆಸ್ ಪಕ್ಷ ಸೇನೆಯ ಜೊತೆಗಿದೆ. ರಾಷ್ಟ್ರೀಯ ಹಿತಾಸಕ್ತಿಯೇ ನಮಗೆ ಮುಖ್ಯ ಎಂಬ ಹಾದಿಯನ್ನು ನಮ್ಮ ನಾಯಕರು ತೋರಿಸಿಕೊಟ್ಟಿದ್ದಾರೆ' ಎಂದು ಹೇಳಿದ್ದಾರೆ.

ಸೇನೆ ಬಗ್ಗೆ ಹೆಮ್ಮೆ ಇದೆ



'ನಮ್ಮ ಸೇನೆಯ ಬಗ್ಗೆ ಹೆಮ್ಮೆ ಇದೆ. ಜೈಹಿಂದ್' ಎಂದು ಲೋಕಸಭೆ ವಿರೋಧಪಕ್ಷದ ನಾಯಕ ರಾಹುಲ್‌ಗಾಂಧಿ 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿದ್ದಾರೆ.

ಪಕ್ಷದ ನಾಯಕಿ ಪ್ರಿಯಾಂಕಾ ಗಾಂಧಿ ಕೂಡಾ ಇದಕ್ಕೆ ದನಿಗೂಡಿಸಿದ್ದು, 'ನಮ್ಮ ಧೈರ್ಯಶಾಲಿ ಸೈನಿಕರು ನಮ್ಮ ಸ್ವಾತಂತ್ರ್ಯ ಮತ್ತು ಏಕತೆಯನ್ನು ರಕ್ಷಿಸಲಿದ್ದಾರೆ'. ದೇವರು ಅವರಿಗೆ ಸವಾಲುಗಳನ್ನು ಎದುರಿಸುವ ಇನ್ನಷ್ಟು ಧೈರ್ಯ, ತಾಳ್ಮೆ ಕೊಡಲಿ' ಎಂದು ಪ್ರಾರ್ಥಿಸಿದ್ದಾರೆ.

ದೇಶದ ಹಿತ ಮೊದಲು



ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು, ಎಲ್ಲ ಸ್ವರೂಪದ ಭಯೋತ್ಪಾದನೆಯ ನಿರ್ಮೂಲನೆಗೆ ಭಾರತ ಬದ್ಧವಾಗಿದೆ. ದೇಶದ ಹಿತಾಸಕ್ತಿ ರಕ್ಷಣೆಗೆ ಮೊದಲ ಆದ್ಯತೆಯಾಗಿದೆ' ಎಂದು ಆಪರೇಷನ್ ಸಿಂಧೂರಕ್ಕೆ ಪ್ರತಿಕ್ರಿಯಿಸಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟ		ಗೊರಬಲು	17009-33000	ರಾಶಿ	42709-50009
ಚಾಲಿ	40008-43498	ರಾಶಿ	48621-57399	ತಟ್ಟಬೆಟ್ಟೆ	29309-44099
ಚಿಪ್ಪು	27569-32569	ಸರಕು	60710-89986	**ಶಿರಸಿ**	
ಕೋಕ	7109-22029	**ಸಿದ್ದಾಪುರ**		ಬೆಟ್ಟೆ	27899-41299
ಫ್ಯಾಕ್ಟರಿ	4079-25699	ಬಿಳಿಗೋಟು	24699-31499	ಬಿಳಿಗೋಟು	21299-32698
ಹೊಸಚಾಲಿ	36710-43699	ಚಾಲಿ	35399-41699	ಚಾಲಿ	35550-43599
ಶಿವಮೊಗ್ಗ		ಕೋಕ	14119-24649	ಕೆಂಪುಗೋಟು	11000-23121
ಬೆಟ್ಟೆ	51099-58000	ಕೆಂಪುಗೋಟು	21419-26319	ರಾಶಿ	41909-49191

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,379
ಇಂದಿನ ಅಂತ್ಯ	24,414
▲	34
ದಿನದ ಗರಿಷ್ಠ	24,449

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹535
12 ಕ್ಕೆ	₹72
ಮೈಸೂರು	
100ಕ್ಕೆ	₹550

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹191
ಆರ್‌ಎಸ್‌ಎಸ್-5	₹186
ಗುಡ್ ಲಾಟ್	₹176

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1330 (1330)
ಸೋಯಾ (ರಿಫೈನ್ಡ್)	₹1240 (1245)
ಸೂರ್ಯಕಾಂತಿ (ರಿಫೈನ್ಡ್)	₹1365 (1370)
ಪಾಮೋಲಿನ್	₹1205 (1210)

ವಿನಿಮಯ ದರ

$ ಡಾಲರ್	84.77
£ ಪೌಂಡ್	113.12
€ ಯುರೊ	96.35
¥ ಯೆನ್ (100ಕ್ಕೆ)	59

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಬೆಂಗಳೂರು	₹20000-21500
ಹಿರಿಯೂರು	₹12856-12856

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹322-556
ದ್ವಿತಳಿ (ಬಿ.ವಿ)	₹410-699

ಪಿಎನ್‌ಬಿ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ (ಪಿಎನ್‌ಬಿ), ನಿವ್ವಳ ಲಾಭದಲ್ಲಿ ಶೇ 52ರಷ್ಟು ಹೆಚ್ಚಳವಾಗಿದೆ.

ಮಾರ್ಚ್ ತ್ರೈಮಾಸಿಕದಲ್ಲಿ ₹4,567 ಕೋಟಿ ಲಾಭ ಗಳಿಸಿದೆ. 2023–24ನೇ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹3,010 ಕೋಟಿ ಲಾಭ ಗಳಿಸಲಾಗಿತ್ತು ಎಂದು ಬ್ಯಾಂಕ್, ಷೇರುಪೇಟೆಗೆ ಬುಧವಾರ ತಿಳಿಸಿದೆ.

ಬ್ಯಾಂಕ್‌ನ ಒಟ್ಟು ವರಮಾನ ₹36,705 ಕೋಟಿಯಾಗಿದೆ. ಬಡ್ಡಿ ವರಮಾನವು ₹31,989 ಕೋಟಿ ಆಗಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಜಿಎನ್‌ಪಿಎ) ಶೇ 5.73ರಿಂದ ಶೇ 3.95ಕ್ಕೆ ಇಳಿದಿದೆ. ನಿವ್ವಳ ಎನ್‌ಪಿಎ ಶೇ 0.73ರಿಂದ ಶೇ 0.40ಕ್ಕೆ ತಗ್ಗಿದೆ.

2024–25ನೇ ಪೂರ್ಣ ಆರ್ಥಿಕ ವರ್ಷದಲ್ಲಿ ಬ್ಯಾಂಕ್ ₹16,630 ಕೋಟಿ ನಿವ್ವಳ ಲಾಭ ಗಳಿಸಿದೆ. ಪ್ರತಿ ಷೇರಿಗೆ ₹2.90 ಲಾಭಾಂಶ ನೀಡಲು ಬ್ಯಾಂಕ್‌ನ ಆಡಳಿತ ಮಂಡಳಿ ಅನುಮೋದಿಸಿದೆ.

‘ಪ್ರಸಕ್ತ ಆರ್ಥಿಕ ವರ್ಷದಲ್ಲಿ ಹೆಚ್ಚುವರಿಯಾಗಿ 200 ಶಾಖೆ ಸ್ಥಾಪಿಸಲು ನಿರ್ಧರಿಸಲಾಗಿದೆ. ಅಲ್ಲದೆ, ಮೂರು ಸಾವಿರ ಉದ್ಯೋಗಿಗಳ ನೇಮಕಕ್ಕೆ ನಿರ್ಧರಿಸಲಾಗಿದೆ’ ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಅಶೋಕ್ ಚಂದ್ರ ತಿಳಿಸಿದ್ದಾರೆ.

ಪಾಕ್ ಷೇರುಪೇಟೆ ಪತನ

ಕರಾಚಿ/ ಮುಂಬೈ (ಪಿಟಿಐ): ‘ಆಪರೇಷನ್ ಸಿಂಧೂರ’ವು ಪಾಕಿಸ್ತಾನದ ಪ್ರಮುಖ ಷೇರುಪೇಟೆಯಾದ ಕರಾಚಿ ಸ್ಟಾಕ್ ಎಕ್ಸ್‌ಚೇಂಜ್–100 ಸೂಚ್ಯಂಕದ ಮೇಲೂ ಪರಿಣಾಮ ಬೀರಿದೆ. ಬುಧವಾರದ ವಹಿವಾಟಿನಲ್ಲಿ 6,500 ಅಂಶ ಕುಸಿದಿದೆ.

ಭಾರತವು ಉಗ್ರರ ಶಿಬಿರಗಳ ಮೇಲೆ ನಡೆಸಿದ ದಾಳಿಯಿಂದ ಉಭಯ ದೇಶಗಳ ನಡುವೆ ಬಿಕ್ಕಟ್ಟು ತಲೆದೋರಿದೆ. ಇದು ಷೇರುಪೇಟೆಯ ಕುಸಿತಕ್ಕೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ. ಷೇರುಪೇಟೆಯು ಒಟ್ಟಾರೆ ಶೇ 5.78ರಷ್ಟು ಕುಸಿದಿದ್ದು, 1,07,007 ಅಂಶಗಳಲ್ಲಿ ಸ್ಥಿರಗೊಂಡಿದೆ.

ಕಳೆದ ತಿಂಗಳು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಘೋಷಿಸಿದ್ದ ಪ್ರತಿ ಸುಂಕ ನೀತಿಯ ವೇಳೆ ಒಂದೇ ದಿನ 8,700 ಅಂಶ ಪತನ ಕಂಡಿತ್ತು. ಈ ವೇಳೆ ಮಾರುಕಟ್ಟೆ ವಹಿವಾಟನ್ನು ಕೆಲಹೊತ್ತು ಸ್ಥಗಿತಗೊಳಿಸಲಾಗಿತ್ತು.

ಷೇರು ಸೂಚ್ಯಂಕ ಏರಿಕೆ: ಭಾರತದ ಷೇರು ಸೂಚ್ಯಂಕಗಳು ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 105 ಅಂಶ ಏರಿಕೆ ಕಂಡು 80,746 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 34 ಅಂಶ ಹೆಚ್ಚಳವಾಗಿದ್ದು, 24,414 ಅಂಶಗಳಲ್ಲಿ ಸ್ಥಿರಗೊಂಡಿದೆ.

ಬ್ರಿಟನ್–ಭಾರತ ಎಫ್‌ಟಿಎ: ಬಾಂಗ್ಲಾ, ವಿಯೆಟ್ನಾಂ ವಿರುದ್ಧ ಸ್ಪರ್ಧೆಗೆ ಸಹಕಾರಿ

ಜವಳಿ, ಚರ್ಮ ಉತ್ಪನ್ನಕ್ಕೆ ಬಲ

ನವದೆಹಲಿ (ಪಿಟಿಐ): ಬ್ರಿಟನ್ ಜತೆಗಿನ ಮುಕ್ತ ವ್ಯಾಪಾರ ಒಪ್ಪಂದವು (ಎಫ್‌ಟಿಎ) ಅಲ್ಲಿನ ಮಾರುಕಟ್ಟೆಯಲ್ಲಿ ಭಾರತದ ಜವಳಿ ಮತ್ತು ಚರ್ಮದ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಸೃಷ್ಟಿಗೆ ನೆರವಾಗಲಿದೆ ಎಂದು ಭಾರತೀಯ ರಫ್ತುದಾರರ ಸಂಘಟನೆಗಳ ಒಕ್ಕೂಟ ಹೇಳಿದೆ.

ಅಂತಿಮಗೊಂಡಿರುವ ಪ್ರಸ್ತಾವಿತ ಈ ಒಪ್ಪಂದದ ಅನುಸಾರ ಭಾರತದಿಂದ ರಫ್ತು ಮಾಡುವ ಕೆಲವು ಸರಕುಗಳ ಮೇಲಿನ ಸುಂಕದ ಪ್ರಮಾಣ ಕಡಿಮೆಯಾಗಲಿದೆ. ಮತ್ತೆ ಕೆಲವು ಉತ್ಪನ್ನಗಳಿಗೆ ಸುಂಕದ ವಿನಾಯಿತಿ ಸಿಗಲಿದೆ. ಇದರಿಂದ ಬ್ರಿಟನ್ ಮಾರುಕಟ್ಟೆಯಲ್ಲಿ ಭದ್ರ ನೆಲೆಯೂರಿರುವ ಬಾಂಗ್ಲಾದೇಶ ಮತ್ತು ವಿಯೆಟ್ನಾಂಗೆ ದೇಶೀಯ ರಫ್ತುದಾರರು ಸ್ಪರ್ಧಾತ್ಮಕ ಪೈಪೋಟಿ ನೀಡಲು ಸಹಕಾರಿಯಾಗಲಿದೆ ಎಂದು ಒಕ್ಕೂಟದ ಅಧ್ಯಕ್ಷ ಎಸ್.ಸಿ. ರಾಲ್ಹಾನ್ ಹೇಳಿದ್ದಾರೆ.

‘ವ್ಯಾಪಾರ ಒಪ್ಪಂದವು ಹೊಸ ರಫ್ತು ಅವಕಾಶಗಳನ್ನು ತೆರೆದಿಡಲಿದೆ. ವ್ಯಾಪಾರಕ್ಕೆ ಸಂಬಂಧಿಸಿದ ನಿರ್ಬಂಧಗಳನ್ನು ತೆರವುಗೊಳಿಸಲಿದೆ. ದೇಶೀಯ ರಫ್ತುದಾರರು ಬ್ರಿಟನ್ ಮಾರುಕಟ್ಟೆಯಲ್ಲಿ ತಳವೂರಲು ನೆರವಾಗಲಿದೆ’ ಎಂದು ಸಿದ್ಧಉಡುಪು ರಫ್ತು ಉತ್ತೇಜನ ಮಂಡಳಿ (ಎಇಪಿಸಿ) ಉಪಾಧ್ಯಕ್ಷ ಎ. ಶಕ್ತಿವೇಲ್ ಹೇಳಿದ್ದಾರೆ.

‘ಅಲ್ಲದೆ, ದೇಶದ ನೇಕಾರರು, ತಯಾರಕರು ಮತ್ತು ರಫ್ತುದಾರರ ನಡುವಿನ ಸರಪಳಿಯು ಸದೃಢಗೊಳ್ಳಲು ಸಹಕಾರಿಯಾಗಲಿದೆ’ ಎಂದಿದ್ದಾರೆ.

ದೀರ್ಘಕಾಲದ ಈ ಒಪ್ಪಂದವು ಎರಡು ದೇಶಗಳಲ್ಲಿ ಬಂಡವಾಳ ಆಕರ್ಷಣೆಗೆ ವೇದಿಕೆಯಾಗಲಿದೆ. ಜವಳಿ ವಲಯದ ವ್ಯಾಪಾರ ವಹಿವಾಟಿನ ಬೆಳವಣಿಗೆಗೆ ಮತ್ತಷ್ಟು ಬಲ ನೀಡಲಿದೆ ಎಂದು ಹೇಳಿದ್ದಾರೆ.

ದೇಶದಿಂದ ಪ್ರಮುಖವಾಗಿ ನೇಯ್ಗೆ ಮತ್ತು ಹೆಣೆದ ಉಡುಪು, ಪಾದರಕ್ಷೆ, ರತ್ನಗಂಬಳಿ, ಸಮುದ್ರ ಉತ್ಪನ್ನಗಳು ಬ್ರಿಟನ್‌ಗೆ ರವಾನೆಯಾಗುತ್ತವೆ. ಈ ಉತ್ಪನ್ನಗಳಿಗೆ ಶೇ 5ರಿಂದ 9ರಷ್ಟು ಸುಂಕ ವಿಧಿಸುವ ನಿರೀಕ್ಷೆಯಿದೆ.

ರಫ್ತು ಎಷ್ಟು?: ಪ್ರಸ್ತುತ ಭಾರತದಿಂದ ಬ್ರಿಟನ್‌ಗೆ ₹6,378 ಕೋಟಿ ಮೌಲ್ಯದ ನೇಯ್ಗೆ ಉಡುಪುಗಳು ರಫ್ತಾಗುತ್ತವೆ. 2027ರ ವೇಳೆಗೆ ₹13,500 ಕೋಟಿ ಮೌಲ್ಯದ ಸರಕುಗಳನ್ನು ರಫ್ತು ಮಾಡುವ ಗುರಿ ಹೊಂದಲಾಗಿದೆ.

ಅಲ್ಲದೆ ₹2,363 ಕೋಟಿ ಮೌಲ್ಯದ ಪಾದರಕ್ಷೆಗಳು, ₹864 ಕೋಟಿ ಮೌಲ್ಯದ ರತ್ನಗಂಬಳಿಗಳು, ₹906 ಕೋಟಿ ಮೌಲ್ಯದ ಸಮುದ್ರ ಉತ್ಪನ್ನಗಳನ್ನು ರಫ್ತು ಮಾಡಲಾಗುತ್ತದೆ.

₹2,422 ಕೋಟಿ ಮೌಲ್ಯದ ವಾಹನ ಬಿಡಿಭಾಗಗಳು ಮತ್ತು ವಾಹನಗಳು ರಫ್ತಾಗುತ್ತವೆ. ₹864 ಕೋಟಿ ಮೌಲ್ಯದ ಅಲ್ಯೂಮಿನಿಯಂ ಮತ್ತು ಅದರ ಉತ್ಪನ್ನಗಳು, ₹3,558 ಕೋಟಿ ಮೌಲ್ಯದ ಸಾವಯವ ರಾಸಾಯನಿಕಗಳು ರಫ್ತಾಗುತ್ತವೆ.

ವಜ್ರ, ಬೆಳ್ಳಿಗೆ ಸುಂಕ ವಿನಾಯಿತಿ ಇಲ್ಲ

ಬ್ರಿಟನ್ ಜತೆಗಿನ ಒಪ್ಪಂದದಲ್ಲಿ ವಜ್ರ, ಬೆಳ್ಳಿ, ಸ್ಮಾರ್ಟ್‌ಫೋನ್, ಟೆಲಿವಿಷನ್ ಕ್ಯಾಮೆರಾ ಟ್ಯೂಬ್, ಪ್ಲಾಸ್ಟಿಕ್, ವೈರ್‌ಲೆಸ್ ಸಂವಹನ ಉಪಕರಣ, ಆಪ್ಟಿಕಲ್ ಫೈಬರ್‌ನಂತಹ ಸೂಕ್ಷ್ಮ ಕೈಗಾರಿಕಾ ಸರಕುಗಳಿಗೆ ಭಾರತವು ಯಾವುದೇ ಸುಂಕ ವಿನಾಯಿತಿ ನೀಡುವುದಿಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬ್ರಿಟನ್‌ನಿಂದ ಆಮದಾಗುವ ಪೆಟ್ರೋಲ್ ಮತ್ತು ಡೀಸೆಲ್ ಎಂಜಿನ್ ವಾಹನಗಳಿಗೆ ಸುಂಕ ವಿನಾಯಿತಿ ನೀಡಲಾಗುತ್ತಿದೆ. ಇದಕ್ಕೆ ಕೋಟಾ ಮಿತಿ ಇರಲಿದೆ. ಅಲ್ಲದೆ, ವಿದ್ಯುತ್‌ಚಾಲಿತ ವಾಹನಗಳಿಗೂ ಈ ಷರತ್ತು ಅನ್ವಯಿಸಲಿದೆ ಎಂದು ಹೇಳಿದ್ದಾರೆ.

ಇಂದು ರಫ್ತುದಾರರ ಸಭೆ

ಬ್ರಿಟನ್ ಜತೆಗಿನ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದಂತೆ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರು, ಮೇ 8ರಂದು ರಫ್ತು ಉತ್ತೇಜನ ಮಂಡಳಿಯ ಪ್ರತಿನಿಧಿಗಳ ಜೊತೆಗೆ ಚರ್ಚಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದೇಶದಿಂದ ರಫ್ತಾಗುವ ಉಡುಪುಗಳು, ಸಂಸ್ಕರಿಸಿದ ಸೀಗಡಿ, ಆಭರಣ ಮತ್ತು ಹರಳುಗಳಿಗೆ ಸುಂಕ ವಿನಾಯಿತಿ ಲಭಿಸುವ ಸಾಧ್ಯತೆಯಿದೆ.

2030ರ ವೇಳೆಗೆ ಉಭಯ ದೇಶಗಳ ನಡುವಿನ ವ್ಯಾಪಾರ ಮೌಲ್ಯವನ್ನು ₹10.16 ಲಕ್ಷ ಕೋಟಿಗೆ ತಲುಪಿಸುವ ಗುರಿ ಹೊಂದಲಾಗಿದೆ. ಭಾರತವು ಜಾಗತಿಕ ಮಟ್ಟದಲ್ಲಿ ಐದನೇ ಅತಿದೊಡ್ಡ ಆರ್ಥಿಕತೆಯಾಗಿದ್ದರೆ, ಬ್ರಿಟನ್ ಆರನೇ ಅತಿದೊಡ್ಡ ಆರ್ಥಿಕತೆಯಾಗಿದೆ.

ಮತ್ತೆ ₹1 ಲಕ್ಷ ದಾಟಿದ ಚಿನ್ನದ ದರ

ನವದೆಹಲಿ (ಪಿಟಿಐ): ಭಾರತ ಮತ್ತು ಪಾಕಿಸ್ತಾನದ ನಡುವೆ ತಲೆದೋರಿರುವ ಬಿಕ್ಕಟ್ಟು ಹಳದಿ ಲೋಹದ ಬೆಲೆ ಏರಿಕೆಗೆ ಕಾರಣವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಬುಧವಾರದ ವಹಿವಾಟಿನಲ್ಲಿ 10 ಗ್ರಾಂ ಚಿನ್ನದ (ಶೇ 99.9 ಪರಿಶುದ್ಧತೆ) ಬೆಲೆಯು ₹1 ಸಾವಿರ ಹೆಚ್ಚಳವಾಗಿದ್ದು, ₹1,00,750 ಆಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ಧಾರಣೆಯು ₹1,050 ಏರಿಕೆಯಾಗಿದ್ದು, ₹1,00,350 ಆಗಿದೆ ಎಂದು ತಿಳಿಸಿದೆ.

ಉಭಯ ದೇಶಗಳ ನಡುವಿನ ಬಿಕ್ಕಟ್ಟಿನಿಂದಾಗಿ ಸುರಕ್ಷಿತ ಹೂಡಿಕೆಯಾದ ಚಿನ್ನದತ್ತ ಹೂಡಿಕೆದಾರರು ದೃಷ್ಟಿ ನೆಟ್ಟಿದ್ದಾರೆ. ಇದರಿಂದ ದೇಶೀಯ ಮಾರುಕಟ್ಟೆಯಲ್ಲಿ ಬೆಲೆ ಏರಿಕೆಯಾಗಿದೆ ಎಂದು ತಜ್ಞರು ತಿಳಿಸಿದ್ದಾರೆ.

ಏಪ್ರಿಲ್ 22ರಂದು ನಡೆದ ವಹಿವಾಟಿನಲ್ಲಿ 10 ಗ್ರಾಂ ಚಿನ್ನದ ಬೆಲೆಯು ಸಾರ್ವಕಾಲಿಕ ಗರಿಷ್ಠ ಮಟ್ಟವಾದ ₹1,01,600ಕ್ಕೆ ತಲುಪಿತ್ತು.

ಬೆಳ್ಳಿ ಧಾರಣೆಯೂ ಏರಿಕೆ ಕಂಡಿದೆ. ಪ್ರತಿ ಕೆ.ಜಿಗೆ ₹440 ಏರಿಕೆಯಾಗಿದ್ದು, ₹98,940 ಆಗಿದೆ.

ಆದರೆ, ಜಾಗತಿಕ ಮಾರುಕಟ್ಟೆಯಲ್ಲಿ ಪ್ರತಿ ಔನ್ಸ್ (28.34 ಗ್ರಾಂ) ಚಿನ್ನದ ಬೆಲೆಯು ಶೇ 1.8ರಷ್ಟು ಇಳಿಕೆಯಾಗಿದೆ. ಪ್ರತಿ ಔನ್ಸ್ ದರ 3,369 ಡಾಲರ್ ಆಗಿದೆ.

ಅಮೆರಿಕ ಮತ್ತು ಚೀನಾ ನಡುವೆ ಸುಂಕಕ್ಕೆ ಸಂಬಂಧಿಸಿದಂತೆ ಮಾತುಕತೆ ನಡೆಯುವ ನಿರೀಕ್ಷೆಯಿದೆ. ಈ ಬೆಳವಣಿಗೆಯು ಚಿನ್ನದ ಬೇಡಿಕೆಯನ್ನು ಕುಗ್ಗಿಸಿದೆ. ಹಾಗಾಗಿ, ಬೆಲೆ ಇಳಿಕೆಯಾಗಿದೆ ಎಂದು ತಜ್ಞರು ಹೇಳಿದ್ದಾರೆ.

ರೂಪಾಯಿ ಮೌಲ್ಯ 42 ಪೈಸೆ ಇಳಿಕೆ

ಮುಂಬೈ (ಪಿಟಿಐ): ‘ಆಪರೇಷನ್ ಸಿಂಧೂರ’ವು ರೂಪಾಯಿ ಮೌಲ್ಯದ ಮೇಲೂ ಪರಿಣಾಮ ಬೀರಿದೆ. ಬುಧವಾರದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು 42 ಪೈಸೆ ಇಳಿಕೆಯಾಗಿದೆ. ಪ್ರತೀ ಡಾಲರ್ ಮೌಲ್ಯ ₹84.77 ಆಗಿದೆ.

ಭಾರತವು ಉಗ್ರರ ಮೇಲೆ ನಡೆಸಿರುವ ದಾಳಿಯಿಂದಾಗಿ ಉಭಯ ದೇಶಗಳ ನಡುವೆ ಉದ್ವಿಗ್ನತೆ ತಲೆದೋರಿದೆ. ಇದರಿಂದ ರೂಪಾಯಿ ಮೌಲ್ಯ ಇಳಿಕೆ ಕಂಡಿದೆ ಎಂದು ಕರೆನ್ಸಿ ವಿನಿಮಯ ಪೇಟೆ ತಜ್ಞರು ತಿಳಿಸಿದ್ದಾರೆ.

ಆರಂಭಿಕ ವಹಿವಾಟಿನಲ್ಲಿ ₹84.65 ಇದ್ದ ರೂಪಾಯಿ ಮೌಲ್ಯವು 42 ಪೈಸೆ ಕುಸಿಯಿತು. ಮಂಗಳವಾರದ ವಹಿವಾಟಿನಲ್ಲೂ 5 ಪೈಸೆ ಇಳಿಕೆ ಕಂಡಿತ್ತು.

‘ಅಮೆರಿಕದ ಡಾಲರ್ ಮೌಲ್ಯ ಇಳಿಕೆ ಕಂಡಿದೆ. ದೇಶೀಯ ಹಾಗೂ ಜಾಗತಿಕ ಷೇರುಪೇಟೆಗಳು ಏರಿಕೆ ಕಂಡಿವೆ. ದೇಶದ ಷೇರುಪೇಟೆಗೆ ವಿದೇಶಿ ಬಂಡವಾಳದ ಒಳಹರಿವು ಹೆಚ್ಚಿದೆ. ಈ ಅಂಶಗಳು ರೂಪಾಯಿಗೆ ಬಲ ನೀಡುವ ನಿರೀಕ್ಷೆಯಿದೆ’ ಎಂದು ತಜ್ಞರು ಹೇಳಿದ್ದಾರೆ.

ಆದರೆ, ಭಾರತ ಮತ್ತು ಪಾಕಿಸ್ತಾನದ ನಡುವೆ ತಲೆದೋರಿರುವ ಬಿಕ್ಕಟ್ಟು ಹಾಗೂ ಕಚ್ಚಾ ತೈಲದ ಬೆಲೆ ಏರಿಕೆಯು ಅಲ್ಪ ಪ್ರಮಾಣದಲ್ಲಿ ರೂಪಾಯಿ ಮೇಲೆ ಪರಿಣಾಮ ಬೀರುವ ನಿರೀಕ್ಷೆಯಿದೆ ಎಂದು ತಿಳಿಸಿದ್ದಾರೆ.

ಇಸ್ರೇಲ್ ದಾಳಿ 92 ಸಾವು

ದೀರ್ ಅಲ್–ಬಲಾಹ್ (ಎಪಿ): ಗಾಜಾ ಮೇಲಿನ ತನ್ನ ದಾಳಿಯನ್ನು ಇನ್ನಷ್ಟು ತೀವ್ರಗೊಳಿಸಲು ಇಸ್ರೇಲ್ ನಿರ್ಧರಿಸಿದೆ. ಗಾಜಾದ ವಿವಿಧ ಭಾಗಗಳಲ್ಲಿ ಬುಧವಾರ ಇಸ್ರೇಲ್ ನಡೆಸಿದ ದಾಳಿಯಲ್ಲಿ ಮಹಿಳೆಯರು, ಮಕ್ಕಳು, ಇಬ್ಬರು ಪತ್ರಕರ್ತರು ಸೇರಿ ಒಟ್ಟು 92 ಮಂದಿ ಮೃತಪಟ್ಟಿದ್ದಾರೆ.

ಗಾಜಾದ ಮಧ್ಯ ಭಾಗದಲ್ಲಿ ನಡೆಸಿದ ದಾಳಿಯಲ್ಲಿ 33 ಮಂದಿ ಮೃತಪಟ್ಟು 89 ಮಂದಿ ಗಾಯಗೊಂಡಿದ್ದಾರೆ. ಸಾವಿನ ಸಂಖ್ಯೆ ಮತ್ತಷ್ಟು ಏರಿಕೆಯಾಗಲಿದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಅಂದಾಜಿಸಿದ್ದಾರೆ.

ಗಾಜಾ ನಗರದಲ್ಲಿನ ನಿರಾಶ್ರಿತ ಶಿಬಿರವೊಂದರ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಸುಮಾರು 16 ಮಂದಿ ಮೃತಪಟ್ಟಿದ್ದಾರೆ. ಮತ್ತೊಂದು ಪ್ರದೇಶದಲ್ಲಿ ನಡೆಸಿದ ದಾಳಿಯಲ್ಲಿಯೂ 16 ಮಂದಿ ಮೃತಪಟ್ಟಿದ್ದಾರೆ. ಜನಸಂದಣಿ ಇದ್ದ ಮಾರುಕಟ್ಟೆವೊಂದರ ಮೇಲೆಯೂ ಇಸ್ರೇಲ್ ಸೇನೆ ಬುಧವಾರ ದಾಳಿ ನಡೆಸಿದೆ.

ಕೊಂಡೋತ್ಸವ ಸಂಭ್ರಮ

ಮಂಡ್ಯ ತಾಲ್ಲೂಕಿನ ಆಲಕೆರೆಯಲ್ಲಿ 24 ವರ್ಷದ ಬಳಿಕ ನಡೆಯುತ್ತಿರುವ ವೀರಭದ್ರೇಶ್ವರಸ್ವಾಮಿ ಜಾತ್ರಾ ಮಹೋತ್ಸವದ ಅಂಗವಾಗಿ ಬುಧವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಕೊಂಡೋತ್ಸವ ವೈಭವದಿಂದ ನಡೆಯಿತು

ಉಗ್ರರ ನೆಲೆ ಸಿಂಧೂರಕ್ಕೆ ತರಗೆಲೆ

ಒಂದನೇ ಪುಟದಿಂದ...

ಉರಿ ಭಯೋತ್ಪಾದಕ ದಾಳಿಯ ನಂತರದ ‘ನಿರ್ದಿಷ್ಟ ದಾಳಿ’ ಮತ್ತು ಪುಲ್ವಾಮಾ ಹತ್ಯೆಯ ನಂತರದ ಬಾಲಾಕೋಟ್ ವಾಯುದಾಳಿಯು ಪಾಕ್ ಆಕ್ರಮಿತ ಪ್ರದೇಶಗಳಿಗೆ ‘ಸೀಮಿತ’ವಾಗಿದ್ದರೆ, ಈ ಬಾರಿ ಸಶಸ್ತ್ರ ಪಡೆಗಳು ಪಾಕಿಸ್ತಾನದಲ್ಲಿರುವ ಬಹಾವಲ್ಪುರ್ ಮತ್ತು ಮುರೀದ್ಕೆಯಂತಹ ಪ್ರಮುಖ ನೆಲೆಗಳ ಮೇಲೆ ದಾಳಿ ಮಾಡಿ ನೆರೆ ರಾಷ್ಟ್ರಕ್ಕೆ ಸ್ಪಷ್ಟ ಸಂದೇಶ ರವಾನಿಸಿವೆ. ಈ ದಾಳಿಯ ಬಳಿಕ, ಗಡಿಯಲ್ಲಿ ಉದ್ವಿಗ್ನತೆ ಮತ್ತಷ್ಟು ಹೆಚ್ಚಾಗಿದೆ.

ಭಾರತೀಯ ಸೇನೆ ಮತ್ತು ಭಾರತೀಯ ವಾಯುಪಡೆಯ ಘಟಕಗಳು ಎರಡು ಡಜನ್ ಕ್ಷಿಪಣಿಗಳು ಮತ್ತು ‘ಸ್ಮಾರ್ಟ್’ ಶಸ್ತ್ರಾಸ್ತ್ರ ಬಳಸಿ, ಗಡಿ ನಿಯಂತ್ರಣ ರೇಖೆಯಿಂದ 30 ಕಿ.ಮೀ. ಒಳಗಿರುವ ಭಯೋತ್ಪಾದಕ ಶಿಬಿರಗಳನ್ನು ನಾಶ ಮಾಡಿವೆ. ಅಂತರರಾಷ್ಟ್ರೀಯ ಗಡಿಯಿಂದ ಸುಮಾರು 100 ಕಿ.ಮೀ. ದೂರದಲ್ಲಿರುವ ಜೈಷ್–ಇ–ಮೊಹಮ್ಮದ್ ಸಂಘಟನೆಯ ಪ್ರಧಾನ ಕಚೇರಿಯನ್ನು ಹೊಡೆದುರುಳಿಸಿವೆ. ಭಾರತೀಯ ಸೇನೆಯು ಉಗ್ರರ ಏಳು ತಾಣಗಳನ್ನು ಧ್ವಂಸಗೊಳಿಸಿದೆ. ಬಹಾವಲ್ಪುರದಲ್ಲಿರುವ ಭಯೋತ್ಪಾದಕ ಶಿಬಿರ ಸೇರಿದಂತೆ ಉಳಿದ ಎರಡನ್ನು ಐಎಎಫ್ ತನ್ನ ದೀರ್ಘ ಗುರಿಯ ಶಸ್ತ್ರಾಸ್ತ್ರಗಳಿಂದ ಹೊಡೆದುರುಳಿಸಿತು ಎಂದು ಮೂಲಗಳು ತಿಳಿಸಿವೆ.

ಪಹಲ್ಗಾಮ್ ಹೇಯ ಕೃತ್ಯಕ್ಕೆ ಪ್ರತೀಕಾರ ತೀರಿಸಿಕೊಳ್ಳುವುದರ ಜತೆಗೆ, ಪಾಕಿಸ್ತಾನ ಮತ್ತು ಅದರ ನಿಯಂತ್ರಣದಲ್ಲಿರುವ ಪ್ರದೇಶಗಳಲ್ಲಿ ನೆಲೆಗೊಂಡಿರುವ ಭಯೋತ್ಪಾದಕ ಸಂಘಟನೆಗಳು ದೇಶದಲ್ಲಿ ಇನ್ನಷ್ಟು ಇಂತಹ ದಾಳಿಗಳನ್ನು ಯೋಜಿಸುವ ಸಾಧ್ಯತೆಯ ಬಗ್ಗೆ ಗುಪ್ತಚರ ವರದಿಗಳನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರ ‘ಸಿಂಧೂರ’ ಕಾರ್ಯಾಚರಣೆಯನ್ನು ನಡೆಸಿದೆ.

‘ನಿಖರ ಗುರಿಯೊಂದಿಗೆ ಭಯೋತ್ಪಾದಕ ಶಿಬಿರಗಳ ಮೇಲೆ ದಾಳಿ ನಡೆಸಲಾಗಿದೆ. ಅತ್ಯಾಧುನಿಕ ತಂತ್ರಜ್ಞಾನದ ಶಸ್ತ್ರಾಸ್ತ್ರ ಬಳಸಿಕೊಂಡು ನಾಗರಿಕರಿಗೆ ಯಾವುದೇ ಹಾನಿಯಾಗದಂತೆ ಕಾರ್ಯಾಚರಣೆ ಮುಗಿಸಲಾಗಿದೆ. ಒಂದು ನಿರ್ದಿಷ್ಟ ಕಟ್ಟಡ ಅಥವಾ ಕಟ್ಟಡಗಳ ಗುಂಪನ್ನು ಗುರಿಯಾಗಿಸಿಕೊಂಡೇ ದಾಳಿ ನಡೆಸಲಾಗಿದೆ’ ಎಂದು ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಮಾಧ್ಯಮ ಗೋಷ್ಠಿಯಲ್ಲಿ ಹೇಳಿದರು.

ಭಯೋತ್ಪಾದಕರ ದಾಳಿಯ ನಂತರ ಬಿಹಾರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, ‘ಅಮಾಯಕರ ಹತ್ಯೆ ಮಾಡಿರುವ ಉಗ್ರರನ್ನು ಹುಡುಕಿ, ಹುಡುಕಿ ಶಿಕ್ಷಿಸಲಾಗುವುದು. ಅವರ ಕಲ್ಪನೆಗೂ ಮೀರಿದಂತಹ ಶಿಕ್ಷೆ ನೀಡಲಾಗುವುದು’ ಎಂದು ಶಪಥ ಮಾಡಿದ್ದರು. ಸೇನೆಯ ಹಿರಿಯ ಅಧಿಕಾರಿಗಳ ಜತೆಗೆ ಕಳೆದ ವಾರ ಉನ್ನತ ಮಟ್ಟದ ಸಭೆ ನಡೆಸಿದ್ದ ಮೋದಿ ಅವರು, ಪಾಕಿಸ್ತಾನ ಪ್ರೇರಿತ ಉಗ್ರರ ದಮನಕ್ಕೆ ದಾಳಿಯ ಮಾದರಿ, ಗುರಿ ಹಾಗೂ ಸಮಯ ನಿರ್ಧರಿಸಲು ಸಶಸ್ತ್ರ ಪಡೆಗಳಿಗೆ ಕಾರ್ಯಾಚರಣೆಯ ಪೂರ್ಣ ಸ್ವಾತಂತ್ರ್ಯ ಇದೆ’ ಎಂದು ಹೇಳಿದ್ದರು. ಅದಾದ ಒಂದು ವಾರದಲ್ಲೇ ಸೇನೆಯು ಪಾಕ್‌ನಲ್ಲಿರುವ ಉಗ್ರರ ನೆಲೆಗಳ ಮೇಲೆ ಪ್ರತೀಕಾರದ ದಾಳಿ ನಡೆಸಿದೆ.

‘ಇಪ್ಪತ್ತೈದು ಮುಗ್ಧ ಭಾರತೀಯರನ್ನು ಮತ್ತು ಒಬ್ಬ ನೇಪಾಳಿ ಪ್ರಜೆಯನ್ನು ಬರ್ಬರವಾಗಿ ಕೊಂದ ಕಾರಣಕ್ಕೆ ಈ ದಾಳಿ ನಡೆಸಲಾಗಿದೆ’ ಎಂದ ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ, ‘ನಮ್ಮ ಈ ನಡೆ ನಿರ್ದಿಷ್ಟ, ವಿವೇಚನಾಭರಿತವಾಗಿದೆ ಮತ್ತು ಉದ್ವಿಗ್ನತೆ ಹೆಚ್ಚಿಸುವ ಉದ್ದೇಶ ಹೊಂದಿಲ್ಲ’ ಎಂದು ಸ್ಪಷ್ಟಪಡಿಸಿದರು. ‘ಭಾರತವು ಈ ದಾಳಿಗಳನ್ನು ಪಾಕಿಸ್ತಾನದ ಸೇನಾ ನೆಲೆಗಳ ಮೇಲೆ ಮಾಡಿಲ್ಲ. ದಾಳಿಯ ನೆಲೆಗಳ ಆಯ್ಕೆ ಮತ್ತು ವಿಧಾನದಲ್ಲಿ ಸಂಯಮ ವಹಿಸಲಾಗಿದೆ’ ಎಂದು ಅವರು ತಿಳಿಸಿದರು.

ಉಗ್ರರ ವಿರುದ್ಧ ಪಾಕಿಸ್ತಾನ ಯಾವುದೇ ಸ್ಪಷ್ಟ ಕ್ರಮ ಕೈಗೊಳ್ಳದ ಕಾರಣ ಏಪ್ರಿಲ್ 22ರ ದುಷ್ಕೃತ್ಯದ ಅಪರಾಧಿಗಳನ್ನು ಶಿಕ್ಷಿಸಲು ಹಾಗೂ ಸಂತ್ರಸ್ತ ಕುಟುಂಬಗಳಿಗೆ ನ್ಯಾಯ ಒದಗಿಸಲು ಸರ್ಕಾರವು ದಾಳಿ ನಡೆಸಲು ನಿರ್ಧರಿಸಿತು ಎಂದು ಅವರು ಹೇಳಿದರು.

ಪಹಲ್ಗಾಮ್ ಭಯೋತ್ಪಾದಕ ದಾಳಿಯ ಅಪರಾಧಿಗಳು, ಸಂಘಟಕರು, ಹಣಕಾಸು ಒದಗಿಸಿದವರು ಮತ್ತು ಪ್ರಾಯೋಜಕರನ್ನು ಹೊಣೆಗಾರರನ್ನಾಗಿ ಮಾಡುವ ಬಗ್ಗೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಹೇಳಿಕೆಗೆ ಅನುಗುಣವಾಗಿ ಭಾರತದ ಕ್ರಮಗಳು ಇವೆ ಎಂದು ಮಿಸ್ರಿ ಸ್ಪಷ್ಟಪಡಿಸಿದರು.

ಪ್ರಧಾನಿ ನರೇಂದ್ರ ಮೋದಿ ‘ಸಿಂಧೂರ’ ಕಾರ್ಯಾಚರಣೆಯನ್ನು ನಿಕಟವಾಗಿ ಮೇಲ್ವಿಚಾರಣೆ ಮಾಡಿದರು ಎಂದು ಸೇನೆಯ ಮೂಲಗಳು ತಿಳಿಸಿವೆ. ಕಾರ್ಯಾಚರಣೆಯ ನಂತರ, ಅವರು ಕೇಂದ್ರ ಸಚಿವ ಸಂಪುಟದ ಸಭೆ ನಡೆಸಿದರು ಮತ್ತು ಯಶಸ್ವಿ ದಾಳಿಗಳಿಗಾಗಿ ಭಾರತೀಯ ಸಶಸ್ತ್ರ ಪಡೆಗಳನ್ನು ಶ್ಲಾಘಿಸಿದರು.

ಮೋದಿ ಅಧ್ಯಕ್ಷತೆಯಲ್ಲಿ ನಡೆದ ಭದ್ರತೆ ಕುರಿತ ಸಚಿವ ಸಂಪುಟ ಸಮಿತಿ ಸಭೆಯು ಸಶಸ್ತ್ರ ಪಡೆಗಳ ಪ್ರತೀಕಾರದ ದಾಳಿಯ ನಂತರದ ಪರಿಸ್ಥಿತಿಯನ್ನು ಪರಿಶೀಲಿಸಿತು.

> ಪಾಕಿಸ್ತಾನವು ಉಗ್ರರಿಗೆ ಸುರಕ್ಷಿತ ಅಡಗುತಾಣವಾಗಿದೆ. ನಿಷೇಧಿತ ಅಂತರರಾಷ್ಟ್ರೀಯ ಭಯೋತ್ಪಾದಕರು ಈ ದೇಶದಲ್ಲಿ ಸುರಕ್ಷಿತರಾಗಿ ನೆಲೆಯೂರಿದ್ದಾರೆ. ಪಾಕಿಸ್ತಾನವು ಜಗತ್ತನ್ನು ಮತ್ತು ಅಂತರರಾಷ್ಟ್ರೀಯ ವೇದಿಕೆಗಳನ್ನು ಉದ್ದೇಶಪೂರ್ವಕವಾಗಿ ದಾರಿ ತಪ್ಪಿಸುವ ಕೆಲಸವನ್ನು ನಿರಂತರವಾಗಿ ಮಾಡಿದೆ. ಭಾರತದ ಮೇಲೆ ಇನ್ನಷ್ಟು ದಾಳಿಗಳನ್ನು ನಡೆಸಲು ಉಗ್ರರು ಯೋಜಿಸಿರುವ ಬಗ್ಗೆ ಗುಪ್ತಚರ ಇಲಾಖೆಗಳು ವರದಿ ನೀಡಿದ್ದವು. ಹೀಗಾಗಿ, ಉಗ್ರರನ್ನು ದಂಡಿಸಲಾಗಿದೆ.
>
> **ವಿಕ್ರಂ ಮಿಸ್ರಿ,** ವಿದೇಶಾಂಗ ಕಾರ್ಯದರ್ಶಿ

ವಿವರ ನೀಡುವಾಗ ವಿಭಿನ್ನ ಹೆಜ್ಜೆ

ಒಂದನೇ ಪುಟದಿಂದ...

ಸೋಫಿಯಾ ಅವರು ಕೋರ್ ಆಫ್ ಸಿಗ್ನಲ್‌ನ (ಮಿಲಿಟರಿ ಸಂವಹನ) ಮೊದಲ ಮಹಿಳಾ ಅಧಿಕಾರಿ. 2006ರಲ್ಲಿ ಕಾಂಗೊದಲ್ಲಿ ನಡೆದ ಭಾರತದ ಕಾರ್ಯಾಚರಣೆ ಸೇರಿದಂತೆ ಅಂತರರಾಷ್ಟ್ರೀಯ ಶಾಂತಿಪಾಲನಾ ಕಾರ್ಯಾಚರಣೆಯಲ್ಲಿ ಅವರು ದೀರ್ಘ ಅನುಭವ ಹೊಂದಿದ್ದಾರೆ.

ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಅವರು 2,500 ಗಂಟೆಗಳಿಗೂ ಹೆಚ್ಚು ಹಾರಾಟದ ಅನುಭವ ಹೊಂದಿರುವ ಭಾರತೀಯ ವಾಯುಪಡೆಯ ಹೆಲಿಕಾಪ್ಟರ್ ಪೈಲಟ್. ಅವರು ಪ್ರಮುಖ ರಕ್ಷಣಾ ಕಾರ್ಯಾಚರಣೆಗಳನ್ನು ಮುನ್ನಡೆಸಿದವರು. ಪ್ರಸ್ತುತ ದೆಹಲಿಯ ವಾಯುಪಡೆಯ ಪ್ರಧಾನ ಕಚೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಸಣ್ಣ ವಯಸ್ಸಿನಲ್ಲೇ ಸೇನೆ ಸೇರಬೇಕೆಂದು ಕನಸು ಕಂಡವರು ಅವರು. ವ್ಯೋಮಿಕಾ ಅವರ ಪತಿ ಕೂಡ ವಾಯುಪಡೆಯಲ್ಲಿ ಪೈಲಟ್ ಆಗಿದ್ದಾರೆ.

2020ರಲ್ಲಿ ಅವರು ಅರುಣಾಚಲ ಪ್ರದೇಶದಲ್ಲಿ ಪ್ರತಿಕೂಲ ಹವಾಮಾನ ಇದ್ದಾಗಲೂ ರಕ್ಷಣಾ ಕಾರ್ಯಾಚರಣೆಯನ್ನು ಮುನ್ನಡೆಸಿದ್ದರು.

ಪಾಕಿಸ್ತಾನದ ದಾಳಿಯಿಂದಾಗಿ ಪೂಂಛ್‌ನ ಮೆಂದರ್‌ನಲ್ಲಿ ಮನೆ ಹಾನಿಗೊಳಗಾಗಿದೆ

ಪಾಕ್ ಗುಂಡಿನ ದಾಳಿ: ಕಾಶ್ಮೀರದಲ್ಲಿ 15 ಸಾವು

ಒಂದನೇ ಪುಟದಿಂದ...

ಥಾಕಿ ಗ್ರಾಮದಲ್ಲಿ 150ಕ್ಕೂ ಅಧಿಕ ಗ್ರಾಮಸ್ಥರನ್ನು ಸ್ಥಳಾಂತರಿಸಲಾಗಿದೆ. ಪಾಕಿಸ್ತಾನದ ದಾಳಿಗೆ ಭಾರತೀಯ ಸೇನೆ ಕೂಡ ತಕ್ಕ ತಿರುಗೇಟು ನೀಡಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ. ಜತೆಗೆ ನಾಗರಿಕರನ್ನು ಗುರಿಯಾಗಿಸಿ ದಾಳಿ ನಡೆಸುವುದು ಶೂರತ್ವವಲ್ಲ, ಹೇಡಿ ಕೃತ್ಯ ಎಂದೂ ಪಾಕಿಸ್ತಾನಕ್ಕೆ ಚಾಟಿ ಬೀಸಿದ್ದಾರೆ.

ನಾಲ್ವರು ಸಿಖ್ಖರ ಸಾವು: ಪಾಕಿಸ್ತಾನಿ ಪಡೆಗಳು ನಡೆಸಿದ ದಾಳಿಯಲ್ಲಿ ಪೂಂಛ್ ಸೆಕ್ಟರ್‌ನಲ್ಲಿದ್ದ ಗುರುದ್ವಾರ ಸಾಹಿಬ್ ಕೂಡ ಹಾನಿಗೊಳಗಾಗಿದೆ. ಘಟನೆಯಲ್ಲಿ 4 ಮಂದಿ ಸಿಖ್ಖರು ಮೃತಪಟ್ಟಿದ್ದಾರೆ. ಮೃತರನ್ನು ಭಜ್ ಅಮ್ರಿಕ್ ಸಿಂಗ್, ಅಮರಜಿತ್ ಸಿಂಗ್, ರಂಜಿತ್ ಸಿಂಗ್, ರುಬಿ ಕೌರ್ ಎಂದು ಗುರುತಿಸಲಾಗಿದೆ. ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಈ ಘಟನೆಯನ್ನು ಖಂಡಿಸಿದ್ದಾರೆ.

ಯುದ್ಧಕ್ಕೆ ಸಮನಾದ ಕೃತ್ಯ: ಪಾಕ್

ಇಸ್ಲಾಮಾಬಾದ್(ಪಿಟಿಐ): ಭಾರತದ ಪಡೆಗಳು ನಡೆಸಿರುವ ‘ಅಪ್ರಚೋದಿತ ದಾಳಿ’ಯನ್ನು ‘ಯುದ್ಧಕ್ಕೆ ಸಮನಾದ ಕೃತ್ಯ’ ಎಂದು ಪಾಕಿಸ್ತಾನ ಬುಧವಾರ ಹೇಳಿದೆ.

ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ ಉಗ್ರರ ನೆಲೆಗಳನ್ನು ಗುರಿಯಾಗಿಸಿ ಭಾರತದ ಪಡೆಗಳು ದಾಳಿ ನಡೆಸಿದ ಬೆನ್ನಲ್ಲೇ ರಾಷ್ಟ್ರೀಯ ಭದ್ರತಾ ಪರಿಷತ್ತಿನ (ಎನ್‌ಎಸ್‌ಸಿ) ಸಭೆ ನಡೆಸಿದ ಪ್ರಧಾನಿ ಶೆಹಬಾಜ್ ಶರೀಫ್, ಈ ಮಾತು ಹೇಳಿದ್ದಾರೆ.

‘ಭಾರತ ನಡೆಸಿರುವ ಈ ಅಪ್ರಚೋದಿತ ಮತ್ತು ಕಾನೂನುಬಾಹಿರ ಕೃತ್ಯಕ್ಕೆ ತಕ್ಕ ಪ್ರತ್ಯುತ್ತರ ನೀಡಲಾಗುವುದು. ಪ್ರತೀಕಾರದ ಹಕ್ಕನ್ನು ಪಾಕಿಸ್ತಾನ ಹೊಂದಿದೆ. ಈ ಕುರಿತು ಕ್ರಮ ತೆಗೆದುಕೊಳ್ಳುವ ಸಂಪೂರ್ಣ ಅಧಿಕಾರವನ್ನು ಸೇನೆಗೆ ನೀಡಲಾಗಿದೆ’ ಎಂದು ತಿಳಿಸಿದ್ದಾರೆ.

‘ಪಾಕಿಸ್ಥಾನದ ಮುಗ್ಧ ಜನರನ್ನು ಹತ್ಯೆ ಮಾಡಿರುವ ಭಾರತದ ಪಡೆಗಳ ವಿರುದ್ಧ ಪ್ರತಿ ದಾಳಿ ನಡೆಸಲಾಗುವುದು. ಪ್ರತೀಕಾರವಾಗಿ ನಡೆಸುವ ದಾಳಿಯ ಸಮಯ, ಸ್ಥಳ ಹಾಗೂ ವಿಧಾನ ಕುರಿತು ನಿರ್ಣಯ ತೆಗೆದುಕೊಳ್ಳುವ ಅಧಿಕಾರವನ್ನು ಸೇನೆಗೆ ನೀಡಲಾಗಿದೆ’ ಎಂದು ಎನ್‌ಎಸ್‌ಸಿ ಪ್ರಕಟಣೆ ತಿಳಿಸಿದೆ.



ಶೆಹಬಾಜ್ ಶರೀಫ್

‘ಘೋರ ಅಪರಾಧ’: ‘ಭಾರತದ ಅಪ್ರಚೋದಿತ ಮತ್ತು ಕಾನೂನುಬಾಹಿರ ಯುದ್ಧ ಕೃತ್ಯದಿಂದ ಉದ್ಭವಿಸಿರುವ ಬೆಳವಣಿಗೆಗಳ ಕುರಿತು ಎನ್‌ಎಸ್‌ಸಿ ಸಭೆಯಲ್ಲಿ ಚರ್ಚಿಸಲಾಯಿತು. ಭಾರತದ ಸೇನೆಯು ಉದ್ದೇಶಪೂರ್ವಕವಾಗಿ ಮಕ್ಕಳು, ಮಹಿಳೆಯರು ಸೇರಿದಂತೆ ನಾಗರಿಕರನ್ನು ಗುರಿಯಾಗಿಸಿ ದಾಳಿ ನಡೆಸಿದೆ. ಇದು ಘೋರ ಮತ್ತು ನಾಚಿಕೆಗೇಡಿನಿಂದ ಕೂಡಿದ ಅಪರಾಧ. ಅಲ್ಲದೆ ಮಾನವೀಯ ಮತ್ತು ಅಂತರರಾಷ್ಟ್ರೀಯ ಕಾನೂನುಗಳಿಗೆ ವಿರುದ್ಧವಾದ ನಡೆಯಾಗಿದೆ’ ಎಂದು ಆರೋಪಿಸಿದೆ.

‘ಅಂತರರಾಷ್ಟ್ರೀಯ ಕಾನೂನುಗಳನ್ನು ಉಲ್ಲಂಘಿಸಿ ದಾಳಿ ನಡೆಸಿರುವ ಭಾರತದ ಮೇಲೆ ಈ ಕೃತ್ಯದ ಹೊಣೆಯನ್ನು ಹೊರಿಸಿ, ಅಂತರರಾಷ್ಟ್ರೀಯ ಸಮುದಾಯ ಕ್ರಮ ತೆಗೆದುಕೊಳ್ಳಬೇಕು ಎಂದು ಸಭೆಯಲ್ಲಿ ಒತ್ತಾಯಿಸಲಾಯಿತು’ ಎಂದ ಹೇಳಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಶ್ರೀಮತಿ ಜಲಜಾಕ್ಷಮ್ಮ
ಉಪಾಧ್ಯಕ್ಷರು, ಶ್ರೀ ಕೃಷ್ಣ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ಸ್
(9–2–1951 – 28–4–2025)
ವೈಕುಂಠ ಸಮಾರಾಧನೆ
ದಿನಾಂಕ: 08–05–2025, ಗುರುವಾರ ಬೆಳಿಗ್ಗೆ: 10.00 ಗಂಟೆಗೆ
ಭೋಜನ: ಮಧ್ಯಾಹ್ನ 12.00ಕ್ಕೆ
ಸ್ಥಳ: ನಂದಿ ಲಿಂಕ್ ಗ್ರೌಂಡ್ಸ್, ನೈಸ್ ರಸ್ತೆ ಪ್ರವೇಶ ದ್ವಾರದ ಪಕ್ಕದಲ್ಲಿ, ಪಂಟರಪಾಳ್ಯ, ನಾಯಂಡಹಳ್ಳಿ, ಬೆಂಗಳೂರು–560 039.
ಡಾ. ಎಂ. ರುಕ್ಮಾಂಗದ ನಾಯ್ಡು
ಸಂಸ್ಥಾಪಕ ಅಧ್ಯಕ್ಷರು, ಶ್ರೀ ಕೃಷ್ಣ ಸಮೂಹ ವಿದ್ಯಾಸಂಸ್ಥೆಗಳು
ಕುಮಾರಿ ಎಂ.ಆರ್. ಮೇಘನ, ಮಗಳು
ಹಾಗೂ ಬಂಧು ಮಿತ್ರರು
ಮೊ.: +91 94480 87783

ಎರಡನೇ ವರ್ಷದ ಸವಿನೆನಪು

ಪಾಳ್ಯದ ವೈ. ಶ್ರೀರಾಮರೆಡ್ಡಿ
ಕೋರಮಂಗಲ
ನೀವು ನಮ್ಮನ್ನು ಅಗಲಿ ಎರಡು ವರ್ಷ ಕಳೆದರೂ ನಿಮ್ಮ ಸವಿನೆನಪು ನಮ್ಮಲ್ಲಿ ಚಿರಸ್ಮರಣೀಯವಾಗಿ ಉಳಿದಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲೆಂದು ಭಗವಂತನಲ್ಲಿ ಸದಾ ಪ್ರಾರ್ಥಿಸುವ
ಶ್ರೀಮತಿ ಮಂಜುಳ, ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ
General
ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI,Degree. ಸಂಬಳ 16,000 - 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381
Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ವ್ಯಾಪಾರ
Business to Business
Services
VOLTY IOT Solutions is conducting a VLTD sales and service campaign in karnataka. For more details contact 7997247247
ರಿಯಲ್ ಎಸ್ಟೇಟ್ ಸೆಲ್ಲಿಂಗ್
Commerical
Hassan
ಕಮರ್ಷಿಯಲ್ ನಾರ್ತ್ ಈಸ್ಟ್ ಕಾರ್ನರ್ KHB ಸೈಟ್ ಮಾರಾಟಕ್ಕೆ ಇದೆ, ಹೊಸ ಬಸ್ ನಿಲ್ದಾಣದ ಎದುರು ಹಾಸನ ಸಂಪರ್ಕಿಸಿ 6361444146

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9886213331
+91 9845114560 | +91 9900428036
*Conditions apply



ಸೋನು ನಿಗಮ್ ಹಾಡಿಗೆ ಕತ್ತರಿ

ರಾಮ್ ನಾರಾಯಣ್ ನಿರ್ದೇಶನದ 'ಕುಲದಲ್ಲಿ ಕೀಳ್ಯಾವುದೋ' ಸಿನಿಮಾದಿಂದ ಸೋನು ನಿಗಮ್ ಹಾಡಿದ್ದ 'ಮನಸು ಹಾಡದೆ ಮಾಯನು ಕಾಡಿದ್ದ..' ಎಂಬ ಹಾಡನ್ನು ಚಿತ್ರತಂಡ ತೆಗೆದುಹಾಕಿದೆ. ಅವರ ಬದಲಾಗಿ ಕನ್ನಡದ ಗಾಯಕ ಚೇತನ್ ಹಾಡಿಗೆ ಧ್ವನಿಯಾಗಿದ್ದಾರೆ. ಮೇ 23ರಂದು ಚಿತ್ರ ಬಿಡುಗಡೆಯಾಗಲಿದೆ.

'ಪಬ್ಬಾರ್' ಕಣಿವೆಯಲ್ಲಿ ಧೀರೇನ್

ಧೀರೇನ್

ನಿರ್ಮಾಪಕಿ ಗೀತಾ ಶಿವರಾಜ್‌ಕುಮಾರ್ ತಮ್ಮ ಗೀತಾ ಪಿಕ್ಚರ್ಸ್‌ನಡಿ ಸಾಲು ಸಾಲು ಸಿನಿಮಾಗಳ ನಿರ್ಮಾಣಕ್ಕೆ ಸಜ್ಜಾಗಿದ್ದಾರೆ. ಕಳೆದೊಂದು ವಾರದಲ್ಲಿ ಅವರ ಎರಡು ಸಿನಿಮಾಗಳ ಮುಹೂರ್ತ ನಡೆದಿದೆ.

ಶಿವರಾಜ್‌ಕುಮಾರ್ ನಟನೆಯ, ಶ್ರೀನಿ ನಿರ್ದೇಶನದ 'ಎ ಫಾರ್ ಆನಂದ್' ಸಿನಿಮಾದ ಮುಹೂರ್ತದ ಬೆನ್ನಲ್ಲೇ 'ಶಾಖಾಹಾರಿ' ಖ್ಯಾತಿಯ ಸಂದೀಪ್ ಸುಂಕದ್ ನಿರ್ದೇಶನದ, ಧೀರೇನ್ ನಟನೆಯ 'ಪಬ್ಬಾರ್' ಸಿನಿಮಾದ ಮುಹೂರ್ತ ಬುಧವಾರ (ಮೇ 7) ನಡೆಯಿತು. ಇದು ಗೀತಾ ಪಿಕ್ಚರ್ಸ್‌ನ ನಾಲ್ಕನೇ ಸಿನಿಮಾವಾಗಿದೆ.

ಕಳೆದ ಡಿ.6ರಂದು ಈ ಸಿನಿಮಾ ಘೋಷಣೆಯಾಗಿತ್ತು. ಪೂರ್ಣಿಮಾ ರಾಜ್‌ಕುಮಾರ್ ಪುತ್ರನಾದ ಧೀರೇನ್ 'ಶಿವ 143' ಬಳಿಕ ಕೈಗೆತ್ತಿಕೊಂಡಿರುವ ಪ್ರಾಜೆಕ್ಟ್ ಇದಾಗಿದೆ. ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್‌ನಲ್ಲಿರುವ ಶ್ರೀ ಪ್ರಸನ್ನ ವೀರಾಂಜನೇಯ ದೇವಸ್ಥಾನದಲ್ಲಿ ನಡೆದ ಮುಹೂರ್ತ ಕಾರ್ಯಕ್ರಮದಲ್ಲಿ ನಟ ಶಿವರಾಜ್‌ಕುಮಾರ್, ನೆನಪಿರಲಿ ಪ್ರೇಮ್, ಶ್ರೀನಗರ ಕಿಟ್ಟಿ ಮುಂತಾದ ಚಿತ್ರರಂಗದ ಗಣ್ಯರು ಭಾಗವಹಿಸಿದ್ದರು.

ಸಂದೀಪ್ ಸುಂಕದ್

'ರಿಸ್ಕ್ ಅನ್ನು ರಸ್ಕ್ ರೀತಿ ತಿನ್ನಬೇಕು': ಮುಹೂರ್ತದ ಬಳಿಕ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಿವರಾಜ್‌ಕುಮಾರ್, 'ಒಳ್ಳೆಯ ಸಿನಿಮಾ ಮಾಡುವತ್ತ ಸದಾ ನಮ್ಮ ಪ್ರಯತ್ನವಿರಬೇಕು. ಈ ದೃಷ್ಟಿಯಿಂದಲೇ ಈ ಸಿನಿಮಾ ಕೈಗೆತ್ತಿಕೊಂಡೆವು. ಎಲ್ಲರೂ ಹೊಸ ಆಲೋಚನೆ, ಸಿನಿಮಾ ನಿರ್ಮಾಣ ರಿಸ್ಕ್ (ಅಪಾಯ) ಎನ್ನುತ್ತಿದ್ದಾರೆ. ಈ ರಿಸ್ಕ್ ಅನ್ನು ರಸ್ಕ್ ಥರ ತಿನ್ನಬೇಕು ಅಷ್ಟೇ. ಬೇರೆ ಭಾಷೆಗಳ ಜೊತೆ ಸ್ಪರ್ಧೆ ಮಾಡಬೇಕು ಎಂದರೆ ಹೊಸ ರೀತಿಯ ಸಿನಿಮಾಗಳು ಬರಬೇಕು. ಪ್ರಯತ್ನ ಪಡದೇ ಇದ್ದರೆ ಇದು ಸಾಧ್ಯವಿಲ್ಲ. ನಾನು ಚಿತ್ರರಂಗಕ್ಕೆ ಬಂದು 39 ವರ್ಷಗಳು ಉರುಳಿದವು. ಇನ್ನೆಷ್ಟು ವರ್ಷ ಸಿನಿಮಾ ಮಾಡುತ್ತೇನೋ ತಿಳಿದಿಲ್ಲ. ಹೊಸ ಪೀಳಿಗೆ ಬರಬೇಕು' ಎಂದರು.

'ನಾವೇ ಭಿನ್ನವಾದ ಸಿನಿಮಾ ಮಾಡಲು ಆಸೆ ಪಡುತ್ತೇವೆ. ಸಂದೀಪ್ ಅವರು ಈ ಕಥೆ ಹೇಳಿದಾಗ ಖುಷಿಯಾಯಿತು. ಎಲ್ಲಾ ರೀತಿಯ ಭಾವನೆಗಳು ಈ ಸಿನಿಮಾದಲ್ಲಿವೆ. ಇದೊಂದು ಒಳ್ಳೆಯ ಸಿನಿಮಾ ಆಗಲಿದೆ ಎನ್ನುವ ನಂಬಿಕೆ ಹುಟ್ಟಿದ ಕಾರಣ ನಾವೇ ಈ ಸಿನಿಮಾ ಮಾಡಲು ನಿರ್ಧರಿಸಿದೆವು. ಅಮ್ಮನ ಜನ್ಮದಿನದಂದು ನಾವು ಈ ಸಿನಿಮಾ ಘೋಷಿಸಿದ್ದೆವು. ಮೇ 15ರಿಂದ ಸಿನಿಮಾದ ಚಿತ್ರೀಕರಣ ಆರಂಭವಾಗಲಿದೆ. ಶಿಮ್ಲಾದಲ್ಲಿ ಶೂಟಿಂಗ್‌ಗೆ ಯಾವುದೇ ಸಮಸ್ಯೆಯಾಗುವುದಿಲ್ಲ ಎಂದುಕೊಂಡಿದ್ದೇವೆ' ಎಂದರು.

ಧೀರೇನ್ ಇಲ್ಲಿ ಪೊಲೀಸ್ ಅಧಿಕಾರಿ: 'ದೊಡ್ಡ ಜವಾಬ್ದಾರಿ ನನ್ನ ಮೇಲಿದೆ. ಇದೊಂದು ಗಟ್ಟಿ ಕಥೆ. ದೊಡ್ಡ ಪ್ರೊಡಕ್ಷನ್ ಹೌಸ್ ದೊರಕಿರುವುದು ಕನಸು ನನಸಾದಂತೆ. ಚಿತ್ರವು ಸೈನ್ಯಾಧಿಕಾರಿಗೆ ಸಂಬಂಧಿಸಿದ್ದಲ್ಲ. ಚಿತ್ರದ ನಾಯಕ ಒಬ್ಬ ಪೊಲೀಸ್ ಅಧಿಕಾರಿ. ಇದೊಂದು ಅಡ್ವೆಂಚರಸ್ ಕ್ರೈಂ ಥ್ರಿಲ್ಲರ್. ಪೂರ್ಣ ಕಾಲ್ಪನಿಕ ಚಿತ್ರವಿದು. ಚಿತ್ರದಲ್ಲಿ ನಾಯಕನ ಎರಡು ಪಯಣಗಳು ಇವೆ. ಒಂದು ಪ್ರಕರಣಕ್ಕೆ ಸಂಬಂಧಿಸಿದ್ದು, ಇನ್ನೊಂದು ಆತನ ವೈಯಕ್ತಿಕ ಪಯಣ. 'ಪಬ್ಬಾರ್' ಎನ್ನುವ ಜಾಗವೂ ಚಿತ್ರದ ಮುಖ್ಯ ಪಾತ್ರಗಳಲ್ಲಿ ಒಂದು' ಎಂದು ಚಿತ್ರದ ಬಗ್ಗೆ ವಿವರಣೆ ನೀಡಿದರು ಸಂದೀಪ್ ಸುಂಕದ್.

ಅಮೃತಾ ಪ್ರೇಮ್ ಚಿತ್ರದಲ್ಲಿ ನಾಯಕಿಯಾಗಿ ನಟಿಸುತ್ತಿದ್ದು, ಆಯುರ್ವೇದ ಟೀಚರ್ ಆಗಿ ಕಾಣಿಸಿಕೊಳ್ಳುತ್ತಿದ್ದಾರೆ. ವಿಶ್ವಜಿತ್ ರಾವ್ ಛಾಯಾಚಿತ್ರಗ್ರಹಣ, ಮಯೂರ್ ಅಂಬೆಕಲ್ಲು ಸಂಗೀತ ಚಿತ್ರಕ್ಕಿದೆ. ❖

> "ಧೀರೇನ್ ಮೂಲಕವೇ ಈ ಸಿನಿಮಾ ಕಥೆ ನಮಗೆ ಬಂದಿತ್ತು. ಸಿನಿಮಾಗಾಗಿ ಧೀರೇನ್ ಐದಾರು ತಿಂಗಳಿಂದ ಬಹಳ ಕಷ್ಟಪಟ್ಟಿದ್ದಾನೆ. ಚಿತ್ರಕ್ಕಾಗಿ 10 ಕೆ.ಜಿ. ತೂಕ ಇಳಿಸಿಕೊಂಡಿದ್ದಾನೆ. ಮೈಸೂರು, ಬೆಂಗಳೂರು, ಕೊಡಗು ಜಿಲ್ಲೆ ಮತ್ತು ಹಿಮಾಚಲ ಪ್ರದೇಶದಲ್ಲಿ ಚಿತ್ರದ ಚಿತ್ರೀಕರಣ ನಡೆಯಲಿದೆ."
>
> **ಗೀತಾ ಶಿವರಾಜ್‌ಕುಮಾರ್**, ನಿರ್ಮಾಪಕಿ.

ಅಮೃತಾ ಪ್ರೇಮ್

ಹೊಸಬರ ಆರ್‌ಪಿ

ಶ್ರೀನಿಧಿ

ಬಹುತೇಕ ಹೊಸಬರಿಂದಲೇ ಕೂಡಿರುವ 'ಆರ್‌ಪಿ' ಚಿತ್ರದ ಮೋಷನ್ ಪೋಸ್ಟರ್ ಮತ್ತು ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ಕಬ್ಬಾಳಮ್ಮ ಕ್ರಿಯೇಶನ್ಸ್ ಅಡಿಯಲ್ಲಿ ಯುವರಾಜ್.ಎಸ್ ಸಿನಿಮಾವನ್ನು ನಿರ್ಮಿಸಿ, ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. 'ಬ್ಲಾಕ್ ಅಂಡ್ ವೈಟ್' ಎಂಬ ಅಡಿಬರಹ ಈ ಚಿತ್ರಕ್ಕಿದೆ.

'ಗೆಳೆಯರೊಬ್ಬರ ಜೀವನದಲ್ಲಿ ನಡೆದ, ನಡೆಯುತ್ತಿರುವ ಒಂದಷ್ಟು ಘಟನೆಗಳಿಂದ ಚಿತ್ರಕಥೆ ಸಿದ್ಧಪಡಿಸಲಾಗಿದೆ. ಅದಕ್ಕಾಗಿ ಆರ್‌ಪಿ ಎಂಬುದಾಗಿ ಶೀರ್ಷಿಕೆ ಇಡಲಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಪ್ರಕೃತಿ ನಾಶವಾಗುತ್ತಿದ್ದರೂ ಅದನ್ನು ನಾವು ಮರೆಯುತ್ತಿದ್ದೇವೆ. ಆ ಬಗ್ಗೆ ಅರಿವು ಮೂಡಿಸುವ ಚಿತ್ರವಿದು' ಎಂದರು ನಿರ್ದೇಶಕರು.

ನಾಯಕ ರಾಘವೇಂದ್ರ ಪ್ರಸಾದ್‌ಗೆ ಶ್ರೀನಿಧಿ ಜೋಡಿಯಾಗಿದ್ದಾರೆ. ಲಯ ಕೋಕಿಲ, ಬಾಲನಟರಾದ ನಿಖಿಲ್.ಆರ್. ಮತ್ತು ದಕ್ಷಿತ್ ಗೌಡ ತಾರಾಗಣದಲ್ಲಿದ್ದಾರೆ. ಆದಿಚುಂಚನಗಿರಿ ಸುತ್ತಮುತ್ತ ಚಿತ್ರೀಕರಣ ನಡೆಸಲು ತಂಡ ಯೋಜನೆ ರೂಪಿಸಿಕೊಂಡಿದೆ. ನಾಗಶೆಟ್ಟಿ ಮಾಳಗಿ ಛಾಯಾಚಿತ್ರಗ್ರಹಣ, ಮುತ್ತುರಾಜ್ ಸಂಕಲನ ಚಿತ್ರಕ್ಕಿದೆ. ❖

ರಾಜರತ್ನಾಕರ ತೆರೆಗೆ ಬರಲು ಸಿದ್ಧ

ಚಂದನ್ ರಾಜ್

ನಮ್ಮ ಸುತ್ತಮುತ್ತಲಿನ ವಿಚಿತ್ರ ಪಾತ್ರಗಳ ಕುರಿತಾದ ಕಥೆಯನ್ನು ಹೊಂದಿರುವ 'ರಾಜರತ್ನಾಕರ' ತೆರೆಗೆ ಬರಲು ಸಿದ್ಧವಾಗಿದೆ. ವೀರೇಶ್ ಬೊಮ್ಮಸಾಗರ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಚೌಮುದ ಬ್ಯಾನರ್ ಅಡಿ ಜಯರಾಮ ಸಿ. ಮಾಲೂರು ಬಂಡವಾಳ ಹೂಡಿದ್ದಾರೆ.

'ಬೆಂಗಳೂರಿನ ಮಧ್ಯಮ ವರ್ಗದವರ ಕಥೆಯನ್ನು ಹೊಂದಿದೆ. ದುರಹಂಕಾರಿಯೊಬ್ಬನ ಕಥೆ. ಸೋಮಾರಿತನದಿಂದ ಬಂದಂಥ ದುರಹಂಕಾರ. ಆತ ಮುಂದೆ ಹೇಗೆ ಜೀವನ ಕಟ್ಟಿಕೊಳ್ಳುತ್ತಾನೆ ಎಂಬುದೇ ಚಿತ್ರದ ಕಥೆ. ಆತನ ಸುತ್ತ ಹಲವು ವಿಚಿತ್ರ ಪಾತ್ರಗಳು ಬರುತ್ತವೆ' ಎಂದರು ನಿರ್ದೇಶಕರು.

ಚಂದನ್ ರಾಜ್‌ಗೆ ಅಪ್ಸರಾ ಜೋಡಿಯಾಗಿದ್ದಾರೆ. ನಾಗರಾಜ್ ರಾವ್, ಯಮುನಾ ಶ್ರೀನಿಧಿ, ಚೇತನ್ ದುರ್ಗಾ, ಸಿದ್ದು, ಡಿಂಗ್ರಿ ನರೇಶ್ ಮುಖ್ಯ ಪಾತ್ರದಲ್ಲಿದ್ದಾರೆ.

ಹರ್ಷವರ್ಧನ್ ರಾಜ್ ಸಂಗೀತ, ಸಿದ್ದು ಕೆಂಚನಹಳ್ಳಿ ಛಾಯಾಚಿತ್ರಗ್ರಹಣ, ಶಾಂತಕುಮಾರ್ ಸಂಕಲನವಿದೆ. ❖

ಹೊರಬಂತು ಸೀಸ್ ಕಡ್ಡಿ ಹಾಡು

ಪೆನ್ಸಿಲ್ ಅನ್ನು ರೂಪಕವಾಗಿಟ್ಟುಕೊಂಡು ಸಿದ್ಧವಾಗಿರುವ 'ಸೀಸ್ ಕಡ್ಡಿ' ಚಿತ್ರದ 'ಬೇಧವು ಎಲ್ಲಿದೆ ಬೀಳುವ ಮಳೆಗೆ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ರತನ್ ಗಂಗಾಧರ್ ನಿರ್ದೇಶನದ ಚಿತ್ರ ಬಿಡುಗಡೆಗೆ ಸಿದ್ಧವಿದೆ.

'ಹೈಪರ್ ಲಿಂಕ್ ಆಂಥಾಲಜಿ ಶೈಲಿಯ ಈ ಚಿತ್ರಕ್ಕೆ ಸೆನ್ಸಾರ್ ಮಂಡಳಿಯಿಂದ 'ಯು' ಸರ್ಟಿಫಿಕೆಟ್ ಸಿಕ್ಕಿದೆ. ಒಂದೊಳ್ಳೆ ಕುಟುಂಬದಲ್ಲಿ ಹುಟ್ಟಿ, ಎಲ್ಲ ಜಂಜಾಟಗಳಿಂದ ತಪ್ಪಿಸಿಕೊಳ್ಳಲು ಲೋಕ ಸಂಚಾರಕ್ಕೆ ಹೊರಟಾತ ಈ ಕಥೆಯ ಕೇಂದ್ರ ಬಿಂದು' ಎಂದಿದ್ದಾರೆ ರತನ್.

ಈ ಹಾಡಿಗೆ ಮಹೇಂದ್ರ ಗೌಡ ಸಾಹಿತ್ಯ ಬರೆದಿದ್ದು, ಕೆ. ಸಿ. ಬಾಲ ಸಾರಂಗನ್ ಸಂಗೀತವಿದೆ. ಸಂಪತ್ ಶಿವಶಂಕರ್, ಕೃತಿ ನಾಣಯ್ಯ ಜೊತೆಗೆ ನಿರ್ದೇಶಕರು ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ❖

ಸಂಕ್ಷಿಪ್ತ ಸುದ್ದಿ

'2027ರಲ್ಲಿ ಮೊದಲ ಮಾನವಸಹಿತ ಬಾಹ್ಯಾಕಾಶ ಯಾನ'

ನವದೆಹಲಿ (ಪಿಟಿಐ): ಭಾರತದ ಚೊಚ್ಚಲ ಮಾನವಸಹಿತ ಬಾಹ್ಯಾಕಾಶ ಗಗನಯಾನವನ್ನು 2027ರ ಆರಂಭದಲ್ಲಿ ಮಾಡುವ ನಿರೀಕ್ಷೆಯಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ತಿಳಿಸಿದರು.

ಮೋದಿ

'2035ರ ವೇಳೆಗೆ ಭಾರತದಲ್ಲಿ ಬಾಹ್ಯಾಕಾಶ ನಿಲ್ದಾಣ ಸ್ಥಾಪಿಸುವ ಮತ್ತು 2040ರ ವೇಳೆಗೆ ಚಂದ್ರನ ಬಳಿ ಗಗನಯಾತ್ರಿಗಳನ್ನು ಕಳುಹಿಸುವ ಯೋಜನೆಗಳನ್ನು ಪಟ್ಟಿ ಮಾಡಲಾಗಿದೆ' ಎಂದು ಜಾಗತಿಕ ಬಾಹ್ಯಾಕಾಶ ಅನ್ವೇಷಣೆ ಸಮ್ಮೇಳನಕ್ಕೆ ನೀಡಿದ ಧ್ವನಿಮುದ್ರಿತ ಸಂದೇಶದಲ್ಲಿ ತಿಳಿಸಿದ್ದಾರೆ.

'ಭಾರತದ ಬಾಹ್ಯಾಕಾಶ ಪ್ರಯಾಣವು ಇತರರೊಂದಿಗೆ ಸ್ಪರ್ಧಿಸುವುದಲ್ಲ. ಬದಲಿಗೆ, ಒಟ್ಟಾಗಿ ಎತ್ತರಕ್ಕೆ ತಲುಪುವುದು. ಭಾರತ ಶೀಘ್ರದಲ್ಲೇ ಜಿ 20 ಉಪಗ್ರಹವನ್ನು ಉಡಾವಣೆ ಮಾಡಲಿದೆ' ಎಂದಿದ್ದಾರೆ.

ಮೋದಿ ಯುರೋಪ್ ಪ್ರವಾಸ ರದ್ದು

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಯುರೋಪ್‌ನ ಮೂರು ದೇಶಗಳ ಪ್ರವಾಸವನ್ನು ರದ್ದು ಮಾಡಲಾಗಿದೆ ಎಂದು ಅಧಿಕೃತ ಮೂಲಗಳು ಬುಧವಾರ ತಿಳಿಸಿವೆ.

ಮೋದಿ ಅವರು ಮೇ 13ರಿಂದ 17ರವರೆಗೆ ನಾರ್ವೆ, ನೆದರ್ಲೆಂಡ್ಸ್, ಕ್ರೊವೇಷಿಯಾಕ್ಕೆ ಭೇಟಿ ನೀಡಬೇಕಿತ್ತು. ಭಾರತ–ಪಾಕಿಸ್ತಾನ ಮಧ್ಯೆ ಉದ್ವಿಗ್ನ ವಾತಾವರಣ ನಿರ್ಮಾಣವಾಗಿರುವ ಕಾರಣ ಪ್ರವಾಸ ರದ್ದಾಗಿದೆ ಎಂದು ಹೇಳಿವೆ.

ಈ ದೇಶಗಳಿಗೆ ಪ್ರವಾಸ ರದ್ದಾಗಿರುವ ಮಾಹಿತಿ ನೀಡಲಾಗಿದೆ ಎಂದು ತಿಳಿಸಿವೆ.

ವಿಷಯ ಅಂತಿಮಕ್ಕೆ ಸೂಚನೆ

ನವದೆಹಲಿ (ಪಿಟಿಐ): ಆರೋಪಿಯನ್ನು ಬಂಧಿಸಿ, ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಜಾರಿ ನಿರ್ದೇಶನಾಲಯ ಹೊಂದಿರುವ ಅಧಿಕಾರವನ್ನು ಎತ್ತಿಹಿಡಿದಿರುವ ತೀರ್ಪನ್ನು ಪ್ರಶ್ನಿಸಿರುವ ಅರ್ಜಿಯ ಮೂಲಕ ತೀರ್ಮಾನ ಆಗಬೇಕಿರುವ ವಿಷಯಗಳು ಯಾವುವು ಎಂಬುದನ್ನು ಅಂತಿಮಗೊಳಿಸುವಂತೆ ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್, ಉಜ್ವಲ್ ಭುಯಾನ್ ಮತ್ತು ಎನ್. ಕೋಟೀಶ್ವರ ಸಿಂಗ್ ಅವರು ಇರುವ ತ್ರಿಸದಸ್ಯ ಪೀಠವು ಕೇಂದ್ರಕ್ಕೆ ಸೂಚನೆ ನೀಡಿದೆ. ವಿಚಾರಣೆಯನ್ನು ಆಗಸ್ಟ್ 6ಕ್ಕೆ ಮುಂದೂಡಿದೆ.

5 ಐಐಟಿಗಳ ವಿಸ್ತರಣೆಗೆ ಅಸ್ತು

ಸುಧಾರಣೆ ಕಾಣಲಿದೆ ಧಾರವಾಡ ಐಐಟಿ: ಸಚಿವ ಪ್ರಲ್ಹಾದ ಜೋಶಿ ಮಾಹಿತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಧಾರವಾಡ ಐಐಟಿ ಸೇರಿದಂತೆ ದೇಶದ ಐದು ಐಐಟಿಗಳಲ್ಲಿ ₹11,828.79 ಕೋಟಿ ವೆಚ್ಚದಲ್ಲಿ ಶೈಕ್ಷಣಿಕ ಮತ್ತು ಮೂಲಸೌಕರ್ಯ ಸಾಮರ್ಥ್ಯ ವಿಸ್ತರಣೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಸಚಿವ ಸಂಪುಟ ಸಭೆಯು ಯೋಜನೆಗೆ ಅನುಮೋದನೆ ನೀಡಿತು ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.

ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ

- ₹11,828.79 ಕೋಟಿ ವೆಚ್ಚದಲ್ಲಿ ಶೈಕ್ಷಣಿಕ, ಮೂಲಸೌಲಭ್ಯ ಅಭಿವೃದ್ಧಿ
- ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯ ಸಚಿವ ಸಂಪುಟದಲ್ಲಿ ಅನುಮೋದನೆ
- ಈ ಐಐಟಿಗಳಲ್ಲಿನ್ನು 6500ಕ್ಕೂ ಹೆಚ್ಚು ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳ ನಿರೀಕ್ಷೆ

ಧಾರವಾಡ ಹಾಗೂ ಆಂಧ್ರಪ್ರದೇಶದ ತಿರುಪತಿ, ಛತ್ತೀಸಗಢದ ಭಿಲಾಯಿ, ಜಮ್ಮು ಮತ್ತು ಕೇರಳದ ಪಾಲಕ್ಕಾಡ್‌ನಲ್ಲಿ ಸ್ಥಾಪಿಸಲಾಗಿರುವ ಐಐಟಿಗಳ ಸಾಮರ್ಥ್ಯ ವಿಸ್ತರಣೆಗೆ ಅನುಮೋದನೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಈ ಐದು ಐಐಟಿಗಳಲ್ಲಿ 6,500ಕ್ಕೂ ಹೆಚ್ಚು ವಿದ್ಯಾರ್ಥಿಗಳ ಅಧ್ಯಯನಕ್ಕೆ ಅನುಕೂಲವಾಗುವಂತೆ ಸೌಲಭ್ಯಗಳ ವಿಸ್ತರಣೆಗೆ ಕ್ರಮ ಕೈಗೊಳ್ಳಲಾಗುತ್ತದೆ. ಕೈಗಾರಿಕೆ-ಶೈಕ್ಷಣಿಕ ಸಂಪರ್ಕವನ್ನು ಬಲಪಡಿಸಲು ಐದು ಹೊಸ ಅತ್ಯಾಧುನಿಕ ಸಂಶೋಧನಾ ಪಾರ್ಕ್‌ಗಳು ಸಹ ಈ ಯೋಜನೆಯಲ್ಲಿ ಬರಲಿವೆ ಎಂದು ತಿಳಿಸಿದರು.

130 ಅಧ್ಯಾಪಕರ ಹುದ್ದೆ ಸೃಷ್ಟಿ: 2025-26ರಿಂದ 2028-29ರವರೆಗಿನ ನಾಲ್ಕು ವರ್ಷಗಳ ಅವಧಿಯಲ್ಲಿ ಒಟ್ಟು ₹11,828.79 ಕೋಟಿ ವೆಚ್ಚದಲ್ಲಿ ಈ ಐಐಟಿಗಳಲ್ಲಿ ಅಭಿವೃದ್ಧಿ ಯೋಜನೆ ಕೈಗೊಳ್ಳಲಾಗುತ್ತಿದೆ. ಜೊತೆಗೆ 130 ಅಧ್ಯಾಪಕರ ಹುದ್ದೆಗಳನ್ನು (ಪ್ರೊಫೆಸರ್ ಮಟ್ಟದಲ್ಲಿ ಅಂದರೆ ಹಂತ 14 ಮತ್ತು ಅದಕ್ಕಿಂತ ಹೆಚ್ಚಿನ) ಸೃಷ್ಟಿಸಲು ಸಂಪುಟ ಅನುಮೋದಿಸಿದೆ ಎಂದು ತಿಳಿಸಿದರು.

ಕೌಶಲ ಕೇಂದ್ರ: ಕೌಶಲಕ್ಕಾಗಿ ಐದು ರಾಷ್ಟ್ರೀಯ ಉತ್ಕೃಷ್ಟತಾ ಕೇಂದ್ರಗಳ ಸ್ಥಾಪನೆ ಜೊತೆಗೆ ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ) ಸುಧಾರಣೆ ಕುರಿತ ರಾಷ್ಟ್ರೀಯ ಯೋಜನೆಗೆ ಸಂಪುಟ ಅನುಮೋದನೆ ನೀಡಿತು.

ವರ್ಷಧಾರೆ... ಮುಂಬೈನಲ್ಲಿ ಬುಧವಾರ ವರ್ಷಧಾರೆ ಸುರಿಯಿತು. ಛತ್ರಪತಿ ಶಿವಾಜಿ ಮಹಾರಾಜ ಟರ್ಮಿನಸ್ ಬಳಿ ಜನರು ಸುರಿವ ಮಳೆಯಲ್ಲೇ ತಮ್ಮ ರಕ್ಷಣೆಗಾಗಿ ಓಡಿದರು ಪಿಟಿಐ ಚಿತ್ರ

'ಉಡಾಫೆ ಸಲ್ಲ'

ನವದೆಹಲಿ: ರಾಷ್ಟ್ರೀಯ ಕಾನೂನು ವಿಶ್ವ-ವಿದ್ಯಾಲಯಗಳ ಒಕ್ಕೂಟವು 'ಸಾಮಾನ್ಯ ಕಾನೂನು ಪ್ರವೇಶ ಪರೀಕ್ಷೆ'ಗಾಗಿ (ಸಿಎಲ್‌ಎಟಿ) ಪ್ರಶ್ನಾವಳಿಗಳನ್ನು ರೂಪಿಸುವಾಗ ಉದಾಸೀನ ತೋರಿದ್ದು ಸರಿಯಲ್ಲ ಎಂದು ಸುಪ್ರೀಂ ಕೋರ್ಟ್ ಬುಧವಾರ ಬೇಸರ ವ್ಯಕ್ತಪಡಿಸಿದೆ.

ಪರೀಕ್ಷೆಯಲ್ಲಿ ಕೆಲ ತಪ್ಪು ಪ್ರಶ್ನೆ ಕೇಳಲಾಗಿದೆ ಎಂಬುದನ್ನು ಗಮನಿಸಿದ ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ, ಆಗಸ್ಟೀನ್ ಜಾರ್ಜ್ ಮಸಿಹ್ ಅವರ ಪೀಠ ಅಸಮಾಧಾನ ವ್ಯಕ್ತಪಡಿಸಿತು.

'ಕ್ಲಾಟ್' ಪರೀಕ್ಷೆಗೆ ಸಂಬಂಧಿಸಿದಂತೆ ಶಾಶ್ವತ ಕಾರ್ಯವಿಧಾನ ಅಸ್ತಿತ್ವಕ್ಕೆ ತರುವಂತೆ 2018ರಲ್ಲಿ ನೀಡಿದ್ದ ತೀರ್ಪಿನಲ್ಲಿಯೇ ನಿರ್ದೇಶಿಸಲಾಗಿತ್ತು. ಆದರೂ ಇಲ್ಲಿಯವರೆಗೂ ಅದೇಕೆ ಕಾರ್ಯರೂಪಕ್ಕೆ ಬಂದಿಲ್ಲ ಎಂದು ಪ್ರಶ್ನಿಸಿತು. ಇದೇ 16ಕ್ಕೆ ವಿಚಾರಣೆ ಮುಂದೂಡಿತು.

ಸಂಭಲ್ ಕೋರ್ಟ್‌ನಿಂದ ರಾಹುಲ್‌ಗೆ ನೋಟಿಸ್

ಸಂಭಲ್ (ಉತ್ತರಪ್ರದೇಶ) (ಪಿಟಿಐ): 'ನಾವು ಈಗ ಬಿಜೆಪಿ, ಆರ್‌ಎಸ್‌ಎಸ್ ಮತ್ತು ಭಾರತ ಸರ್ಕಾರದ (ಇಂಡಿಯನ್ ಸ್ಟೇಟ್) ವಿರುದ್ಧ ಹೋರಾಡುತ್ತಿದ್ದೇವೆ' ಎಂಬ ಹೇಳಿಕೆಗೆ ಸಂಬಂಧಿಸಿ ಪ್ರತಿಕ್ರಿಯೆ ನೀಡುವಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಸ್ಥಳೀಯ ನ್ಯಾಯಾಲಯವೊಂದು ಬುಧವಾರ ನೋಟಿಸ್ ಜಾರಿ ಮಾಡಿದೆ.

ಹಿಂದೂ ಶಕ್ತಿ ದಳದ ರಾಷ್ಟ್ರೀಯ ಅಧ್ಯಕ್ಷ ಸಿಮ್ರಾನ್ ಗುಪ್ತಾ ಅವರು ಸಲ್ಲಿಸಿದ ದೂರಿನ ಮೇರೆಗೆ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರಾದ ಆರತಿ ಫೌಜ್ದಾರ್ ಅವರು ನೋಟಿಸ್ ಜಾರಿ ಮಾಡಿದ್ದಾರೆ.

ನ್ಯಾಯಾಲಯವು ಈ ಹಿಂದೆ ರಾಹುಲ್ ಗಾಂಧಿ ಅವರನ್ನು ಏಪ್ರಿಲ್ 4ರಂದು ಹಾಜರಾಗುವಂತೆ ಹೇಳಿತ್ತು.

ರಾಹುಲ್ ಗಾಂಧಿ

ಬಳಿಕ ಅವರು ಪ್ರತಿಕ್ರಿಯೆ ನೀಡಲು ಮೇ 7ರವರೆಗೆ ದಿನಾಂಕವನ್ನು ವಿಸ್ತರಿಸಿತ್ತು. ಆದರೆ, ಬುಧವಾರ ರಾಹುಲ್ ಪರ ವಕೀಲರು ಗೈರುಹಾಜರಾದ ಕಾರಣ, ಕಿರಿಯ ವಕೀಲರು ಹೊಸ ದಿನಾಂಕವನ್ನು ಕೋರಿದ್ದಾರೆ. ಅದನ್ನು ಸ್ವೀಕರಿಸಿದ ನ್ಯಾಯಾಲಯವು ಜೂನ್ 16ರಂದು ಮುಂದಿನ ವಿಚಾರಣೆಯ ದಿನಾಂಕವನ್ನು ನಿಗದಿಪಡಿಸಿದೆ.

ಅರ್ಜಿ ಆಹ್ವಾನ

ಬೆಂಗಳೂರು: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು ಕಿರು ಅಧ್ಯಯನ ನಡೆಸಲು ತಲಾ ₹1.5 ಲಕ್ಷಗಳ ಫೆಲೋಶಿಪ್‌ಗಳನ್ನು ನೀಡುತ್ತಿದ್ದು, ಅರ್ಜಿ ಆಹ್ವಾನಿಸಿದೆ.

'ಕನಕದಾಸರ ಮುಂಡಿಗೆ ಸಾಹಿತ್ಯ–ತಾತ್ವಿಕ ಚಿಂತನೆ', 'ಕರ್ನಾಟಕ ತತ್ವಪದಗಳ ಚಾರಿತ್ರಿಕ ಅಧ್ಯಯನ', 'ಕನ್ನಡದಲ್ಲಿ ಅನುಭಾವ ಸಾಹಿತ್ಯ – ತಾತ್ವಿಕ ಅಧ್ಯಯನ', 'ಕನ್ನಡದಲ್ಲಿ ಕೀರ್ತನ ಸಾಹಿತ್ಯದ ಸಮಾಜೋ–ಸಾಂಸ್ಕೃತಿಕ ಅಧ್ಯಯನ' ಇವುಗಳಲ್ಲಿ ಯಾವುದಾದರೂ ಒಂದು ವಿಷಯದ ಬಗ್ಗೆ ಅಧ್ಯಯನ ನಡೆಸಬೇಕು ಎಂದು ಅಧ್ಯಯನ ಕೇಂದ್ರದ ಅಧ್ಯಕ್ಷ ಕಾ.ತ. ಚಿಕ್ಕಣ್ಣ ತಿಳಿಸಿದ್ದಾರೆ.

ಮಾಹಿತಿಗಾಗಿ ದೂರವಾಣಿ 080 22113147 ಹಾಗೂ 6364529319 ಸಂಪರ್ಕಿಸಿ ಎಂದಿದ್ದಾರೆ.

5 ವರ್ಷದಲ್ಲಿ 52 ಉಪಗ್ರಹ ಉಡಾವಣೆ

ನವದೆಹಲಿ (ಪಿಟಿಐ): ಭಾರತವು ತನ್ನ ರಕ್ಷಣಾ ವಲಯದ ಕಣ್ಗಾವಲು ಸಾಮರ್ಥ್ಯವನ್ನು ಹೆಚ್ಚಿಸಲು ಮುಂದಿನ ಐದು ವರ್ಷಗಳಲ್ಲಿ ಖಾಸಗಿ ಸಹಯೋಗದಲ್ಲಿ 52 ಬೇಹುಗಾರಿಕಾ ಉಪಗ್ರಹಗಳನ್ನು ಕಕ್ಷೆಗೆ ಕಳುಹಿಸಲಿದೆ ಎಂದು ರಾಷ್ಟ್ರೀಯ ಬಾಹ್ಯಾಕಾಶ ಪ್ರಚಾರ ಮತ್ತು ಅಧಿಕಾರ ಕೇಂದ್ರದ (ಇನ್–ಸ್ಪೇಸ್) ಅಧ್ಯಕ್ಷ ಪವನ್ ಕುಮಾರ್ ಗೋಯೆಂಕಾ ತಿಳಿಸಿದ್ದಾರೆ.

ಈ ಉಪಗ್ರಹಗಳ ಮೂಲಕ ಭಾರತವು ತನ್ನ ಬಾಹ್ಯಾಕಾಶ ಆಧಾರಿತ ಕಣ್ಗಾವಲು ಸಾಮರ್ಥ್ಯವನ್ನೂ ವೃದ್ಧಿಸಿಕೊಳ್ಳುತ್ತದೆ ಎಂದು ಅವರು ಹೇಳಿದ್ದಾರೆ. ಜಾಗತಿಕ ಬಾಹ್ಯಾಕಾಶ ಪರಿಶೋಧನಾ ಸಮ್ಮೇಳನ- 2025ರಲ್ಲಿ ಅವರು ಸುದ್ದಿ ಸಂಸ್ಥೆಗೆ ಈ ಮಾಹಿತಿ ನೀಡಿದ್ದಾರೆ.

ಶತ್ರುಗಳ ಚಲನವಲನಗಳನ್ನು ಪತ್ತೆ ಹಚ್ಚಲು ಮತ್ತು ಗಡಿಗಳ ಮೇಲ್ವಿಚಾರಣೆ ನಡೆಸಲು ಭಾರತದ ಸೇನಾಪಡೆ, ನೌಕಾಪಡೆ ಮತ್ತು ವಾಯು ಪಡೆಗಳಿಗೆ ಈ ಉಪಗ್ರಹಗಳು ಅತ್ಯಂತ ಉಪಯುಕ್ತ ಆಗಲಿವೆ. ಅಲ್ಲದೆ ಸೇನಾ ಕಾರ್ಯಾಚರಣೆ ಸಂದರ್ಭದಲ್ಲಿ ಸಮನ್ವಯ ಸಾಧಿಸಲೂ ಸಹಕಾರಿಯಾಗಲಿವೆ ಎಂದು ಅವರು ಹೇಳಿದ್ದಾರೆ.

ಈ 52 ಉಪಗ್ರಹಗಳ ಪೈಕಿ ಅರ್ಧದಷ್ಟನ್ನು ಖಾಸಗಿ ವಲಯ ಪೂರೈಸಿದರೆ, ಉಳಿದವನ್ನು 'ಇಸ್ರೊ' ನಿರ್ಮಿಸಲಿದೆ ಎಂದು ಹೇಳಿದ್ದಾರೆ.

'ಆಪರೇಷನ್ ಸಂಕಲ್ಪ್': 22 ನಕ್ಸಲರ ಹತ್ಯೆ

ಬಿಜಾಪುರ (ಪಿಟಿಐ): ತೆಲಂಗಾಣ ಗಡಿಭಾಗದಲ್ಲಿನ ಛತ್ತೀಸಗಢದ ಬಿಜಾಪುರ ಜಿಲ್ಲೆಯ ಅರಣ್ಯದಲ್ಲಿ 'ಆಪರೇಷನ್ ಸಂಕಲ್ಪ್' ಎಂಬ ಹೆಸರಿನಲ್ಲಿ ಭದ್ರತಾ ಪಡೆಗಳು ನಡೆಸುತ್ತಿರುವ ಬೃಹತ್ ಕಾರ್ಯಾಚರಣೆಯಲ್ಲಿ ಬುಧವಾರ 22 ನಕ್ಸಲರು ಹತರಾಗಿದ್ದಾರೆ.

'ಅಂತರರಾಜ್ಯ ಗಡಿಯಲ್ಲಿನ ಕರೆಗುಟ್ಟ ಬೆಟ್ಟದಲ್ಲಿ ಭದ್ರತಾ ಪಡೆಗಳು ಮತ್ತು ನಕ್ಸಲರ ನಡುವೆ ಬುಧವಾರ ಬೆಳಿಗ್ಗೆ ಗುಂಡಿನ ಚಕಮಕಿ ನಡೆದಿದೆ. ಹತರಾದ ನಕ್ಸಲರ ಮೃತದೇಹಗಳನ್ನು ವಶಕ್ಕೆ ಪಡೆಯಲಾಗಿದೆ. ಶೋಧಕಾರ್ಯ ಮುಂದುವರಿದಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಸುಮಾರು 24 ಭದ್ರತಾ ಸಿಬ್ಬಂದಿ 'ಆಪರೇಷನ್ ಸಂಕಲ್ಪ್' ಹೆಸರಿನಲ್ಲಿ ಬಸ್ತರ್ ಪ್ರದೇಶದಲ್ಲಿ ಬೃಹತ್ ಕಾರ್ಯಾಚರಣೆಯನ್ನು ನಡೆಸುತ್ತಿದ್ದಾರೆ. ಈ ಕಾರ್ಯಾಚರಣೆಯಲ್ಲಿ ಏ.21ರಿಂದ ಈವರೆಗೆ 26 ಮಂದಿ ನಕ್ಸಲರನ್ನು ಹತ್ಯೆ ಮಾಡಲಾಗಿದೆ.

'ಕಾರ್ಯಾಚರಣೆಯಲ್ಲಿ ಹಲವು ಹಿರಿಯ ನಕ್ಸಲರು ಗಾಯಗೊಂಡಿದ್ದಾರೆ. ಅವರನ್ನು ಇತರ ನಕ್ಸಲರು ಅರಣ್ಯದೊಳಗೆ ಕರೆದೊಯ್ದಿದ್ದಾರೆ. ನಕ್ಸಲರ ನೂರಾರು ಅಡಗುತಾಣ ಮತ್ತು ಬಂಕರ್‌ಗಳನ್ನು ನಾಶಮಾಡಲಾಗಿದೆ. ಬೃಹತ್ ಪ್ರಮಾಣದಲ್ಲಿ ಸ್ಫೋಟಕಗಳು, ಔಷಧಗಳು ಮತ್ತು ಇತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ

‘ಟೆಸ್ಟ್’ ಗೆದ್ದ ‘ಹಿಟ್‌ಮ್ಯಾನ್’ ‘ರೋಹಿತ್’

ಪ್ರಜಾವಾಣಿ ವಾರ್ತೆ/ ಪಿಟಿಐ

ಬೆಂಗಳೂರು/ನವದೆಹಲಿ: ಮುಂಬೈ ಕ್ರಿಕೆಟ್ ಗಲ್ಲಿಗಳಿಂದ ಬೆಳೆದು ಬಂದ ಪ್ರತಿಭೆ ರೋಹಿತ್ ಶರ್ಮಾ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡುವ ಆರು ವರ್ಷಗಳ ಮುನ್ನವೇ ಸೀಮಿತ್ ಓವರ್‌ಗಳ ಮಾದರಿಯಲ್ಲಿ ಹೆಜ್ಜೆಗುರುತು ಮೂಡಿಸಿದ್ದರು.

ಜಗತ್ತಿನ ಯಾವುದೇ ಕ್ರೀಡಾಂಗಣದ ‘ಕೌ ಕಾರ್ನರ್’ ಸ್ಟ್ಯಾಂಡ್‌ಗೆ ಸಿಕ್ಸರ್ ಎತ್ತುವ ಅವರ ಕಲಾತ್ಮಕ ಹೊಡೆತಕ್ಕೆ ಹಲವಾರು ಕ್ರಿಕೆಟ್‌ಪ್ರಿಯರು ಮನಸೋತಿದ್ದರು. ಏಕದಿನ ಮತ್ತು ಟಿ20 ಕ್ರಿಕೆಟ್‌ನಲ್ಲಿ ಅವರಿಗೆ ಅವರೇ ಸಾಟಿ ಎಂಬಂತಿದ್ದವರು. ಆದರೆ ಕೆಂಪು ಚೆಂಡಿನ ಕ್ರಿಕೆಟ್‌ನಲ್ಲಿ ತಮ್ಮ ಛಾಪು ಮೂಡಿಸಲು ಬಹಳಷ್ಟು ಹರಸಾಹಸಪಡಬೇಕಾಯಿತು.

ಆದರೆ ತಮ್ಮ ಛಲ ಹಾಗೂ ಮುಂಬೈಕರ್ ವ್ಯಕ್ತಿತ್ವದಿಂದ ಟೆಸ್ಟ್ ತಂಡದ ನಾಯಕರಾಗಿ ಬೆಳೆದಿದ್ದು ಯಶೋಗಾಥೆಯೇ ಸರಿ. ಅದೂ ವಿರಾಟ್ ಕೊಹ್ಲಿಯಂತಹ ದಿಗ್ಗಜ ಆಟಗಾರನ ಕಾಲಘಟ್ಟದಲ್ಲಿ ಮೂರು ಮಾದರಿಗಳಲ್ಲಿಯೂ ಬೆಳೆದು ನಿಂತಿದ್ದು ರೋಹಿತ್ ಸಾಮರ್ಥ್ಯವನ್ನು ತೋರಿಸುತ್ತದೆ. 2007ರಲ್ಲಿ ಪ್ರಥಮ ಟಿ20 ವಿಶ್ವಕಪ್ ಟೂರ್ನಿಯ ಮೂಲಕ ಪದಾರ್ಪಣೆ ಮಾಡಿದ್ದವರು ರೋಹಿತ್.

ಆದರೆ ಟೆಸ್ಟ್ ಕ್ರಿಕೆಟ್ ಕ್ಯಾಪ್ ಧರಿಸಲು 2013ರವರೆಗೆ ಕಾಯಬೇಕಾಯಿತು. ಆದರೆ ಸಿಕ್ಕ ಅವಕಾಶವನ್ನು ರೋಹಿತ್ ಎರಡೂ ಕೈಗಳಿಂದ ಬಾಚಿ ತಬ್ಬಿಕೊಂಡರು. ಅವತ್ತು ಈಡನ್ ಗಾರ್ಡನ್‌ನಲ್ಲಿ ನಡೆದ ವೆಸ್ಟ್ ಇಂಡೀಸ್ ವಿರುದ್ಧದ ಟೆಸ್ಟ್‌ನಲ್ಲಿ ಪದಾರ್ಪಣೆ ಮಾಡಿದ ಅವರು ಭರ್ಜರಿ 177 ರನ್ ಗಳಿಸಿದರು. ಪಂದ್ಯಶ್ರೇಷ್ಠ ಗೌರವವನ್ನೂ ಸಂಪಾದಿಸಿದರು. ಆ ಪಂದ್ಯವೂ ಸೇರಿದಂತೆ ಹಲವು ಪಂದ್ಯಗಳಲ್ಲಿ ಅವರು ಆರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಇಳಿದಿದ್ದರು.

> **ಟೆಸ್ಟ್ ಕ್ರಿಕೆಟ್‌ನಿಂದ ನಾನೀಗ ನಿವೃತ್ತಿಯಾಗುತ್ತಿರುವ ಸಂಗತಿಯನ್ನು ತಮ್ಮೆಲ್ಲರೊಂದಿಗೆ ಹಂಚಿಕೊಳ್ಳಲು ಇಷ್ಟಪಡುತ್ತೇನೆ. ರಾಷ್ಟ್ರೀಯ ತಂಡವನ್ನು ಶ್ವೇತವರ್ಣದ ಪೋಷಾಕಿನೊಂದಿಗೆ ಪ್ರತಿನಿಧಿಸಿದ್ದು ನನಗೆ ಸಿಕ್ಕ ದೊಡ್ಡ ಗೌರವ. ಹಲವು ವರ್ಷಗಳಿಂದ ಪ್ರೀತಿ ಮತ್ತು ಬೆಂಬಲ ನೀಡಿದ ಎಲ್ಲರಿಗೂ ಧನ್ಯವಾದಗಳು. ನಾನು ಏಕದಿನ ಕ್ರಿಕೆಟ್ ಮಾದರಿಯಲ್ಲಿ ಭಾರತ ತಂಡವನ್ನು ಪ್ರತಿನಧಿಸುವುದನ್ನು ಮುಂದುವರಿಸಲಿದ್ದೇನೆ.**
>
> **ರೋಹಿತ್ ಶರ್ಮಾ**
> (ಇನ್ಸ್ಟಾಗ್ರಾಮ್‌ನಲ್ಲಿ ಹಾಕಿರುವ ವಿದಾಯ ಸಂದೇಶ)

ಆದರೆ ಅವರಿಗೆ ಏಕದಿನ ಮತ್ತು ಟಿ20 ಮಾದರಿಯಲ್ಲಿ ಸಿಕ್ಕಷ್ಟು ಅವಕಾಶಗಳು ಟೆಸ್ಟ್ ಕ್ರಿಕೆಟ್‌ನಲ್ಲಿ ಸಿಗಲಿಲ್ಲ. ಅದರಲ್ಲೂ ಏಕದಿನ ಮಾದರಿಯಲ್ಲಿ ಮೂರು ದ್ವಿಶತಕಗಳನ್ನು ಬಾರಿಸಿದ ನಂತರ ‘ವೈಟ್‌ಬಾಲ್ ಪರಿಣತ’ ಎಂಬ ಖ್ಯಾತಿ ಅವರದ್ದಾಯಿತು. ಇದೇ ಕಾರಣಕ್ಕೆ ಅವರು ಟೆಸ್ಟ್ ಕ್ರಿಕೆಟ್ ತಂಡದ ಮೊದಲ ಆಯ್ಕೆಯಾಗಿ ರಲಿಲ್ಲ ಎಂಬುದು ಕೂಡ ವಿಪರ್ಯಾಸ. ಅವರು ಕಳೆದ 13 ವರ್ಷಗಳಲ್ಲಿ ಆಡಿದ್ದು 67 ಟೆಸ್ಟ್‌ಗಳನ್ನು ಮಾತ್ರ. ಅದರಲ್ಲಿ 12 ಶತಕ ಮತ್ತು 18 ಅರ್ಧಶತಕಗಳನ್ನು ದಾಖಲಿಸಿದ್ದಾರೆ.

ಅಷ್ಟೇ ಅಲ್ಲ; ಕೆಲಕಾಲ ಅವರು ಲಯ ಕಳೆದುಕೊಂಡು ಮತ್ತು ಗಾಯದ ಸಮಸ್ಯೆಗಳಿಂದ ತಂಡದಲ್ಲಿ ಸ್ಥಾನ ಪಡೆಯುವುದು ಕೂಡ ದುಸ್ತರವಾಗಿತ್ತು. ಆದರೆ ಪರಿಶ್ರಮ ಮತ್ತು ಛಲದಿಂದ ಮತ್ತೆ ಮತ್ತೆ ಪುಟಿದೆದ್ದರು. ಮೂರು ಮಾದರಿಗಳಲ್ಲಿಯೂ ಬೇರೂರಿ ನಿಂತರು.

ವಿರಾಟ್ ಕೊಹ್ಲಿ ನಾಯಕತ್ವದ ರಾಷ್ಟ್ರೀಯ ತಂಡದಲ್ಲಿ ಆಡಿದವರು ರೋಹಿತ್, ಇನ್ನೊಂದೆಡೆ ಐಪಿಎಲ್ ಕಣದಲ್ಲಿ ಮುಂಬೈ ಇಂಡಿಯನ್ಸ್ ತಂಡಕ್ಕೆ ಐದು ಪ್ರಶಸ್ತಿ ಗೆಲ್ಲಿಸಿಕೊಟ್ಟ ಮುಂದಾಳು. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿಯೂ ಕೊಹ್ಲಿ ಅನುಪಸ್ಥಿತಿಯಲ್ಲಿ ಎರಡು ಏಕದಿನ ಸರಣಿಗಳಲ್ಲಿ ಭಾರತವನ್ನು ಜಯದತ್ತ ಮುನ್ನಡೆಸಿದ್ದು ರೋಹಿತ್ ನಾಯಕತ್ವ ಗುಣವನ್ನು ಮುನ್ನೆಲೆಗೆ ತಂದಿತ್ತು. 2022ರಲ್ಲಿ ಅವರು ಭಾರತ ತಂಡದ ಮೂರು ಮಾದರಿಗಳಿಗೂ ನಾಯಕರಾದರು.

ಅವರ ನಾಯಕತ್ವದಲ್ಲಿ ಭಾರತ ತಂಡವು 2023ರ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ತಲುಪಿತ್ತು. ಅದೇ ವರ್ಷ ಏಕದಿನ ವಿಶ್ವಕಪ್ ಫೈನಲ್ ಕೂಡ ಪ್ರವೇಶಿಸಿತು. ಹೋದ ವರ್ಷ ಅಮೆರಿಕದಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡ ಚಾಂಪಿಯನ್ ಆದಾಗ ರೋಹಿತ್ ಚುಟುಕು ಮಾದರಿಯಿಂದ ನಿವೃತ್ತಿ ಪಡೆದರು. ಇದೀಗ ಟೆಸ್ಟ್ ಮಾದರಿಗೂ ವಿದಾಯ ಹೇಳಿದ್ದಾರೆ.

ಸ್ಟಂಪ್ ಮೈಕ್ ಗೆಳೆಯ ರೋಹಿತ್..!

ರೋಹಿತ್ ಶರ್ಮಾ ಅವರು ತಮ್ಮ ಅಬ್ಬರದ ಬ್ಯಾಟಿಂಗ್ ಮತ್ತು ನಾಯಕತ್ವದಿಂದ ಅಷ್ಟೇ ಅಲ್ಲ. ಪಂದ್ಯದ ಸಂದರ್ಭದಲ್ಲಿ ತಮ್ಮ ಸಹ ಆಟಗಾರರೊಂದಿಗೆ ನಡೆಸುತ್ತಿದ್ದ ಮುಂಬೈ ಸೊಗಡಿನ ಮಾತುಕತೆಗಳಿಂದಲೂ ಗಮನ ಸೆಳೆದವರು.

ಪಂದ್ಯದ ಸಂದರ್ಭದಲ್ಲಿ ಅವರು ಸಹ ಆಟಗಾರರಿಗೆ ನೀಡುತ್ತಿದ್ದ ಸಲಹೆ ಅಥವಾ ತಪ್ಪು ಮಾಡಿದಾಗ ಬುದ್ಧಿಮಾತು ಹೇಳುತ್ತಿದ್ದ ರೀತಿ ಕೇಳುಗರಲ್ಲಿ ನಗೆಯುಕ್ಕಿಸುತ್ತಿದ್ದವು. ಆದರೆ ಅದು ಅವರ ಸಹಜ ಮಾತಿನ ಶೈಲಿ. ಕೃತಕ ನಡೆ, ನುಡಿ ಅವರಿಗೆ ಒಗ್ಗಲಿಲ್ಲ. ಅದರಿಂದಾಗಿಯೇ ಎಲ್ಲ ವಯೋವರ್ಗದ ಗೆಳೆಯರ ಬಳಗ ಅವರದ್ದು.

ನಾಯಕತ್ವದ ರೇಸ್‌ನಲ್ಲಿ ರಾಹುಲ್

ಬೆಂಗಳೂರು: ರೋಹಿತ್ ಶರ್ಮಾ ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತಿ ಘೋಷಿಸಿರುವುದರಿಂದ ಭಾರತ ತಂಡದ ನಾಯಕತ್ವ ಯಾರಿಗೆ ಒಲಿಯಲಿದೆ ಎಂಬ ಚರ್ಚೆಗಳು ಗರಿಗೆದರಿವೆ.

ಸದ್ಯ ತಂಡದಲ್ಲಿ ಸೀನಿಯರ್ ಆಟಗಾರನೆಂದರೆ ವಿರಾಟ್ ಕೊಹ್ಲಿ ಒಬ್ಬರೇ. ಆದರೆ ಅವರು ಮರಳಿ ನಾಯಕತ್ವ ವಹಿಸಿಕೊಳ್ಳಲು ಒಪ್ಪುವರೇ ಎಂಬುದು ಖಚಿತವಿಲ್ಲ. 36 ವರ್ಷದ ವಿರಾಟ್ ಅವರು ಕೂಡ ಇನ್ನೆಷ್ಟು ವರ್ಷ ತಂಡದಲ್ಲಿ ಆಡಬಹುದು ಎಂಬುದು ಕೂಡ ಪ್ರಶ್ನೆಯಾಗಿದೆ. ಆದ್ದರಿಂದ ಉಳಿದ ಆಯ್ಕೆಗಳತ್ತ ಬಿಸಿಸಿಐ ಕಣ್ಣು ಹಾಯಿಸುವ ಸಾಧ್ಯತೆ ಹೆಚ್ಚಿದೆ. ಪ್ರಮುಖವಾಗಿ ಕನ್ನಡಿಗ ಕೆ.ಎಲ್. ರಾಹುಲ್, ಜಸ್‌ಪ್ರೀತ್ ಬೂಮ್ರಾ, ಶುಭಮನ್ ಗಿಲ್ ಮತ್ತು ರಿಷಭ್ ಪಂತ್ ಅವರ ಹೆಸರು ಕೇಳಿ ಬರುತ್ತಿದೆ.

ಈ ನಾಲ್ವರಲ್ಲಿ ರಾಹುಲ್ ಅವರು ಹೆಚ್ಚು ಅನುಭವಿಯಾಗಿದ್ದಾರೆ. ಅಲ್ಲದೇ ತಂಡದ ಅಗತ್ಯಕ್ಕೆ ತಕ್ಕಂತೆ ಬ್ಯಾಟಿಂಗ್ ಕ್ರಮಾಂಕ ಬದಲಿಸಿಕೊಂಡು ಕಾಣಿಕೆ ನೀಡಿದ್ದಾರೆ. ಏಕದಿನ ವಿಶ್ವಕಪ್, ಚಾಂಪಿಯನ್ಸ್ ಟ್ರೋಫಿ ಟೂರ್ನಿಗಳಲ್ಲಿಯೂ ವಿಕೆಟ್‌ಕೀಪಿಂಗ್ ನಿಭಾಯಿಸಿ ಸೈ ಎನಿಸಿಕೊಂಡಿದ್ದಾರೆ. ಈಚೆಗೆ ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಉಳಿದೆಲ್ಲ ಬ್ಯಾಟರ್‌ಗಳಿಗಿಂತ ಹೆಚ್ಚು ಸ್ಥಿರ ಪ್ರದರ್ಶನ ನೀಡಿದ್ದು ರಾಹುಲ್ ಅವರೇ. ಆದ್ದರಿಂದ ಅವರಿಗೆ ಟೆಸ್ಟ್ ತಂಡದ ನಾಯಕತ್ವ ಒಲಿಯಬಹುದೇ ಎಂಬ ಕುತೂಹಲ ಗರಿಗೆದರಿದೆ.

ನೂರ್ ಅಹ್ಮದ್‌ಗೆ 4 ವಿಕೆಟ್ | ಡಿವಾಲ್ಡ್, ದುಬೆ ಮಿಂಚು | ಅಜಿಂಕ್ಯ ರಹಾನೆ ಬಳಗಕ್ಕೆ ನಿರಾಸೆ

ಕೆಕೆಆರ್ ಪ್ಲೇಆಫ್ ಕನಸಿಗೆ ಚೆನ್ನೈ ಅಡ್ಡಿ

ಕೋಲ್ಕತ್ತ (ಪಿಟಿಐ): ಮಹೇಂದ್ರಸಿಂಗ್ ಧೋನಿ ನಾಯಕತ್ವದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಬುಧವಾರ ಈಡನ್ ಗಾರ್ಡನ್‌ನಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ರೋಚಕ ಜಯ ಸಾಧಿಸಿತು. ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಪ್ಲೇ ಆಫ್ ಹಾದಿಯಿಂದ ಬಹುತೇಕ ಹೊರನಡೆಯಿತು.

180 ರನ್‌ಗಳ ಗುರಿ ಬೆನ್ನಟ್ಟಿದ್ದ ಚೆನ್ನೈ ತಂಡವು ಡಿವಾಲ್ಡ್ ಬ್ರೆವಿಸ್ (52; 25ಎಸೆತ), ಶಿವಂ ದುಬೆ (45; 40ಎ) ಮತ್ತು ಧೋನಿ (ಔಟಾಗದೇ 17, 18ಎ) ಅವರ ಬ್ಯಾಟಿಂಗ್ ಬಲದಿಂದ 2 ವಿಕೆಟ್‌ಗಳಿಂದ ಜಯಿಸಿತು. ಚೆನ್ನೈ ತಂಡವು ಈಗಾಗಲೇ ಪ್ಲೇಆಫ್ ಹಾದಿಯಿಂದ ಹೊರಬಿದ್ದಿದ್ದು, ಇದು ಸಮಾಧಾನಕರ ಜಯವಾಗಿದೆ.

ಆದರೆ ಕೋಲ್ಕತ್ತ ತಂಡಕ್ಕೆ ಈ ಪಂದ್ಯದಲ್ಲಿ ಜಯಿಸುವುದು ಮುಖ್ಯವಾಗಿತ್ತು. ಟಾಸ್ ಗೆದ್ದ ಆತಿಥೇಯ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಎಡಗೈ ಸ್ಪಿನ್ನರ್ ನೂರ್ ಅಹ್ಮದ್ (31ಕ್ಕೆ4) ನೇತೃತ್ವದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಸ್ಪಿನ್ನರ್‌ಗಳು ಕೋಲ್ಕತ್ತ ತಂಡವನ್ನು ಮಧ್ಯಮ ಹಂತದ ಓವರ್‌ಗಳಲ್ಲಿ ಕಟ್ಟಿಹಾಕಿದರು. ಇದರಿಂದಾಗಿ ತಂಡವು 6 ವಿಕೆಟ್‌ಗೆ 179 ರನ್‌ಗಳ ಸಾಧಾರಣ ಮೊತ್ತ ಗಳಿಸಲಷ್ಟೇ ಶಕ್ತವಾಯಿತು.

ಪವರ್ ಪ್ಲೇ ವೇಳೆ 1 ವಿಕೆಟ್‌ಗೆ 67 ರನ್ ಗಳಿಸಿ ಉತ್ತಮ ಸ್ಥಿತಿಯಲ್ಲಿ-ದ್ದ ಆತಿಥೇಯ ತಂಡ ನಂತರ ಹಳಿ ತಪ್ಪತೊಡಗಿತು. ಚೆಂಡಿಗೆ ತಿರುವು ನೀಡುತ್ತಿದ್ದ ಪಿಚ್‌ನ ಲಾಭ ಪಡೆದ ಅಫ್ಗನ್ ಬೌಲರ್ ನೂರ್, ಪವರ್ ಪ್ಲೇ ಮುಗಿದ ಮರುಕ್ಷಣವೇ ಎದುರಾಳಿಗಳಿಗೆ ಹೊಡೆತ ನೀಡಿದರು. ಒಂದೇ ಓವರಿನಲ್ಲಿ ಎರಡು ವಿಕೆಟ್ ಪಡೆದರು.

ಮೊದಲು ಸುನೀಲ್ ನಾರಾಯಣ್ (26, 17ಎ, 4x4, 6x1) ಅವರನ್ನು ಹೊಡೆತದ ಪ್ರಲೋಭನೆಗೆ ಒಡ್ಡಿದರು. ಎಡವಿದ ಸುನೀಲ್ ವಿಕೆಟ್ ಕೀಪರ್ ಧೋನಿ ಅವರಿಂದ ಮಿಂಚಿನ ಸ್ಟಂಪಿಂಗ್‌ಗೆ ಔಟಾದರು. ನಾಲ್ಕು ಎಸೆತಗಳ ತರುವಾಯ ಅಂಗ್‌ಕ್ರಿಶ್ ರಘುವಂಶಿ (1) ವಿಕೆಟ್ ಕೀಪರ್‌ಗೆ ಕ್ಯಾಚಿತ್ತರು. ಈ ಹಿಂದಿನ ಪಂದ್ಯದಲ್ಲಿ ಬಿರುಸಿನ ಅರ್ಧ ಶತಕ ಗಳಿಸಿದ್ದ ಆ್ಯಂಡ್ರೆ ರಸೆಲ್ ಈ ಬಾರಿಯೂ ಬೀಸಾಟಕ್ಕಿಳಿದ ಪರಿಣಾಮ ರನ್ ವೇಗ ಕೊಂಚ ಹೆಚ್ಚತೊಡಗಿತು. ಜಮೈಕಾದ ಈ ಬ್ಯಾಟರ್, ಜಡೇಜ ಅವರ ಒಂದೇ ಓವರಿನಲ್ಲಿ ಎರಡು ಬೌಂಡರಿ, ಒಂದು ಸಿಕ್ಸರ್ ಬಾರಿಸಿದರು. ನೂರ್ ಅವರ ಗೂಗ್ಲಿ ಎಸೆತವನ್ನು ಭರ್ಜರಿಯಾಗಿ ಸ್ಟ್ಯಾಂಡ್‌ಗಟ್ಟಿದರು. ಆದರೆ ಕೊನೆಗೆ ಇನ್ನೊಂದು ಗೂಗ್ಲಿ ಎಸೆತದಲ್ಲಿ ಅವರಿಗೇ ವಿಕೆಟ್ ತೆತ್ತರು. ನೂರ್ ತಮ್ಮ ಕೊನೆಯ ಓವರಿನಲ್ಲಿ ರಿಂಕು ಸಿಂಗ್ (9) ವಿಕೆಟ್ ಸಹ ಪಡೆದರು.

ಗುರಿ ಬೆನ್ನಟ್ಟಿದ ಚೆನ್ನೈ ಆರಂಭ ಉತ್ತಮವಾಗಿರಲಿಲ್ಲ. ಇಬ್ಬರೂ ಆರಂಭಿಕರು ಸೊನ್ನೆ ಸುತ್ತಿದರು. ಯುವ ಆಟಗಾರ ಊರ್ವಿಲ್ ಪಟೇಲ್ (31; 11ಎ, 4X1, 6X4) ಇನಿಂಗ್ಸ್‌ಗೆ ಚೇತರಿಕೆ ನೀಡಿದರು. ಆದರೆ ಅನುಭವಿ ಅಶ್ವಿನ್ (8 ರನ್) ಹೆಚ್ಚು ಹೊತ್ತು ಆಡಲಿಲ್ಲ. ಈ ಹಂತದಲ್ಲಿ ಜಡೇಜ (19; 10ಎ) ಕೂಡ ಬೇಗನೆ ನಿರ್ಗಮಿಸಿದರು.

ಆಗ ತಂಡಕ್ಕೆ ಆಸರೆ ಆದ ಡಿವಾಲ್ಡ್ 4 ಬೌಂಡರಿ ಮತ್ತು ಅಷ್ಟೇ ಸಂಖ್ಯೆಯ ಸಿಕ್ಸರ್‌ಗಳನ್ನು ಸಿಡಿಸಿದರು. ಅವರಿಗೆ ಶಿವಂ ದುಬೆ ಉತ್ತಮ ಜೊತೆ ನೀಡಿದರು.

ಆದರೆ ಕೋಲ್ಕತ್ತ ತಂಡದ ಸ್ಪಿನ್ನರ್ ವರುಣ್ ಚಕ್ರವರ್ತಿ ಬೌಲಿಂಗ್‌ನಲ್ಲಿ ಡಿವಾಲ್ಡ್ ಔಟಾದರು. ಜೊತೆಯಾಟ ಮುರಿಯಿತು. ಕ್ರೀಸ್‌ಗೆ ಬಂದ ಧೋನಿ ಬೀಸಾಟಕ್ಕಿಳಿಯದೇ ತಾಳ್ಮೆಯ ಆಟಕ್ಕೆ ಮೊರೆ ಹೋದರು. 19ನೇ ಓವರ್‌ನಲ್ಲಿ ದುಬೆ ಔಟಾದಾಗ ಧೋನಿ ಇನಿಂಗ್ಸ್ ಹೊಣೆ ಹೊತ್ತರು. ಕೊನೆಯ ಓವರ್‌ನಲ್ಲಿ ತಂಡದ ಗೆಲುವಿಗೆ 8 ರನ್‌ಗಳ ಅಗತ್ಯವಿತ್ತು. ಮೊದಲ ಎಸೆತವನ್ನು ಸಿಕ್ಸರ್‌ಗೆತ್ತಿದ ಧೋನಿ, 3ನೇ ಎಸೆತದಲ್ಲಿ ಒಂಟಿ ರನ್ ಪಡೆದರು. ಕ್ರೀಸ್‌ಗೆ ಬಂದ ಅನ್ಷುಲ್ ಕಾಂಭೋಜ್ ವಿಜಯದ ಬೌಂಡರಿ ಹೊಡೆದರು.

ಸಂಕ್ಷಿಪ್ತ ಸ್ಕೋರು: ಕೋಲ್ಕತ್ತ ನೈಟ್ ರೈಡರ್ಸ್: 20 ಓವರುಗಳಲ್ಲಿ 6 ವಿಕೆಟ್‌ಗೆ 179 (ಸುನೀಲ್ ನಾರಾಯಣ್ 26, ಅಜಿಂಕ್ಯ ರಹಾನೆ 48, ಮನೀಷ್ ಪಾಂಡೆ ಔಟಾಗದೇ 36, ಆ್ಯಂಡ್ರೆ ರಸೆಲ್ 38, ಅನ್ಷುಲ್ ಕಾಂಭೋಜ್ 38ಕ್ಕೆ1, ನೂರ್ ಅಹ್ಮದ್ 31ಕ್ಕೆ4, ರವೀಂದ್ರ ಜಡೇಜ 34ಕ್ಕೆ1) **ಚೆನ್ನೈ ಸೂಪರ್ ಕಿಂಗ್ಸ್:** 19.4 ಓವರ್‌ಗಳಲ್ಲಿ 8ಕ್ಕೆ183 (ಡಿವಾಲ್ಡ್ ಬ್ರೆವಿಸ್ 52, ಶಿವಂ ದುಬೆ 45, ವೈಭವ್ ಅರೋರಾ 48ಕ್ಕೆ3, ವರುಣ್ ಚಕ್ರವರ್ತಿ 18ಕ್ಕೆ2) ಫಲಿತಾಂಶ: ಸಿಎಸ್‌ಕೆಗೆ 2 ವಿಕೆಟ್ ಜಯ.
ಪಂದ್ಯದ ಆಟಗಾರ: ನೂರ್ ಅಹಮ್ಮದ್

ಚೆನ್ನೈ ಸೂಪರ್ ಕಿಂಗ್ಸ್ ತಂಡದ ಶಿವಂ ದುಬೆ ಮತ್ತು ಡಿವಾಲ್ಡ್ ಬ್ರೆವಿಸ್ –ಪಿಟಿಐ ಚಿತ್ರ

ಐಪಿಎಲ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ಗುಜರಾತ್ ಟೈಟನ್ಸ್	11	8	3	16	0.793
ರಾಯಲ್ ಚಾಲೆಂಜರ್ಸ್ ಬೆಂಗಳೂರು	11	8	3	16	0.482
ಪಂಜಾಬ್ ಕಿಂಗ್ಸ್	11	7	3	15	0.376
ಮುಂಬೈ ಇಂಡಿಯನ್ಸ್	12	7	5	14	1.156
ಡೆಲ್ಲಿ ಕ್ಯಾಪಿಟಲ್ಸ್	11	6	4	13	0.362
ಕೋಲ್ಕತ್ತ ನೈಟ್ ರೈಡರ್ಸ್	12	5	6	11	0.193
ಲಖನೌ ಸೂಪರ್ ಜೈಂಟ್ಸ್	11	5	6	10	-0.469
ಸನ್‌ರೈಸರ್ಸ್ ಹೈದರಾಬಾದ್	11	3	7	7	-1.192
ರಾಜಸ್ಥಾನ ರಾಯಲ್ಸ್	12	3	9	6	-0.718
ಚೆನ್ನೈ ಸೂಪರ್ ಕಿಂಗ್ಸ್	12	3	9	6	-0.992

ಆರೇಂಜ್ ಕ್ಯಾಪ್ ಸೂರ್ಯಕುಮಾರ್ (ಎಂಐ) 510 ರನ್

ಪರ್ಪಲ್ ಕ್ಯಾಪ್ ನೂರ್ ಅಹಮ್ಮದ್ (ಸಿಎಸ್‌ಕೆ) 20 ವಿಕೆಟ್

ನೂರ್ ಅಹ್ಮದ್

ಡೆಲ್ಲಿ ಕ್ಯಾಪಿಟಲ್ಸ್‌ಗೆ ಮಹತ್ವದ ಪಂದ್ಯ

ರಾಹುಲ್–ಚಾಹಲ್ ಮುಖಾಮುಖಿ ಇಂದು

ಧರ್ಮಶಾಲಾ (ಪಿಟಿಐ): ಹಿಮಾಲಯದ ಮಡಿಲಲ್ಲಿರುವ ಕ್ರೀಡಾಂಗಣದಲ್ಲಿ ಪಂಜಾಬ್ ಕಿಂಗ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಗುರುವಾರ ಮುಖಾಮುಖಿಯಾಗಲಿವೆ.

ಪ್ಲೇಆಫ್ ಪ್ರವೇಶದ ಅವಕಾಶವನ್ನು ಜೀವಂತವಾಗಿಟ್ಟುಕೊಳ್ಳಲು ಡೆಲ್ಲಿ ತಂಡಕ್ಕೆ ಈ ಪಂದ್ಯದಲ್ಲಿ ಜಯಿಸುವುದು ಮಹತ್ವದ್ದಾಗಿದೆ. ಅಕ್ಷರ್ ಪಟೇಲ್ ನಾಯಕತ್ವದ ಡೆಲ್ಲಿ 11 ಪಂದ್ಯಗಳಿಂದ 13 ಅಂಕಗಳನ್ನು ಗಳಿಸಿದೆ. ಅಂಕ ಪಟ್ಟಿಯಲ್ಲಿ ಐದನೇ ಸ್ಥಾನದಲ್ಲಿದೆ. ತಂಡವು ತನ್ನ ತವರಿನಂಗಳ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಆಡಿದ ಪಂದ್ಯಗಳ ಪೈಕಿ ಒಂದರಲ್ಲಿ ಮಾತ್ರ ಜಯಿಸಿತ್ತು.

ಡೆಲ್ಲಿ ತಂಡವು ಟೂರ್ನಿಯ ಆರಂಭದಲ್ಲಿ ನಾಲ್ಕು ಪಂದ್ಯಗಳನ್ನು ಸತತವಾಗಿ ಜಯಿಸಿತು. ಆದರೆ ನಂತರದ ಹಂತದಲ್ಲಿ ಬ್ಯಾಟರ್‌ಗಳ ಪ್ರದರ್ಶನದಲ್ಲಿ ಅಸ್ಥಿರತೆ ಕಾಡುತ್ತಿದೆ. ಕಳೆದ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಸಾಧಾರಣ ಮೊತ್ತ ಗಳಿಸಿತ್ತು. ಮಳೆ ಬಂದ ಕಾರಣ ಆ ಪಂದ್ಯ ರದ್ದಾಗಿ ಒಂದು ಅಂಕ ಲಭಿಸಿತ್ತು. ಆ ಪಂದ್ಯದಲ್ಲಿ ಕನ್ನಡಿಗ ಕೆ.ಎಲ್. ರಾಹುಲ್, ಕರುಣ್ ನಾಯರ್, ಅಭಿಷೇಕ್ ಪೊರೆಲ್ ಹಾಗೂ ಫಾಫ್ ಡುಪ್ಲೆಸಿ ವಿಫಲರಾಗಿದ್ದರು. ಕೆಳಮಧ್ಯಮ ಕ್ರಮಾಂಕದಲ್ಲಿ ಟ್ರಿಸ್ಟನ್ ಸ್ಟಬ್ಸ್, ವಿಪ್ರಜ್ ನಿಗಮ್ ಮತ್ತು ಆಶುತೋಷ್ ಶರ್ಮಾ ಅವರು ತಂಡವು ಅಲ್ಪಮೊತ್ತಕ್ಕೆ ಕುಸಿಯುವುದನ್ನು ತಡೆದು ಗೌರವ ಉಳಿಸಿದ್ದರು.

ಆದರೆ ಆತಿಥೇಯ ಪಂಜಾಬ್ ಕಿಂಗ್ಸ್ ತಂಡವು ಎಲ್ಲ ವಿಭಾಗಗಳಲ್ಲಿಯೂ ಬಲಾಢ್ಯವಾಗಿದೆ. 11 ಪಂದ್ಯಗಳಲ್ಲಿ 7 ಗೆದ್ದು, 3 ಸೋತಿದೆ. 1 ಪಂದ್ಯ ಮಳೆಯಿಂದಾಗಿ ರದ್ದಾಗಿತ್ತು. ತಂಡವು ಮೂರನೇ ಸ್ಥಾನದಲ್ಲಿದೆ. ಶ್ರೇಯಸ್ ಅಯ್ಯರ್ ಅವರು ನಾಯಕತ್ವ ಮತ್ತು ಬ್ಯಾಟಿಂಗ್ ಎರಡರಲ್ಲೂ ಉತ್ತಮ ಲಯದಲ್ಲಿದ್ದಾರೆ. ಆರಂಭಿಕ ಬ್ಯಾಟರ್ ಪ್ರಿಯಾಂಶ್ ಆರ್ಯ, ಮಾರ್ಕಸ್ ಸ್ಟೋಯಿನಿಸ್, ನೇಹಲ್ ವಧೇರಾ ಅವರು ಕೂಡ ಉತ್ತಮ ಲಯದಲ್ಲಿದ್ದಾರೆ.

ಬೌಲಿಂಗ್ ವಿಭಾಗವೂ ಚೆನ್ನಾಗಿದೆ. ಅದರಲ್ಲೂ ಸ್ಪಿನ್ನರ್ ಯಜುವೇಂದ್ರ ಚಾಹಲ್, ಎಡಗೈ ವೇಗಿ ಮಾರ್ಕೊ ಯಾನ್ಸೆನ್, ಅರ್ಷದೀಪ್ ಸಿಂಗ್ ಅವರು ಪಂದ್ಯವನ್ನು ಗೆಲ್ಲಿಸಿಕೊಡಬಲ್ಲ ಸಮರ್ಥರಾಗಿದ್ದಾರೆ. ಡೆಲ್ಲಿ ಬ್ಯಾಟರ್‌ಗಳಿಗೆ ಇವರು ಕಠಿಣ ಸವಾಲೊಡ್ಡಲು ಸಿದ್ಧರಾಗಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್.

ಬೌಲಿಂಗ್ ಕೋಚ್ ಸುನಿಲ್ ಜೋಶಿ ಮತ್ತು ಸ್ಪಿನ್ನರ್ ಚಾಹಲ್ ಮಾತುಕತೆ

ಡೆಲ್ಲಿ ಕ್ಯಾಪಿಟಲ್ಸ್ ತಂಡದ ಆಟಗಾರ ಕೆ.ಎಲ್ ರಾಹುಲ್

ಧರ್ಮಶಾಲಾ: ಪ್ರಯಾಣ ಅಸ್ತವ್ಯಸ್ತ

ನವದೆಹಲಿ (ಪಿಟಿಐ): ಪಾಕಿಸ್ತಾನದಲ್ಲಿರುವ ಉಗ್ರರ ನೆಲೆಗಳ ಭಾರತ ಕ್ಷಿಪಣಿ ದಾಳಿ ನಡೆಸಿದ ಬೆನ್ನಲ್ಲೇ ಹಿಮಾಚಲ ಪ್ರದೇಶದ ಧರ್ಮಶಾಲಾ ವಿಮಾನ ನಿಲ್ದಾಣವನ್ನು ಮುಚ್ಚಲಾಗಿದೆ. ಹೀಗಾಗಿ ಈ ನಯನಮನೋಹರ ತಾಣದಲ್ಲಿ ಮೇ 11ರಂದು ನಡೆಯಬೇಕಾಗಿರುವ ಐಪಿಎಲ್ ಪಂದ್ಯಕ್ಕೆ ತಂಡಗಳ ಪ್ರಯಾಣ ಕಾರ್ಯಕ್ರಮ ಅಸ್ತವ್ಯಸ್ತಗೊಂಡಿದೆ.

ಗುರುವಾರ ಪಂಜಾಬ್ ಕಿಂಗ್ಸ್– ಡೆಲ್ಲಿ ಕ್ಯಾಪಿಟಲ್ಸ್ ಪಂದ್ಯ ನಿಗದಿಯಾಗಿದ್ದು, ಈಗಾಗಲೇ ಎರಡೂ ತಂಡಗಳು ಬಂದಿಳಿದಿವೆ. ಇದರ ನಂತರ ಮೇ 11ರಂದು (ಭಾನುವಾರ) ಇಲ್ಲಿ ಪಂಜಾಬ್ ಕಿಂಗ್ಸ್– ಮುಂಬೈ ಇಂಡಿಯನ್ಸ್ ಪಂದ್ಯ ಆಡಲು ಬಾಕಿವುಳಿದಿದೆ.

‘ಗುರುವಾರದ ಪಂದ್ಯ ರದ್ದುಗೊಳಿಸುವಂತೆ ನಮಗೆ ಬಿಸಿಸಿಐಯಿಂದ ಆಗಲಿ, ರಾಜ್ಯ, ಕೇಂದ್ರ ಸರ್ಕಾರಗಳಿಂದ ಯಾವುದೇ ಸೂಚನೆ ಬಂದಿಲ್ಲ. ಅಧಿಕೃತವಾಗಿ ಸೂಚನೆ ಬರದಿದ್ದರೆ ಪಂದ್ಯ ವೇಳಾಪಟ್ಟಿಯಂತೆ ನಡೆಯಲಿದೆ’ ಎಂದು ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆಯ ಮೂಲವೊಂದು ತಿಳಿಸಿದೆ.

ವಿಮಾನ ನಿಲ್ದಾಣವನ್ನು ಅನಿರ್ದಿಷ್ಟ ಅವಧಿಗೆ ಮುಚ್ಚಲಾಗಿರುವ ಕಾರಣ ಮುಂಬೈ ತಂಡ ಅಲ್ಲಿಗೆ ನೇರವಾಗಿ ಪ್ರಯಾಣಿಸುವ ಸ್ಥಿತಿಯಲ್ಲಿಲ್ಲ. ಈ ಪಂದ್ಯವನ್ನು ಮುಂಬೈಗೆ ಸ್ಥಳಾಂತರಿಸುವ ಯೋಚನೆಯನ್ನೂ ಬಿಸಿಸಿಐ ಮಾಡುತ್ತಿದೆ ಎನ್ನಲಾಗಿದೆ. ಆದರೆ ‘ಪಂದ್ಯದ ಸ್ಥಳ ಬದಲಾವಣೆಯ ಬಗ್ಗೆ ನಮಗೆ ಬಿಸಿಸಿಐ ಏನೂ ತಿಳಿಸಿಲ್ಲ. ನಾವು ಇದಕ್ಕಾಗಿ ಕಾಯುತ್ತಿದ್ದೇವೆ’ ಎಂದು ಪಂಜಾಬ್ ಕಿಂಗ್ಸ್ ತಂಡದ ಅಧಿಕಾರಿಯೊಬ್ಬರು ತಿಳಿಸಿದರು.

ಧರ್ಮಶಾಲಾದ ಎಚ್‌ಪಿಸಿಎ ಕ್ರೀಡಾಂಗಣವು ಪಂಜಾಬ್ ಕಿಂಗ್ಸ್‌ನ ಎರಡನೇ ತವರು ಕ್ರೀಡಾಂಗಣವಾಗಿದೆ.

ತೈಪೆ ಓಪನ್: 2ನೇ ಸುತ್ತಿಗೆ ಶ್ರೀಕಾಂತ್, ತರುಣ್

ತೈಪೆ (ಪಿಟಿಐ): ಭಾರತದ ಕಿದಂಬಿ ಶ್ರೀಕಾಂತ್ ಮತ್ತು ಇತರ ಯುವ ಬ್ಯಾಡ್ಮಿಂಟನ್ ತಾರೆಯರು, ತೈಪೆ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬುಧವಾರ ಎರಡನೇ ಸುತ್ತನ್ನು ತಲುಪಿದರು.

ಪದೇ ಪದೇ ಹಿನ್ನಡೆ ಕಂಡು ವಿಶ್ವ ಕ್ರಮಾಂಕದಲ್ಲಿ 61ನೇ ಸ್ಥಾನಕ್ಕೆ ಸರಿದಿರುವ ಶ್ರೀಕಾಂತ್ 21–16, 21–15 ರಿಂದ ಸ್ವದೇಶದ ಶಂಕರ್ ಸುಬ್ರಮಣಿಯನ್ ಅವರನ್ನು ಹಿಮ್ಮೆಟ್ಟಿಸಿದರು.

32 ವರ್ಷ ವಯಸ್ಸಿನ ಶ್ರೀಕಾಂತ್ ಎರಡನೇ ಸುತ್ತಿನಲ್ಲಿ ಭಾರತದ ಇನ್ನೊಬ್ಬ ಆಟಗಾರ ಆಯುಷ್ ಶೆಟ್ಟಿ ಅವರನ್ನು ಎದುರಿಸಲಿದ್ದಾರೆ. 2023ರ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನ ಕಂಚಿನ ಪದಕ ವಿಜೇತರಾದ ಆಯುಷ್ ಅವರು ಇನ್ನೊಂದು ಪಂದ್ಯದಲ್ಲಿ ಅಮೋಘ ಆಟವಾಡಿ ಮೂರನೇ ಶ್ರೇಯಾಂಕದ ಆಟಗಾರ ಹಾಗೂ ವಿಶ್ವ ಕ್ರಮಾಂಕದಲ್ಲಿ 13ನೇ ಸ್ಥಾನದಲ್ಲಿರುವ ಚಿಯಾ ಹಾವೋ (ಚೀನಾ ತೈಪಿ) ಅವರಿಗೆ 21–17, 21–18 ರಿಂದ ಆಘಾತ ನೀಡಿದರು. ಆಯುಷ್ ಗೆಲುವಿಗೆ 50 ನಿಮಿಷ ತೆಗೆದುಕೊಂಡರು.

2023ರ ರಾಷ್ಟ್ರೀಯ ಕ್ರೀಡೆಗಳ ಚಿನ್ನ ವಿಜೇತ ತರುಣ್ ಮನ್ನೇಪಲ್ಲಿ ಸುದೀರ್ಘ ಪಂದ್ಯದಲ್ಲಿ ಜಪಾನ್‌ನ ಶೋಗೊ ಒಗಾವಾ ಅವರನ್ನು 21–17, 19–21, 21–12 ರಿಂದ ಸೋಲಿಸಿದರು. ಈ ಪಂದ್ಯ 70 ನಿಮಿಷ ನಡೆಯಿತು. ತರುಣ್ ಅವರ ಮುಂದಿನ ಎದುರಾಳಿ ಇಂಡೊನೇಷ್ಯಾದ ಮೊಹಮ್ಮದ್ ಝುಕಿ ಉಬೇದುಲ್ಲಾ.

ಮೀರಬಾ ಲುವಾಂಗ್ ಮೈಸ್ನಂ ಮಾತ್ರ ನಿರಾಸೆ ಅನುಭವಿಸಿದರು. ಅವರು 21–23, 12–21 ರಲ್ಲಿ ಕೆನಡಾದ ಬ್ರಿಯಾನ್ ಯಂಗ್ ಅವರಿಗೆ ಸೋತರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಉನ್ನತಿ ಹೂಡಾ 21–13, 21–17 ರಿಂದ ಸ್ವದೇಶದ ಅನುಪಮಾ ಉಪಾಧ್ಯಾಯ ಅವರನ್ನು ನೇರ ಗೇಮ್‌ಗಳಿಂದ ಸೋಲಿಸಿ ಎರಡನೇ ಸುತ್ತನ್ನು ತಲುಪಿದರು. ಅಲ್ಲಿ ಅವರ ಎದುರಾಳಿ ತೈಪಿಯ ಲಿನ್ ಸಿಹ್ ಯುನ್.

ಆಕರ್ಷಿ ಕಶ್ಯಪ್ ಮೊದಲ ಸುತ್ತಿನಲ್ಲೇ ಸೋಲನುಭವಿಸಿದರು. ಅವರು ಏಕಪಕ್ಷೀಯ ಪಂದ್ಯದಲ್ಲಿ 9–21, 12–21 ರಲ್ಲಿ ತೈಪಿಯ ಹುಂಗ್ ಯಿ–ಟಿಂಗ್ ಅವರಿಗೆ ಮಣಿದರು.

ಸಂಭವನೀಯರ ತಂಡದಲ್ಲಿ ಚೆಟ್ರಿ

ನವದೆಹಲಿ (ಪಿಟಿಐ): ಮುಂದಿನ ತಿಂಗಳು ನಡೆಯಲಿರುವ ಎಎಫ್‌ಸಿ ಏಷ್ಯನ್ ಕಪ್ ಫುಟ್‌ಬಾಲ್ 2027ರ ಅಂತಿಮ ಸುತ್ತಿನ ಕ್ವಾಲಿಫೈಯರ್ಸ್‌ನಲ್ಲಿ ಆಡುವ ಭಾರತ ತಂಡಕ್ಕೆ 28 ಮಂದಿ ಸಂಭವನೀಯರನ್ನು ಬುಧವಾರ ಆಯ್ಕೆ ಮಾಡಲಾಗಿದೆ. ಮುಖ್ಯ ತರಬೇತುದಾರ ಮನೊಲೊ ಮಾರ್ಕ್ವೆಝ್ ಅವರು 40 ವರ್ಷ ವಯಸ್ಸಿನ ಸುನೀಲ್ ಚೆಟ್ರಿ ಸಾಮರ್ಥ್ಯದ ಮೇಲೆ ಭರವಸೆ ಇಟ್ಟು ತಂಡಕ್ಕೆ ಸೇರ್ಪಡೆ ಮಾಡಿದ್ದಾರೆ.

ಸುನಿಲ್ ಚೆಟ್ರಿ

ಕಳೆದ ವರ್ಷ ನಿವೃತ್ತಿ ಪ್ರಕಟಿಸಿದ್ದ ತಾರಾ ಆಟಗಾರ ಚೆಟ್ರಿ ಅವರು ಮಾರ್ಚ್‌ನಲ್ಲಿ ನಿವೃತ್ತಿ ತೊರೆದು ರಾಷ್ಟ್ರೀಯ ತಂಡಕ್ಕೆ ಮರಳಿದ್ದರು.

ಭಾರತ ಎಎಫ್‌ಸಿ ಏಷ್ಯಾ ಕಪ್ ಅಂತಿಮ ಕ್ವಾಲಿಫೈರ್ಸ್‌ನಲ್ಲಿ ಸಿ ಗುಂಪಿನಲ್ಲಿದೆ. ಕೌಲೂನ್‌ನಲ್ಲಿ ಜೂನ್ 10ರಂದು ನಡೆಯಲಿರುವ ತನ್ನ ಮೊದಲ ಪಂದ್ಯವನ್ನು ಭಾರತ, ಆತಿಥೇಯ ಹಾಂಗ್‌ಕಾಂಗ್ ವಿರುದ್ಧ ಆಡಲಿದೆ.

ಸಂಭವನೀಯ ಪಟ್ಟಿಯಲ್ಲಿರುವ ಆಟಗಾರರು ಇದೇ 18ರಿಂದ ಕೋಲ್ಕತ್ತದಲ್ಲಿ ನಡೆಯುವ 10 ದಿನಗಳ ತರಬೇತಿ ಶಿಬಿರದಲ್ಲಿ ಭಾಗಿಯಾಗಲಿದ್ದಾರೆ’ ಎಂದು ಎಐಎಫ್‌ಎಫ್ ಪ್ರಕಟಣೆ ತಿಳಿಸಿದೆ. ಜೂನ್ 4ರಂದು ಸಿದ್ಧತೆಯ ಭಾಗವಾಗಿ ಬ್ಯಾಂಕಾಕ್‌ನಲ್ಲಿ ಥಾಯ್ಲೆಂಡ್ ವಿರುದ್ಧ ಸ್ನೇಹಪರ ಪಂದ್ಯದಲ್ಲಿ ಭಾಗಿಯಾಗಲಿದೆ. ನಂತರ ಅಲ್ಲಿಂದ ಕ್ವಾಲಿಫೈರ್ಸ್‌ನಲ್ಲಿ ಆಡಲು ಹಾಂಗ್‌ಕಾಂಗ್‌ಗೆ ತೆರಳಲಿದೆ.

ಫೈನಲ್‌ಗೆ ಭಾರತದ ಕಾಂಪೌಂಡ್ ತಂಡಗಳು

ವಿಶ್ವಕಪ್ ಸ್ಟೇಜ್ 2 ಆರ್ಚರಿ: ಮೆಕ್ಸಿಕೊ ತಂಡ ಎದುರಾಳಿ

ಶಾಂಘೈ (ಪಿಟಿಐ): ಭಾರತ ಪುರುಷರ ಮತ್ತು ಮಹಿಳೆಯರ ಕಾಂಪೌಂಡ್ ಆರ್ಚರಿ ತಂಡಗಳು ಬುಧವಾರ ಅಧಿಕಾರಯುತ ಪ್ರದರ್ಶನ ನೀಡಿ ವಿಶ್ವ ಕಪ್ ಸ್ಟೇಜ್ 2 ಟೂರ್ನಿಯ ಫೈನಲ್ ತಲುಪಿದವು. ಈ ಪ್ರತಿಷ್ಠಿತ ಕೂಟದಲ್ಲಿ ಆ ಮೂಲಕ ಭಾರತಕ್ಕೆ ಎರಡು ಪದಕಗಳು ಖಾತರಿಯಾದವು.

ಓಜಸ್ ದೇವತಳೆ, ಅಭಿಷೇಕ್ ವರ್ಮಾ ಮತ್ತು ರಿಷಭ್ ಯಾದವ್ ಅವರನ್ನು ಒಳಗೊಂಡ ಅಗ್ರ ಕ್ರಮಾಂಕದ ಭಾರತ ತಂಡ ಕ್ವಾರ್ಟರ್‌ಫೈನಲ್ ನಲ್ಲಿ 239–232 ರಿಂದ ಬ್ರಿಟನ್ ತಂಡವನ್ನು ಸೋಲಿಸಿತು. ನಂತರದ ಪಂದ್ಯದಲ್ಲಿ ಪ್ರಬಲ ಹೋರಾಟ ನಡೆಸಿ 232–231ರಿಂದ ಡೆನ್ಮಾರ್ಕ್ ತಂಡವನ್ನು ಮಣಿಸಿತು.

ಮಹಿಳೆಯರ ವಿಭಾಗದಲ್ಲೂ ಅಗ್ರ ಶ್ರೇಯಾಂಕದ ಪಡೆದಿದ್ದ ಭಾರತ ತಂಡ (ಮಧುರಾ ಧಾಮಣಗಾಂವಕರ್, ಚಿಕಿತಾ ತನಿಪತ್ರಿ ಮತ್ತು ಜ್ಯೋತಿ ಸುರೇಖಾ ವೆನ್ನಂ) ಕ್ವಾರ್ಟರ್‌ಫೈನಲ್ ನಲ್ಲಿ 232–229 ರಿಂದ ಕಜಕಸ್ತಾನ ತಂಡವನ್ನು ಸೋಲಿಸಿತು. ನಂತರ ನಾಲ್ಕರ ಘಟ್ಟದ ಪಂದ್ಯದಲ್ಲಿ ನಾಲ್ಕನೇ ಕ್ರಮಾಂಕದ ಬ್ರಿಟನ್ ತಂಡವನ್ನು 232–230 ರಿಂದ ಪರಾಭವಗೊಳಿಸಿತು.

ಪುರುಷರ ಮತ್ತು ಮಹಿಳೆಯರ ವಿಭಾಗದ ಚಿನ್ನದ ಪದಕದ ಪಂದ್ಯಗಳು ಶನಿವಾರ ನಡೆಯಲಿವೆ.

ಭಾರತ ತಂಡ ಎರಡೂ ಫೈನಲ್‌ಗಳಲ್ಲಿ ಮೆಕ್ಸಿಕೊ ತಂಡವನ್ನು ಎದುರಿಸಲಿದೆ.

ಕಳೆದ ತಿಂಗಳು ಅಮೆರಿಕದ ಅಬರ್ನ್ ಡೇಲ್‌ನಲ್ಲಿ ನಡೆದ ವಿಶ್ವ ಕಪ್ ಸ್ಟೇಜ್ 1 ಕೂಟದಲ್ಲಿ ಭಾರತದ ಕಾಂಪೌಂಡ್ ಮಿಶ್ರ ವಿಭಾಗದ ತಂಡ (ಜ್ಯೋತಿ ಸುರೇಖಾ ವೆನ್ನಂ ಮತ್ತು ರಿಷಭ್ ಯಾದವ್) ಚಿನ್ನದ ಪದಕ ಗೆದ್ದಿತ್ತು. ಫೈನಲ್‌ನಲ್ಲಿ ಚೀನಾ ತೈಪಿಯ ತಂಡವನ್ನು (ಹುವಾಂಗ್ ಐ–ಜೌ ಮತ್ತು ಚೆನ್ ಚಿಯಾ ಲುನ್) ಸೋಲಿಸಿತ್ತು.

ಆರ್‌ಸಿಬಿಗೆ ಮಯಂಕ್

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರ ದೇವದತ್ತ ಪಡಿಕ್ಕಲ್ ಅವರು ಗಾಯಗೊಂಡಿದ್ದಾರೆ. ಅವರ ಬದಲಿಗೆ ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್ ಅವರನ್ನು ಆಯ್ಕೆ ಮಾಡಲಾಗಿದೆ.

ಬಲಗಾಲಿನ ಸ್ನಾಯುಸೆಳೆತ ದಿಂದಾಗಿ ಪಡಿಕ್ಕಲ್ ಅವರು ತಂಡದಿಂದ ಹೊರಬಿದ್ದಿದ್ದಾರೆ. ಬೆಂಗಳೂರಿನ ಪಡಿಕ್ಕಲ್ ಅವರು ಈ ಐಪಿಎಲ್ ಆವೃತ್ತಿಯಲ್ಲಿ 10 ಇನಿಂಗ್ಸ್‌ಗಳಿಂದ 247 ರನ್‌ಗಳನ್ನು ಪೇರಿಸಿದ್ದಾರೆ. ಈ ಕುರಿತು ತಂಡದ ನಿರ್ದೇಶಕ ಮೊ ಬೊಬಾಟ್ ತಿಳಿಸಿದ್ದಾರೆ.

ಇದೀಗ ಮಯಂಕ್ ಅವರನ್ನು ಆರ್‌ಸಿಬಿ ₹ 1 ಕೋಟಿ ಮೊತ್ತಕ್ಕೆ ಸೇರ್ಪಡೆ ಮಾಡಿಕೊಂಡಿದೆ.

ಮಹಿಳಾ ತ್ರಿಕೋನ ಸರಣಿ: ಫೈನಲ್‌ಗೆ ಭಾರತ ತಂಡ

ಕೊಲಂಬೊ (ಪಿಟಿಐ): ಮಧ್ಯಮ ಕ್ರಮಾಂಕದ ಬ್ಯಾಟರ್ ಜೆಮಿಮಾ ರಾಡ್ರಿಗಸ್ ಅವರ ಜೀವನಶ್ರೇಷ್ಠ ಶತಕ, ಸ್ಮೃತಿ ಮಂದಾನ (51) ಮತ್ತು ದೀಪ್ತಿ ಶರ್ಮಾ (93) ಅವರ ಅರ್ಧ ಶತಕಗಳ ನೆರವಿನಿಂದ ಭಾರತ ತಂಡ, ಮಹಿಳಾ ತ್ರಿಕೋನ ಸರಣಿ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಬುಧವಾರ ದಕ್ಷಿಣ ಆಫ್ರಿಕಾ ತಂಡವನ್ನು 23 ರನ್‌ಗಳಿಂದ ಸೋಲಿಸಿತು. ಮೂರನೇ ಗೆಲುವಿನೊಡನೆ ಭಾರತ ಫೈನಲ್ ತಲುಪಿತು.

ಪಂದ್ಯದ ಆಟಗಾರ್ತಿ ರಾಡ್ರಿಗಸ್ 101 ಎಸೆತಗಳಲ್ಲಿ 123 ರನ್ ಬಾರಿಸಿದ್ದು, ಅವರ ಇನಿಂಗ್ಸ್‌ನಲ್ಲಿ ಒಂದು ಸಿಕ್ಸರ್ ಮತ್ತು 15 ಬೌಂಡರಿಗಳಿದ್ದವು.

ಭಾರತ 50 ಓವರುಗಳಲ್ಲಿ 9 ವಿಕೆಟ್‌ಗೆ 337 ರನ್‌ಗಳ ಉತ್ತಮ ಮೊತ್ತ ಗಳಿಸಿತು. ದಕ್ಷಿಣ ಆಫ್ರಿಕಾ ತಂಡ ಹೋರಾಟ ತೋರಿದರೂ ಮಧ್ಯಮ ವೇಗಿ ಅಮನ್‌ಜೋತ್ ಕೌರ್ (59ಕ್ಕೆ3) ಮತ್ತು ಆಫ್ ಸ್ಪಿನ್ನರ್ ದೀಪ್ತಿ ಶರ್ಮಾ (57ಕ್ಕೆ2) ಅವರು ಕಡಿವಾಣ ತೊಡಿಸಿದ್ದರಿಂದ 7 ವಿಕೆಟ್‌ಗೆ 314 ರನ್ ಗಳಿಸಲಷ್ಟೇ ಶಕ್ತವಾಯಿತು. ನಾಲ್ಕು ಪಂದ್ಯಗಳನ್ನು ಆಡಿದ ಭಾರತ ಆರು ಪಾಯಿಂಟ್‌ಗಳೊಡನೆ ರೌಂಡ್‌ರಾಬಿನ್ ಲೀಗ್ ವ್ಯವಹಾರ ಪೂರೈಸಿತು. ಆತಿಥೇಯ ಲಂಕಾ ಮೂರು ಪಂದ್ಯಗಳಿಂದ ನಾಲ್ಕು ಪಾಯಿಂಟ್ಸ್ ಗಳಿಸಿದೆ.

ಜೆಮಿಮಾ ರಾಡ್ರಿಗಸ್

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರುಗಳಲ್ಲಿ 9 ವಿಕೆಟ್‌ಗೆ 337 (ಸ್ಮೃತಿ ಮಂದಾನ 51, ಜೆಮಿಮಾ ರಾಡ್ರಿಗಸ್ 123, ದೀಪ್ತಿ ಶರ್ಮಾ 93; ಮಸಬಾತಾ ಕ್ಲಾಸ್ 51ಕ್ಕೆ2, ನದಿನ್ ಡಿ ಕ್ಲಾರ್ಕ್ 54ಕ್ಕೆ2) ; **ದಕ್ಷಿಣ ಆಫ್ರಿಕಾ:** 50 ಓವರುಗಳಲ್ಲಿ 7 ವಿಕೆಟ್‌ಗೆ 314 (ತಾಝ್ಮಿನ್ ಬ್ರಿಟ್ಸ್ 26, ಮಿಯಾನೆ ಸ್ಮಿತ್ 39, ಅನ್ನೇರಿ ಡರ್ಕ್‌ಸೆನ್ 81, ಕ್ಲೊ ಟ್ರಯಾನ್ 67; ಅಮನ್ಜೋತ್ ಕೌರ್ 59ಕ್ಕೆ3, ದೀಪ್ತಿ ಶರ್ಮಾ 57ಕ್ಕೆ2).



DH ಪ್ರಜಾವಾಣಿ

ಖರೀದಿಸಿ ಅಥವಾ ಮಾರಾಟ ಮಾಡಿ

ಯಾವುದೇ ಸಮಯದಲ್ಲಿ, ಯಾವುದೇ ಸ್ಥಳದಿಂದ ಕೇವಲ ನಾಲ್ಕೇ ಕ್ಲಿಕ್ ಗಳಲ್ಲಿ

ಸುಲಭವಾಗಿ ಖರೀದಿಸಿ, ಮಾರಾಟ ಮಾಡಿ ಅಥವಾ ಉದ್ಯೋಗ ನೇಮಕಾತಿ ಮಾಡಿಕೊಳ್ಳಿ! ಯಾವುದೇ ಸೇವೆ ಪಡೆಯಬೇಕೆ, ವಸ್ತು ಖರೀದಿಸಬೇಕೆ, ಆಸ್ತಿ ಮಾರಾಟ ಮಾಡಬೇಕೆ ಅಥವಾ ಸೂಕ್ತ ಅಭ್ಯರ್ಥಿಗಳೊಂದಿಗೆ ಸಂಪರ್ಕ ಸಾಧಿಸಬೇಕೆ?

ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ದಿನಪತ್ರಿಕೆಗಳಾದ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿಯಲ್ಲಿ ವರ್ಗೀಕೃತ ಜಾಹೀರಾತು ನೀಡುವ ಮೂಲಕ ಖರೀದಿದಾರರು, ಸೇವೆಗಳು ಅಥವಾ ಪ್ರತಿಭಾವಂತರೊಂದಿಗೆ ಸುಲಲಿತವಾಗಿ ಸಂಪರ್ಕ ಹೊಂದಿರಿ. ರಾಜ್ಯದಾದ್ಯಂತ ಸೂಕ್ತರಾದವರೊಂದಿಗೆ ಸಂಪರ್ಕ ಸಾಧಿಸಲು ಸಮರ್ಥ ವೇದಿಕೆ ಡೆಕ್ಕನ್ ಹೆರಾಲ್ಡ್ & ಪ್ರಜಾವಾಣಿ ವರ್ಗೀಕೃತ ಜಾಹೀರಾತು!

- ತಕ್ಷಣವೇ ಜಾಹೀರಾತು ಪ್ರಕಟಣೆ ಹಾಗೂ ಸರಾಗ ಬ್ರೌಸಿಂಗ್
- ಯಾವುದೇ ಸ್ಥಳದಿಂದ ಯಾವುದೇ ಸಮಯದಲ್ಲಿ ಖರೀದಿ ಹಾಗೂ ಮಾರಾಟ
- ಸರಳ, ಸುರಕ್ಷಿತ ಹಾಗೂ ಸುಗಮ ಪ್ರಕ್ರಿಯೆ
- ಕರ್ನಾಟಕದಾದ್ಯಂತ ಸೂಕ್ತರಾದವರನ್ನು ತಲುಪಿ

ಈಗ ಬುಕ್ ಮಾಡಿ.
ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ ಹಾಗೂ
ಅತ್ಯುತ್ತಮ ವ್ಯವಹಾರವನ್ನು ಇಂದೇ ನಿಮ್ಮದಾಗಿಸಿಕೊಳ್ಳಿ!